
# ಕರ್ನಾಟಕ ಸರಕಾರ ಹಾಗೂ ರಾಜಕೀಯ

## KARNATAKA GOVERNMENT AND POLITICS



- ರಮೇಶ ಸಂಕರಡ್ಡಿ
- ರಘು ಕೆ. ಸಿ.

# ಕರ್ನಾಟಕ ಸರ್ಕಾರ ಹಾಗೂ ರಾಜಕೀಯ

## KARNATAKA GOVERNMENT AND POLITICS

2021/22 ನೇ ಸಾಲಿನಿಂದ ಜಾರಿಗೊಂಡ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಐದನೇ ಸೆಮಿಸ್ಟರಿನ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ನಿಗಧಿಪಡಿಸಲಾದ ಪಠ್ಯಕ್ರಮಾನುಸಾರ ಕರ್ನಾಟಕದ ಎಲ್ಲ ವಿಶ್ವ ವಿದ್ಯಾಲಯಗಳಿಗೆ ಅನ್ವಯವಾಗುವಂತೆ ರಚಿಸಲಾದ ಕೃತಿ

ರಮೇಶ ಸಂಕರಡ್ಡಿ
ರಘು ಕೆ. ಸಿ.

ವೈಭವ ಪಬ್ಲಿಕೇಷನ್ಸ್, ಗದಗ

## KARNATAKA GOVERNMENT AND POLITICS

Author : **Ramesh Sankaraddi**
Asst. Professor,
Dept. of Political Science,
Govt. First Grade College,
Jnanadhara Campus,
Kumareshwar Nagar, Dharwad
M : 9916313624

**Raghu K. C.**
Asst. Professor,
Dept. of Political Science,
Govt. First Grade College,
Devanahalli

Publisher : **Vaibhav Publications, Gadag**
6677/5B, 5th Cross,
Vidyanagar,
Gadag-582101

Rights : Author's

Pages : 160

Impression : First 2023

Price : Rs. 150/-

Printed at : J. P. Prints, Gadag
9886708168




## ಲೇಖಕರ ನುಡಿ...

ಭಾರತ ಸಂವಿಧಾನದ ಮೊದಲ ಕಲಂ ಭಾರತವನ್ನು ರಾಜ್ಯಗಳ ಒಕ್ಕೂಟ ಎಂದು ಘೋಷಿಸಿದೆ. ಫಲವಾಗಿ ಭಾರತವು ಅಮೇರಿಕಾದಂತೆ ಶುದ್ಧ ಸಂಯುಕ್ತ ವ್ಯವಸ್ಥೆಯನ್ನಾಗಲಿ ಅಥವಾ ಬ್ರಿಟನ್ನಿನಂತೆ ಏಕಾತ್ಮಕ ವ್ಯವಸ್ಥೆಯನ್ನಾಗಲಿ ಮೈಗೂಡಿಸಿಕೊಳ್ಳಲಿಲ್ಲ. ಬದಲಾಗಿ ಪ್ರಬಲ ಕೇಂದ್ರ ಸರ್ಕಾರ ಮತ್ತು ದುರ್ಬಲ ರಾಜ್ಯ ಸರ್ಕಾರಗಳನ್ನುಳ್ಳ ಕೆನಡಾ ಮಾದರಿಯ ಒಕ್ಕೂಟವನ್ನು ಭಾರತ ಅನುಸರಿಸಲು ಮುಂದಾಯಿತು. ಈ ಬೆಳವಣಿಗೆಯು ಸ್ವಾತಂತ್ರ್ಯೋತ್ತರ ಕೆಲವೇ ದಶಕಗಳಲ್ಲಿ ರಾಜ್ಯ ರಾಜಕೀಯದ ಉಗಮಕ್ಕೆ ಕಾರಣವಾಯಿತು. ಕೇಂದ್ರ ಸರ್ಕಾರಕ್ಕಿಂತ ಭಿನ್ನವಾದ ಸನ್ನಿವೇಶಗಳ ನಿರ್ವಹಣೆ ಮತ್ತು ಪ್ರಾದೇಶಿಕ ಅಸ್ಮಿತೆ ಉಳಿಸಿಕೊಳ್ಳುವ ಹೆಬ್ಬಯಕೆಗಳಿಂದಾಗಿ ರಾಜ್ಯ ರಾಜಕೀಯವು ಭಾರತದಲ್ಲಿ ಕ್ರಮೇಣ ಬಲಗೊಂಡಿತು. ಈ ವಿದ್ಯಮಾನದಿಂದ ಕನ್ನಡಿಗರ ತಾಯ್ನಾಡಾದ ಕರ್ನಾಟಕವೂ ಹೊರಗುಳಿಯಲಿಲ್ಲ. ಭಾರತದ ಇತರ ರಾಜ್ಯಗಳಂತೆ ಕರ್ನಾಟಕದಲ್ಲಿಯೂ ಪ್ರಾದೇಶಿಕ ರಾಜಕೀಯ ಕಾಣಿಸಿಕೊಂಡು ಹಲವು ಬೆಳವಣಿಗೆಗೆ ಸಾಕ್ಷಿಯಾಯಿತು. ಈ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯವನ್ನು ಕನ್ನಡಿಗರಾಗಿರುವ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲು ರಾಷ್ಟ್ರೀಯ ಶಿಕ್ಷಣ ನೀತಿಯಡಿ ಬಿ. ಎ. ಅಂತಿಮ ವರ್ಷದ ಐದನೇ ಸೆಮಿಸ್ಟರಿನ ಅಧ್ಯಯನಕ್ಕೆ (ಕರ್ನಾಟಕ ಸರ್ಕಾರ ಮತ್ತು ರಾಜಕೀಯ) ಎಂಬ ಶೀರ್ಷಿಕೆಯುಳ್ಳ ಪತ್ರಿಕೆಯನ್ನು ನಿಗದಿಪಡಿಸಲಾಗಿದೆ. ಈ ಪತ್ರಿಕೆಯ ಅಧ್ಯಯನವು ಕರ್ನಾಟಕ ಸರ್ಕಾರವನ್ನು ಪರಿಪೂರ್ಣವಾಗಿ ಅರ್ಥೈಸಿಕೊಳ್ಳಲು, ನಾಗರಿಕರಾಗಿ ರಾಜಕೀಯದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು, ಸಮರ್ಥ ನಾಯಕರಾಗಿ ಗುರುತಿಸಿಕೊಳ್ಳಲು ಸಹಕಾರಿಯಾಗಲಿದೆ.

ಈ ಮೇಲೆ ಪ್ರಸ್ತಾಪಿಸಿದಂತೆ ಅಪಾರ ಪ್ರಾಮುಖ್ಯತೆಯುಳ್ಳ (ಕರ್ನಾಟಕ ಸರ್ಕಾರ ಮತ್ತು ರಾಜಕೀಯ) ಎಂಬ ಶಿರ್ಶಿಕೆಯುಳ್ಳ ಕೃತಿಯನ್ನು ರಚಿಸುತ್ತಿರುವುದು ನಮಗೆ ಅತ್ಯಂತ ಜವಾಬ್ದಾರಿಯ ಸಂಗತಿ. ವಿಷಯ ಪಾಂಡಿತ್ಯವನ್ನು ಕಡೆಗಣಿಸದೇ ಸರಳ ವಿವರಣೆ ಹಾಗೂ ಸುಲಭ ಭಾಷೆಯ ನೆರವಿನಿಂದ ಕರ್ನಾಟಕದ ಎಲ್ಲ ವಿಶ್ವ ವಿದ್ಯಾಲಯಗಳ ಪಠ್ಯ ಕ್ರಮಾನುಸಾರ ಈ ಪುಸ್ತಕವನ್ನು ರಚಿಸಲು ಪ್ರಯತ್ನಿಸಿದ್ದೇವೆ. ಆಂಗ್ಲ ಭಾಷೆಯಲ್ಲಿರುವ ಭಾರತದ ಖ್ಯಾತ ರಾಜ್ಯಶಾಸ್ತ್ರಜ್ಞರ ಕೃತಿಗಳು, ಪಾಶ್ಚಿಮಾತ್ಯ ರಾಜಕೀಯ ಚಿಂತಕರ ಗ್ರಂಥಗಳು ಹಾಗೂ ಇತ್ತೀಚಿನ ಸಂಶೋಧನಾ ಲೇಖನಗಳು ಈ ಪುಸ್ತಕಕ್ಕೆ ತಳಹದಿಯಾಗಿವೆ. ಈ ಪುಸ್ತಕವು ಕರ್ನಾಟಕದ ಎಲ್ಲ ವಿಶ್ವ ವಿದ್ಯಾಲಯಗಳ ರಾಷ್ಟ್ರೀಯ ಶಿಕ್ಷಣ ನೀತಿಯ ಪಠ್ಯಕ್ರಮಾನುಸಾರ ರಚನೆಗೊಂಡಿದ್ದರೂ ನಾಗರಿಕ ಸೇವಾ ಪರೀಕ್ಷೆಗಳು (UPSC/KAS), ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆ (SLET) ಹಾಗೂ ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET)ಗಳ ಸಿದ್ಧತೆಗೂ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ನೆರವಾಗಲಿದೆ.

ಈಗಾಗಲೇ ರಾಷ್ಟ್ರೀಯ ಶಿಕ್ಷಣ ನೀತಿಯ ಪಠ್ಯಕ್ರಮಾನುಸಾರ ನಾವು ಪ್ರತ್ಯೇಕವಾಗಿ ರಚಿಸಿದ ಪುಸ್ತಕಗಳ ಯಶಸ್ಸಿಗೆ ಕಾರಣರಾದ ತಮ್ಮ ಪ್ರೋತ್ಸಾಹವನ್ನು (ಕರ್ನಾಟಕ ಸರ್ಕಾರ ಮತ್ತು ರಾಜಕೀಯ) ಎಂಬ ಶೀರ್ಷಿಕೆಯ ಪ್ರಸಕ್ತ ಪುಸ್ತಕದ ಯಶಸ್ಸು ಅವಲಂಬಿಸಿದೆ. ಈ ಪುಸ್ತಕ ಕುರಿತಾದ ತಮ್ಮ ರಚನಾತ್ಮಕ ವಿಮರ್ಷೆ ಅಥವಾ ಸಲಹೆಯನ್ನು ಸದಾ ಸ್ವಾಗತಿಸುವ ಭರವಸೆ ನೀಡುತ್ತಾ ರಾಜ್ಯಶಾಸ್ತ್ರ ವಿಷಯದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಅಧ್ಯಾಪನ ಮತ್ತು ಅಧ್ಯಯನಕ್ಕೆ ಈ ಕೃತಿಯನ್ನು ಸಮರ್ಪಿಸುತ್ತಿದ್ದೇವೆ. ಕೃತಿಯ ರಚನೆಗೆ ಸಹಕರಿಸಿದ ಕುಟುಂಬ ಸದಸ್ಯರು, ನಮ್ಮ ವಿಭಾಗಗಳ ಮುಖ್ಯಸ್ಥರು ಮತ್ತು ವಿವಿಧ ಸಂಶೋಧನಾ ಲೇಖನ ಹಾಗೂ ಕೃತಿಗಳ ರಚನಾಕಾರರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ರಮೇಶ ಸಂಕರಡ್ಡಿ
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜ್ಞಾನಧಾರಾ ಕ್ಯಾಂಪಸ್, ಧಾರವಾಡ.

ರಘು ಕೆ. ಸಿ.
ಉಪನ್ಯಾಸಕರು, ರಾಜ್ಯಶಾಸ್ತ್ರ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವನಹಳ್ಳಿ.

ದಿನಾಂಕ 19/10/2023.



## ಪರಿವಿಡಿ [Content]:

ಬಿ. ಎ. ಐದನೇ ಸೆಮಿಸ್ಟರಿನ ರಾಜ್ಯಶಾಸ್ತ್ರ ವಿಷಯದ
ಕರ್ನಾಟಕ ಸರ್ಕಾರ ಮತ್ತು ರಾಜಕೀಯ [Karnataka Government and Politics] ಎಂಬ ಶೀರ್ಷಿಕೆಯುಳ್ಳ ಡಿ. ಎಸ್. ಸಿ. ಸಿ. 11 ಪತ್ರಿಕೆಯ ಪಠ್ಯ ವಸ್ತು:

**ಅಧ್ಯಾಯ 1: ಭಾರತದಲ್ಲಿ ರಾಜ್ಯ ರಾಜಕೀಯ [State Politics in India]:**

[I.] ರಾಜ್ಯ ರಾಜಕೀಯದ ಅರ್ಥ.
[II.] ಭಾರತದಲ್ಲಿನ ರಾಜ್ಯ ರಾಜಕೀಯದ ಸ್ವರೂಪ.
[III.] ಭಾರತದಲ್ಲಿನ ರಾಜ್ಯ ರಾಜಕೀಯದ ಮಹತ್ವ.
ಮಾದರಿ ಪ್ರಶ್ನೆಗಳು.

**ಅಧ್ಯಾಯ 2: ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ರಾಜಕೀಯ [Politics in Princely State of Mysore]:**

[I.] ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ರಾಜಕೀಯದ ಇತಿಹಾಸ.
[II.] ಮೈಸೂರಿನ ದೇಶೀಯ ಸಂಸ್ಥಾನದಲ್ಲಿ ಶಾಸಕಾಂಗದ ವಿಕಾಸ.
[A.] ಪ್ರಜಾ ಪ್ರತಿನಿಧಿ ಸಭೆಯ ಸ್ಥಾಪನೆ
[B.] ಶಾಸನ ಪರಿಷತ್ತಿನ ಸ್ಥಾಪನೆ
[C.] 1923 ರ ಶಾಸಕಾಂಗದ ಸುಧಾರಣೆ
[D.] ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಸಮಿತಿ
[E.] 1940 ರ ಮೈಸೂರು ಸರ್ಕಾರ ಕಾಯಿದೆ
[F.] ಪ್ರಜಾ ಪ್ರತಿನಿಧಿ ಸಭೆ ಮತ್ತು ಶಾಸನ ಪರಿಷತ್ತುಗಳ ರದ್ದತಿ
[G.] ಭಾರತ ಸಂವಿಧಾನದಡಿ ಮೈಸೂರು ಶಾಸಕಾಂಗ
[III.] ಮೈಸೂರು ಪ್ರಜಾ ಪ್ರತಿನಿಧಿ ಸಭೆ.
ಮಾದರಿ ಪ್ರಶ್ನೆಗಳು.

**ಅಧ್ಯಾಯ 3: ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ಆಡಳಿತ ಮತ್ತು ರಾಜ್ಯ ಪುನರ್‌ಸಂಘಟನೆ [Administration in the Princely State of Mysore and Reorganisation of State]:**

[I.] ಮೈಸೂರು ದೇಶೀಯ ಸಂಸ್ಥಾನದಲ್ಲಿನ ಆಡಳಿತ.
[A.] ವಿಜಯ ನಗರದ ಸಾಮಂತರಾಗಿ ಆಡಳಿತ.
[B.] ಸ್ವತಂತ್ರ ಮೈಸೂರು ಸಂಸ್ಥಾನದ ಆಡಳಿತ.
[C.] ಸಂಧಾನದ ಮೂಲಕ ಆಡಳಿತ.

[D.] ಅನ್ಯರ ಅಧಿನದಲ್ಲಿ ಆಡಳಿತ.

[E.] ಬ್ರಿಟಿಷ್ ಕಮೀಷನರುಗಳ ಆಡಳಿತ.

[F.] ಮಾದರಿ ಮೈಸೂರು ಆಡಳಿತ.

[G.] ಮೈಸೂರು ಸಂಸ್ಥಾನದ ಆಡಳಿತದಂತ್ರ

[II.] ಮೈಸೂರು ರಾಜ್ಯದ ಪುನರ್‌ಸಂಘಟನೆ.

[A.] ಧರ್ ಆಯೋಗ.

[B.] ತ್ರಿಸದಸ್ಯ ಜೆ. ವಿ. ಪಿ. ಸಮಿತಿ.

[C.] ಆಂಧ್ರ ಪ್ರದೇಶದ ರಚನೆಗಾಗಿ ಪೊಟ್ಟಿ ಶ್ರೀರಾಮುಲು ಉಪವಾಸ.

[D.] ವಾಂಚೂ ಸಮಿತಿ.

[E.] ಅದರಗುಂಚಿ ಶಂಕರಗೌಡ ಪಾಟೀಲರ ಉಪವಾಸ.

[F.] ಹುಬ್ಬಳ್ಳಿ ಗಲಭೆ.

[G.] ರಾಜ್ಯ ಪುನರ್ವಿಂಗಡಣಾ ಆಯೋಗದ ರಚನೆ.

[H.] ರಾಜ್ಯ ಪುನರ್ವಿಂಗಡಣಾ ಆಯೋಗಕ್ಕೆ ಕನ್ನಡಿಗರ ಮನವಿ.

[I.] ಮೈಸೂರು ರಾಜ್ಯದ ಪುನರ್‌ಸಂಘಟನೆ ಕುರಿತಂತೆ ರಾಜ್ಯಗಳ ಪುನರ್ ವಿಂಗಡಣಾ ಆಯೋಗದ ಶಿಫಾರಸುಗಳು.

[J.] ಲೋಕಸಭೆಯಲ್ಲಿ ವಿಧೇಯಕದ ಮಂಡನೆ ಮತ್ತು ಸ್ವೀಕಾರ.

ಮಾದರಿ ಪ್ರಶ್ನೆಗಳು.

ಅಧ್ಯಾಯ 4: ಕರ್ನಾಟಕದ ಏಕೀಕರಣ ಚಳುವಳಿ

**[Unification Movement of Karnataka]:**

[I.] ಏಕೀಕರಣ ಚಳುವಳಿಯ ಪರಿಕಲ್ಪನೆ.

[II.] ಕರ್ನಾಟಕ ಏಕೀಕರಣದ ಸಂಕ್ಷೀಪ್ತ ಇತಿಹಾಸ.

[III.] ಕರ್ನಾಟಕದ ಏಕೀಕರಣಕ್ಕೆ ಕಾರಣವಾದ ಅಂಶಗಳು.

[IV.] ಕರ್ನಾಟಕದ ಏಕೀಕರಣದಲ್ಲಿ ಕರ್ನಾಟಕ ವಿದ್ಯಾ ವರ್ಧಕ ಸಂಘದ ಪಾತ್ರ.

[V.] ಕರ್ನಾಟಕದ ಏಕೀಕರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರ.

ಮಾದರಿ ಪ್ರಶ್ನೆಗಳು.

ಅಧ್ಯಾಯ 5: ಕರ್ನಾಟಕತ್ವಕ್ಕೆ ಕಾಣಿಕೆಗಳು

**[Contributions to Karnatakatva]:**

[I.] ಕರ್ನಾಟಕತ್ವಕ್ಕೆ ಆಲೂರು ವೆಂಕಟರಾಯರ ಕೊಡುಗೆ.



[II.] ಕರ್ನಾಟಕಕ್ಕೆ ಡೆಪ್ಯುಟಿ ಚನ್ನಬಸಪ್ಪನವರ ಕೊಡುಗೆ.

[III.] ಕರ್ನಾಟಕಕ್ಕೆ ಗುದ್ಲೆಪ್ಪ ಹಳ್ಳಿಕೇರಿಯವರ ಕೊಡುಗೆ.

[IV.] ಕರ್ನಾಟಕಕ್ಕೆ ಸಿದ್ದಪ್ಪ ಕಂಬಳಿಯವರ ಕೊಡುಗೆ.

ಮಾದರಿ ಪ್ರಶ್ನೆಗಳು.

ಅಧ್ಯಾಯ 6: ಬೆಳಗಾವಿಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ

**[Indian National Congress Conference in Belgaum]:**

[I.] ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬೆಳಗಾವಿ ಅಧಿವೇಶನ.

[A.] ಹಿನ್ನೆಲೆ.

[B.] ಅಧಿವೇಶನದ ಸಿದ್ಧತೆ.

[C.] ಅಧಿವೇಶನದ ವಿಶೇಷತೆಗಳು.

[II.] ಹರಡೇಕರ್ ಮಂಜಪ್ಪನವರ ಸ್ವದೇಶಿ ಮತ್ತು ರಾಷ್ಟ್ರೀಯವಾದದ ಪರಿಕಲ್ಪನೆ.

[A.] ಮಂಜಪ್ಪನವರ ಜೀವನ ಮತ್ತು ಸಾಧನೆ.

[B.] ಮಂಜಪ್ಪನವರ ಸ್ವದೇಶಿ ಮತ್ತು ರಾಷ್ಟ್ರೀಯವಾದದ ಪರಿಕಲ್ಪನೆ.

[III.] ಹುಯಿಲಗೋಳ್ ನಾರಾಯಣ ರಾವ್.

ಮಾದರಿ ಪ್ರಶ್ನೆಗಳು.

ಅಧ್ಯಾಯ 7: ಕರ್ನಾಟಕದಲ್ಲಿ ಜಾತಿ ಮತ್ತು ರಾಜಕೀಯ

**[Caste and Politics in Karnataka]:**

[I.] ಕರ್ನಾಟಕದಲ್ಲಿ ಪ್ರಬಲ ಜಾತಿ.

[A.] ಪ್ರಬಲ ಜಾತಿಯ ಪರಿಕಲ್ಪನೆ.

[B.] ಲಿಂಗಾಯತರು.

[C.] ಒಕ್ಕಲಿಗರು.

[D.] ಕರ್ನಾಟಕದಲ್ಲಿ ಪ್ರಬಲ ಜಾತಿಯ ಲಕ್ಷಣಗಳು.

[II.] ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿ.

[A.] ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದ ಹಿಂದುಳಿದ ವರ್ಗಗಳ ಚಳುವಳಿ.

[B.] ಕರ್ನಾಟಕದಲ್ಲಿ ಸ್ವಾತಂತ್ರೋತ್ತರ ಹಿಂದುಳಿದ ವರ್ಗಗಳ ಚಳುವಳಿ.

[III.] ಕರ್ನಾಟಕದಲ್ಲಿ ಅಹಿಂದ ಚಳುವಳಿ.

[A.] ಅಹಿಂದದ ಅರ್ಥ.

[B.] ಅಹಿಂದದ ಬೆಳವಣಿಗೆ.

[C.] ಅಹಿಂದದ ಉದ್ದೇಶಗಳು.

[IV.] ಅಸ್ಮಿತೆ ರಾಜಕಾರಣ ಮತ್ತು ಜಾತಿ.

[A.] ಅಸ್ಮಿತೆ ರಾಜಕೀಯದ ಅರ್ಥ.

[B.] ಕರ್ನಾಟಕದಲ್ಲಿ ಜಾತಿ ಮತ್ತು ಅಸ್ಮಿತೆ ರಾಜಕೀಯ

[V.] ಧರ್ಮ ಮತ್ತು ರಾಜಕೀಯ.

ಮಾದರಿ ಪ್ರಶ್ನೆಗಳು.

ಅಧ್ಯಾಯ 8: ಕರ್ನಾಟಕದಲ್ಲಿ ಪ್ರಾದೇಶಿಕವಾದ

[Regionalism in Karnataka]:

[I.] ಪ್ರಾದೇಶಿಕವಾದದ ಪರಿಕಲ್ಪನೆ.

[A.] ಪ್ರಾದೇಶಿಕವಾದದ ಅರ್ಥ.

[B.] ಕರ್ನಾಟಕದಲ್ಲಿ ಪ್ರಾದೇಶಿಕವಾದದ ಕಾರಣಗಳು ಮತ್ತು ಪರಿಣಾಮಗಳು

[II.] ಡಾ. ನಂಜುಂಡಪ್ಪ ವರದಿ.

[A.] ನಂಜುಂಡಪ್ಪ ಸಮಿತಿಯ ರಚನೆ ಹಾಗೂ ಕಾರ್ಯಾಚರಣೆ.

[B.] ನಂಜುಂಡಪ್ಪ ವರದಿಯ ಶಿಫಾರಸುಗಳು

[C.] ನಂಜುಂಡಪ್ಪ ವರದಿಯ ಅನುಷ್ಠಾನ.

[III.] ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನಗಳು.

ಮಾದರಿ ಪ್ರಶ್ನೆಗಳು.

ಅಧ್ಯಾಯ 9: ಕರ್ನಾಟಕದಲ್ಲಿ ವಿವಿಧ ಕ್ಷೇತ್ರಗಳು ಮತ್ತು ರಾಜಕೀಯ

[Verious Fields and Politics in Karnataka]:

[I.] ಕರ್ನಾಟಕದಲ್ಲಿ ಭಾಷೆ ಮತ್ತು ರಾಜಕೀಯ.

[II.] ಕರ್ನಾಟಕದ ಜಲ ವಿವಾದಗಳು.

[III.] ಕರ್ನಾಟಕದ ಗಡಿ ವಿವಾದಗಳು.

[IV.] ಕರ್ನಾಟಕದಲ್ಲಿ ರೈತರ ಸಮಸ್ಯೆಗಳು.

[V.] ಕರ್ನಾಟಕದಲ್ಲಿ ಲಿಂಗ ರಾಜಕೀಯ.

[VI.] ಕೇಂದ್ರದೊಡನೆ ಕರ್ನಾಟಕದ ಸಂಬಂಧ.

ಮಾದರಿ ಪ್ರಶ್ನೆಗಳು.



ಅಧ್ಯಾಯ 10: ಕರ್ನಾಟಕದಲ್ಲಿ ಸಂಮಿಶ್ರ ಸರ್ಕಾರ

[Coalition Government in Karnataka]:

[I.] ಸಂಮಿಶ್ರ ರಾಜಕೀಯದ ಅರ್ಥ.

[II.] ಸಂಮಿಶ್ರ ಸರ್ಕಾರದ ಸ್ವರೂಪ.

[III.] ಕರ್ನಾಟಕದಲ್ಲಿ ಸಂಮಿಶ್ರ ಸರ್ಕಾರಗಳ ಕಾರ್ಯಾಚರಣೆ.

[IV.] ಸಮ್ಮಿಶ್ರ ಸರ್ಕಾರದ ಪರಿಣಾಮಗಳು.

[A.] ನೀತಿ ನಿರೂಪಣೆಯ ಮೇಲಿನ ಪರಿಣಾಮಗಳು.

[B.] ಆಡಳಿತದ ಮೇಲಿನ ಪರಿಣಾಮಗಳು.

[C.] ಪಕ್ಷ ರಾಜಕೀಯದ ಮೇಲಿನ ಪರಿಣಾಮಗಳು.

ಮಾದರಿ ಪ್ರಶ್ನೆಗಳು.

ಅಧ್ಯಾಯ 11: ಕರ್ನಾಟಕದಲ್ಲಿ ರಾಜಕೀಯ ಧ್ರುವೀಕರಣ

[ Political Polarisation in Karnataka]:

[I.] ರಾಜಕೀಯ ಧ್ರುವೀಕರಣದ ಅರ್ಥ.

[II.] ಕರ್ನಾಟಕದ ರಾಜಕೀಯದಲ್ಲಿ ಧ್ರುವೀಕರಣದ ವಿಕಾಸ.

[III.] ರಾಜಕೀಯ ಧ್ರುವೀಕರಣದ ಪರಿಣಾಮಗಳು.

ಮಾದರಿ ಪ್ರಶ್ನೆಗಳು.

ಅಧ್ಯಾಯ 12: ಕರ್ನಾಟಕದ ಸವಾಲುಗಳು

[Challenges of Karnataka]:

[I.] ಕರ್ನಾಟಕದಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ.

[II.] ಕಲಂ 371 [ಜೆ.] ಮತ್ತು ವಿಶೇಷ ಸ್ಥಾನಮಾನ.

[III.] ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಸವಾಲುಗಳು.

[IV.] ಕೊಡಗಿನ ಒಂದು ಅಧ್ಯಯನ.

ಮಾದರಿ ಪ್ರಶ್ನೆಗಳು

ಅಧ್ಯಾಯ 1:

# ಭಾರತದಲ್ಲಿ ರಾಜ್ಯ ರಾಜಕೀಯ

# [State Politics in India].

ಪ್ರಸ್ತಾವನೆ **[Introduction]:** ರಾಜಕೀಯ ಎಂಬ ಕನ್ನಡ ಪದವು ಗ್ರೀಕ್ ಭಾಷೆಯ ಪಾಲಿಸ್ ಪದದಿಂದ ಉತ್ಪತ್ತಿಗೊಂಡಿದ್ದು ನಗರ ರಾಜ್ಯ ಎಂಬರ್ಥ ಹೊಂದಿದೆ. ಪ್ರಾಚೀನ ಗ್ರೀಕರನ್ವಯ ರಾಜಕೀಯವು ಸಮಾಜಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲ ಅಂಶಗಳನ್ನೊಳಗೊಂಡ ಸಮಗ್ರ ಪರಿಕಲ್ಪನೆಯಾಗಿತ್ತು. ರಾಜ್ಯ ಮತ್ತು ರಾಜ್ಯದ ಪ್ರಾಯೋಗಿಕ ಮಾನವ ಚಟುವಟಿಕೆಗಳನ್ನು ಗ್ರೀಕರ ರಾಜಕೀಯವು ಪ್ರತಿನಿಧಿಸುತ್ತಿತ್ತು. ಆಧುನಿಕವಾಗಿ ಸರ್ಕಾರಕ್ಕೆ ಸಂಬಂಧಿಸಿದ ದೈನಂದಿನ ಚಟುವಟಿಕೆಗಳನ್ನು ಸರಳಾರ್ಥದಲ್ಲಿ ರಾಜಕೀಯ ಎನ್ನಬಹುದು. ವಿಶಾಲಾರ್ಥದಲ್ಲಿ ಪ್ರಜೆಗಳ ರಾಜಕೀಯ ಜೀವನವನ್ನು ಪ್ರಭಾವಿಸುವ ವೈವಿಧ್ಯಮಯ ಸಂಸ್ಥೆಗಳ ನೆರವಿನಿಂದ ಜರುಗುವ ಸರ್ಕಾರದ ಕಾರ್ಯಾಚರಣೆಯನ್ನು ರಾಜಕೀಯವು ಪ್ರತಿನಿಧಿಸುತ್ತದೆ. ಪಕ್ಷ ಸಂಘಟನೆ, ಚುನಾವಣಾ ಸ್ಪರ್ಧೆ, ಮತದಾನ, ಅಧಿಕಾರ ಗಳಿಕೆ, ಸರ್ಕಾರ ರಚನೆ ಮುಂತಾದ ಚಟುವಟಿಕೆಗಳು ರಾಜಕೀಯದ ವ್ಯಾಪ್ತಿಗೊಳಪಡುತ್ತವೆ. ರಾಜಕೀಯವು ಕಾಲ ಹಾಗೂ ಸ್ಥಳಗಳಿಗೆ ಸೀಮಿತವಾಗಿರದೇ ಸಾರ್ವಕಾಲಿಕ ಮತ್ತು ಸಾರ್ವತ್ರಿಕ ಮಾನವ ಚಟುವಟಿಕೆಯಾಗಿದೆ. ಆದ್ದರಿಂದ ಅರಿಸ್ಟಾಟಲ್ ಮಾನವನನ್ನು ರಾಜಕೀಯ ಜೀವಿ (Political Animal) ಎಂದಿರುವರು. ಪ್ರಸ್ತುತ ರಾಜಕೀಯವು ಜಾತಿ, ಭಾಷೆ, ಧರ್ಮ, ಪ್ರದೇಶ, ಆರ್ಥಿಕತೆ, ರಾಷ್ಟ್ರೀಯತೆ ಮುಂತಾದ ರಂಗಗಳಲ್ಲಿ ಬಳಸಲ್ಪಡುತ್ತಿದೆ. ಹೀಗಾಗಿ ಪ್ರಪಂಚದ ಎಲ್ಲ ದೇಶಗಳು ವಿಭಿನ್ನ ರಾಜಕೀಯ ಆಯಾಮಗಳನ್ನು ಮೈಗೂಡಿಸಿಕೊಳ್ಳುವಂತಾಗಿದೆ.

1947 ರಲ್ಲಿ ಸ್ವಾತಂತ್ರ್ಯ ಪಡೆದ ಭಾರತವು ಸಂವಿಧಾನದ ಮೊದಲ ವಿದಿಯಲ್ಲಿ ತನ್ನನ್ನು ರಾಜ್ಯಗಳ ಒಕ್ಕೂಟ ಎಂದು ಘೋಷಿಸಿಕೊಂಡಿತು. ಆರಂಭದಲ್ಲಿ ಭಾರತದ ಒಕ್ಕೂಟವು ಎ., ಬಿ., ಸಿ. ಮತ್ತು ಡಿ ಎಂಬ ರಾಜ್ಯಗಳ ಗುಂಪನ್ನು ಸಂವಿಧಾನಾತ್ಮಕವಾಗಿ ಅಳವಡಿಸಿಕೊಂಡಿತ್ತು. ಆದರೆ, ಭಾಷಾಧಾರಿತ ರಾಜ್ಯಗಳ ಬೇಡಿಕೆ ತೀವ್ರಗೊಂಡಾಗ ಫಜಲ್ ಅಲಿ ನೇತೃತ್ವದ ರಾಜ್ಯಗಳ ಪುನರ್‌ವಿಂಗಡಣಾ ಆಯೋಗವನ್ನು ರಚಿಸಿ 1956 ರಲ್ಲಿ ಅದರ ಶಿಫಾರಸಿನಂತೆ ಭಾರತದ ರಾಜ್ಯಗಳನ್ನು ಮರು ವಿಂಗಡಿಸಲಾಯಿತು. ಕಾಲಾನುಕ್ರಮದಲ್ಲಿ ಹೋರಾಟಗಳ ಪರಿಣಾಮ ಬೃಹತ್ ರಾಜ್ಯಗಳು ಪ್ರತ್ಯೇಕಗೊಂಡು ಹಲವು ನೂತನ

ರಾಜ್ಯಗಳು ಭಾರತ ಒಕ್ಕೂಟದ ಭಾಗವೆನಿಸಿದವು. ಈ ಮಧ್ಯೆ, ಸ್ವತಂತ್ರ ಭಾರತದ ಆರಂಭದಲ್ಲಿದ್ದ ಕಾಂಗ್ರೆಸ್ ಪಕ್ಷದ ಪ್ರಾಭಲ್ಯ ಕಾರಣಾಂತರಗಳಿಂದ ಕ್ಷೀಣಿಸತೊಡಗಿ ಭಾರತ ಒಕ್ಕೂಟದ ರಾಜ್ಯಗಳಲ್ಲಿ ರಾಜಕೀಯ ಚಟುವಟಿಕೆ ಬಲಗೊಳ್ಳತೊಡಗಿದವು. ರಾಷ್ಟ್ರ ರಾಜಕೀಯಕ್ಕೆ ಅಧೀನವಾಗಿದ್ದ ರಾಜ್ಯಗಳು ತಮ್ಮದೇಯಾದ ರಾಜಕೀಯ ಬೆಳವಣಿಗೆಗಳಿಗೆ 1960 ರ ವೇಳೆಗೆ ಕಾರಣವಾದವು. ಈ ಹಿನ್ನೆಲೆಯಲ್ಲಿ ಭಾರತದ ಒಕ್ಕೂಟವು ರಾಜ್ಯ ರಾಜಕೀಯವೆಂಬ ಪರಿಕಲ್ಪನೆಗೆ ವೇದಿಕೆಯೊದಗಿಸಿತು. ಪ್ರಸ್ತುತ ಅಧ್ಯಾಯದಲ್ಲಿ ಭಾರತದಲ್ಲಿನ ರಾಜ್ಯ ರಾಜಕೀಯದ ಕುರಿತು ಸಂಕ್ಷಿಪ್ತವಾಗಿ ಬೆಳಕು ಚೆಲ್ಲಲಾಗಿದೆ.

## [I.] ರಾಜ್ಯ ರಾಜಕೀಯದ ಅರ್ಥ [Meaning of State Politics]:

ರಾಜ್ಯ ರಾಜಕೀಯ ಎಂಬ ಪರಿಕಲ್ಪನೆಯಲ್ಲಿನ ರಾಜ್ಯ ಮತ್ತು ರಾಜಕೀಯ ಎಂಬ ಎರಡೂ ಪದಗಳು ರಾಜ್ಯಶಾಸ್ತ್ರದಲ್ಲಿ ತಮ್ಮದೇಯಾದ ಸ್ವತಂತ್ರ ಅರ್ಥವನ್ನು ಹೊಂದಿವೆ. ನಿರ್ಧಿಷ್ಟ ಭೂಪ್ರದೇಶದಲ್ಲಿ ಕಾನೂನಿಗೋಸ್ಕರ ರಾಜಕೀಯವಾಗಿ ಸಂಘಟಿತಗೊಂಡ ಜನ ಸಮೂಹವನ್ನು ರಾಜ್ಯಶಾಸ್ತ್ರದಲ್ಲಿ ರಾಜ್ಯ ಎನ್ನಲಾಗುತ್ತದೆ. ಜನಸಂಖ್ಯೆ, ನಿರ್ಧಿಷ್ಟ ಭೂಪ್ರದೇಶ, ಸರ್ಕಾರ ಮತ್ತು ಪರಮಾಧಿಕಾರಗಳು ರಾಜ್ಯದ ಮೂಲಾಂಶವಾಗಿದ್ದು ಭಾರತ, ಶ್ರೀಲಂಕಾ, ಫ್ರಾನ್ಸ್, ಬ್ರಿಟನ್ ಈ ಬಗೆಯ ರಾಜ್ಯಕ್ಕೆ ನಿದರ್ಶನಗಳಾಗಿವೆ. ಆದರೆ, ಭಾರತದಲ್ಲಿ ಒಕ್ಕೂಟದ ಘಟಕಗಳನ್ನು ರಾಜ್ಯ ಎನ್ನಲಾಗುತ್ತದೆ. ಕರ್ನಾಟಕ, ಕೇರಳ, ಬಿಹಾರ, ರಾಜಸ್ತಾನಗಳಂತಹ ಒಕ್ಕೂಟದ ಘಟಕಗಳು ಭಾರತದಲ್ಲಿ ರಾಜ್ಯಗಳೆನಿಸಿದ್ದು ಅವು ಜನಸಂಖ್ಯೆ, ನಿರ್ಧಿಷ್ಟ ಭೂಪ್ರದೇಶ ಹಾಗೂ ಸರ್ಕಾರಗಳನ್ನು ಹೊಂದಿದ್ದರೂ ಪರಮಾಧಿಕಾರವನ್ನು ಪಡೆದಿರುವುದಿಲ್ಲ. ಅಂತೆಯೇ ಜನ ಸಮೂಹವೊಂದರ ದೈನಂದಿನ ಆಡಳಿತಾತ್ಮಕ ಚಟುವಟಿಕೆಗಳನ್ನು ರಾಜಕೀಯವು ಪ್ರತಿನಿಧಿಸುತ್ತದೆ. ಈ ಪೂರ್ವ ಮಾಹಿತಿಯೊಡನೆ ನಾವು ಭಾರತದಲ್ಲಿನ ರಾಜ್ಯ ರಾಜಕೀಯ ಪರಿಕಲ್ಪನೆಯ ಅರ್ಥವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ.

ರಾಜ್ಯ ಮಟ್ಟದ ರಾಜಕೀಯವನ್ನು ಸರಳಾರ್ಥದಲ್ಲಿ ರಾಜ್ಯ ರಾಜಕೀಯ ಎನ್ನಬಹುದು. ರಾಷ್ಟ್ರ ರಾಜಕೀಯಕ್ಕೆ ಸಮಾನಾಂತರವಾಗಿ ಭಾರತ ಒಕ್ಕೂಟದ ಪ್ರತಿ ರಾಜ್ಯಗಳಲ್ಲಿ ಜರುಗುವ ರಾಜಕೀಯವನ್ನು ರಾಜ್ಯ ರಾಜಕೀಯವು ಪ್ರತಿನಿಧಿಸುತ್ತದೆ. ವಿಶಾಲಾರ್ಥದಲ್ಲಿ ರಾಜ್ಯವೆಂದು ಕರೆಯಲ್ಪಡುವ ನಿರ್ಧಿಷ್ಟ ಭೌಗೋಳಿಕ ಘಟಕದಲ್ಲಿ ಜರುಗುವ ರಾಜಕೀಯ ಚಟುವಟಿಕೆಗಳು, ಪ್ರಕ್ರಿಯೆಗಳು ಅಥವಾ ಸಮಸ್ಯೆಗಳನ್ನು ಪ್ರತಿನಿಧಿಸುವ ಪರಿಕಲ್ಪನೆಯೇ ರಾಜ್ಯ ರಾಜಕೀಯವಾಗಿದೆ. ರಾಜ್ಯವೊಂದರ ಜನರ ಮೇಲೆ ಪ್ರಭಾವ ಬೀರುವ ಚುನಾವಣೆಗಳು, ಶಾಸನೀಯ ಪ್ರಕ್ರಿಯೆಗಳು, ಅಭಿವೃದ್ಧಿ ನೀತಿಗಳು, ಸ್ಥಳೀಯ ಸಂಸ್ಥೆಗಳೊಡನೆ ರಾಜ್ಯದ ಸಂಬಂಧದಂತಹ ವಿವಿಧ ಅಂಶಗಳನ್ನು ರಾಜ್ಯ ರಾಜಕೀಯವು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ವಿಶಾಲ ರಾಷ್ಟ್ರವೊಂದರ ಆಡಳಿತಾತ್ಮಕ ಘಟಕಗಳಲ್ಲಿನ ಸ್ಥಳೀಯ ಪ್ರಭಾವಗಳಿಗೊಳಗಾಗಿ ರಾಜ್ಯ ರಾಜಕೀಯವು ಕಂಡು ಬರುತ್ತದೆ. ರಾಷ್ಟ್ರ ರಾಜಕೀಯದ ಮಾದರಿಗಿಂತ ಭಿನ್ನವಾಗಿರುವ ರಾಜ್ಯ ರಾಜಕೀಯವು ಪ್ರಾದೇಶಿಕ



ಅಸ್ಮಿತೆಯ ಕಾರಣದಿಂದ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸಗೊಳ್ಳುತ್ತದೆ. ಉದಾ: ಭಾರತ ಒಕ್ಕೂಟದ ಕೇರಳ, ಕರ್ನಾಟಕ, ಬಿಹಾರ ರಾಜ್ಯಗಳಲ್ಲಿನ ರಾಜ್ಯ ರಾಜಕೀಯವು ಹೊಂದಿರುವ ವ್ಯತ್ಯಾಸಗಳು.

ಗಮನಾರ್ಹ ಅಂಶವೇನೆಂದರೆ, ಭಾರತದಲ್ಲಿನ ರಾಜ್ಯ ರಾಜಕೀಯವು 1960 ರ ಬಳಿಕ ಮುನ್ನೆಲೆಗೆ ಬಂದ ಪರಿಕಲ್ಪನೆಯಾಗಿದೆ. 1961 ರಲ್ಲಿ ಚಿಕಾಗೋ ವಿಶ್ವ ವಿದ್ಯಾಲಯ ಮತ್ತು 1964 ರಲ್ಲಿ ಅಮೇರಿಕಾದ ಮಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆಯೋಜಿಸಿದ್ದ ವಿಚಾರ ಸಂಕೀರ್ಣದಲ್ಲಿ ಭಾರತದಲ್ಲಿನ ರಾಜ್ಯ ರಾಜಕೀಯದ ಮೇಲೆ ಅಮೇರಿಕಾದ ಸಂಶೋಧಕರು ಮೊದಲ ಬಾರಿಗೆ ಬೆಳಕು ಚೆಲ್ಲಿದರು. ಈ ವಿಚಾರ ಸಂಕೀರ್ಣದಲ್ಲಿ ಮಂಡನೆಗೊಂಡ ಸಂಶೋಧನಾ ಪತ್ರಿಕೆಗಳನ್ನು ಸಂಪಾದಿಸಿದ ಮೈರಾನ್ ವೀನರ್ 1968 ರಲ್ಲಿ ಭಾರತದಲ್ಲಿನ ರಾಜ್ಯ ರಾಜಕೀಯ ಎಂಬ ಕೃತಿಯನ್ನು ಹೊರ ತಂದರು. ಮುಂದೆ 1976 ರಲ್ಲಿ ಭಾರತದ ಎಲ್ಲ ರಾಜ್ಯಗಳ ರಾಜಕೀಯವನ್ನು ಕುರಿತಾದ ಭಾರತದಲ್ಲಿನ ರಾಜ್ಯ ರಾಜಕೀಯವೆಂಬ ಇನ್ನೊಂದು ಕೃತಿಯನ್ನು ಇಕ್ಬಾಲ್ ನರೈನ್ ಪ್ರಕಟಿಸಿದರು. ಈ ಮೂಲಕ ಭಾರತ ಒಕ್ಕೂಟದ ವಿವಿಧ ರಾಜ್ಯಗಳ ರಾಜಕೀಯವನ್ನು ಅಧ್ಯಯನ ಮಾಡುವ ರಾಜ್ಯ ರಾಜಕೀಯ ಪರಿಕಲ್ಪನೆ ಮಹತ್ವ ಪಡೆದುಕೊಂಡಿತು.

## [II.] ಭಾರತದಲ್ಲಿನ ರಾಜ್ಯ ರಾಜಕೀಯದ ಸ್ವರೂಪ [Nature of State Politics in India]:

ಈಗಾಗಲೇ ತಾವು ತಿಳಿದಿರುವಂತೆ ಭಾರತವು ರಾಜ್ಯಗಳ ಒಕ್ಕೂಟವಾಗಿದೆ. ಆರಂಭದಲ್ಲಿ ಸಂವಿಧಾನಾತ್ಮಕವಾಗಿ ಎ., ಬಿ., ಸಿ. ಮತ್ತು ಡಿ. ಎಂಬ ಗುಂಪುಗಳಲ್ಲಿ ರಚನೆಗೊಂಡಿದ್ದ ರಾಜ್ಯಗಳು 1956 ರಲ್ಲಿ ಭಾಷಾಧಾರದ ಮೇಲೆ ಪುನರ್‌ರಚನೆಗೊಂಡವು. ಜೊತೆಗೆ ಕಾಂಗ್ರೆಸ್ ಪಕ್ಷದ ಪ್ರಾಭಲ್ಯದಿಂದ ರಾಷ್ಟ್ರ ರಾಜಕಾರಣದ ಚೌಕಟ್ಟಿಗೊಳಪಟ್ಟು ತಮ್ಮ ಆಡಳಿತವನ್ನು ನಡೆಸುತ್ತಿದ್ದವು. ಆದರೆ, 1960 ರ ಬಳಿಕ ಜವಾಹರಲಾಲ್ ನೆಹರುರ ನಿಧನ, ಸ್ಥಳೀಯ ಸಾಂಸ್ಕೃತಿಕ ಪ್ರಭಾವದಲ್ಲಿನ ಹೆಚ್ಚಳ, ಪ್ರಾದೇಶಿಕ ಪಕ್ಷಗಳ ಬಲವರ್ಧನೆ ಮುಂತಾದ ಕಾರಣಗಳಿಂದ ಭಾರತ ಒಕ್ಕೂಟದ ರಾಜ್ಯಗಳು ತಮ್ಮದೇಯಾದ ರಾಜಕೀಯವನ್ನು ಮೈಗೂಡಿಸಿಕೊಳ್ಳತೊಡಗಿದವು. ಫಲವಾಗಿ ಕಳೆದ ಮೂರು ದಶಕಗಳಿಂದ ರಾಷ್ಟ್ರ ರಾಜಕೀಯವು ದುರ್ಬಲಗೊಂಡು ಭಾರತದಲ್ಲಿ ರಾಜ್ಯ ರಾಜಕೀಯವನ್ನು ಅವಲಂಬಿಸುವಂತಾಗಿದೆ. ಹೀಗೆ ಭಾರತದಲ್ಲಿನ ರಾಜ್ಯ ರಾಜಕೀಯವು ಕಾಲಾಂತರದಲ್ಲಿ ಸದೃಢಗೊಳ್ಳುತ್ತಾ ಬಂದಿದ್ದು ಅದರ ಸ್ವರೂಪವನ್ನು ಈ ಕೆಳಗಿನ ಅಂಶಗಳ ನೆರವಿನಿಂದ ಗುರುತಿಸಬಹುದಾಗಿದೆ.

1. **ಸ್ವಾತಂತ್ರ್ಯೋತ್ತರ ಪರಿಕಲ್ಪನೆ:** ರಾಜ್ಯ ರಾಜಕೀಯವೆಂಬುದು ಭಾರತದಲ್ಲಿ ಸ್ವಾತಂತ್ರ್ಯೋತ್ತರ ವಿದ್ಯಮಾನವಾಗಿದೆ. 1935 ರ ಭಾರತ ಸರ್ಕಾರ ಕಾಯಿದೆಯಂತೆ ಸ್ವಾತಂತ್ರ್ಯ ಪೂರ್ವ ಭಾರತದ ನಾನಾ ಪ್ರಾಂತ್ಯಗಳಲ್ಲಿ ಚುನಾವಣಾ ರಾಜಕೀಯ ಕಂಡು ಬಂದಿತಾದರೂ ಅಂದಿನ ರಾಷ್ಟ್ರ ರಾಜಕೀಯದ ಭಾಗವಾಗಿತ್ತು. ಮುಂದೆ ಸ್ವಾತಂತ್ರ್ಯ ಗಳಿಸಿದ

ಮೊದಲ ದಶಕದಲ್ಲಿ ರಾಷ್ಟ್ರ ನಿರ್ಮಾಣದ ಭಾಗವಾಗಿ ನೆಹರು ಮಾದರಿಯ ಅಭಿವೃದ್ಧಿ ಜಾರಿಗೊಂಡಾಗ ರಾಜ್ಯಗಳು ಕೇಂದ್ರದೊಡನೆ ಸಹಕರಿಸಿದವು. ಆಗ ಕಾಂಗ್ರೆಸ್‌ನ ಏಕಪಕ್ಷದ ಪ್ರಾಬಲ್ಯದಿಂದ ರಾಜ್ಯ ರಾಜಕೀಯವು ರಾಷ್ಟ್ರ ರಾಜಕೀಯದ ಪ್ರತಿಬಿಂಬವೆನಿಸಿತ್ತು. 1960 ರ ದಶಕದ ಕೊನೆಯ ವೇಳೆಗೆ ರಾಷ್ಟ್ರ ರಾಜಕೀಯದಲ್ಲಾದ ಹಲವು ಬೆಳವಣಿಗೆಯ ಫಲವಾಗಿ ರಾಜ್ಯ ರಾಜಕೀಯವು ತನ್ನ ಅಸ್ತಿತ್ವವನ್ನು ಭಾರತದಲ್ಲಿ ತೋರಿಸತೊಡಗಿತು. ಹೀಗಾಗಿ ರಾಜ್ಯ ರಾಜಕೀಯವೆಂಬುದು ಸ್ವಾತಂತ್ರ್ಯೋತ್ತರ ವಿದ್ಯಮಾನವೆಂದು ಪರಿಗಣಿಸಲ್ಪಡುತ್ತಿದೆ.

2. ಏಕರೂಪತೆಯ ಕೊರತೆ: ಭಾರತದಲ್ಲಿ ಪ್ರಸ್ತುತ 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳಿವೆ. ಭಾರತ ಒಕ್ಕೂಟದ ಪ್ರತಿ ರಾಜ್ಯ ತನ್ನದೇಯಾದ ಭಾಷೆ, ಸಂಸ್ಕೃತಿ ಮತ್ತು ಇತಿಹಾಸ ಹೊಂದಿದ್ದು ವೈವಿಧ್ಯತೆ ಸಹಜವೆನಿಸಿದೆ. ಈ ವೈವಿಧ್ಯತೆಯ ಪರಿಣಾಮ ಜನರ ಸವಾಲುಗಳು, ಬೇಡಿಕೆಗಳು ಅಥವಾ ನಿಲುವುಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತವೆ. ಫಲವಾಗಿ ಪ್ರತಿ ರಾಜ್ಯ ತನಗೆ ಅನುರೂಪವಾದ ರಾಜಕೀಯವನ್ನು ಮೈಗೂಡಿಸಿಕೊಂಡಿರುತ್ತದೆ. ಹೀಗಾಗಿ ಭಾರತದಲ್ಲಿನ ರಾಜ್ಯ ರಾಜಕೀಯವು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸಗೊಂಡು ಏಕರೂಪತೆಯ ಕೊರತೆಯನ್ನು ಹೊಂದುವಂತಾಗಿದೆ.

3. ಕಾಂಗ್ರೆಸ್ ವಿರೋಧದ ಫಲ: ಭಾರತ ಸ್ವತಂತ್ರಗೊಂಡಾಗ ಕೇಂದ್ರ ಮತ್ತು ರಾಜ್ಯಗಳಲ್ಲಿ ಕಾಂಗ್ರೆಸ್ ಪ್ರಬಲ ಪಕ್ಷವಾಗಿತ್ತು. ಕಾಂಗ್ರೆಸ್‌ನ ಏಕಪಕ್ಷದ ಪ್ರಾಬಲ್ಯವನ್ನು ಹೋಗಲಾಡಿಸಲು ವಿವಿಧ ವಿರೋಧ ಪಕ್ಷಗಳು ಜನರನ್ನು ಸಂಘಟಿಸತೊಡಗಿದವು. ಜನ ಸಂಘವು ಉತ್ತರ ಭಾರತದಲ್ಲಿ, ಅಕಾಲಿ ದಳವು ಪಂಜಾಬಿನಲ್ಲಿ, ಎಡ ಪಕ್ಷಗಳು ಬಿಹಾರ, ಬಂಗಾಳ ಹಾಗೂ ಕೇರಳಗಳಲ್ಲಿ ವಿವಿಧ ಸಮಸ್ಯೆಗಳ ನೆರವಿನಿಂದ ಜನರನ್ನು ಕಾಂಗ್ರೆಸ ವಿರುದ್ಧ ಸಂಘಟಿಸಲಾರಂಭಿಸಿದಾಗ ರಾಜ್ಯ ರಾಜಕೀಯವು ಮಹತ್ವ ಪಡೆದುಕೊಂಡಿತು. ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಎದುರಿಸಲಾಗದ ಪಕ್ಷಗಳು ರಾಜ್ಯದಲ್ಲಿ ಅದನ್ನು ಕಟ್ಟಿಹಾಕಲು ಪ್ರಯತ್ನಿಸಿದವು. ಈ ಹಿನ್ನೆಲೆಯಲ್ಲಿ ರಾಜ್ಯ ರಾಜಕೀಯವು ಕಾಂಗ್ರೆಸ್‌ನ ವಿರೋಧಿಸುವ ಕಾರಣಕ್ಕೆ ಉದಯಗೊಂಡು ಕಾಲಾನುಕ್ರಮದಲ್ಲಿ ಬಲಗೊಂಡ ಪರಿಕಲ್ಪನೆಯಾದುದು ಅದರ ಸ್ವರೂಪವನ್ನು ತೋರಿಸುತ್ತದೆ.

4. ಸಾಂಸ್ಕೃತಿಕ ಅಂಶಗಳ ತಳಹದಿ: ಭಾರತದಲ್ಲಿನ ರಾಜ್ಯ ರಾಜಕೀಯವು ಜನಾಂಗ, ಭಾಷೆ, ಆಹಾರದಂತಹ ಸಾಂಸ್ಕೃತಿಕ ಅಂಶಗಳನ್ನು ಆಧರಿಸಿ ಮುನ್ನೆಲೆಗೆ ಬಂದಿರುವ ಪರಿಕಲ್ಪನೆಯಾಗಿದೆ. ಈಶಾನ್ಯ ರಾಜ್ಯಗಳಲ್ಲಿನ ಬುಡಕಟ್ಟುಗಳು ತಮ್ಮ ಜನಾಂಗಿಯ ಅಸ್ಮಿತೆ ಕಾಪಾಡಿಕೊಳ್ಳಲು ಸಂಘಟಿಸಿದ ಹೋರಾಟಗಳು ರಾಜ್ಯ ರಾಜಕೀಯವನ್ನು ಪ್ರಭಾವಿಸಿದ್ದವು. ಅಂತೆಯೇ ಪಂಜಾಬಿನಿಂದ ಹರಿಯಾಣಾ ಮತ್ತು ಬಾಂಬೇಯಿಂದ ಗುಜರಾತ್ ಪ್ರತ್ಯೇಕಗೊಂಡು ತಮ್ಮ ಭಾಷಾ ಅಸ್ಮಿತೆಯನ್ನು ಸಂರಕ್ಷಿಸಿಕೊಳ್ಳುವಲ್ಲಿ ರಾಜ್ಯ ರಾಜಕೀಯದ ಏಳಿಗೆಯನ್ನು ಗುರುತಿಸಬಹುದಾಗಿದೆ. ಜೊತೆಗೆ ಹಿಂದಿ ಭಾಷೆಯನ್ನು ಕೇಂದ್ರ ಸರ್ಕಾರ ಹೇರಲು ಹೊರಟಾಗ ದಕ್ಷಿಣದ ರಾಜ್ಯಗಳು ಪ್ರತಿಭಟಿಸಿದ ಬೆಳವಣಿಗೆಯು ರಾಜ್ಯ ರಾಜಕೀಯವನ್ನು ಗಟ್ಟಿಗೊಳಿಸಿತು. ಹೀಗೆ ಸಾಂಸ್ಕೃತಿಕ ಅಂಶಗಳ ನೆಲೆಗಟ್ಟಿನಲ್ಲಿ ರಾಜ್ಯ



ರಾಜಕೀಯವೆಂಬುದು ಭಾರತದಲ್ಲಿ ಬಲವರ್ಧನೆಗೊಂಡಿದುದು ಅದರ ಸ್ವರೂಪವನ್ನು ಸೂಚಿಸುತ್ತದೆ.

5. ಭಿನ್ನಮತದ ಬೆಂಬಲ: ಭಾರತದಲ್ಲಿನ ರಾಜ್ಯ ರಾಜಕೀಯವು ರಾಷ್ಟ್ರ ರಾಜಕೀಯದ ಭಿನ್ನಮತದ ಫಲವಾಗಿ ಮುನ್ನೆಲೆಗೆ ಬಂದ ವಿದ್ಯಮಾನವಾಗಿದೆ. ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷದ ಪ್ರಾಬಲ್ಯ ಮತ್ತು ಅದರ ಸೈದ್ಧಾಂತಿಕ ನಿಲುವುಗಳಿಂದ ಬೇಸರಗೊಂಡ ಕೆಲ ನಾಯಕರು ತಮ್ಮ ಬೆಂಬಲಕ್ಕಿದ್ದ ಜನ ಸಮುದಾಯದ ಪರವಾಗಿ ರಾಜ್ಯ ರಾಜಕೀಯದೆಡೆ ಗಮನ ಹರಿಸಿದರು. ಉದಾ: ಉತ್ತರ ಪ್ರದೇಶದಲ್ಲಿ ಚರಣ್‌ಸಿಂಗ್ ಮತ್ತು ಕಾಂಗ್ರೆಸ್ ನಾಯಕರ ಭಿನ್ನಮತವು ಮಧ್ಯಮ ಹಾಗೂ ಹಿಂದುಳಿದ ಜನರ ಪ್ರಾದೇಶಿಕ ರಾಜಕೀಯದ ಮುನ್ನೆಲೆಗೆ ಕಾರಣವಾದುದು. ಇದರೊಡನೆ 1969 ರ ಹೊತ್ತಿಗೆ ಕಾಂಗ್ರೆಸ್ ಪಕ್ಷದಲ್ಲಾದ ವಿಭಜನೆಯು ರಾಜ್ಯ ರಾಜಕೀಯಕ್ಕೆ ಭಾರತದಲ್ಲಿ ಮತ್ತಷ್ಟು ಇಂಬು ನೀಡಿತು. 1975 ರಲ್ಲಿ ಜಾರಿಗೊಂಡ ತುರ್ತು ಪರಿಸ್ಥಿತಿಯು ಇಂದಿರಾ ಗಾಂಧಿಯೊಡನೆ ಭಿನ್ನಮತವುಳ್ಳವರನ್ನು ಒಗ್ಗೂಡಿಸಿ ರಾಜ್ಯ ರಾಜಕೀಯಕ್ಕೆ ಮಹತ್ವ ದೊರಕುವಂತೆ ಮಾಡಿತು. ಹೀಗೆ ಭಿನ್ನಮತದ ಬೆಂಬಲದೊಡನೆ ಭಾರತದಲ್ಲಿ ರಾಜ್ಯ ರಾಜಕೀಯವು ಕ್ರಮೇಣ ತನ್ನ ಪ್ರಸ್ತುತತೆಯನ್ನು ಸುಧಾರಿಸಿಕೊಂಡಿದುದು ಗಮನಾರ್ಹ ಸಂಗತಿ.

6. ಅಂತರ್‌ರಾಜ್ಯ ವಿವಾದಗಳ ಪ್ರಭಾವ: ಭಾರತದಲ್ಲಿನ ರಾಜ್ಯ ರಾಜಕೀಯವು ಅಂತರ್‌ರಾಜ್ಯಗಳ ವಿವಾದಗಳಿಂದ ಹೆಚ್ಚು ಪ್ರಭಾವಿತಗೊಂಡಿದೆ. ಭಾರತದ ವಿವಿಧ ರಾಜ್ಯಗಳ ನಡುವೆ ಗಡಿ ಮತ್ತು ಜಲ ವಿವಾದಗಳು ಸರ್ವೇ ಸಾಮಾನ್ಯ. ಉದಾ: ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವಿನ ಗಡಿ ವಿವಾದ, ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಕಾವೇರಿ ಜಲ ವಿವಾದ, ಕರ್ನಾಟಕ ಹಾಗೂ ಗೋವಾ ನಡುವಿನ ಜಲ ವಿವಾದ ಇತ್ಯಾದಿ. ಈ ಗಡಿ, ಭಾಷೆ, ಜಲ ವಿವಾದಗಳು ಆಯಾ ರಾಜ್ಯ ರಾಜಕೀಯವನ್ನು ಪ್ರಭಾವಿಸುತ್ತವೆ. ಅಂತರ್ ರಾಜ್ಯ ವಿವಾದಗಳು ರಾಜ್ಯ ರಾಜಕೀಯದಲ್ಲಿ ಹೆಚ್ಚು ಚರ್ಚೆಗೊಳಗಾಗುತ್ತವೆ. ಜೊತೆಗೆ ರಾಜ್ಯ ಚುನಾವಣೆಗಳು ಅಂತರ್‌ರಾಜ್ಯ ವಿವಾದಗಳನ್ನು ಕೇಂದ್ರಿಕರಿಸಿ ಜರುಗುತ್ತವೆ.

ಈ ಮೇಲೆ ಪ್ರಸ್ತಾಪಿಸಲಾದ ಅಂಶಗಳ ಬೆಳಕಿನಲ್ಲಿ ಭಾರತದಲ್ಲಿನ ರಾಜ್ಯ ರಾಜಕೀಯದ ಸ್ವರೂಪವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಆಸಕ್ತಿದಾಯಕ ಅಂಶವೇನೆಂದರೆ, ಪ್ರಾರಂಭದಲ್ಲಿ ರಾಷ್ಟ್ರ ರಾಜಕೀಯದ ಪ್ರತಿರೂಪದಂತಿದ್ದ ರಾಜ್ಯ ರಾಜಕೀಯವು ಕಾಲಾನುಕ್ರಮದಲ್ಲಿ ಪರಿವರ್ತನೆಗೊಳ್ಳುತ್ತಾ ಬಂದು ರಾಷ್ಟ್ರ ರಾಜಕೀಯವನ್ನು ನಿಯಂತ್ರಿಸುವ ಮಟ್ಟಿಗೆ ಬೆಳೆದು ನಿಂತಿದೆ. ಮಾತ್ರವಲ್ಲ, ರಾಜಕಾರಣಿಗಳು ರಾಷ್ಟ್ರ ರಾಜಕೀಯಕ್ಕಿಂತ ರಾಜ್ಯ ರಾಜಕೀಯವನ್ನೇ ಹೆಚ್ಚು ಅಪೇಕ್ಷಿಸುತ್ತಾರೆ.

## [III.] ಭಾರತದಲ್ಲಿನ ರಾಜ್ಯ ರಾಜಕೀಯದ ಮಹತ್ವ [Importance of State Politics in India]:

ರಾಜ್ಯಶಾಸ್ತ್ರದ ಕೇಂದ್ರಬಿಂದುವಾದ ರಾಜಕೀಯವು ತನ್ನದೇಯಾದ ಮಹತ್ವವನ್ನು ಪಡೆದಿದೆ. ಅಂತೆಯೇ ರಾಜಕೀಯದ ಹಲವು ಮಾದರಿಗಳಲ್ಲಿ ಒಂದಾದ ರಾಜ್ಯ ರಾಜಕೀಯವೂ ಸಹ ತನ್ನದೇಯಾದ ಉಪಯುಕ್ತತೆಗಳನ್ನು ಮೈಗೂಡಿಸಿಕೊಂಡಿದೆ.. ರಾಜಕೀಯ ಪರಿಕಲ್ಪನೆಯ ಮಹತ್ವಕ್ಕೆ ಕಾರಣವಾದ ಅಂಶಗಳೊಡನೆ ರಾಜ್ಯ ರಾಜಕೀಯವು ಕೆಲ ವಿಶಿಷ್ಟ ಅಂಶಗಳಿಂದ ತನ್ನ ಮಹತ್ವವನ್ನು ಇಮ್ಮಡಿಗೊಳಿಸಿಕೊಂಡಿದೆ. ಈ ಕೆಳಗಿನ ಅಂಶಗಳ ಮೂಲಕ ರಾಜ್ಯ ರಾಜಕೀಯದ ಮಹತ್ವವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ.

**1. ಅಧಿಕಾರ ವಿಕೇಂದ್ರಿಕರಣಕ್ಕೆ ಪೂರಕ:** ಭಾರತವು ಪ್ರಬಲ ಕೇಂದ್ರ ಸರ್ಕಾರವನ್ನುಳ್ಳ ರಾಜ್ಯಗಳ ಒಕ್ಕೂಟವಾಗಿದೆ. ಸಂವಿಧಾನವು ಕೇಂದ್ರ, ರಾಜ್ಯ ಮತ್ತು ಸಮವರ್ತಿ ಪಟ್ಟಿಗಳ ಮೂಲಕ ಅಧಿಕಾರಗಳನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿದ್ದರೂ ಕೇಂದ್ರ ಸರ್ಕಾರಕ್ಕೆ ಸಿಂಹಪಾಲು ದೊರಕಿದೆ. ಮುಂದುವರಿದು, ಉಳಿಕೆ ಅಥವಾ ಶೇಷಾಧಿಕಾರಗಳು ಭಾರತದಲ್ಲಿ ಕೇಂದ್ರ ಸರ್ಕಾರಕ್ಕೆ ನೀಡಲ್ಪಟ್ಟಿವೆ. ಹೀಗಾಗಿ ಭಾರತದ ಒಕ್ಕೂಟದಲ್ಲಿ ಕೇಂದ್ರ ಸರ್ಕಾರವು ಅಧಿಕಾರ ಕೇಂದ್ರಿಕರಣದೊಡನೆ ರಾಜ್ಯಗಳಿಗಿಂತ ಪ್ರಬಲವಾಗಿದೆ. ಆದರೆ, ರಾಜ್ಯ ರಾಜಕೀಯವು ರಾಜ್ಯಗಳು ರಾಜ್ಯ ಪಟ್ಟಿಯ ಮೂಲಕ ಸಂವಿಧಾನಾತ್ಮಕವಾಗಿ ಪಡೆದಿರುವ ಅಧಿಕಾರಗಳನ್ನು ಬಳಸಿಕೊಳ್ಳಲು ಉತ್ತೇಜಿಸುತ್ತದೆ. ಜೊತೆಗೆ ಸಮವರ್ತಿ ಪಟ್ಟಿಯ ಮೇಲಿನ ವಿಷಯಗಳನ್ನು ಕುರಿತಂತೆ ಕೇಂದ್ರವು ಏಕಪಕ್ಷೀಯ ನಿರ್ಧಾರ ಕೈಗೊಳ್ಳದಂತೆ ರಾಜ್ಯ ರಾಜಕೀಯವು ತಡೆಯೊಡ್ಡುತ್ತದೆ. ಮುಂದುವರಿದು, ಕೇಂದ್ರವು ತನ್ನ ಅಧಿಕಾರವನ್ನು ಚಲಾಯಿಸಿ ರಾಷ್ಟ್ರೀಯ ಧೋರಣೆಗಳನ್ನು ರೂಪಿಸುವಲ್ಲಿಯೂ ರಾಜ್ಯ ರಾಜಕಾರಣವು ಪ್ರಭಾವ ಬೀರುತ್ತದೆ. ಹೀಗೆ ಕೇಂದ್ರಿಕೃತ ಅಧಿಕಾರವು ವಿಕೇಂದ್ರಿಕರಣಗೊಳ್ಳಲು ರಾಜ್ಯ ರಾಜಕೀಯವು ಪೂರಕವಾಗುವ ಮೂಲಕ ಮಹತ್ವ ಪಡೆದಿದೆ.

**2. ಸರ್ವರ ಪ್ರಾತಿನಿಧ್ಯಕ್ಕೆ ಆಸ್ಪದ:** ಭಾರತವು ವೈವಿಧ್ಯತೆಗಳಿಂದ ಕೂಡಿರುವ ದೇಶ. ವಿವಿಧ ಜನಾಂಗ, ಭಾಷೆ, ಧರ್ಮ, ಪ್ರದೇಶ, ಸಾಮಾಜಿಕ ಹಿನ್ನೆಲೆಯುಳ್ಳ ಜನರು ಭಾರತದಲ್ಲಿ ನೆಲೆಸಿದ್ದಾರೆ. ರಾಜ್ಯ ರಾಜಕೀಯವು ಈ ವಿವಿಧ ಜನ ಸಮುದಾಯದ ಪ್ರಾತಿನಿಧ್ಯಕ್ಕೆ ಅವಕಾಶ ಒದಗಿಸುತ್ತದೆ. ಒಂದೊಮ್ಮೆ ರಾಜ್ಯ ರಾಜಕೀಯ ಮುನ್ನೆಲೆಗೆ ಬರದಿದ್ದಲ್ಲಿ ಪ್ರಬಲ ಸಮುದಾಯಗಳು ಮಾತ್ರ ಪ್ರಾತಿನಿಧ್ಯ ಹೊಂದುವ ಸಾಧ್ಯತೆ ಕಂಡು ಬರುತ್ತಿತ್ತು. ರಾಜ್ಯ ರಾಜಕೀಯದ ಪರಿಣಾಮ ಹಲವು ಪ್ರಾದೇಶಿಕ ಪಕ್ಷಗಳು ಜನ್ಮತಾಳಿದ್ದು ಆಯಾ ಪ್ರದೇಶದ ಜನರ ಪ್ರಾತಿನಿಧ್ಯಕ್ಕೆ ಆಸ್ಪದ ಕಲ್ಪಿಸಿದೆ. ಫಲವಾಗಿ ದೇಶದ ಬಹುಸಂಖ್ಯಾತ ಸಮುದಾಯಗಳಿಗೆ ಸಮಾನವಾಗಿ ಅಲ್ಪಸಂಖ್ಯಾತ ಸಮುದಾಯಗಳು ರಾಜಕೀಯ ಪ್ರಾತಿನಿಧ್ಯ ಹೊಂದುವಂತಾಗಿದೆ.



**3. ನೀತಿಗಳ ಪರಿಣಾಮಕಾರಿ ಅನುಷ್ಠಾನ:** ರಾಜ್ಯಗಳು ರಾಷ್ಟ್ರೀಯ ನೀತಿಗಳನ್ನು ಜಾರಿಗೊಳಿಸುವ ಜವಾಬ್ದಾರಿ ಪಡೆದಿರುತ್ತವೆ. ಈ ವೇಳೆಯಲ್ಲಿ ರಾಜ್ಯ ರಾಜಕೀಯವು ಕೇಂದ್ರವನ್ನು ಪ್ರಭಾವಿಸುವ ಮೂಲಕ ಜನಪರ ನೀತಿಗಳನ್ನು ರೂಪಿಸಲು ಶ್ರಮಿಸುತ್ತದೆ. ಜೊತೆಗೆ ರಾಷ್ಟ್ರೀಯ ನೀತಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ರಾಜ್ಯ ರಾಜಕಾರಣವು ತನ್ನದೇ ಕೊಡುಗೆ ನೀಡುತ್ತದೆ.

**4. ಆರ್ಥಿಕ ಅಭಿವೃದ್ಧಿಗೆ ಪ್ರಯತ್ನ:** ರಾಜ್ಯಗಳು ಭಾರತದಲ್ಲಿ ಆರ್ಥಿಕ ನಿಯಂತ್ರಣವನ್ನು ಹೊಂದಿವೆ. ಫಲವಾಗಿ ರಾಜ್ಯ ರಾಜಕೀಯವು ಆಯಾ ರಾಜ್ಯಗಳಲ್ಲಿ ಬಂಡವಾಳ ಹೂಡಿಕೆ, ಉದ್ಯೋಗವಕಾಶಗಳ ಲಭ್ಯತೆ, ಕೌಶಲ್ಯಗಳ ಬಲವರ್ಧನೆಗೆ ಆದ್ಯತೆ ನೀಡುತ್ತವೆ. ಇದರಿಂದ ರಾಜ್ಯಗಳು ಆರ್ಥಿಕವಾಗಿ ಸದೃಢಗೊಳ್ಳಲು ಮತ್ತು ಆರ್ಥಿಕವಾಗಿ ದೇಶ ಸ್ಥಿರತೆ ಹೊಂದಲು ಸಾಧ್ಯವಾಗುತ್ತದೆ.

**5. ಸಾಂಸ್ಕೃತಿಕ ವೈವಿಧ್ಯತೆಗೆ ಆದ್ಯತೆ:** ಭಾರತದ ಪ್ರತಿ ರಾಜ್ಯ ತನ್ನದೇಯಾದ ಸಂಸ್ಕೃತಿ ಮೈಗೂಡಿಸಿಕೊಂಡಿದೆ. ಆಯಾ ರಾಜ್ಯಗಳ ರಾಜ್ಯ ರಾಜಕೀಯವು ತನ್ನ ಸಾಂಸ್ಕೃತಿಕ ಅಸ್ಮಿತೆಯ ರಕ್ಷಣೆಗೆ ಮಹತ್ವ ನೀಡುತ್ತದೆ. ಫಲವಾಗಿ ಭಾರತ ಇಂದಿಗೂ ಸಾಂಸ್ಕೃತಿಕ ವೈವಿಧ್ಯತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿದೆ.

**6. ಕಲ್ಯಾಣ ರಾಜ್ಯದ ಸ್ಥಾಪನೆ:** ಸರ್ವರ ಯೋಗಕ್ಷೇಮ ಸಾಧಿಸುವುದೇ ಕಲ್ಯಾಣ ರಾಜ್ಯದ ಗುರಿ. ರಾಜ್ಯಗಳು ಆರೋಗ್ಯ, ನಾಗರಿಕ ಆಹಾರ ಪೂರೈಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಬಡತನ ನಿವಾರಣೆ ಮುಂತಾದ ಜವಾಬ್ದಾರಿಗಳನ್ನು ನಿರ್ವಹಿಸುತ್ತವೆ. ಈ ವೇಳೆಯಲ್ಲಿ ರಾಜ್ಯ ರಾಜಕೀಯವು ಕಲ್ಯಾಣ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಕಾರಣವಾಗಿ ಕಲ್ಯಾಣ ರಾಜ್ಯದ ಸ್ಥಾಪನೆಗೆ ಸಹಕರಿಸುತ್ತದೆ. ಉದಾ: ಕರ್ನಾಟಕದಲ್ಲಿ ಇತ್ತೀಚೆಗೆ ಚುನಾವಣಾ ಭರವಸೆಯಂತೆ ಆಡಳಿತಾರೂಢ .ಕಾಂಗ್ರೆಸ್ ಪಕ್ಷ ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವ ಮೂಲಕ ಜನರ ಕಲ್ಯಾಣಕ್ಕೆ ಶ್ರಮಿಸಲು ರಾಜ್ಯ ರಾಜಕೀಯದ ಪ್ರಭಾವ.

**7. ರಾಷ್ಟ್ರೀಯ ಭದ್ರತೆಗೆ ಸಹಕಾರಿ:** ಕಾನೂನು ಮತ್ತು ಶಾಂತಿ ಸ್ಥಾಪನೆಯು ಭಾರತದಲ್ಲಿ ರಾಜ್ಯಗಳಿಗೆ ಸೇರಿದೆ. ರಾಜ್ಯ ರಾಜಕೀಯವು ಆಯಾ ರಾಜ್ಯದಲ್ಲಿ ಕಾನೂನು ಮತ್ತು ಶಾಂತಿ ಸ್ಥಾಪನೆ ನೆಲೆಸಲು ಸಹಕಾರಿಯಾಗುತ್ತದೆ. ಎಲ್ಲ ರಾಜ್ಯಗಳಲ್ಲಿ ಸುವ್ಯವಸ್ಥೆ ನೆಲೆಗೊಂಡಾಗ ಸಹಜವಾಗಿ ರಾಷ್ಟ್ರೀಯ ಭದ್ರತೆ ದೇಶದಲ್ಲಿ ಕಂಡು ಬರುತ್ತದೆ.

**8. ಸಂಪನ್ಮೂಲಗಳ ಸುಸ್ಥಿರ ಬಳಕೆ:** ಭಾರತ ಒಕ್ಕೂಟದ ಪ್ರತಿ ರಾಜ್ಯ ತನ್ನದೇಯಾದ ನೈಸರ್ಗಿಕ ಸಂಪನ್ಮೂಲಗಳನ್ನು ಪಡೆದಿವೆ. ರಾಜ್ಯ ರಾಜಕೀಯವು ಆಯಾ ರಾಜ್ಯಗಳಲ್ಲಿನ ಸಂಪನ್ಮೂಲಗಳ ಸದ್ಬಳಕೆಗೆ ಸೂಕ್ತ ಮಾರ್ಗದರ್ಶನ ನೀಡುತ್ತದೆ. ರಾಜ್ಯವೊಂದು ಹೊಂದಿರುವ ಖನಿಜ, ಜಲ, ಅರಣ್ಯ ಹಾಗೂ ಇನ್ನಿತರ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಗೆ ರಾಜ್ಯ ರಾಜಕೀಯವು ನೆರವಾಗುವ ಮೂಲಕ ತನ್ನ ಮಹತ್ವವನ್ನು ಇಮ್ಮಡಿಗೊಳಿಸಿಕೊಂಡಿವೆ.

**9. ಅಂತರ್‌ರಾಜ್ಯ ಸಂಬಂಧಗಳ ಸುಧಾರಣೆ:** ಭಾರತ ಒಕ್ಕೂಟದ ವಿವಿಧ ರಾಜ್ಯಗಳ ನಡುವೆ ಸುಮಧುರ ಸಂಬಂಧಗಳಿಗೆ ರಾಜ್ಯ ರಾಜಕಾರಣವು ಸಹಕಾರಿಯಾಗಿದೆ. ಸಮಾನ ಉದ್ದೇಶವುಳ್ಳ ರಾಜಕೀಯ ಪಕ್ಷಗಳು ಆಡಳಿತ ನಡೆಸುತ್ತಿದ್ದರೆ ಆ ರಾಜ್ಯಗಳ ನಡುವೆ ಉತ್ತಮ ಸಂಬಂಧವನ್ನು ಕಾಣಬಹುದಾಗಿದೆ. ನದಿಗಳ ನೀರು ಹಂಚಿಕೆ, ವ್ಯಾಪಾರ, ಸಾರಿಗೆ, ಗಡಿಗಳನ್ನು ಕುರಿತಂತೆ ಒಂದೊಮ್ಮೆ ವಿವಾದಗಳಿದ್ದರೂ ರಾಜ್ಯ ರಾಜಕೀಯವು ಅವುಗಳನ್ನು ಸೌಹಾರ್ದಯುತ ನೆಲೆಗಟ್ಟಿನಲ್ಲಿ ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತದೆ. ಈ ನಿಟ್ಟಿನಲ್ಲಿ ಸರ್ವ ಪಕ್ಷಗಳ ಸಭೆ, ನಿಯೋಗ ಕೊಂಡೊಯ್ಯುವಿಕೆ, ಪತ್ರ ವ್ಯವಹಾರ ಮುಂತಾದ ಮಾರ್ಗೋಪಾಯದ ಮೂಲಕ ರಾಜ್ಯ ರಾಜಕೀಯವು ಸಂಬಂಧಗಳು ಹಳಸದಂತೆ ನೋಡಿಕೊಳ್ಳುತ್ತದೆ.

**10. ಸಹಕಾರಯುತ ಸಂಯುಕ್ತ ವ್ಯವಸ್ಥೆಗೆ ನೆರವು:** ದೇಶವೊಂದರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸ್ಪರ್ಧಿಸದೇ ಹೊಂದಾಣಿಕೆಯಿಂದ ಆಡಳಿತ ನಡೆಸುವುದು ಸಹಕಾರಯುತ ಸಂಯುಕ್ತ ವ್ಯವಸ್ಥೆಯಾಗಿದೆ. ಭಾರತ ಒಕ್ಕೂಟದಲ್ಲಿ ಸಹಕಾರಯುತ ಸಂಯುಕ್ತ ವ್ಯವಸ್ಥೆಯನ್ನು ಸಾಕಾರಗೊಳಿಸಲು ರಾಜ್ಯ ರಾಜಕೀಯವು ನೆರವಾಗಿದೆ. ದೇಶದ ಆರ್ಥಿಕ ಸಂಪನ್ಮೂಲಗಳು ಕೇಂದ್ರದಂತೆ ರಾಜ್ಯಗಳಿಗೂ ಹಂಚಿಕೆಯಾಗುವಂತೆ ರಾಜ್ಯ ರಾಜಕೀಯವು ಪ್ರಭಾವ ಬೀರುತ್ತದೆ. ಜೊತೆಗೆ ಕೇಂದ್ರದ ಮಹತ್ವಾಕಾಂಕ್ಷಿ ಯೋಜನೆಗಳಿಗೆ ಸಹಕರಿಸಿ ದೇಶದ ಅಭಿವೃದ್ಧಿಗೆ ಕಾರಣವಾಗುತ್ತದೆ. ಇದರೊಡನೆ ಕೇಂದ್ರದ ನೀತಿಗಳನ್ನು ಪ್ರಯೋಗಾರ್ಥ ಕೈಗೊಳ್ಳಲು ಸಹಕರಿಸಿ ಅನ್ಯ ರಾಜ್ಯಗಳು ಅದನ್ನು ಅಳವಡಿಸಿಕೊಳ್ಳಲು ರಾಜ್ಯ ರಾಜಕೀಯವು ಆಸ್ಪದ ಒದಗಿಸುತ್ತದೆ. ಈ ಮೂಲಕ ಭಾರತದ ಒಕ್ಕೂಟವು ಸಹಕಾರಯುತ ಸಂಯುಕ್ತ ವ್ಯವಸ್ಥೆಯಾಗಿ ಪರಿವರ್ತನೆಗೊಳ್ಳಲು ರಾಜ್ಯ ರಾಜಕೀಯವು ನೆರವಾಗಿದೆ.

ಈ ಮೇಲೆ ಚರ್ಚಿಸಲಾದ ಅಂಶಗಳ ಬೆಳಕಿನಲ್ಲಿ ನಾವು ಭಾರತದಲ್ಲಿನ ರಾಜ್ಯ ರಾಜಕೀಯದ ಮಹತ್ವವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಸಮತೋಲಿತ ಅಭಿವೃದ್ಧಿ, ಸರ್ವರ ಪ್ರಾತಿನಿಧ್ಯ, ಸಾರ್ವಜನಿಕ ನೀತಿಗಳ ಸಮರ್ಪಕ ಜಾರಿಗೆ ಭಾರತದಲ್ಲಿ ರಾಜ್ಯ ರಾಜಕೀಯವು ನೆರವಾಗುವ ಮೂಲಕ ತನ್ನ ಮಹತ್ವವನ್ನು ವೃದ್ಧಿಸಿಕೊಂಡಿದೆ. ಭಾರತದ ಸರ್ವಾಂಗೀಣ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸುವ ರಾಜ್ಯ ರಾಜಕೀಯವು ದಿನದಿಂದ ದಿನಕ್ಕೆ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳುತ್ತಾ ಸಾಗಿರುವುದು ಗಮನಾರ್ಹ ಸಂಗತಿ. ಜೊತೆಗೆ ರಾಜ್ಯ ರಾಜಕೀಯವು ಭಾರತದ ಪ್ರಜಾಪ್ರಭುತ್ವದ ಯಶಸ್ಸಿಗೆ ಕಾರಣವಾಗಿದೆಯಲ್ಲದೇ ರಾಷ್ಟ್ರ ರಾಜಕೀಯದಲ್ಲಿ ಪ್ರಭಾವ ಬೀರಿ ರಾಷ್ಟ್ರ ನಿರ್ಮಾಣಕ್ಕೆ ಶ್ರಮಿಸುತ್ತಿದೆ.



## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ರಾಜಕೀಯ ಎಂದರೇನು?
2. ರಾಜ್ಯ ರಾಜಕೀಯದ ಅರ್ಥವನ್ನು ಬರೆಯಿರಿ.
3. ರಾಜ್ಯ ರಾಜಕೀಯವನ್ನು ಕುರಿತಾದ ವಿಚಾರ ಸಂಕೀರ್ಣಗಳನ್ನು ಎಲ್ಲಿ ಮತ್ತು ಯಾವಾಗ ಆಯೋಜಿಸಲಾಗಿತ್ತು?
4. ರಾಜ್ಯ ರಾಜಕೀಯವನ್ನು ಕುರಿತಂತೆ ಅಧ್ಯಯನ ನಡೆಸಿದ ಇಬ್ಬರು ತಜ್ಞರನ್ನು ಹೆಸರಿಸಿರಿ.
5. ರಾಜ್ಯ ರಾಜಕೀಯದ ಬಲವರ್ಧನೆಗೆ ಕಾರಣವಾದ ಮೂರು ಅಂಶಗಳನ್ನು ಬರೆಯಿರಿ.
6. ರಾಜ್ಯ ರಾಜಕೀಯವು ಕಾಂಗ್ರೆಸ್ ವಿರೋಧದ ಫಲ. ಹೇಗೆ?
7. ರಾಜ್ಯ ರಾಜಕೀಯವು ಅಂತರ್‌ರಾಜ್ಯ ವಿವಾದಗಳಿಂದ ಕೂಡಿದೆ. ಹೇಗೆ?
8. ರಾಜ್ಯ ರಾಜಕೀಯವು ಸಾಂಸ್ಕೃತಿಕ ವೈವಿಧ್ಯತೆಗೆ ಹೇಗೆ ಕಾರಣವಾಗುತ್ತದೆ?
9. ಸಹಕಾರಯುತ ಸಂಯುಕ್ತ ವ್ಯವಸ್ಥೆ ಎಂದರೇನು?
10. ರಾಜ್ಯ ರಾಜಕೀಯದ ಎರಡು ಉಪಯುಕ್ತತೆಗಳನ್ನು ಬರೆಯಿರಿ.

**[B.] ಐದು ಅಂಕದ ಪ್ರಶ್ನೆಗಳು:**

1. ರಾಜ್ಯ ರಾಜಕೀಯ ಕುರಿತು ಟಿಪ್ಪಣಿ ಬರೆಯಿರಿ.
2. ರಾಜ್ಯ ರಾಜಕೀಯದ ಸ್ವರೂಪವನ್ನು ಚರ್ಚಿಸಿರಿ.
3. ರಾಜ್ಯ ರಾಜಕೀಯದ ಮಹತ್ವವನ್ನು ವಿವರಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ರಾಜ್ಯ ರಾಜಕೀಯ ಎಂದರೇನು? ಅದರ ಸ್ವರೂಪವನ್ನು ವಿವರಿಸಿರಿ.
2. ರಾಜ್ಯ ರಾಜಕೀಯದ ಮಹತ್ವವನ್ನು ಪರಿಶೀಲಿಸಿರಿ.

ಅಧ್ಯಾಯ 2:

# ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ರಾಜಕೀಯ

## [Politics in Princely State of Mysore].

### ಪ್ರಸ್ತಾವನೆ [Introduction]:

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತವು ಯುರೋಪಿನ ವಿವಿಧ ದೇಶಗಳ ವಸಾಹತು ಆಳ್ವಿಕೆಗೆ ಒಳಗಾಗಿತ್ತು. ಉಳಿದೆಲ್ಲ ದೇಶಗಳಿಗಿಂತ ಬ್ರಿಟನ್ ಭಾರತದ ಹೆಚ್ಚಿನ ಪ್ರದೇಶಗಳಲ್ಲಿ ತನ್ನ ನಿಯಂತ್ರಣ ಸಾಧಿಸಿತ್ತು. ವಸಾಹತು ಕಾಲಾವಧಿಯಲ್ಲಿ ಎರಡು ಬಗೆಯ ಆಡಳಿತಾತ್ಮಕ ಘಟಕಗಳು ಭಾರತದಲ್ಲಿ ಅಸ್ತಿತ್ವದಲ್ಲಿದ್ದವು. ಅವುಗಳೆಂದರೆ ಬ್ರಿಟಿಷ್ ಪ್ರಾಂತ್ಯಗಳು ಮತ್ತು ದೇಶೀಯ ಸಂಸ್ಥಾನಗಳು. ಬ್ರಿಟಿಷ್ ಪ್ರಾಂತ್ಯಗಳಲ್ಲಿ ಬ್ರಿಟಿಷರೇ ನೇರವಾಗಿ ಅಧಿಕಾರ ಚಲಾಯಿಸಿದರೆ ದೇಶೀಯ ಸಂಸ್ಥಾನಗಳಲ್ಲಿ ಆಯಾ ಸಂಸ್ಥಾನಗಳ ರಾಜರು ಅಧಿಕಾರ ಚಲಾಯಿಸುತ್ತಿದ್ದರು. ಮೈಸೂರು ರಾಜ್ಯವು ದೇಶೀಯ ಸಂಸ್ಥಾನವೆನಿಸಿದ್ದು ಒಡೆಯರ್ ಮನೆತನದ ಆಳ್ವಿಕೆಗೆ ಒಳಪಟ್ಟಿತ್ತು. ಹಲವು ರಾಜಕೀಯ ಮೇಲಾಟಗಳಿಗೆ ಸಾಕ್ಷಿಯಾಗಿದ್ದ ಮೈಸೂರು ರಾಜ್ಯದ ರಾಜಕೀಯ ಇತಿಹಾಸವು ಅತ್ಯಂತ ಸ್ವಾರಸ್ಯಕರ ಘಟನೆಗಳಿಂದ ಕೂಡಿದೆ. ಜೊತೆಗೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ಮಾದರಿ ರಾಜಕೀಯ ಬೆಳವಣಿಗೆಗೆ ಮೈಸೂರಿನ ದೇಶೀಯ ಸಂಸ್ಥಾನ ನಿದರ್ಶನವೆನಿಸಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಅಧ್ಯಾಯದಲ್ಲಿ ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ರಾಜಕೀಯ, ಶಾಸಕಾಂಗದ ಬೆಳವಣಿಗೆ ಮತ್ತು ಪ್ರತಿನಿಧಿಗಳ ಸಭೆಯನ್ನು ಕುರಿತಂತೆ ಬೆಳಕು ಚೆಲ್ಲಲಾಗಿದೆ.

### [I.] ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ರಾಜಕೀಯದ ಇತಿಹಾಸ [History of Politics in Princely State of Mysore]:

ಸಾ. ಶ. 1610 ರಲ್ಲಿ ಒಡೆಯರ್ ಮನೆತನವು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳುವ ಮೂಲಕ ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ರಾಜಕೀಯವು ವಾಸ್ತವದಲ್ಲಿ ಚಾಲನೆ ಪಡೆದುಕೊಂಡಿತು. ಒಡೆಯರ್ ಮನೆತನದ ಆರಂಭಿಕ ದೊರೆಗಳು ಧೈರ್ಯ ಮತ್ತು ಪ್ರಜಾ ಕಲ್ಯಾಣಕ್ಕೆ ಹೆಸರುವಾಸಿಯಾಗಿದ್ದು ತಮ್ಮ ಸಾಮ್ರಾಜ್ಯ ವಿಸ್ತರಣೆಗೆ ಪ್ರಯತ್ನಿಸಿದರು. ಮುಂದೆ ಬಾಹ್ಯವಾಗಿ ಮರಾಠರ ಮತ್ತು ಆಂತರಿಕವಾಗಿ ದಳವಾಯಿಗಳ ಒತ್ತಡಕ್ಕೆ ಮೈಸೂರಿನ ದೇಶೀಯ ಸಂಸ್ಥಾನ ಒಳಗಾಯಿತು. ಈ ವೇಳೆಯಲ್ಲಿ ಒಡೆಯರ್ ಮನೆತನವು ಹೈದರಾಲಿಯ ನೆರವನ್ನು ಪಡೆದುಕೊಂಡಿತು. ದಳವಾಯಿ



ನಂಜರಾಜಯ್ಯನನ್ನು ಪದಚ್ಯುತಗೊಳಿಸಿದ ಹೈದರಾಲಿ ತಾನೇ ಮೈಸೂರಿನ ದೇಶೀಯ ಸಂಸ್ಥಾನದ ಅಧಿಕಾರ ವಹಿಸಿಕೊಂಡನು. ಹೈದರಾಲಿಯ ಕಾಲದಲ್ಲಿ ಮೈಸೂರಿನ ದೇಶೀಯ ಸಂಸ್ಥಾನ ಮತ್ತಷ್ಟು ವಿಸ್ತರಣೆಗೊಂಡಿತಾದರೂ ಬ್ರಿಟಿಷರೊಡನೆ ಆಂಗ್ಲೊ ಮೈಸೂರು ಯುದ್ಧ ಕೈಗೊಳ್ಳಬೇಕಾಯಿತು. ಮೊದಲ ಯುದ್ಧ ಮದ್ರಾಸ್ ಒಪ್ಪಂದದಂತೆ ಕೊನೆಗೊಂಡರೆ ನಂತರದ ಎರಡನೇ ಯುದ್ಧದಲ್ಲಿ ಹೈದರ್ ನಿಧನಗೊಂಡನು. ಈ ಸಮಯದಲ್ಲಿ ಹೈದರನ ಮಗ ಟಿಪ್ಪು ಯುದ್ಧವನ್ನು ಮುನ್ನಡೆಸಿದರೂ ಅಂತಿಮವಾಗಿ ಮಂಗಳೂರು ಒಪ್ಪಂದದಂತೆ ಯುದ್ಧವು ಕೊನೆಗೊಂಡಿತು. ಟಿಪ್ಪುವಿನ ಕಾಲದಲ್ಲಿ ಮೂರು ಮತ್ತು ನಾಲ್ಕನೇ ಆಂಗ್ಲೊ ಮೈಸೂರು ಯುದ್ಧಗಳು ಜರುಗಿದ್ದು ನಾಲ್ಕನೇ ಯುದ್ಧದಲ್ಲಿ ಟಿಪ್ಪು ಬ್ರಿಟಿಷರಿಂದ ಸೋತು ಮರಣ ಹೊಂದಿದನು. ಆಗ ಜಯಶಾಲಿಯಾದ ಬ್ರಿಟಿಷರು ಮೈಸೂರು ಸಂಸ್ಥಾನವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಒಂದು ಭಾಗವನ್ನು ಮಾತ್ರ ಒಡೆಯರ್ ಮನೆತನಕ್ಕೆ ನೀಡಿದರು. ಮೈಸೂರು ಸಂಸ್ಥಾನದ ಉಳಿದ ಮೂರು ಭಾಗಗಳನ್ನು ಬ್ರಿಟಿಷರು, ಹೈದರಾಬಾದಿನ ನಿಜಾಮ ಮತ್ತು ಮರಾಠರು ಹಂಚಿಕೊಂಡರು. ಫಲವಾಗಿ ಮೈಸೂರಿನ ವಿಶಾಲ ದೇಶೀಯ ಸಂಸ್ಥಾನವು ನಾಲ್ಕನೇ ಆಂಗ್ಲೊ ಮೈಸೂರು ಯುದ್ಧದ ಬಳಿಕ ಹಲವೆಡೆ ಹಂಚಿ ಹೋಯಿತು. ಜೊತೆಗೆ ಮೈಸೂರು ಸಂಸ್ಥಾನವು ಸಹಾಯಕ ಸೈನ್ಯ ಪದ್ಧತಿಗೆ ಒಳಪಡಬೇಕಾಯಿತು.

1799 ರಲ್ಲಿ ಅಳಿದುಳಿದ ಮೈಸೂರಿನ ದೇಶೀಯ ಸಂಸ್ಥಾನಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಮುಖ್ಯಸ್ಥರಾದರು. ಈತ ಅಧಿಕಾರಕ್ಕೆ ಬಂದಾಗ ಕೇವಲ ಆರು ವರ್ಷದ ಬಾಲಕನಾದ್ದರಿಂದ ಮಹರಾಣಿ ಲಕ್ಷ್ಮಿ ಅಮ್ಮಣ್ಣಿಯವರು ಸಂರಕ್ಷಕಳಾಗಿ ದಿವಾನ್ ಪೂರ್ಣಯ್ಯನವರ ನೆರವಿನಿಂದ ಆಡಳಿತ ನಡೆಸಿದರು. 1811 ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ವಯಸ್ಕರಾಗಿ ಅಧಿಕಾರ ಸ್ವೀಕರಿಸಿದ್ದರಿಂದ ದಿವಾನರಾಗಿದ್ದ ಪೂರ್ಣಯ್ಯನವರು ನಿವೃತ್ತಗೊಂಡರು. ಮುಮ್ಮಡಿ ಕೃಷ್ಣದೇವರಾಯರ ಕಾಲಾವಧಿಯಲ್ಲಿ ಮೈಸೂರು ಸಂಸ್ಥಾನವು ನಗರ ಧಂಗೆ ಸೇರಿದಂತೆ ಹಲವು ಧಂಗೆಗಳಿಗೆ ಒಳಗಾಯಿತು. ಇದರೊಡನೆ ಖಜಾನೆ ಬರಿದಾಗಿ ಆರ್ಥಿಕ ದುಸ್ಥಿತಿಯನ್ನು ಮೈಸೂರಿನ ಸಂಸ್ಥಾನ ಎದುರಿಸಬೇಕಾಯಿತು. 1831 ರಲ್ಲಿ ಆಡಳಿತ ಕುಸಿದಿದೆ ಎಂಬ ಕಾರಣವೊಡ್ಡಿ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಕ್ ಮೈಸೂರು ಸಂಸ್ಥಾನವನ್ನು ಬ್ರಿಟಿಷ್ ಕಮೀಶನರುಗಳ ಆಳ್ವಿಕೆಗೆ ಒಳಪಡಿಸಿದನು. 1831 ರಿಂದ 1881 ರವರೆಗೆ ಸುಮಾರು ಅರ್ಧ ಶತಮಾನ ಮೈಸೂರಿನ ದೇಶೀಯ ಸಂಸ್ಥಾನವು ಬ್ರಿಟಿಷ್ ಕಮೀಶನರುಗಳಾದ ಮಾರ್ಕ್ ಕಬ್ಬನ್ ಮತ್ತು ಬೋರಿಂಗ್ ಆಳ್ವಿಕೆಗೊಳಪಟ್ಟಿತು. ಈ ಕಾಲಾವಧಿಯಲ್ಲಿ ಮೈಸೂರು ಸಕಲ ರಂಗಗಳಲ್ಲಿ ಪ್ರಗತಿ ಹೊಂದಿತು. ಒಡೆಯರ್ ಮನೆತನದ ನಿರಂತರ ಮನವಿಯ ಫಲವಾಗಿ ಬ್ರಿಟಿಷರು 1881 ರಲ್ಲಿ ಮರಳಿ ಒಡೆಯರ್ ಮನೆತನಕ್ಕೆ ಮೈಸೂರಿನ ಅಧಿಕಾರವನ್ನು ಹಿಂತಿರುಗಿಸಿದರು. ಈ ವೇಳೆಯಲ್ಲಿ ಹತ್ತನೇ ಚಾಮರಾಜೇಂದ್ರರು ಮೈಸೂರಿನ ರಾಜನಾಗಿದ್ದು ರಂಗಾಚಾರಲು

ದಿವಾನರಾಗಿ ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದರು. ಆ ಪೈಕಿ ಪ್ರಜಾ ಪ್ರತಿನಿಧಿಗಳ ಸಭೆಯ ಸ್ಥಾಪನೆಯು ರಾಜಕೀಯವಾಗಿ ಮಹತ್ವದ ಮೈಲಿಗಲ್ಲೆನಿಸಿಕೊಂಡಿದೆ.

ಹತ್ತನೇ ಚಾಮರಾಜೇಂದ್ರರ ಬಳಿಕ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರಿನ ದೇಶೀಯ ಸಂಸ್ಥಾನದ ಅರಸರಾದರು. ಇವರ ಕಾಲದಲ್ಲಿ ಮೈಸೂರು ಸಂಸ್ಥಾನವು ಮಾದರಿ ರಾಜ್ಯವೆನಿಸಿತು. ಮೈಸೂರು ವಿಶ್ವ ವಿದ್ಯಾಲಯದ ಸ್ಥಾಪನೆ, ಕನ್ನಂಬಾಡಿ ಆಣೆಕಟ್ಟಿನ ನಿರ್ಮಾಣ, ಕನ್ನಡ ಸಾಹಿತ್ಯ ಪರಿಷತ್ತಿಗೆ ಅವಕಾಶ, ವಿವಿಧ ಕೈಗಾರಿಕೆಗಳ ಸ್ಥಾಪನೆ, ಕೃಷಿ ಅಭಿವೃದ್ಧಿಗೆ ಸೂಕ್ತ ಆಧ್ಯತೆಯಂತಹ ಕಾರಣಗಳಿಂದ ಈ ಸಾಧನೆಯು ಮೈಸೂರಿಗೆ ಸಾಧ್ಯವಾಯಿತು. ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯ, ಸರ್. ಮಿರ್ಜಾ ಇಸ್ಮಾಯಿಲ್, ಕಾಂತರಾಜ್ ಅರಸ್, ಶೇಷಾದ್ರಿ ಅಯ್ಯರ್ ಈ ಕಾಲಾವಧಿಯಲ್ಲಿ ತಮ್ಮದೇಯಾದ ಕೊಡುಗೆ ನೀಡಿದ್ದರು. ಆಸಕ್ತಿದಾಯಕ ಅಂಶವೇನೆಂದರೆ, ಹಿಂದುಳಿದವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇಕಡಾ 75 ರಷ್ಟು ಮೀಸಲಾತಿಯನ್ನು ನಾಲ್ವಡಿ ಕೃಷ್ಣರಾಜ ಒಡೆಯರ್‌ರ ಕಾಲದಲ್ಲಿ ಒದಗಿಸಲಾಗಿತ್ತು. ಇದರೊಡನೆ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಾಗಿತ್ತು. 1917 ರಲ್ಲಿ ಸ್ಥಾಪನೆಗೊಂಡ ಮೈಸೂರು ಮಿತ್ರ ಮಂಡಳಿಯು ಪ್ರಜಾಸತ್ತಾತ್ಮಕ ಚಟುವಟಿಕೆಗಳಿಗೆ ವೇದಿಕೆಯೊದಗಿಸಿ ರಾಜಕೀಯ ಪಕ್ಷದ ಸ್ವರೂಪವನ್ನು ಕಾಲಾನುಕ್ರಮದಲ್ಲಿ ತಾಳಿತು.

ಭಾರತ ಸ್ವತಂತ್ರಗೊಂಡ ಹೊಸ್ತಿಲಲ್ಲಿ ಮೈಸೂರನ್ನು ಜಯ ಚಾಮರಾಜೇಂದ್ರ ಒಡೆಯರ್ ಆಳುತ್ತಿದ್ದರು. ಜನರು ಜವಾಬ್ದಾರಿ ಸರ್ಕಾರವನ್ನು ಜಾರಿಗೊಳಿಸುವಂತೆ ಒತ್ತಾಯಿಸಿದರೂ ಅವರು ಕಿವಿಗೊಡದಾದರು. ಆಗ ಅಕ್ಟೋಬರ್ 1947 ರಲ್ಲಿ ಅರಮನೆ ಸತ್ಯಾಗ್ರಹ ಜರುಗಿ ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಈ ವೇಳೆಯಲ್ಲಿ ಕೆ. ಸಿ. ರೆಡ್ಡಿಯವರು ಮೈಸೂರು ಸಂಸ್ಥಾನದ ಮುಖ್ಯಮಂತ್ರಿಯಾಗಿ ನಿಯುಕ್ತಗೊಂಡರು. 1952 ರಲ್ಲಿ ಭಾರತ ಸಂವಿಧಾನದನ್ವಯ ಚುನಾವಣೆಗಳು ಜರುಗಿ ಜನತಾ ಸರ್ಕಾರ ಮೈಸೂರಿನ ದೇಶೀಯ ಸಂಸ್ಥಾನದಲ್ಲಿ ಅಧಿಕಾರ ಪಡೆದುಕೊಂಡಾಗ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾದರು. ಹೀಗೆ ಮೈಸೂರಿನ ದೇಶೀಯ ಸಂಸ್ಥಾನವು ಹಲವು ರಾಜಕೀಯ ವಿಶೇಷತೆಗಳನ್ನು ಮೈಗೂಡಿಸಿಕೊಂಡ ಸ್ವಾರಸ್ಯಕರ ಇತಿಹಾಸವನ್ನು ಹೊಂದಿದೆ.

**[II.] ಮೈಸೂರಿನ ದೇಶೀಯ ಸಂಸ್ಥಾನದಲ್ಲಿ ಶಾಸಕಾಂಗದ ವಿಕಾಸ [Evolution of Legislature in Princely State of Mysore]:**

ಆಧುನಿಕ ಪ್ರಜಾಸತ್ತಾತ್ಮಕ ಸರ್ಕಾರಗಳು ಮೂರು ಅಂಗಗಳಿಂದ ಕೂಡಿದ್ದು ಶಾಸಕಾಂಗವು ಅವುಗಳಲ್ಲಿ ಮೊದಲನೆಯದು. ದೇಶವೊಂದರ ಆಡಳಿತಕ್ಕೆ ಅಗತ್ಯವಾದ ನಿಯಮಾವಳಿಗಳನ್ನು ರಚಿಸುವ, ಸಾರ್ವಜನಿಕ ಕುಂದು ಕೊರತೆಗಳನ್ನು ಚರ್ಚಿಸುವ, ಸರ್ಕಾರದ ನೀತಿಗಳನ್ನು ಪರಿಶೀಲಿಸುವ ಜವಾಬ್ದಾರಿ ಶಾಸಕಾಂಗದ್ದು. ಇಂತಹ ಶಾಸಕಾಂಗದ ಮೂಲವನ್ನು ಪ್ರಾಚೀನ ಭಾರತದ ಸಭಾ ಮತ್ತು ಸಮಿತಿ ಎಂಬ ರಾಜಕೀಯ ಸಂಸ್ಥೆಗಳಲ್ಲಿ ಗುರುತಿಸಬಹುದಾಗಿದೆ. ಕರ್ನಾಟಕದಲ್ಲಿ ಶಾಸಕಾಂಗದೋಪಾದಿಯ



ಸಭೆಯನ್ನು ಬಸವಣ್ಣನವರ ಅನುಭವ ಮಂಟಪದಲ್ಲಿ ಕಾಣಲಾಗುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಶಾಸಕಾಂಗವನ್ನು ಹೋಲುವ ಸಭೆಗಳನ್ನು ಸ್ಥಾಪಿಸುವ ಮೂಲಕ ಮೈಸೂರು ಸಂಸ್ಥಾನವು ಗಮನ ಸೆಳೆದದ್ದು ಇತಿಹಾಸದ ಭಾಗವಾಗಿದೆ. ಈ ಕೆಳಗೆ ಮೈಸೂರು ಸಂಸ್ಥಾನದಲ್ಲಿ ಶಾಸಕಾಂಗದ ವಿಕಾಸದ ಹಲವು ಮೈಲಿಗಲ್ಲುಗಳನ್ನು ಸಂಕ್ಷೀಪ್ತವಾಗಿ ವಿವರಿಸಲಾಗಿದೆ.

**[A.] ಪ್ರಜಾ ಪ್ರತಿನಿಧಿ ಸಭೆಯ ಸ್ಥಾಪನೆ:** ಆಗಸ್ಟ 25, 1881 ರಂದು ಮೈಸೂರಿನ ಅರಸ ಹತ್ತನೇ ಚಾಮರಾಜೇಂದ್ರರು ಪ್ರಜಾ ಪ್ರತಿನಿಧಿಗಳ ಸಭೆಯ ಸ್ಥಾಪನೆಯನ್ನು ಘೋಷಿಸಿದರು. ಪ್ರಜೆಗಳು ಆಡಳಿತದಲ್ಲಿ ಪಾಲು ಹೊಂದಿರಬೇಕೆಂಬ ಆಶಯದೊಡನೆ ದಿವಾನರಾಗಿದ್ದ ಸಿ. ರಂಗಾಚಾರಲುರವರ ಸಲಹೆಯಂತೆ ಈ ಸಭೆಯನ್ನು ಸ್ಥಾಪಿಸಲಾಯಿತು. ಆರಂಭದಲ್ಲಿ ಪ್ರಜಾ ಪ್ರತಿನಿಧಿಗಳ ಸಭೆಯು 144 ಸದಸ್ಯರುಗಳಿಂದ ಕೂಡಿತ್ತು. ಅಕ್ಟೋಬರ್ 17, 1881 ರಂದು ಪ್ರಥಮ ಅಧಿವೇಶನ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯ ಅಧ್ಯಕ್ಷತೆಯನ್ನು ಮೈಸೂರಿನ ದಿವಾನರಾಗಿದ್ದ ಸಿ. ರಂಗಾಚಾರಲು ವಹಿಸಿಕೊಂಡಿದ್ದರು. ಪ್ರಜಾ ಪ್ರತಿನಿಧಿ ಸಭೆಯನ್ನು ಈ ಕೆಳಗಿನ ಉದ್ದೇಶ ಸಾಧನೆಗೆ ರೂಪಿಸಿ ಜಾರಿಗೊಳಿಸಲಾಗಿತ್ತು.

1. ಸಾರ್ವಜನಿಕ ಹಿತಾಸಕ್ತಿ ಒಳಗೊಂಡ ವಿಷಯಗಳನ್ನು ಕುರಿತು ಚರ್ಚಿಸುವುದು.
2. ಸರ್ಕಾರದ ಆಡಳಿತ ಸೇವಾ ವರ್ಗಕ್ಕೆ ನೆರವಾಗುವ ಸಲಹೆಗಳನ್ನು ನೀಡುವುದು.
3. ಪ್ರಜೆಗಳ ಕುಂದು ಕೊರತೆಗಳನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರಗಳನ್ನು ಒದಗಿಸುವುದು.

ಆರಂಭದ ದಿನಗಳಲ್ಲಿ ಪ್ರಜಾ ಪ್ರತಿನಿಧಿಗಳ ಸಭೆಯ ಸದಸ್ಯರು ಅತ್ಯಂತ ಸೀಮಿತ ಅಧಿಕಾರವನ್ನು ಹೊಂದಿದ್ದರು. ಸಂಸ್ಥಾನಕ್ಕೆ ಅಗತ್ಯವಾದ ಶಾಸನ ರೂಪಿಸುವ ಮತ್ತು ಮತದಾನ ಮಾಡುವ ಅವಕಾಶಗಳನ್ನು ಸದಸ್ಯರು ಪಡೆದಿರಲಿಲ್ಲ. ಆದರೆ, 1888 ರ ನಂತರ ಸರ್ಕಾರ ಹೊರಡಿಸುವ ಎಲ್ಲ ಆದೇಶಗಳನ್ನು ಚರ್ಚಿಸುವ ಅಧಿಕಾರವನ್ನು ಪ್ರತಿನಿಧಿ ಸಭೆಗೆ ಒದಗಿಸಲಾಯಿತು. ಇದರೊಡನೆ 1891 ರಿಂದ ಸದಸ್ಯರನ್ನು ನಾಮ ನಿರ್ದೇಶನದ ಬದಲು ಚುನಾವಣೆಯ ಮೂಲಕ ಆಯ್ಕೆ ಮಾಡಲು ನಿರ್ಧರಿಸಲಾಯಿತು. ಆಸಕ್ತಿದಾಯಕ ಅಂಶವೇನೆಂದರೆ, ಆರಂಭದಲ್ಲಿ ಕೇವಲ ವರ್ಷದಲ್ಲಿ ಒಮ್ಮೆ ಮಾತ್ರ ಅಧಿವೇಶನಗೊಳ್ಳುತ್ತಿದ್ದ ಪ್ರತಿನಿಧಿಗಳ ಸಭೆಯು 1917 ರಿಂದ ವರ್ಷದಲ್ಲಿ ಎರಡು ಬಾರಿ ಸಭೆ ಸೇರತೊಡಗಿತು. ಹೀಗೆ ಪ್ರಜಾ ಪ್ರತಿನಿಧಿಗಳ ಸಭೆಯ ರಚನೆಯು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಸ್ಥಾಪನೆಯಲ್ಲಿ ಮಹತ್ವದ ಹೆಜ್ಜೆ ಎನಿಸಿತ್ತು.

**[B.] ಶಾಸನ ಪರಿಷತ್ತಿನ ಸ್ಥಾಪನೆ:** ಪ್ರಜಾ ಪ್ರತಿನಿಧಿಗಳ ಸಭೆಯೊಡನೆ ನಿಯಮಿತ ಪ್ರತಿನಿಧಿಗಳ ಸಭೆಯ ರಚನೆಗೆ ಬೇಡಿಕೆ ಅಧಿಕವಾಯಿತು. ಫಲವಾಗಿ 1907 ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಶಾಸನ ಪರಿಷತ್ತು ಎಂಬ ನಿಯಮಿತ ಪ್ರತಿನಿಧಿಗಳ ಸಭೆಯನ್ನು ಸ್ಥಾಪಿಸಿದರು. ಈ ಶಾಸನ ಪರಿಷತ್ತಿನ ಸ್ಥಾಪನೆಯೊಡನೆ ದ್ವಿ ಸದನ ಶಾಸಕಾಂಗವನ್ನು

ಮೈಸೂರು ಸಂಸ್ಥಾನ ಆಳವಡಿಸಿಕೊಂಡಂತಾಯಿತು. ಮೈಸೂರು ಸಂಸ್ಥಾನದ ದಿವಾನರೇ ಶಾಸನ ಪರಿಷತ್ತಿನ ಅಧ್ಯಕ್ಷರಾಗಿದ್ದು ಇಬ್ಬರು ಪದನಿಮಿತ್ತ ಸದಸ್ಯರು ಮತ್ತು 10 ಕ್ಕಿಂತ ಕಡಿಮೆಯಿಲ್ಲದ 15 ಕ್ಕಿಂತ ಹೆಚ್ಚಿಲ್ಲದ ನಾಮ ನಿರ್ದೇಶಿತ ಸದಸ್ಯರನ್ನು ಒಳಗೊಂಡಿತ್ತು. ಶಾಸನ ಪರಿಷತ್ತಿನ ನಾಮ ನಿರ್ದೇಶಿತ ಸದಸ್ಯರ ಅಧಿಕಾರಾವಧಿಯು ಎರಡು ವರ್ಷಗಳೆಂದು ನಿಗದಿಪಡಿಸಲಾಗಿತ್ತು. 1914 ರಲ್ಲಿ ಜಾರಿಗೊಂಡ ನಿಯಮದಂತೆ ಶಾಸನ ಪರಿಷತ್ತು ಮೈಸೂರು ಸಂಸ್ಥಾನದ ಮುಂಗಡ ಪತ್ರವನ್ನು ಚರ್ಚಿಸುವ ಅಧಿಕಾರವನ್ನು ಪಡೆದುಕೊಂಡಿತು. ಇದರೊಡನೆ ಸದಸ್ಯರ ಸಂಖ್ಯೆಯು 15 ರಿಂದ 21 ಕ್ಕೆ ಹೆಚ್ಚಿಸಲಾಯಿತು.

**[C.] 1923 ರ ಶಾಸಕಾಂಗದ ಸುಧಾರಣೆ:** ಪ್ರಗತಿಪರ ಧೋರಣೆಯುಳ್ಳ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ಸಂಸ್ಥಾನದ ಶಾಸಕಾಂಗವನ್ನು ಶಾಸನಬದ್ಧಗೊಳಿಸಲು ನಿರ್ಧರಿಸಿ ಎರಡು ಕಾನೂನುಗಳನ್ನು ಜಾರಿಗೊಳಿಸಿದರು. ಪ್ರಜಾ ಪ್ರತಿನಿಧಿ ಸಭೆ ಮತ್ತು ಶಾಸನ ಪರಿಷತ್ತುಗಳ ಸುಧಾರಣೆಯ ಉದ್ದೇಶವನ್ನೂ ಈ ಪ್ರತ್ಯೇಕ ಕಾನೂನುಗಳು ಒಳಗೊಂಡಿದ್ದವು. 1923 ರ ಪ್ರತಿನಿಧಿ ಕಾಯಿದೆಯನ್ವಯ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರ ಸಂಖ್ಯೆಯನ್ನು 250 ರಿಂದ 275 ಕ್ಕೆ ಹೆಚ್ಚಿಸಲಾಯಿತು. ಜೊತೆಗೆ ಅಲ್ಪಸಂಖ್ಯಾತರು ಹಾಗೂ ಹಿಂದುಳಿದವರಿಗೆ ಸ್ಥಾನಗಳ ಮೀಸಲಾತಿ ಒದಗಿಸಲಾಯಿತು. ಮಹಿಳೆಯರಿಗೆ ಪ್ರಜಾ ಪ್ರತಿನಿಧಿಗಳ ಚುನಾವಣೆಯಲ್ಲಿ ಮತದಾನ ಮತ್ತು ಸ್ಪರ್ಧೆಗೆ ಅವಕಾಶ ಒದಗಿಸಲಾಯಿತು. ಇದರೊಡನೆ ಪ್ರಜಾ ಪ್ರತಿನಿಧಿಗಳ ಸಭೆಯ ಸದಸ್ಯರಾಗಲು 21 ವರ್ಷಗಳ ವಯೋಮಿತಿಯನ್ನು ಹಾಗೂ ಮತದಾನಕ್ಕೆ 18 ವರ್ಷಗಳ ಮಿತಿಯನ್ನು ನಿಗದಿಪಡಿಸಲಾಯಿತು. ಅಂತೆಯೇ 1923 ರ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ರೆಗ್ಯುಲೇಷನ್ ಜಾರಿಗೊಳಿಸಿ ಶಾಸನ ಪರಿಷತ್ತಿನ ಸದಸ್ಯರಿಗೆ ಅನುದಾನದ ಬೇಡಿಕೆಗಳ ಮೇಲೆ ಮತದಾನ ಮಾಡುವ ಅವಕಾಶವನ್ನು ನೀಡಲಾಯಿತು. ಜೊತೆಗೆ ಶಾಸನ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು 15 ರಿಂದ 50 ಕ್ಕೆ ಏರಿಸಲಾಯಿತು. ಮುಂದುವರಿದು, ಪರಿಷತ್ತಿನ ಸಭೆಯ ಕೋರಂ ಒಟ್ಟು ಸದಸ್ಯರ ಅರ್ಧದಷ್ಟು ಎಂದು ನಿಗದಿಪಡಿಸಲಾಯಿತು.

**[D.] ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಸಮಿತಿ:** ಮೈಸೂರಿನ ಜನರಲ್ಲಿ ರಾಜಕೀಯ ಪ್ರಜ್ಞೆ ಹರಡಿ ಜವಾಬ್ದಾರಿ ಸರ್ಕಾರದ ಬೇಡಿಕೆ ಬಲಗೊಳ್ಳತೊಡಗಿತು. ಆಗ ಪ್ರಜಾ ಪ್ರತಿನಿಧಿಗಳ ಸಭೆಗಳಲ್ಲಿ ಸುಧಾರಣೆ ತರಲು 1938 ರಲ್ಲಿ ಮಹಾರಾಜರು ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದರು. 1939 ರಲ್ಲಿ ತನ್ನ ವರದಿ ನೀಡಿದ ಅಯ್ಯಂಗಾರ್ ಸಮಿತಿಯು ಕೆಳಗಿನ ಸಲಹೆಗಳನ್ನು ನೀಡಿತು.

1. ಪ್ರಜಾ ಪ್ರತಿನಿಧಿಗಳ ಸಭೆಯ ಸದಸ್ಯರ ಸಂಖ್ಯೆಯನ್ನು 250 ರಿಂದ 300 ಕ್ಕೆ ಹೆಚ್ಚಿಸುವುದು.
2. ಶಾಸನ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು 50 ರಿಂದ 60 ಕ್ಕೆ ಹೆಚ್ಚಿಸುವುದು.



3. ಶಾಸನವೊಂದು ಜಾರಿಗೊಳ್ಳುವ ಮೊದಲು ಪ್ರಜಾ ಪ್ರತಿನಿಧಿಗಳ ಸಭೆ ಮತ್ತು ಶಾಸನ ಪರಿಷತ್ತುಗಳೆರಡರ ಅನುಮೋದನೆ ಪಡೆಯುವಂತೆ ನೋಡಿಕೊಳ್ಳುವುದು.

**[E.] 1940 ರ ಮೈಸೂರು ಸರ್ಕಾರ ಕಾಯಿದೆ:** ಪ್ರತಿನಿಧಿಗಳ ಹಲವು ಬೇಡಿಕೆಗಳನ್ನು ಈಡೇರಿಸಲು ಮಹಾರಾಜರು 1940 ರಲ್ಲಿ ಮೈಸೂರು ಸರ್ಕಾರ ಕಾಯಿದೆಯನ್ನು ಜಾರಿಗೊಳಿಸಿದರು. ಇದರ ಮೂಲಕ ಹಲವು ಸೌಲಭ್ಯಗಳನ್ನು ಪ್ರಜಾ ಪ್ರತಿನಿಧಿಗಳಿಗೆ ಒದಗಿಸಲಾಯಿತು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

1. ಇಬ್ಬರು ಚುನಾಯಿತ ಪ್ರತಿನಿಧಿಗಳನ್ನು ಮಹಾರಾಜರ ಪರಿಷತ್ತಿಗೆ ನೇಮಕ ಮಾಡಲು ಅವಕಾಶ. ಈ ಇಬ್ಬರಲ್ಲಿ ಒಬ್ಬರು ಪ್ರಜಾ ಪ್ರತಿನಿಧಿ ಸಭೆಯ ಮತ್ತು ಇನ್ನೊಬ್ಬರು ಶಾಸನ ಪರಿಷತ್ತಿನ ಸದಸ್ಯರಾಗಿರುತ್ತಾರೆ.
2. ಪ್ರಜಾ ಪ್ರತಿನಿಧಿ ಸಭೆ ಮತ್ತು ಶಾಸನ ಪರಿಷತ್ತಿನ ಅಧ್ಯಕ್ಷತೆಯನ್ನು ದಿವಾನರ ಬದಲು ಆಯಾ ಸದನಗಳಿಂದ ನೇಮಕಗೊಳ್ಳುವ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಅವಕಾಶ.
3. ಶಾಸನ ಪರಿಷತ್ತಿನ ಅಧಿಕಾರಾವಧಿಯನ್ನು ಎರಡು ವರ್ಷಗಳ ಬದಲು ನಾಲ್ಕು ವರ್ಷಗಳಿಗೆ ಹೆಚ್ಚಿಸಲಾಯಿತು.
4. ಪ್ರಜಾ ಪ್ರತಿನಿಧಿ ಸಭೆ ಮತ್ತು ಶಾಸನ ಪರಿಷತ್ತಿನ ಸದಸ್ಯರಿಗೆ ವಾಕ್ ಸ್ವಾತಂತ್ರ್ಯ ನೀಡಿಕೆ.

**[F.] ಪ್ರಜಾ ಪ್ರತಿನಿಧಿ ಸಭೆ ಮತ್ತು ಶಾಸನ ಪರಿಷತ್ತುಗಳ ರದ್ದತಿ:** ಭಾರತವು ಸ್ವಾತಂತ್ರ್ಯಗೊಂಡ ಬಳಿಕ ಅಕ್ಟೋಬರ್ 29, 1947 ರಂದು ಮೈಸೂರು ಸಂಸ್ಥಾನವು ಘೋಷಣೆಯೊಂದನ್ನು ಹೊರಡಿಸಿ ಮೈಸೂರಿಗೆ ಪ್ರತ್ಯೇಕ ಸಂವಿಧಾನ ರಚಿಸಲು ಸಂವಿಧಾನ ರಚನಾ ಸಭೆಯನ್ನು ರೂಪಿಸಿತು. ಆದರೆ, ಬದಲಾದ ಸನ್ನಿವೇಶದಲ್ಲಿ ನವೆಂಬರ್ 25, 1947 ರಂದು ಭಾರತ ಸಂವಿಧಾನವನ್ನೇ ಮೈಸೂರು ಸಂಸ್ಥಾನಕ್ಕೆ ಅನ್ವಯಿಸಿಕೊಳ್ಳುವ ನಿರ್ಣಯವನ್ನು ಮೈಸೂರಿನ ಮಹಾರಾಜರು ಕೈಗೊಂಡರು. ಫಲವಾಗಿ ಡಿಸೆಂಬರ್ 1949 ರಲ್ಲಿ ಪ್ರಜಾ ಪ್ರತಿನಿಧಿಗಳ ಸಭೆ ಮತ್ತು ಶಾಸನ ಪರಿಷತ್ತುಗಳು ರದ್ದುಗೊಂಡವು. ಭಾರತ ಸಂವಿಧಾನದಡಿ ಚುನಾವಣೆ ಜರುಗುವವರೆಗೆ ಸಂವಿಧಾನ ರಚನಾ ಸಭೆಯೇ ಮೈಸೂರಿನ ಶಾಸಕಾಂಗವಾಗಿ ಮುಂದುವರೆಯಿತು.

**[G.] ಭಾರತ ಸಂವಿಧಾನದಡಿ ಮೈಸೂರು ಶಾಸಕಾಂಗ:** 1952 ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆಗಳು ಜರುಗಿ 99 ಚುನಾಯಿತ ಸದಸ್ಯರು ಮತ್ತು ಓರ್ವ ನಾಮ ನಿರ್ದೇಶಿತ ಸದಸ್ಯರನ್ನುಳ್ಳ ಮೈಸೂರು ರಾಜ್ಯದ ಶಾಸಕಾಂಗ ಕಾರ್ಯಾರಂಭಿಸಿತು. ಮುಂದೆ ನವೆಂಬರ್ 1, 1956 ರಲ್ಲಿ ವಿಶಾಲ ಮೈಸೂರು ರಾಜ್ಯ ಸ್ಥಾಪನೆಗೊಂಡಾಗ ಮೈಸೂರು ಶಾಸಕಾಂಗವು ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳೆಂಬ ಸದನಗಳನ್ನು ಅಳವಡಿಸಿಕೊಂಡು ದ್ವಿ ಸದನ ಶಾಸಕಾಂಗವೆನಿಸಿತು. ಡಿಸೆಂಬರ್ 19, 1956 ರಂದು ವಿಶಾಲ ಮೈಸೂರು ಶಾಸಕಾಂಗವು ನೂತನವಾಗಿ ನಿರ್ಮಾಣಗೊಂಡಿದ್ದ ವಿಧಾನ ಸೌಧದಲ್ಲಿ

ತನ್ನ ಮೊದಲ ಅಧಿವೇಶನ ಸೇರಿತು. 1957 ರಲ್ಲಿದ್ದ ಮೈಸೂರಿನ ವಿಧಾನ ಸಭೆಯ 208 ಸದಸ್ಯರ ಸಂಖ್ಯೆಯು 1967 ರಲ್ಲಿ 216ಮತ್ತು 1978 ರಲ್ಲಿ 224 ಕ್ಕೆ ಹೆಚ್ಚಿತು. ಅಂತೆಯೇ 1957 ರಲ್ಲಿ 63 ಸ್ಥಾನಗಳನ್ನು ಹೊಂದಿದ್ದ ವಿಧಾನ ಪರಿಷತ್ತು 1987 ರಲ್ಲಿ 75 ಸದಸ್ಯರನ್ನು ಹೊಂದುವಂತಾಯಿತು.

### [III.] ಮೈಸೂರು ಪ್ರಜಾ ಪ್ರತಿನಿಧಿ ಸಭೆ [Mysore Representative Assembly]:

1831 ರಿಂದ ಬ್ರಿಟಿಷ್ ಕಮೀಶನರುಗಳ ಆಳ್ವಿಕೆಗೆ ಒಳಪಟ್ಟಿದ್ದ ಮೈಸೂರು ಸಂಸ್ಥಾನವನ್ನು 1881 ರಲ್ಲಿ ಬ್ರಿಟಿಷರು ಮೈಸೂರಿನ ಅರಸ ಹತ್ತನೇ ಚಾಮರಾಜೇಂದ್ರ ಒಡೆಯರ್‌ಗೆ ಮರಳಿ ವರ್ಗಾಯಿಸಿದರು. ದೊರೆತ ಅಧಿಕಾರವನ್ನು ಪ್ರಜಾ ಕಲ್ಯಾಣಕ್ಕೆ ಉಪಯೋಗಿಸಲು ಬಯಸಿದ್ದ ಚಾಮರಾಜೇಂದ್ರರು ದಿವಾನರಾಗಿದ್ದ ಸಿ. ರಂಗಾಚಾರಲುರವರ ಸಲಹೆಯಂತೆ ಪ್ರಜಾ ಪ್ರತಿನಿಧಿ ಸಭೆಯನ್ನು ಸ್ಥಾಪಿಸಲು ನಿರ್ಧರಿಸಿದರು. ಪ್ರಜೆಗಳು ಹಾಗೂ ಸಂಸ್ಥಾನದ ನಡುವಿನ ಸಂಬಂಧದ ವೃದ್ಧಿ, ಸಾರ್ವಜನಿಕ ಹಿತಾಸಕ್ತಿಯ ರಕ್ಷಣೆ, ಆಡಳಿತಾತ್ಮಕ ಸಹಕಾರ ಗಳಿಕೆಗಳು ಪ್ರಜಾ ಪ್ರತಿನಿಧಿ ಸಭೆಯ ಸ್ಥಾಪನೆಗೆ ಪ್ರಧಾನ ಕಾರಣಗಳಾಗಿದ್ದವು. ಅಂದಿನ ಭಾರತದ ಯಾವುದೇ ದೇಶೀಯ ಸಂಸ್ಥಾನದಲ್ಲಿ ಅಸ್ತಿತ್ವದಲ್ಲಿರದ ಪ್ರಜಾಸತ್ತಾತ್ಮಕ ಸಭೆಯನ್ನು ಮೈಸೂರು ಅಳವಡಿಸಿಕೊಂಡಿದ್ದುದು ಗಮನಾರ್ಹ ಸಂಗತಿಯಾಗಿತ್ತು. ಆಗಸ್ಟ 25, 1881 ರಂದು ಸಿ. ರಂಗಾಚಾರಲು ಅಧ್ಯಕ್ಷತೆಯಲ್ಲಿ ಆರಂಭಗೊಂಡ ಪ್ರಜಾ ಪ್ರತಿನಿಧಿ ಸಭೆಯು ಭಾರತ ಸಂವಿಧಾನ ಅನುಮೋದನೆಗೊಳ್ಳುವವರೆಗೂ ಕಾರ್ಯಾಚರಿಸಿತು. ಈ ಕೆಳಗೆ ಮೈಸೂರು ಪ್ರತಿನಿಧಿ ಸಭೆಯ ರಚನೆ ಮತ್ತು ಅಧಿಕಾರಗಳನ್ನು ಕುರಿತಂತೆ ಬೆಳಕು ಚೆಲ್ಲಲಾಗಿದೆ.

[A.] **ಗಾತ್ರ:** ಮೈಸೂರು ಪ್ರಜಾ ಪ್ರತಿನಿಧಿ ಸಭೆಯು ಆರಂಭದಲ್ಲಿ 144 ಸದಸ್ಯರಿಂದ ಕೂಡಿತ್ತು. ಮುಂದೆ 1923 ರಲ್ಲಿ ಇದರ ಸಂಖ್ಯೆಯನ್ನು 250 ರಿಂದ 275 ಕ್ಕೆ ಹೆಚ್ಚಿಸಲಾಯಿತು. 1938 ರ ಶ್ರೀನಿವಾಸ ಅಯ್ಯಂಗಾರ್ ಸಮಿತಿಯು ಪ್ರತಿನಿಧಿಗಳ ಸಂಖ್ಯೆಯನ್ನು 300 ಕ್ಕೆ ನಿಗಧಿಪಡಿಸಲು ಸಲಹೆ ನೀಡಿತ್ತು.

[B.] **ಚುನಾವಣಾ ವಿಧಾನ:** ಮೈಸೂರು ಪ್ರತಿನಿಧಿಗಳ ಸಭೆಯ ಸದಸ್ಯರನ್ನು ಆರಂಭದಲ್ಲಿ ನಾಮ ನಿರ್ದೇಶನದ ಮೂಲಕ ನೇಮಿಸಲಾಗುತ್ತಿತ್ತು. ತಾಲ್ಲೂಕಿಗೆ ಇಬ್ಬರಂತೆ ಜಿಲ್ಲಾಧಿಕಾರಿಯು ಪ್ರತಿನಿಧಿಗಳ ಸಭೆಗೆ ಸದಸ್ಯರನ್ನು ಸೂಚಿಸುತ್ತಿದ್ದರು. ಹೀಗೆ ಸೂಚಿತ ಹೆಸರುಗಳನ್ನು ದಿವಾನರು ಅನುಮೋದಿಸುವ ಮೂಲಕ ಅವರು ಅರಸರಿಂದ ಪ್ರತಿನಿಧಿಗಳ ಸಭೆಯ ಸದಸ್ಯತ್ವಕ್ಕೆ ನಾಮಕರಣಗೊಳ್ಳುತ್ತಿದ್ದರು. ಆದರೆ, 1891 ರ ಬಳಿಕ ಪ್ರತಿನಿಧಿಗಳ ಸಭೆಯ ಸದಸ್ಯರನ್ನು ನಾಮ ನಿರ್ದೇಶನದ ಬದಲು ಚುನಾವಣೆಯ ಮೂಲಕ ಆಯ್ಕೆ ಮಾಡಲು ಅವಕಾಶ ಒದಗಿಸಲಾಯಿತು. ತೆರಿಗೆ ನೀಡುವವರು ಮತ್ತು



[C.] **ಅರ್ಹತೆಗಳು:** ಪ್ರತಿನಿಧಿಗಳ ಸಭೆಯ ಸದಸ್ಯತ್ವ ಪಡೆಯಲು ಆರಂಭದಲ್ಲಿ ವಿದ್ಯಾವಂತರು, ಪ್ಲಾಂಟರ್‌ಗಳು ಹಾಗೂ ಜಮೀನ್ದಾರರು ಮಾತ್ರ ಅರ್ಹರಾಗಿದ್ದರು. ಬಳಿಕ 21 ವರ್ಷ ವಯೋಮಿತಿ ಪೂರೈಸಿದ ಸರ್ವರಿಗೂ ಅವಕಾಶ ದೊರಕಿತು. ಜೊತೆಗೆ ಮಹಿಳೆಯರೂ ಕಾಲಾನುಕ್ರಮದಲ್ಲಿ ಪ್ರತಿನಿಧಿ ಸಭೆಯ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಪಡೆದುಕೊಂಡರು.

[D.] **ಅಧಿಕಾರಾವಧಿ:** ಆರಂಭದಲ್ಲಿ ಮೈಸೂರು ಪ್ರಜಾ ಪ್ರತಿನಿಧಿಗಳ ಸಭೆಯ ಸದಸ್ಯರ ಅಧಿಕಾರಾವಧಿ ಕೇವಲ ಒಂದು ವರ್ಷವಾಗಿತ್ತು. ಮುಂದೆ ಒಂದು ವರ್ಷದಿಂದ ಮೂರು ವರ್ಷಗಳಿಗೆ ಏರಿಸಲಾಯಿತು.

[E.] **ಅಧಿವೇಶನ:** ಆರಂಭದಲ್ಲಿ ಪ್ರತಿನಿಧಿಗಳ ಸಭೆಯ ಅಧಿವೇಶನವು ವರ್ಷದಲ್ಲಿ ಒಂದು ಬಾರಿ ಮಾತ್ರ ಜರುಗುತ್ತಿತ್ತು. ಕಾಲಾನುಕ್ರಮದಲ್ಲಿ ವರ್ಷದಲ್ಲಿ ಎರಡು ಬಾರಿ ಅಧಿವೇಶನಗೊಳ್ಳಲು ಮಹಾರಾಜರು ಆಸ್ಪದ ಕಲ್ಪಿಸಿದರು.

[F.] **ಅಧ್ಯಕ್ಷ:** ಪ್ರತಿನಿಧಿಗಳ ಸಭೆಯ ಅಧ್ಯಕ್ಷತೆಯನ್ನು ಆರಂಭದಲ್ಲಿ ದಿವಾನರೇ ವಹಿಸಿಕೊಳ್ಳುತ್ತಿದ್ದರು. ಕಾಲಾನುಕ್ರಮದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಚುನಾಯಿಸಿ ಕೊಳ್ಳಲು ಪ್ರತಿನಿಧಿ ಸಭೆಯ ಸದಸ್ಯರಿಗೆ ಅವಕಾಶ ಒದಗಿಸಲಾಯಿತು.

ಆಸಕ್ತಿದಾಯಕ ಅಂಶವೇನೆಂದರೆ, ಪ್ರಜಾ ಪ್ರತಿನಿಧಿಗಳ ಬೇಡಿಕೆಯಂತೆ ಅರಸರು ಪ್ರತಿನಿಧಿಗಳ ನಿಯಮಿತ ಸಭೆಯೊಂದನ್ನು ರಚಿಸಿದ್ದು ಅದನ್ನು ಲೆಜಿಸ್ಲೇಟಿವ್ ಕೌನ್ಸಿಲ್ ಎನ್ನಲಾಗುತ್ತಿತ್ತು. ಪ್ರಜಾ ಪ್ರತಿನಿಧಿಗಳಿಗಿಂತ ಪ್ರಬಲವಾಗಿದ್ದ ಈ ಲೆಜಿಸ್ಲೇಟಿವ್ ಕೌನ್ಸಿಲ್ ಪ್ರಭಾವಿ ಪ್ರತಿನಿಧಿಗಳಿಂದ ಕೂಡಿತ್ತು. ಈ ಶಾಸನ ಪರಿಷತ್ತಿನ ಸ್ಥಾಪನೆಯೊಡನೆ ಮೈಸೂರು ಪ್ರತಿನಿದಿಗಳ ಸಭೆಯು ದ್ವಿ ಸದನ ಶಾಸಕಾಂಗದ ಸ್ವರೂಪವನ್ನು ತಾಳುವಂತಾದದ್ದು ಗಮನಾರ್ಹ.

[G.] **ಅಧಿಕಾರ ಕಾರ್ಯಗಳು:** 1923 ಮತ್ತು 1940 ರಲ್ಲಿ ಮಹಾರಾಜರು ಹೊರಡಿಸಿದ ಕಾನೂನಿನಡಿ ಮೈಸೂರು ಪ್ರತಿನಿಧಿಗಳ ಸಭೆಯು ವಿವಿಧ ಅಧಿಕಾರಗಳನ್ನು ಪಡೆದುಕೊಂಡಿತು. ಪ್ರತಿನಿಧಿಗಳ ಸಭೆಯ ಸದಸ್ಯರುಗಳ ಸಾಮಾನ್ಯ ಅಧಿಕಾರ ಕಾರ್ಯಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

1. ಸಾರ್ವಜನಿಕ ಹಿತಾಸಕ್ತಿಯುಳ್ಳ ವಿಷಯಗಳನ್ನು ಕುರಿತಂತೆ ಚರ್ಚಿಸುವುದು.
2. ಪ್ರಜೆಗಳ ಕುಂದು ಕೊರತೆಗಳನ್ನು ಸರ್ಕಾರದ ಮುಂದಿಟ್ಟು ಪರಿಹಾರಗಳನ್ನು ಒದಗಿಸುವುದು.
3. ಆಡಳಿತ ಸೇವಾ ವರ್ಗಕ್ಕೆ ಅಗತ್ಯ ಸಲಹೆ ಮತ್ತು ಸಹಕಾರ ನೀಡುವುದು.
4. ಸಂಸ್ಥಾನದ ಮುಂಗಡ ಪತ್ರವನ್ನು ಕುರಿತು ಚರ್ಚೆ ನಡೆಸುವುದು.

5. ಮಹಾರಾಜರ ಪರಿಷತ್ತಿಗೆ ಆಯ್ಕೆಯಾಗಿ ಪ್ರಜಾಪರ ನಿರ್ಧಾರಗಳನ್ನು ಕೈಗೊಳ್ಳಲು ನೆರವಾಗುವುದು.

ಒಟ್ಟಿನಲ್ಲಿ ಬ್ರಿಟಿಷ್ ವಸಾಹತು ಕಾಲದಲ್ಲಿಯೇ ಪ್ರಜಾಪರ ಚಿಂತನೆಯುಳ್ಳ ಪ್ರತಿನಿಧಿಗಳ ಸಭೆಗೆ ಅವಕಾಶ ಒದಗಿಸಿದುದು ಮೈಸೂರು ಸಂಸ್ಥಾನದ ಹೆಗ್ಗಳಿಕೆಯಾಗಿದೆ. ಭಾರತದ ಯಾವುದೇ ದೇಶೀಯ ಸಂಸ್ಥಾನದಲ್ಲಿ ಅಸ್ತಿತ್ವದಲ್ಲಿಲ್ಲದ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಮೈಸೂರು ಸಂಸ್ಥಾನ ಅವಕಾಶ ಕಲ್ಪಿಸಿದ್ದುದು ಪ್ರತಿನಿಧಿಗಳ ಸಭೆಯಿಂದ ಸ್ಪಷ್ಟವಾಗುತ್ತದೆ. ಈ ಪ್ರತಿನಿಧಿ ಸಭೆಯು ಸಲಹಾತ್ಮಕ ಸಭೆಯಾಗಿತ್ತು ಎಂಬುದನ್ನು ನಾವು ಮರೆಯುವಂತಿಲ್ಲ.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ಮೈಸೂರಿನ ಒಡೆಯರ್ ಮನೆತನವು ಯಾರ ಒತ್ತಡಕ್ಕೆ ಒಳಗಾಯಿತು?
2. ನಾಲ್ಕನೇ ಆಂಗ್ಲೊ ಮೈಸೂರು ಯುದ್ಧದ ಬಳಿಕ ಮೈಸೂರಿನ ಭೂ ಭಾಗಗಳನ್ನು ಯಾರು ಹಂಚಿಕೊಂಡರು?
3. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಕಮೀಶನರ್ ಆಳ್ವಿಕೆ ಜಾರಿಗೊಳ್ಳಲು ಕಾರಣಗಳಾವುವು?
4. ಮೈಸೂರಿನಲ್ಲಿ ಕಮೀಶನರ್ ಆಳ್ವಿಕೆಯನ್ನು ಯಾರು ಮತ್ತು ಯಾವಾಗ ಘೋಷಿಸಿದರು?
5. ಮೈಸೂರನ್ನು ಆಳಿದ ಇಬ್ಬರು ಕಮೀಶನರುಗಳನ್ನು ಹೆಸರಿಸಿರಿ.
6. ನಾಲ್ವಡಿ ಕೃಷ್ಣರಾಜರ ಕಾಲದಲ್ಲಿ ಮೈಸೂರು ಮಾದರಿ ರಾಜ್ಯವೆನಿಸಲು ಕಾರಣವೇನು?
7. ಮೈಸೂರನ್ನು ಆಳಿದ ನಾಲ್ಕು ದಿವಾನರನ್ನು ಹೆಸರಿಸಿರಿ.
8. ಪ್ರಜಾ ಪ್ರತಿನಿಧಿ ಸಭೆಯ ಸ್ಥಾಪನೆಯ ಮೂರು ಉದ್ದೇಶಗಳನ್ನು ತಿಳಿಸಿರಿ.
9. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಸಮಿತಿಯ ಸಲಹೆಗಳನ್ನು ಬರೆಯಿರಿ.
10. ವಿಶಾಲ ಮೈಸೂರಿನ ಶಾಸಕಾಂಗದ ವಿಶೇಷತೆಗಳನ್ನು ಬರೆಯಿರಿ.
11. ಮೈಸೂರು ಪ್ರತಿನಿಧಿಗಳ ಸಭೆಯ ಗಾತ್ರವನ್ನು ತಿಳಿಸಿರಿ.
12. ಮೈಸೂರು ಪ್ರತಿನಿಧಿಗಳ ಸಭೆಯ ಅಧಿವೇಶನ ಕುರಿತಂತೆ ನಿಮಗೇನು ತಿಳಿದಿದೆ?
13. ಪ್ರಜಾ ಪ್ರತಿನಿಧಿ ಸಭೆಯ ಅಧಿಕಾರಗಳನ್ನು ಬರೆಯಿರಿ



**[B.] ಐದು ಅಂಕದ ಪ್ರಶ್ನೆಗಳು:**

1. ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ರಾಜಕೀಯವನ್ನು ವಿವರಿಸಿರಿ.
2. ಮೈಸೂರಿನ ಲೆಜಿಸ್ಲೇಟಿವ್ ಕೌನ್ಸಿಲ್ ಕುರಿತು ಟಿಪ್ಪಣಿ ಬರೆಯಿರಿ.
3. ಮೈಸೂರು ಪ್ರತಿನಿಧಿಗಳ ಸಭೆಯನ್ನು ಚರ್ಚಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ರಾಜಕೀಯ ಇತಿಹಾಸವನ್ನು ವಿವರಿಸಿರಿ.
2. ಮೈಸೂರಿನಲ್ಲಿ ಶಾಸಕಾಂಗದ ವಿಕಾಸವನ್ನು ಪರಿಶೀಲಿಸಿರಿ.

ಅಧ್ಯಾಯ 3:

# ಮೈಸೂರಿನ ದೇಶೀಯ ಸಂಸ್ಥಾನದಲ್ಲಿನ ಆಡಳಿತ ಮತ್ತು ರಾಜ್ಯ ಪುನರ್‌ಸಂಘಟನೆ

## [Administration in the Princely State of Mysore and Reorganisation of State]

ಪ್ರಸ್ತಾವನೆ [Introduction]:

ಮೈಸೂರಿನ ದೇಶೀಯ ಸಂಸ್ಥಾನಕ್ಕೆ 550 ವರ್ಷಗಳ ಐತಿಹ್ಯವಿದ್ದು ಸುಮಾರು 25 ಮಹಾರಾಜರು ಮೈಸೂರು ಸಂಸ್ಥಾನವನ್ನು ಆಳಿರುವುದು ಕಂಡು ಬರುತ್ತದೆ. ಮೈಸೂರು ರಾಜರ ಆಡಳಿತವನ್ನು 1399 ರಿಂದಲೇ ಗುರುತಿಸಬಹುದಾಗಿದ್ದು ಯದುರಾಯ ಮತ್ತು ಕೃಷ್ಣರಾಯರನ್ನು ಮೈಸೂರು ಸಂಸ್ಥಾನದ ಯದುವಂಶದ ಸ್ಥಾಪಕರೆಂದು ಪರಿಗಣಿಸಲಾಗುತ್ತದೆ. ಹಲವು ಆಡಳಿತಾತ್ಮಕ ಏರಿಳಿತಗಳನ್ನು ಕಂಡ ಮೈಸೂರು ದೇಶೀಯ ಸಂಸ್ಥಾನವು ಭಾರತ ಸ್ವತಂತ್ರಗೊಳ್ಳುವವರೆಗೆ ಮುಂದುವರೆದದ್ದು ಆಸಕ್ತಿಕರ ಕಥನ. ಭಾರತದ ರಾಷ್ಟ್ರೀಯ ಹೋರಾಟದೊಡನೆ ಮೈಸೂರಿನ ಏಕೀಕರಣಕ್ಕೆ ಚಳುವಳಿ ಕಂಡು ಬಂದಿತಾದರೂ ಕಾರಣಾಂತರದಿಂದ ಆ ಪ್ರಯತ್ನ ಸಫಲಗೊಳ್ಳಲಿಲ್ಲ. ಅಂತಿಮವಾಗಿ 1956 ರ ರಾಜ್ಯಗಳ ಪುನರ್‌ವಿಂಗಡಣಾ ಆಯೋಗದ ಸಲಹೆಯಂತೆ ಸ್ವಾತಂತ್ರ್ಯ ಪೂರ್ವದ ಮೈಸೂರು ಸಂಸ್ಥಾನ ಪುನರ್‌ಸಂಘಟಿತಗೊಂಡಿತು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಡಿ ಮೈಸೂರಿನ ದೇಶೀಯ ಸಂಸ್ಥಾನದ ಆಡಳಿತ ಮತ್ತು ರಾಜ್ಯ ಪುನರ್‌ಸಂಘಟನೆ ಕುರಿತು ಬೆಳಕು ಚೆಲ್ಲಲಾಗಿದೆ.

### [I.] ಮೈಸೂರು ದೇಶೀಯ ಸಂಸ್ಥಾನದಲ್ಲಿನ ಆಡಳಿತ [Administration in the Princely State of Mysore]:

ಉತ್ತರದ ಯದುರಾಯರು ತನ್ನ ಸಹೋದರ ಕೃಷ್ಣರಾಯರೊಂದಿಗೆ ಚೆಲುವನಾರಾಯಣಸ್ವಾಮಿಯ ದರ್ಶನಕ್ಕಾಗಿ ಮೇಲುಕೋಟೆಗೆ ಬರುತ್ತಾರೆ. ಅಲ್ಲಿಂದ ಹಿಂತಿರುಗುವ ವೇಳೆಯಲ್ಲಿ ಮೈಸೂರನ್ನು ಆಳುತ್ತಿದ್ದ ಪಾಳೇಗಾರ ಚಾಮರಾಜನ ಹೆಂಡತಿ ಹಾಗೂ ಮಗಳಿಗೆ ಮೈಸೂರು ಸೀಮೆಯ ದಳವಾಯಿಯಾಗಿದ್ದ ಕೊರಗಳ್ಳಿ ಮಾರನಾಯಕ ಹಿಂಸೆ ನೀಡುತ್ತಿದ್ದುದಲ್ಲದೆ ಪುತ್ರಿ ದೇವಾಜಮ್ಮಣಿಯನ್ನು ತನಗೆ ವಿವಾಹ ಮಾಡಿಕೊಡುವಂತೆ



ಪೀಡಿಸುತ್ತಿದ್ದುದನ್ನು ತಿಳಿದನು. ಕೂಡಲೇ ಯದುರಾಯರು ಮಹಾರಾಣಿಯ ಸಹಾಯಕ್ಕೆ ಬರುವುದರೊಂದಿಗೆ ಮಾರನಾಯಕನನ್ನು ಕೊಲ್ಲುತ್ತಾರೆ. ಈ ವೇಳೆ ಮಹಾರಾಣಿ ತನ್ನ ಪುತ್ರಿ ದೇವಾಜಮ್ಮಣಿಯನ್ನು ಯದುರಾಯರಿಗೆ ಕೊಟ್ಟು ಮದುವೆ ಮಾಡುತ್ತಾರೆ. ಹೀಗೆ ಮೈಸೂರಿನಲ್ಲಿ ಯದುವಂಶದ ಆಡಳಿತ ಪ್ರಾರಂಭವಾಯಿತು ಎಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಮುಂದೆ ಮೈಸೂರು ಸಂಸ್ಥಾನವೆಂದು ಗುರುತಿಸಲ್ಪಡುವ ಯದುವಂಶದ ಆಡಳಿತವು ವಿವಿಧ ಹಂತಗಳನ್ನು ದಾಟಿ ಬಂದಿದ್ದು ಆ ಕುರಿತಾದ ವಿವರಗಳನ್ನು ಸಂಕ್ಷಿಪ್ತವಾಗಿ ಕೆಳಗೆ ನೀಡಲಾಗಿದೆ.

**[A.] ವಿಜಯ ನಗರದ ಸಾಮಂತರಾಗಿ ಆಡಳಿತ:** ಮೈಸೂರು ಸಂಸ್ಥಾನದ ಮೂಲ ಪುರುಷ ಯದುರಾಯರ ನಂತರ 1423 ರಿಂದ 1459 ರವರೆಗೆ ಒಂದನೇ ಹಿರಿಯ ಬೆಟ್ಟದ ಚಾಮರಾಜ ಒಡೆಯರ್, 1459 ರಿಂದ 1478 ರವರೆಗೆ ಹಿರಿಯ ಬೆಟ್ಟದ ಚಾಮರಾಜ ಒಡೆಯರ್ ಪುತ್ರ ತಿಮ್ಮರಾಜ ಒಡೆಯರ್ ಆಡಳಿತ ನಡೆಸಿದರು. ಬಳಿಕ 1478 ರಿಂದ 1513 ರವರೆಗೆ ಎರಡನೇ ಹಿರಿಯ ಚಾಮರಾಜ ಒಡೆಯರ್ ಮತ್ತು 1513 ರಿಂದ 1553 ರವರೆಗೆ ಮೂರನೇ ಹಿರಿಯ ಬೆಟ್ಟದ ಚಾಮರಾಜ ಒಡೆಯರ್ ಆಡಳಿತ ನಡೆಸಿದರು. ಗಮನಾರ್ಹ ಅಂಶವೇನೆಂದರೆ, ಯದುರಾಯರ ಬಹುತೇಕ ಉತ್ತರಾಧಿಕಾರಿಗಳು ಸ್ವತಂತ್ರವಾಗಿರದೇ ದಕ್ಷಿಣ ಭಾರತದಲ್ಲಿ ಪ್ರಬಲ ಸಾಮ್ರಾಜ್ಯವಾಗಿದ್ದ ವಿಜಯ ನಗರದ ಸಾಮಂತರಾಗಿ ಆಡಳಿತ ನಡೆಸಿದ್ದರು.

**[B.] ಸ್ವತಂತ್ರ ಮೈಸೂರು ಸಂಸ್ಥಾನದ ಆಡಳಿತ:** 1553 ರಿಂದ 1572 ರವರೆಗೆ ಆಡಳಿತ ನಡೆಸಿದ ಎರಡನೆಯ ತಿಮ್ಮರಾಜ ಒಡೆಯರ್ ಮೈಸೂರನ್ನು ವಿಸ್ತರಿಸಿದರು. 1565 ರಲ್ಲಿ ವಿಜಯ ನಗರ ಸಾಮ್ರಾಜ್ಯದ ಪತನವಾದದ್ದು ತಿಮ್ಮರಾಜ ಒಡೆಯರ್‌ರ ಈ ಸಾಧನೆಗೆ ಕಾರಣವಾಗಿತ್ತು. 1572 ರಿಂದ 1576 ರವರೆಗೆ ನಾಲ್ಕನೇ ಬೋಳಚಾಮರಾಜ ಒಡೆಯರ್ ಆಡಳಿತ ನಡೆಸಿದರು. ಐದನೇ ಬೆಟ್ಟದ ಚಾಮರಾಜ ಒಡೆಯರ್ 1576 ರಿಂದ 1578 ರವರೆಗೆ ಕೇವಲ ಎರಡು ವರ್ಷಗಳ ಕಾಲ ಆಡಳಿತ ನಡೆಸಿದರಲ್ಲದೇ ವೈರಾಗ್ಯ ತಾಳಿ ಆಡಳಿತವನ್ನು ತನ್ನ ಸಹೋದರರಿಗೆ ವಹಿಸಿಕೊಟ್ಟರು.

ಈ ವೇಳೆಯಲ್ಲಿ ಆಡಳಿತ ವಹಿಸಿಕೊಂಡ ಒಂದನೇ ರಾಜ ಒಡೆಯರ್ 1578 ರಿಂದ 1617 ರವರೆಗೆ ಆಡಳಿತ ನಡೆಸಿದರು. ಇವರ ಕಾಲದಲ್ಲಿ ಅಂದರೆ 1610 ರಲ್ಲಿ ರಾಜಧಾನಿಯನ್ನು ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ವರ್ಗಾಯಿಸಲಾಯಿತಲ್ಲದೇ ದಸರಾ ಆಚರಣೆಯೂ ಅಸ್ತಿತ್ವಕ್ಕೆ ಬಂದಿತು. 1617 ರಿಂದ 1637 ರವರೆಗೆ ಆರನೇ ಚಾಮರಾಜ ಒಡೆಯರ್ ಆಡಳಿತ ನಡೆಸಿದ್ದು ಇವರ ಕಾಲದಲ್ಲಿ ಮೈಸೂರು ರಾಜ್ಯವು ಮತ್ತಷ್ಟು ವಿಸ್ತಾರಗೊಂಡಿತು. 1637 ರಲ್ಲಿ ಪಟ್ಟಕ್ಕೆ ಬಂದ ಇಮ್ಮಡಿ ರಾಜ ಒಡೆಯರ್ ವೀರರಾಗಿದ್ದರಲ್ಲದೆ ಒಂದೇ ವರ್ಷದಲ್ಲಿ ಮಲೆವರಗಂಡ, ಸಂಗೀತಲೋಲ, ವೀರ ಶೂರ, ಸಾಹಿತ್ಯ ರತ್ನಾಕರ, ಅಭಯ ಪ್ರತಾಪಾಧೀಶ್ವರ ಮುಂತಾದ ಬಿರುದು ಪಡೆದರು. 1638 ರಿಂದ 1659 ರವರೆಗೆ ರಣಧೀರ ಕಂಠೀರವ ನರಸರಾಜ ಒಡೆಯರ್ ಅಧಿಕಾರಕ್ಕೆ ಬಂದು

ಸುಮಾರು 20 ವರ್ಷಗಳವರೆಗೆ ಆಡಳಿತ ನಡೆಸಿದರು. ನಂತರದಲ್ಲಿ 1659 ರಿಂದ 1672 ರವರೆಗೆ ಆಡಳಿತ ನಡೆಸಿದ ದೊಡ್ಡ ದೇವರಾಜ ಒಡೆಯರ್ ಪರಾಕ್ರಮಿಯಾಗಿದ್ದು ರಾಜಕುಲತಿಲಕ, ರಾಜಮಾರ್ತಾಂಡ, ರಾಜಾಧಿರಾಜ, ಪರಮೇಶ್ವರ ಮುಂತಾದ ಬಿರುದು ಪಡೆದುಕೊಂಡರು.

1672 ರಿಂದ 1704 ರವರೆಗೆ ರಾಜ್ಯಭಾರ ಮಾಡಿದ ಚಿಕ್ಕದೇವರಾಜ ಒಡೆಯರ ಮೈಸೂರು ಸಂಸ್ಥಾನದ ಮೊದಲ ಪ್ರಬಲ ಆಡಳಿತಗಾರ. ರಾಜ್ಯಭಾರ ವಹಿಸಿಕೊಂಡ ಐದು ದಿನದಲ್ಲಿ ದಂಡೆತ್ತಿ ಬಂದ ಮಧುರೆಯ ಚೊಕ್ಕನಾಯಕನೆಂಬ ಪಾಳೇಗಾರನನ್ನು ಎದುರಿಸಿ ಜಯಶಾಲಿಯಾದನಲ್ಲದೇ ಸತ್ಯಮಂಗಲ ಮತ್ತು ಧರ್ಮಪುರಂ ಎಂಬ ಎರಡು ಚಿಕ್ಕ ರಾಜ್ಯವನ್ನು ಆಕ್ರಮಿಸಿದನು. ಚಿಕ್ಕದೇವರಾಜನ ಜನಮುಖಿ ಆಡಳಿತಾತ್ಮಕ ಸಾಧನೆಗಳು ಕೆಳಗಿನಂತಿವೆ.

1. ರಾಜಧಾನಿಯಲ್ಲಿ ಹದಿನೆಂಟು ಶಾಖೆಗಳುಳ್ಳ ಮುಖ್ಯ ಆಡಳಿತ ಕಚೇರಿಯನ್ನು ಸ್ಥಾಪಿಸಿದ. ಇದೇ 'ಅಠಾರಾ ಕಚೇರಿ'.
2. ಜನರು ಮೋಸ ಹೋಗದಂತೆ ಅಳತೆ ಮತ್ತು ತೂಕಗಳನ್ನು ಕುರಿತು ನಿಯಮಗಳನ್ನು ರೂಪಿಸಿದ.
3. ಆಡಳಿತದಲ್ಲಿ ಲಂಚಗುಳಿತನವನ್ನು ತಡೆಯಲು ಕ್ರಮಗಳನ್ನು ಕೈಗೊಂಡ.
4. ಮೊಗಲರಿಗೆ ಮೂರು ಲಕ್ಷ ವರಹಗಳನ್ನು ನೀಡುವ ಮೂಲಕ ಬೆಂಗಳೂರನ್ನು ಗುತ್ತಿಗೆ ಪಡೆದಿದ್ದನು.
5. ಶ್ರೀರಂಗಪಟ್ಟಣದ ಪಶ್ಚಿಮದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿ ಕೃಷಿಗೆ ನೀರು ಒದಗಿಸಿದ.
6. ಆಡಳಿತದಲ್ಲಿ ಮಿತವ್ಯಯ ಸಾಧಿಸಿ ಭಾರಿ ನಿಧಿಯನ್ನು ಕೂಡಿಟ್ಟು, ನವಕೋಟಿ ನಾರಾಯಣ ಎಂಬ ಬಿರುದನ್ನು ಪಡೆದ.
7. ಸರ್ಕಾರದ ಕಾಗದಪತ್ರಗಳ ವಿತರಣೆಗೆ ಅಂಚೆ ವ್ಯವಸ್ಥೆಯನ್ನು ಸ್ಥಾಪಿಸಿದ.

[C.] **ಸಂಧಾನದ ಮೂಲಕ ಆಡಳಿತ:** ಚಿಕ್ಕದೇವರಾಜ ಒಡೆಯರ್ ಪುತ್ರರಾದ ಕಂಠೀರವ ಮಹಾರಾಜ ಒಡೆಯರ್ 1704 ರಿಂದ 1713 ರವರೆಗೆ ಆಡಳಿತ ನಡೆಸಿದನು. ಈತನ ಕಾಲದಲ್ಲಿ ಔರಂಗಜೇಬನ ಆಡಳಿತದಲ್ಲಿದ್ದ ದಕ್ಷಿಣ ಭಾರತದ ಗೌರ್ನರ್ ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದಿದ್ದ. ಈ ಸಂದರ್ಭದಲ್ಲಿ ಕಂಠೀರವ ಮಹಾರಾಜ ಒಡೆಯರ್ ಒಂದೂವರೆ ಕೋಟಿ ರೂಗಳ ಕಪ್ಪಕಾಣಿಕೆ ಸಲ್ಲಿಸಿ ಸಂಧಾನ ಮಾಡಿಕೊಂಡರು. ಇವರ ಪುತ್ರ ದೊಡ್ಡ ಕೃಷ್ಣರಾಜ ಒಡೆಯರ್ ಕೇವಲ ಹನ್ನೆರಡು ವರ್ಷದವನಿದ್ದಾಗ ಪಟ್ಟಕ್ಕೇರಿ 1714 ರಿಂದ 1732 ರವರೆಗೆ ಆಡಳಿತ ನಡೆಸಿದನು. ಇವರ ಕಾಲದಲ್ಲಿ ನಿಜಾಂ, ಆರ್ಕಾಟ್



ನವಾಬ್, ಸಿರಾ, ಕಡಪ, ಕರ್ನೂಲ್, ಸವಾನೂರ್ ಮತ್ತು ಇಕ್ಕೇರಿ ರಾಜರು ಒಟ್ಟಾಗಿ ಯುದ್ಧಕ್ಕೆ ಬಂದಿದ್ದರಿಂದ ಒಂದು ಕೋಟಿ ಕಾಣಿಕೆ ನೀಡಿ ಸಂಧಾನ ಮಾಡಿಕೊಳ್ಳಲಾಯಿತು.

[D.] **ಅನ್ಯರ ಅಧೀನದಲ್ಲಿ ಆಡಳಿತ:** ದೊಡ್ಡ ಕೃಷ್ಣರಾಜ ಒಡೆಯರ್ ಮಕ್ಕಳಿಲ್ಲದ ಕಾರಣ ಚಾಮರಾಜ ಒಡೆಯರ್ ಅವರನ್ನು ದತ್ತು ತೆಗೆದುಕೊಂಡರು. ಚಾಮರಾಜ ಒಡೆಯರ್ 1732 ರಿಂದ 1734 ರವರೆಗೆ ಮಾತ್ರವೇ ರಾಜ್ಯವಾಳಿದರು. ಅವರ ಬಳಿಕ ಎರಡನೇ ಇಮ್ಮಡಿ ಕೃಷ್ಣರಾಜ ಒಡೆಯರ್ ಪಟ್ಟಕ್ಕೆ ಬಂದು 1734 ರಿಂದ 1766 ರವರೆಗೆ ರಾಜ್ಯಭಾರ ನಡೆಸಿದರು. ಇವರ ಕಾಲದಲ್ಲಿ ಶತ್ರುಗಳ ಸೈನ್ಯ ಆಗಾಗ್ಗೆ ಯುದ್ಧ ಸಾರುತ್ತಿದ್ದುದನ್ನು ಗಮನಿಸಿ ಫ್ರೆಂಚರ ಸಹಾಯ ಪಡೆದು ಮೈಸೂರಿನ ಗಡಿಯನ್ನು ಭದ್ರಪಡಿಸಿಕೊಳ್ಳಲಾಯಿತು. ಇದರೊಡನೆ ನಿರಂತರ ಮರಾಠಾ ಪೇಶ್ವೆಗಳ ಉಪಟಳ ಹಾಗೂ ದಳವಾಯಿಗಳ ಕಿರುಕುಳದಿಂದಾಗಿ ಮೈಸೂರು ಸಂಸ್ಥಾನ ನವಾಬ್ ಹೈದರಾಲಿಯ ನೆರವನ್ನು ಪಡೆಯಿತಲ್ಲದೇ ಆತನ ಸಲಹೆಯಂತೆ ಚಲುವಾಜಮ್ಮಣ್ಣಿಯವರು ನಂಜರಾಜ ಒಡೆಯರ್‌ಗೆ ಪಟ್ಟ ಕಟ್ಟಿದರು.

1766 ರಿಂದ 1770 ರವರೆಗೆ ರಾಜಭಾರ ನಡೆಸಿದ ನಂಜರಾಜ ಒಡೆಯರ್ ಕಾಲಾವಧಿಯಲ್ಲಿ ಹೈದರಾಲಿಯು ಮೈಸೂರಿನ ಆಡಳಿತದಲ್ಲಿ ಪ್ರಭಾವ ಬೆಳೆಸಿಕೊಂಡನು. ಸೈನಿಕ ಮತ್ತು ಆರ್ಥಿಕ ಶಕ್ತಿಯನ್ನು ಬೆಳೆಸಿಕೊಂಡ ಹೈದರಾಲಿಯು ಮೈಸೂರನ್ನು ವಿಸ್ತರಿಸುವ ಮೂಲಕ ಅರಸರನ್ನು ತನ್ನ ಅಧೀನಕ್ಕೊಳಪಡಿಸಿದನು. ಜೊತೆಗೆ ಬ್ರಿಟಿಷರೊಡನೆ ಆಂಗ್ಲೊ ಮೈಸೂರು ಯುದ್ಧಗಳಿಗೆ ಹೈದರಾಲಿ ಕಾರಣನಾದನು. ಈ ಮಧ್ಯೆ 1770 ರಿಂದ 1776 ರವರೆಗೆ ಎಂಟನೇ ಬೆಟ್ಟದ ಚಾಮರಾಜ ಒಡೆಯರ್ ಆಡಳಿತ ನಡೆಸಿದರಾದರೂ ಹೈದರಾಲಿಯೇ ಸರ್ವಾಧಿಕಾರಿಯಾಗಿದ್ದನು. 1776 ರಿಂದ 1796 ರವರೆಗೆ ಒಂಬತ್ತನೇ ಚಾಮರಾಜ ಒಡೆಯರ್ ಆಡಳಿತ ನಡೆಸಿದರು. ಇವರ ಕಾಲದಲ್ಲಿ ಬಹಳಷ್ಟು ಐತಿಹಾಸಿಕ ಘಟನೆಗಳು ನಡೆದವು. ಎರಡನೇ ಆಂಗ್ಲೊ ಮೈಸೂರು ಯುದ್ಧದಲ್ಲಿ ಹೈದರಾಲಿ ಮರಣ ಹೊಂದಿ ಆತನ ಮಗನಾದ ಟಿಪ್ಪು ಸುಲ್ತಾನ್ ರಾಜ ಕುಟುಂಬವನ್ನು ಅರಮನೆಯಿಂದ ಸ್ಥಳಾಂತರಿಸಿ ವಾಸ್ತವದಲ್ಲಿ ಅಧಿಕಾರ ಚಲಾಯಿಸಿದನು. ಆಂಗ್ಲರೊಡನೆ ನಡೆದ ನಾಲ್ಕನೇ ಆಂಗ್ಲೊ ಮೈಸೂರು ಯುದ್ಧದಲ್ಲಿ ಟಿಪ್ಪು ಮೃತಪಟ್ಟನು. ಟಿಪ್ಪುವಿನ ಮರಣಾ ನಂತರ ಮೂರನೇ ಮುಮ್ಮಡಿ ಕೃಷ್ಣರಾಜ ಒಡೆಯರ್ 1799 ರಿಂದ 1863 ರವರೆಗೆ ಆಡಳಿತ ನಡೆಸಿದರು. ಇವರ ಕಾಲದಲ್ಲಿ ಮೈಸೂರು ಸಂಸ್ಥಾನವನ್ನು ಬ್ರಿಟಿಷರ ಸಹಾಯಕ ಸೈನ್ಯ ಪದ್ಧತಿಗೆ ಒಳಪಡಿಸಲಾಯಿತು.

[E.] **ಬ್ರಿಟಿಷ್ ಕಮೀಷನರುಗಳ ಆಡಳಿತ:** ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲಾವಧಿಯಲ್ಲಿ ದಿವಾನ್ ಪೂರ್ಣಯ್ಯನವರು ಉತ್ತಮ ಆಡಳಿತ ನಡೆಸಿ ಮೈಸೂರು ಸಂಸ್ಥಾನದಲ್ಲಿ ನಾಗರಿಕ ಮತ್ತು ಸೈನಿಕ ಸುವ್ಯವಸ್ಥೆ ಮೂಡಿಸಿದರು. ಇದೇ ಅವಧಿಯಲ್ಲಿ ಮೈಸೂರು ಸಂಸ್ಥಾನದ ರಾಜಧಾನಿಯನ್ನು ಆಡಳಿತಾತ್ಮಕ ಅನುಕೂಲಕ್ಕಾಗಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗಾಯಿಸಲಾಯಿತು. ಸಂಸ್ಥಾನವನ್ನು ಆರು ವಿಭಾಗಗಳಾಗಿ ವಿಂಗಡಿಸಿ ಫೌಜುದಾರ ಎಂಬ ಅಧಿಕಾರಿಯನ್ನು ನೇಮಿಸಲಾಗಿತ್ತು. ಆದರೆ,

ನಗರ ಧಂಗೆ ಉಂಟಾಗಿ ಅಶಾಂತಿ ತಲೆದೋರಿತಲ್ಲದೇ ಭೀಕರ ಬರಗಾಲದಿಂದ ಖಜಾನೆ ಬರಿದಾಯಿತು. ಈ ಕಾರಣಕ್ಕೆ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್ ಆಡಳಿತ ಯಂತ್ರ ಕುಸಿದ ಕಾರಣವೊಡ್ಡಿ ಮೈಸೂರು ಸಂಸ್ಥಾನವನ್ನು 1831 ರಲ್ಲಿ ಬ್ರಿಟಿಷ್ ಕಮೀಶನರುಗಳ ಆಡಳಿತಕ್ಕೊಳಪಡಿಸಿದರು. ಆರಂಭದಲ್ಲಿ ಕಮೀಶನರುಗಳ ಮಂಡಳಿ ರಚಿಸಲಾಗಿದ್ದರೂ 1832 ರಿಂದ ಒಬ್ಬನೇ ಕಮೀಶನರ ನೇಮಿಸಲಾಯಿತು. ಈ ಕಾಲಾವಧಿಯಲ್ಲಿ ಮಾರ್ಕ್ ಕಬ್ಬನ್ ಮತ್ತು ಲೂಯಿ ಬೆಂತಾಮ್ ಬೋರಿಂಗ್ ಮೈಸೂರನ್ನು ಆಳಿದ್ದು ಅವರ ಆಡಳಿತಾವಧಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮೈಸೂರು ಸಂಸ್ಥಾನವು ಪ್ರಗತಿಯನ್ನು ಕಾಣುವಂತಾಯಿತು. ಈ ಮಧ್ಯೆ, ಮೈಸೂರಿನ ಆಡಳಿತವನ್ನು ಒಡೆಯರ್ ಮನೆತನಕ್ಕೆ ಬಿಟ್ಟು ಕೊಡುವಂತೆ ಮುಮ್ಮಡಿ ಕೃಷ್ಣರಾಜ ಕೇಳಿಕೊಂಡರೂ ಪಡೆಯಲು ವಿಫಲನಾಗಿ ನಿಧನ ಹೊಂದಿದರು. 1863 ರಿಂದ 1894 ರವರೆಗೆ ರಾಜ್ಯವಾಳಿದ ಚಾಮರಾಜೇಂದ್ರ ಒಡೆಯರ ಮನವಿಯಂತೆ ಬ್ರಿಟಿಷರು ಕಮೀಶನರುಗಳ ಆಡಳಿತವನ್ನು 1881 ರಲ್ಲಿ ಕೈಬಿಟ್ಟರು.

[F.] **ಮಾದರಿ ಮೈಸೂರು ಆಡಳಿತ:** 1881 ರಲ್ಲಿ ಮೈಸೂರು ಸಂಸ್ಥಾನದ ಅಧಿಕಾರವನ್ನು ಅಂದಿನ ಅರಸನಾಗಿದ್ದ ಚಾಮರಾಜೇಂದ್ರ ಒಡೆಯರ್‌ಗೆ ಮರಳಿಸಿದ ಬ್ರಿಟಿಷರು ಕೆಳಗಿನ ಶರತ್ತುಗಳನ್ನು ಹಾಕಿದರು.

1. ಒಡೆಯರ್ ಅರಸರು ಮೈಸೂರು ಸಂಸ್ಥಾನದಲ್ಲಿಯೇ ನೆಲೆಸಿರುವ ಬ್ರಿಟಿಷ್ ರೆಸಿಡೆಂಟ್ ಅಥವಾ ಗವರ್ನರ್ ಜೊತೆ ಸಮಾಲೋಚಿಸುವ ಮೂಲಕ ಆಡಳಿತ ನಡೆಸಬೇಕು.
2. ಒಡೆಯರ್ ಅರಸರು ಬ್ರಿಟಿಷರಿಗೆ ಸದಾ ವಿಧೇಯವಾಗಿದ್ದು ಯಾವುದೇ ವಿದೇಶಿಯರನ್ನು ಮೈಸೂರು ಸಂಸ್ಥಾನದ ಆಡಳಿತದ ಸೇವೆಗೆ ನೇಮಿಸಿಕೊಳ್ಳಬಾರದು.
3. ಮೈಸೂರು ಸಂಸ್ಥಾನದ ಬಾಹ್ಯ ಮತ್ತು ಆಂತರಿಕ ರಕ್ಷಣೆ ಬ್ರಿಟಿಷರದಾಗಿದ್ದು ಅದಕ್ಕಾಗಿ ಒಡೆಯರ್ ಅರಸರು ವಾರ್ಷಿಕ ಮೂವತ್ತು ಲಕ್ಷ ಹಣ ನೀಡಬೇಕು.
4. ರಸ್ತೆ, ರೈಲ್ವೆ, ದೂರವಾಣಿ ಅಥವಾ ಕಟ್ಟಡಗಳಿಗೆ ಭೂಮಿ ಅಗತ್ಯವೆನಿಸಿದರೆ ಅರಸರು ಅದನ್ನು ಉಚಿತವಾಗಿ ಬ್ರಿಟಿಷರಿಗೆ ಒದಗಿಸುವುದು.
5. ಒಡೆಯರ್ ಅರಸರು ಇತರ ರಾಜ್ಯಗಳ ಅರಸರೊಡನೆ ಸಂಬಂಧವನ್ನು ಹೊಂದುವಂತಿಲ್ಲ.

ಪ್ರಜಾಸತ್ತಾತ್ಮಕ ತತ್ವಗಳ ಆಧಾರದಲ್ಲಿ ಆಡಳಿತ ನಡೆಸಲು ಪ್ರಾರಂಭಿಸಿದ ಚಾಮರಾಜೇಂದ್ರ ಒಡೆಯರ್ ಕಾಲದಲ್ಲಿ ಸಿ. ರಂಗಾಚಾರಲು ದಿವಾನರಾಗಿದ್ದರು. ಪ್ರಜಾ ಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಅದರ ಸಲಹೆಯಂತೆ ಜನಪರ ಆಡಳಿತಕ್ಕೆ ರಂಗಾಚಾರಲು ಕಾರಣರಾದರು. ಈ ವೇಳೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅಧಿಕಾರಕ್ಕೆ ಬಂದು 1940 ರಲ್ಲಿ ಕಾಲವಾದರು. ಈ ಕಾಲದಲ್ಲಿ ಸರ್. ಎಂ. ವಿಶ್ವೇಶ್ವರಯ್ಯಾ, ಸರ್. ಮಿರ್ಜಾ ಇಸ್ಮಾಯಿಲ್, ಮಾಧವರಾವ್ ದಿವಾನರಾಗಿ ಮೈಸೂರಿನ ಪ್ರಗತಿಗೆ ಹಲವು ಕಾಣಿಕೆ ನೀಡಿದರು. ಜೊತೆಗೆ



ನಾಲ್ವಡಿ ಕೃಷ್ಣರಾಜರು ಪ್ರತಿನಿಧಿಗಳ ಸಭೆಯನ್ನು ಬಲಗೊಳಿಸಿದರಲ್ಲದೇ ಪ್ರಗತಿಪರ ನಿಯಮಗಳನ್ನು ಸಂಸ್ಥಾನದಲ್ಲಿ ಜಾರಿಗೊಳಿಸಿದರು. ನಾಲ್ವಡಿ ಕೃಷ್ಣರಾಜರ ಕಾಲದಲ್ಲಿ ಸಂಸ್ಥಾನವನ್ನು ಎಂಟು ಜಿಲ್ಲೆಗಳಾಗಿ ವಿಂಗಡಿಸಲಾಗಿದ್ದು ಜಿಲ್ಲಾಧಿಕಾರಿ ಅದರ ಮುಖ್ಯಸ್ಥರಾಗಿದ್ದರು. ಜಿಲ್ಲೆಗಳನ್ನು ಎಂಟರಿಂದ ಹದಿನಾರು ತಾಲ್ಲೂಕುಗಳಾಗಿ ವಿಂಗಡಿಸಿ ಅಮಲುದಾರರನ್ನು ಅವುಗಳ ಮೇಲ್ವಿಚಾರಣೆಗೆ ನೇಮಕ ಮಾಡಲಾಗಿತ್ತು. ಫಲವಾಗಿ ಮೈಸೂರು ಮಾದರಿ ಸಂಸ್ಥಾನವೆನಿಸಿಕೊಂಡಿತು.

[G.] **ಮೈಸೂರು ಸಂಸ್ಥಾನದ ಆಡಳಿತದಂತ್ಯ:** 1919 ರಲ್ಲಿ ಜನಿಸಿದ ಜಯಚಾಮರಾಜೇಂದ್ರ ಒಡೆಯರ್‌ಗೆ 1940 ರಲ್ಲಿ ಪಟ್ಟಾಭಿಷೇಕ ನಡೆಯಿತು. ಇವರು ರಾಜ್ಯಭಾರ ವಹಿಸಿಕೊಂಡ ಏಳು ವರ್ಷಕ್ಕೆ ಅಂದರೆ 1947 ರಲ್ಲಿ ಭಾರತವು ಸ್ವಾತಂತ್ರ್ಯ ಪಡೆಯಿತು. ಈ ವೇಳೆ ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿ ಜರುಗಿ ಮೈಸೂರು ಸಂಸ್ಥಾನವು ಭಾರತ ಒಕ್ಕೂಟದೊಡನೆ ವಿಲೀನಗೊಂಡಿತು. ಫಲವಾಗಿ ಕೆ. ಸಿ. ರೆಡ್ಡಿಯವರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರ ರಚನೆಗೊಳ್ಳುವ ಮೂಲಕ ಮೈಸೂರಿನ ದೇಶೀಯ ಸಂಸ್ಥಾನದ ಆಡಳಿತವು ಅಂತ್ಯಗೊಂಡಿತು. 1950 ರಲ್ಲಿ ಜಾರಿಗೆ ಬಂದ ಸಂವಿಧಾನದಡಿ ರಾಜತ್ವ ಕೊನೆಗೊಂಡು ಅಖಂಡ ಭಾರತದಲ್ಲಿ ಮೈಸೂರಿನ ದೇಶೀಯ ಸಂಸ್ಥಾನವು ಲೀನಗೊಂಡು ಮೈಸೂರು ರಾಜ್ಯವೆನಿಸಿತು. ಗಮನಾರ್ಹ ಅಂಶವೇನೆಂದರೆ, 1950 ರಿಂದ 1956 ರವರೆಗೆ ಮೈಸೂರು ಅರಸು ಮನೆತನದ ಜಯಚಾಮರಾಜೇಂದ್ರ ಒಡೆಯರ್ ಮೈಸೂರು ರಾಜ್ಯದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದರು.

[II.] **ಮೈಸೂರು ರಾಜ್ಯದ ಪುನರ್‌ಸಂಘಟನೆ** [Reorganisation of Mysore State]:

1761 ರಿಂದ 1799 ರ ನಡುವೆ ಮೈಸೂರು ಸಂಸ್ಥಾನವು ಹೈದರಾಲಿ ಮತ್ತು ಟಿಪ್ಪು ಆಡಳಿತಕ್ಕೆ ಒಳಪಟ್ಟಿತ್ತು. ಆ ಕಾಲಾವಧಿಯಲ್ಲಿ ಹೈದರಾಲಿ ಮತ್ತು ಟಿಪ್ಪುವನ್ನು ಮಣಿಸಲು ಬ್ರಿಟಿಷರು ಮರಾಠಾ ಪೇಶ್ವೆಗಳು ಮತ್ತು ಹೈದರಾಬಾದಿನ ನಿಜಾಮರೊಡನೆ ಮೈತ್ರಿಕೂಟ ರಚಿಸಿಕೊಂಡು ನಾಲ್ಕು ಆಂಗ್ಲೊ ಮೈಸೂರು ಯುದ್ಧಗಳನ್ನು ಕೈಗೊಂಡರು. ಈ ಯುದ್ಧಗಳ ಪರಿಣಾಮ ಮೈಸೂರಿನ ಕನ್ನಡ ಭಾಷಿಕರ ಪ್ರದೇಶಗಳು ಮರಾಠರು, ನಿಜಾಮರು ಮತ್ತು ಬ್ರಿಟಿಷರ ನಡುವೆ ಹಂಚಲ್ಪಟ್ಟವು. 19 ನೇ ಶತಮಾನದ ಅಂತ್ಯದಿಂದ ಹಂಚಿ ಹೋಗಿದ್ದ ಕನ್ನಡ ಭಾಷಿಕರ ಪ್ರದೇಶಗಳ ಏಕೀಕರಣಕ್ಕೆ ಪ್ರಯತ್ನಗಳು ಆರಂಭಗೊಂಡವು. ಆದರೆ, ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಕಾಲಾವಧಿಯಲ್ಲಿ ಏಕೀಕರಣ ಕೈಗೂಡಲಿಲ್ಲ. ಅಂತಿಮವಾಗಿ ಭಾರತವು 1947 ರ ಭಾರತದ ಸ್ವಾತಂತ್ರ್ಯ ಕಾಯಿದೆಯಂತೆ ಸ್ವತಂತ್ರಗೊಂಡಿತು. ಈ ಕಾಯಿದೆಯು ಬ್ರಿಟಿಷ್ ಪ್ರಾಂತ್ಯಗಳನ್ನು ಭಾರತ ಮತ್ತು ಪಾಕಿಸ್ತಾನಕ್ಕೆ ವಿಭಜಿಸಿ ದೇಶೀಯ ಸಂಸ್ಥಾನಗಳಿಗೆ ಭಾರತದ ಒಕ್ಕೂಟಕ್ಕೆ ಸೇರುವ, ಪಾಕಿಸ್ತಾನದೊಡನೆ ಸೇರುವ ಅಥವಾ ಸ್ವತಂತ್ರವಾಗಿ ಉಳಿಯುವ ಅವಕಾಶವನ್ನು ಕಲ್ಪಿಸಿತು. ಈ ವೇಳೆಯಲ್ಲಿ

ಅಂದಿನ ಗೃಹ ಮಂತ್ರಿಯಾಗಿದ್ದ ಸರದಾರ್ ಪಟೇಲರು ವಿಲೀನ ಒಪ್ಪಂದದ ನೆರವಿನಿಂದ ದೇಶೀಯ ಸಂಸ್ಥಾನಗಳನ್ನು ಭಾರತದ ಒಕ್ಕೂಟಕ್ಕೆ ಸೇರಿಸಲು ಯಶಸ್ವಿಯಾದರು.

ಬಳಿಕ ಸಂವಿಧಾನ ರಚನಾಕಾರರು ಎ. ಬಿ. ಸಿ. ಡಿ. ವರ್ಗದ ಪ್ರಾಂತ್ಯಗಳಿಗೆ ಅವಕಾಶ ಕಲ್ಪಿಸಿ ಭಾರತದ ಒಕ್ಕೂಟವನ್ನು ರಚಿಸಿದರು. ಫಲವಾಗಿ ಸ್ವಾತಂತ್ರ್ಯ ಪೂರ್ವದಲ್ಲಿನ ಕನ್ನಡಿಗರನ್ನು ಸೇರಿದಂತೆ ಭಾಷಾಧಾರಿತ ಪ್ರಾಂತ್ಯಗಳ ರಚನೆಯನ್ನು ಬಯಸುತ್ತಿದ್ದ ಹಲವು ಭಾಷಿಕರ ಏಕೀಕರಣದ ಕನಸು ನನಸಾಗಲಿಲ್ಲ. ಹೀಗಾಗಿ ಭಾಷಾಧಾರಿತ ಪ್ರಾಂತ್ಯ ಅಥವಾ ರಾಜ್ಯಗಳ ಬೇಡಿಕೆ 1947 ರ ನಂತರದಲ್ಲಿ ಭಾರತದ ಹಲವೆಡೆ ತೀವ್ರಗೊಂಡಿತು. ಹೈದರಾಬಾದ್, ಬಾಂಬೇ, ಮದರಾಸು ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದ ಕನ್ನಡಿಗರು ತಮ್ಮನ್ನು ಮೈಸೂರು ಸಂಸ್ಥಾನದೊಡನೆ ಏಕೀಕರಣಗೊಳಿಸಿ ಕನ್ನಡ ಭಾಷಾಧಾರಿತ ರಾಜ್ಯವನ್ನು ಪುನರ್‌ಸಂಘಟಿಸಲು ಹೋರಾಟ ತೀವ್ರಗೊಳಿಸಿದರು. ವಿವಿಧ ಭಾಷಿಕರ ಭಾಷಾಧಾರಿತ ರಾಜ್ಯಗಳ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರವು ರಾಜ್ಯಗಳ ಪುನರ ಸಂಘಟನೆಗೆ ಮುಂದಾದ ಪರಿಣಾಮ ಮೈಸೂರು ರಾಜ್ಯವೂ ಪುನರ್‌ಸಂಘಟನೆಗೊಂಡಿತು. ಮೈಸೂರು ರಾಜ್ಯದ ಪುನರ್‌ಸಂಘಟನೆಗೆ ಕಾರಣವಾದ ವಿವಿಧ ಬೆಳವಣಿಗೆಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

[A.] **ಧರ್ ಆಯೋಗ:** ಭಾರತದ ಸಂವಿಧಾನ ರಚನಾ ಸಮಿತಿಯು ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿದಂತೆ ಹಲವೆಡೆ ಒತ್ತಡ ಅಧಿಕವಾದಾಗ ವರದಿ ನೀಡಲು ಅಲಹಾಬಾದ್ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಎಸ್. ಕೆ. ಧರ್ ಅಧ್ಯಕ್ಷತೆಯಲ್ಲಿ ಜೂನ 17, 1948 ರಂದು ಆಯೋಗವೊಂದನ್ನು ನೇಮಿಸಿತು. ಈ ಆಯೋಗದಲ್ಲಿ ಕರ್ನಾಟಕದ ಪರವಾಗಿ ಟೇಕೂರು ಸುಬ್ರಹ್ಮಣ್ಯಂ ಮತ್ತು ಆರ್. ಆರ್. ದಿವಾಕರ್ ಸದಸ್ಯರಾಗಿದ್ದರು. ಆಂಧ್ರ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರಗಳಲ್ಲಿ ಯಾವುದನ್ನು ಹೊಸ ಪ್ರಾಂತವನ್ನಾಗಿ ರಚಿಸಬೇಕು ಮತ್ತು ಅದರ ಗಡಿ ಎಲ್ಲಿಯವರೆಗಿರಬೇಕು ಎಂಬುದನ್ನು ಸೂಚಿಸುವ ಜವಾಬ್ದಾರಿ ದರ್ ಆಯೋಗದ್ದಾಗಿತ್ತು. ಇದರೊಡನೆ ಭಾಷಾಧಾರಿತ ಪ್ರಾಂತ ರಚನೆಯಿಂದ ಉಂಟಾಗುವ ಆಡಳಿತಾತ್ಮಕ, ಆರ್ಥಿಕ ಮತ್ತು ಇತರ ಪರಿಣಾಮಗಳೇನು ಎಂಬುದನ್ನು ಆಯೋಗ ಅಧ್ಯಯನ ಮಾಡಿ ವರದಿ ಸಲ್ಲಿಸಬೇಕಾಗಿತ್ತು. ಸೆಪ್ಟೆಂಬರ್ ಹಾಗೂ ಅಕ್ಟೋಬರ ತಿಂಗಳುಗಳಲ್ಲಿ ವಿಶಾಖ ಪಟ್ಟಣ, ಮದರಾಸು, ಮದುರೆ, ಮಂಗಳೂರು, ಕಲ್ಲಿಕೋಟೆ, ಕೊಯಮತ್ತೂರು, ನಾಗಪುರ, ಹುಬ್ಬಳ್ಳಿ, ಪುಣೆ ಮತ್ತು ಮುಂಬಯಿಗಳಲ್ಲಿ ಸಾಕ್ಷಿಗಳನ್ನು ಆಯೋಗವು ಸಂದರ್ಶಿಸಿತಲ್ಲದೇ ಮಾಹಿತಿ ಸಂಗ್ರಹಿಸಿತು. 1000ದಷ್ಟು ಮನವಿಗಳನ್ನು ಸ್ವೀಕರಿಸಿ, ಸುಮಾರು 700 ಸಾಕ್ಷಿಗಳನ್ನು ಪರೀಕ್ಷಿಸಿದ ಆಯೋಗವು ಡಿಸೆಂಬರ್ 10ರಂದು ತನ್ನ ವರದಿಯನ್ನು ಸಲ್ಲಿಸಿತು.

ಈ ವರದಿಯಲ್ಲಿ ಭಾಷಾವಾರು ಪ್ರಾಂತ ರಚನೆಗೆ ವಿಶೇಷವಾಗಿ ಆಂಧ್ರ , ಕರ್ನಾಟಕ ಮತ್ತು ಕೇರಳಗಳಲ್ಲಿರುವ ಭಿನ್ನಾಭಿಪ್ರಾಯಗಳನ್ನು ಪ್ರಸ್ತಾಪಿಸಲಾಗಿತ್ತು. ಜೊತೆಗೆ ಭಿನ್ನಾಭಿಪ್ರಾಯಗಳು ಭಾಷಾವಾರು ಪ್ರಾಂತ ರಚನೆಗೆ ಅಡ್ಡಿಯಾಗಿವೆ ಎಂದು ತಿಳಿಸಿದ



ಆಯೋಗವು ಕರ್ನಾಟಕ ಪ್ರಾಂತ ರಚನೆಯೇ ಹೆಚ್ಚು ಸಂಕೀರ್ಣವೆಂದು ಅಭಿಪ್ರಾಯಪಟ್ಟಿತ್ತು. ಇದರೊಡನೆ ಆಯೋಗವು ಭಾರತವು ಗಂಡಾಂತರ ಪರಿಸ್ಥಿತಿಯಲ್ಲಿದ್ದು ಭಾಷಾವಾರು ಪ್ರಾಂತ ರಚನೆ ಸಮರ್ಥನೀಯವಲ್ಲ ಎಂದು ತಿಳಿಸಿತು.

[B.] **ತ್ರಿಸದಸ್ಯ ಜೆ. ವಿ. ಪಿ. ಸಮಿತಿ:** ಜೈಪುರದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ 55ನೆಯ ಅಧಿವೇಶನವು ಧರ್ ಆಯೋಗದ ವರದಿಯನ್ನು ಪರಿಶೀಲಿಸಿ, ಮೂರು ತಿಂಗಳ ಒಳಗೆ ಭಾಷಾವಾರು ಪ್ರಾಂತ ರಚನೆ ಕುರಿತು ವರದಿ ಸಲ್ಲಿಸಲು ಮೂವರು ಸದಸ್ಯರ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯಲ್ಲಿ ಸರ್ದಾರ್ ವಲ್ಲಭ ಭಾಯಿ ಪಟೇಲ್, ಪಟ್ಟಾಭಿ ಸೀತಾರಾಮಯ್ಯ ಮತ್ತು ಜವಾಹರಲಾಲ್ ನೆಹರೂ ಸದಸ್ಯರಾಗಿದ್ದರು. ಈ ತ್ರಿಸದಸ್ಯ (ಜೆ.ವಿ.ಪಿ.)ಸಮಿತಿಯ ವರದಿಯು ಏಪ್ರಿಲ್ 1, 1949 ರಂದು ಪ್ರಕಟವಾಯಿತು. ಧರ್ ಆಯೋಗದ ವರದಿಯನ್ನು ಜೆ.ವಿ.ಪಿ.ಸಮಿತಿಯೂ ಎತ್ತಿ ಹಿಡಿಯಿತಲ್ಲದೇ ಕೇರಳ ಮತ್ತು ಕರ್ನಾಟಕ ಪ್ರಾಂತ ರಚನೆಯು ಸಮಸ್ಯಾತ್ಮಕವಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ರಾಷ್ಟ್ರ ನಿರ್ಮಾಣವಾಗುತ್ತಿರುವ ಸಂದರ್ಭದಲ್ಲಿ ಭಾಷಾವಾರು ಪ್ರಾಂತ ರಚನೆಯು ರಾಷ್ಟ್ರದ ಐಕ್ಯತೆ ಹಾಗೂ ಆರ್ಥಿಕ ಪ್ರಗತಿಗೆ ಧಕ್ಕೆ ತರಬಹುದು ಎಂಬ ಸಂಶಯವನ್ನು ಜೆ.ವಿ.ಪಿ ಸಮಿತಿ ವ್ಯಕ್ತಪಡಿಸಿತು. ಈ ಸಮಿತಿಯ ವರದಿ ಪ್ರಕಟವಾದ ಬೆನ್ನಲ್ಲೇ ಕನ್ನಡಿಗರು ಸಭೆಗಳ ಆಯೋಜನೆ, ಗೊತ್ತುವಳಿ ಸ್ವೀಕಾರ, ಮನವೊಲಿಸುವಿಕೆ, ಮನವಿಗಳ ಮೂಲಕ ಒತ್ತಡ ತಂತ್ರವನ್ನು ಅನುಸರಿಸಿದರು.

[C.] **ಆಂಧ್ರ ಪ್ರದೇಶದ ರಚನೆಗಾಗಿ ಪೊಟ್ಟಿ ಶ್ರೀರಾಮುಲು ಉಪವಾಸ:** ಈ ಮಧ್ಯೆ ಆಂಧ್ರ ಪ್ರಾಂತ ರಚನೆಗೆ ಒತ್ತಾಯ ತೀವ್ರವಾಗಿ 15-8-1951ರಿಂದ ಸ್ವಾಮಿ ಸೀತಾರಾಮರು ತಿರುಪತಿಯಲ್ಲಿ ಆಮರಣಾಂತ ಉಪವಾಸ ಕೈಗೊಂಡರಲ್ಲದೇ ಕೇಂದ್ರ ಮತ್ತು ಆಂಧ್ರ ಶಾಸನ ಸಭೆಗಳಲ್ಲಿ ಆಂಧ್ರ ಪ್ರಾಂತ ರಚನೆಯ ವಿಷಯ ಪ್ರಸ್ತಾಪಗೊಂಡಿತು. ಆದರೆ, ರಾಜ್ಯ ರಚನೆಯ ಯಾವುದೇ ನಿರ್ಣಯವನ್ನು ಕೇಂದ್ರ ಸರ್ಕಾರ ಕೈಗೊಳ್ಳಲಿಲ್ಲ. 1952 ರ ಸಾರ್ವತ್ರಿಕ ಚುನಾವಣೆಗಳು ಮುಗಿದ ನಂತರ ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಭಾಷಾವಾರು ಪ್ರಾಂತಗಳ ರಚನೆಗೆ ಗೊತ್ತುವಳಿಯನ್ನು ಮಂಡಿಸಿದವಾದರೂ ಗೊತ್ತುವಳಿಯನ್ನು ಆಡಳಿತಾರೂಢ ಕಾಂಗ್ರೆಸ್ ವಿರೋಧಿಸಿತು. ಈ ವೇಳೆಯಲ್ಲಿ ಆಂಧ್ರದ ಪೊಟ್ಟಿ ಶ್ರೀರಾಮುಲು 58 ದಿನಗಳ ಉಪವಾಸದ ನಂತರ ಡಿಸೆಂಬರ್ 15, 1952ರಂದು ನಿಧನರಾದರು. ಕೇಂದ್ರ ಸರ್ಕಾರವು ಪರಿಸ್ಥಿತಿಯ ಗಂಭೀರತೆಯನ್ನು ಗಮನಿಸಿ ಡಿಸೆಂಬರ್ 19, 1952ರಂದು ಲೋಕಸಭೆಯಲ್ಲಿ ಆಂಧ್ರ ಪ್ರಾಂತ ರಚನೆಗೆ ವರದಿ ನೀಡಲು ಕೆ. ಎನ್. ವಾಂಛೂ ಸಮಿತಿಯನ್ನು ನೇಮಿಸಿತು.

[D.] **ವಾಂಚೂ ಸಮಿತಿ:** ನ್ಯಾಯಾಧೀಶರಾಗಿದ್ದ ಕೆ. ಎನ್. ವಾಂಛೂ ನೇತೃತ್ವದಲ್ಲಿ ಕೇಂದ್ರ ಸರ್ಕಾರವು ಜನೇವರಿ 5, 1953 ರಂದು ಆಂಧ್ರ ಪ್ರಾಂತದ ರಚನೆ ಕುರಿತಂತೆ ನೇಮಿಸಿತು. ಕೇವಲ 26 ದಿನಗಳೊಳಗೆ ವಾಂಚೂ ಆಯೋಗವು ವರದಿಯನ್ನು ಸಲ್ಲಿಸಬೇಕಾಗಿತ್ತು. ಅನೇಕ ಸಂಘ-ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಂದ

ಮನವಿಗಳನ್ನು ಸ್ವೀಕರಿಸಿದ ವಾಂಚೂ ಸಮಿತಿಯು ವಾದ ಹಾಗೂ ಪ್ರತಿ ವಾದಗಳನ್ನು ಆಲಿಸಿ, ಫೇಬ್ರವರಿ 7, 1953 ರಂದು ತನ್ನ ವರದಿಯನ್ನು ಸಲ್ಲಿಸಿತು. ಹೈದರಾಬಾದ್ ಮತ್ತು ಮದ್ರಾಸ ರಾಜ್ಯಗಳಿಗೆ ಸೇರಿರುವ ಮತ್ತು ತೆಲುಗನ್ನೇ ಮಾತೃಭಾಷೆಯಾಗಿಸಿಕೊಂಡಿರುವ ಹನ್ನೊಂದು ಜಿಲ್ಲೆಗಳನ್ನು ಮಾತ್ರ ಸೇರಿಸಿ ಆಂಧ್ರ ಪ್ರಾಂತ ರಚಿಸಲು ಆಯೋಗವು ಶಿಫಾರಸು ಮಾಡಿತು. ಬಳ್ಳಾರಿ ಜಿಲ್ಲೆಯು ಆಂಧ್ರದೊಡನೆ ಸೇರಲು ಹಲವು ತೊಂದರೆಗಳಿದ್ದುದನ್ನು ವಾಂಚೂ ಆಯೋಗವು ತಿಳಿಸಿತು.

ವಾಂಛೂ ಸಮಿತಿಯ ನೇಮಕವಾದಾಗಲೇ ಕರ್ನಾಟಕ ಪ್ರಾಂತ ರಚನೆ ವಿಳಂಬವಾಗುತ್ತಿದೆ ಎಂದು ಕರ್ನಾಟಕ ಏಕೀಕರಣವಾದಿಗಳಿಗೆ ಅತೃಪ್ತಿ ಮತ್ತು ಅಸಂತೋಷಗಳಾಗಿದ್ದವು. ಇದರಿಂದ ಬೇಸತ್ತ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತು ಕೇಂದ್ರ ಸರ್ಕಾರದ ಕ್ರಮವನ್ನು ಪ್ರತಿಭಟಿಸಿತು. ಸಮಾಜವಾದಿ ಮತ್ತು ಕಮ್ಯುನಿಸ್ಟ್ ಪಕ್ಷಗಳು ಕನ್ನಡಿಗರ ಏಕೀಕರಣ ಭೇಡಿಕೆಯನ್ನು ಪರಿಗಣಿಸುವಂತೆ ಪ್ರತಿಭಟಿಸಿದವು. ಈ ಬೇಡಿಕೆಗೆ ಹಿರಿಯ ರಾಜಕೀಯ ನಾಯಕರು ಮಾತ್ರವಲ್ಲದೆ ಕನ್ನಡ ಜನತೆಯ ಬೆಂಬಲವೂ ದೊರೆಯಿತು.

[E.] **ಅದರಗುಂಚಿ ಶಂಕರಗೌಡ ಪಾಟೀಲರ ಉಪವಾಸ ಸತ್ಯಾಗ್ರಹ:** ಹುಬ್ಬಳ್ಳಿಯ ಸಮೀಪದ ಸಣ್ಣ ಹಳ್ಳಿಯೇ ಅದರಗುಂಚಿ. ಇಲ್ಲಿನ ಶಂಕರಗೌಡ ಪಾಟೀಲರು ವಾಂಚೂ ಸಮಿತಿಯ ರಚನೆಯಿಂದ ಅಸಮಧಾನಗೊಂಡು ಮಾರ್ಚ್ 28, 1953 ರಂದು ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡರು. ಎಸ್.ನಿಜಲಿಂಗಪ್ಪನವರೂ ಸೇರಿದಂತೆ ಹಲವಾರು ಕರ್ನಾಟಕ ಏಕೀಕರಣದ ನಾಯಕರು ಅದರಗುಂಚಿಗೆ ತೆರಳಿ ಶಂಕರಗೌಡ ಪಾಟೀಲರನ್ನು ಬೆಂಬಲಿಸಿದರು. ಶಂಕರಗೌಡ ಪಾಟೀಲರ ಉಪವಾಸ ಸತ್ಯಾಗ್ರಹದ ವಿಷಯವನ್ನು ಲೋಕಸಭೆಯಲ್ಲಿ ಪ್ರಸ್ತಾಪಿಸಿದ ಅಳವಂಡಿ ಶಿವಮೂರ್ತಿಸ್ವಾಮಿಯವರು ಶೀಘ್ರವೇ ಕರ್ನಾಟಕ ಪ್ರಾಂತ ರಚನೆ ಆಗದಿದ್ದರೆ ಪರಿಸ್ಥಿತಿ ಉಲ್ಬಣಗೊಳ್ಳುತ್ತದೆ ಎಂಬ ಸೂಚನೆಯನ್ನು ಕೇಂದ್ರ ಸರ್ಕಾರಕ್ಕೆ ನೀಡಿದರು.

[F.] **ಹುಬ್ಬಳ್ಳಿ ಗಲಭೆ:** ಏಪ್ರಿಲ್ 19, 1953 ರಂದು ಹುಬ್ಬಳ್ಳಿಯ ಪುರಸಭಾ ಭವನದಲ್ಲಿ ಕೆ.ಪಿ.ಸಿ.ಸಿ.ಯ ವಿಶೇಷ ಕಾರ್ಯಕಾರೀ ಸಮಿತಿ ಸಭೆ ಆಯೋಜನೆಗೊಂಡಿತ್ತು. ಕನ್ನಡಿಗರ ಏಕೀಕೃತ ರಾಜ್ಯ ರಚನೆಯಾಗದಿದ್ದರೆ ರಾಜೀನಾಮೆ ನೀಡುತ್ತೇವೆ ಎಂದು ಕೇವಲ ಬಾಯಿ ಮಾತಿನಲ್ಲಿ ಹೇಳುತ್ತಾ ಯಾವುದೇ ನಿರ್ಧಾರಕ್ಕೆ ಕಾರಣರಾಗದ ಕಾಂಗ್ರೆಸ್ ನಾಯಕರಿಂದ ರಾಜೀನಾಮೆ ಕೇಳಲು ಜನ ಸಿದ್ಧರಾದರು. . ಪುರಭವನಕ್ಕೆ ಕಾಂಗ್ರೆಸ್ ನಾಯಕರು ಆಗಮಿಸುತ್ತಿದ್ದಂತೆಯೇ ಜನರು ಧಿಕ್ಕಾರ ಹೇಳುತ್ತಾ ಸ್ವಾಗತಿಸುತ್ತಿದ್ದರು. ಸಭೆ ನಡೆಯುತ್ತಿದ್ದ ಸ್ಥಳಕ್ಕೆ ಹೋದ ಕೆಲವರು ಕಾಂಗ್ರೆಸ್ ನಾಯಕರಿಗೆ ಅರಿಶಿನ-ಕುಂಕುಮ ಹಚ್ಚಿ, ಬಳೆ ತೊಡಿಸಿದರು. ಹಳ್ಳಿಕೇರಿ ಗುದ್ಲೆಪ್ಪನವರ ಜೀಪಿಗೆ ಏಕೀಕರಣದ ಬೆಂಬಲಿಗರು ಬೆಂಕಿಗೆ ಆಹುತಿ ಮಾಡಿದರು. ಜನರನ್ನು ನಿಯಂತ್ರಿಸುವುದು ಕಷ್ಟ ಎಂದು ತಿಳಿದ ಪೋಲೀಸರು ಲಾಠೀಛಾರ್ಜ್ ಮಾಡಿದರು. ಅದಕ್ಕೆ ಬೆದರದ ಜನ ಲಾಠಿಗಳಿಗೆ ಎದೆಯೊಡ್ಡಿ ನಿಂತಾಗ ಪೋಲೀಸರು



ಗೋಲೀಬಾರ್ಗ್ ಆದೇಶ ನೀಡಿದರು. ಜನರು ಅದಕ್ಕೂ ಎದೆಯೊಡ್ಡಿ ನಿಂತರು. ಈ ಗಲಭೆಗೆ ಕಾರಣವೆಂದು ಏಕೀಕರಣಕ್ಕಾಗಿ ಹೋರಾಡುತ್ತಿದ್ದ ಅನ್ನದಾನಯ್ಯ ಪುರಾಣಿಕರನ್ನು ಪೋಲಿಸರು ಬಂಧಿಸಿ ವಿಚಾರಣೆಯಿಲ್ಲದೆ 6 ದಿನಗಳವರೆಗೆ ಸೆರೆಮನೆಯಲ್ಲಿಟ್ಟರು. ಈ ಎಲ್ಲ ವಿಷಯಗಳನ್ನು ಸ್ಥಳೀಯ ಪತ್ರಿಕೆಗಳಲ್ಲದೆ ನ್ಯೂಯಾರ್ಕ್ ಟೈಂಸ್ ಪತ್ರಿಕೆಯು ಮುಖ ಪುಟದಲ್ಲೇ ವರದಿ ಮಾಡಿತು. ಹುಬ್ಬಳ್ಳಿಯ ಗಲಭೆಯ ನಂತರ ಕರ್ನಾಟಕದ ಕಾಂಗ್ರೆಸ್ ನಾಯಕರು ಪ್ರಧಾನ ಮಂತ್ರಿ ನೆಹರೂ ಅವರನ್ನು ಏಕೀಕರಣಕ್ಕೆ ಒತ್ತಾಯಿಸತೊಡಗಿದರು.

[G.] **ರಾಜ್ಯ ಪುನರ್ವಿಂಗಡಣಾ ಆಯೋಗದ ರಚನೆ:** ಈ ಮಧ್ಯೆ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ರಚನೆಗೊಂಡು ಕರ್ನಾಟಕದ ಏಕೀಕರಣಕ್ಕೆ ಹೋರಾಟವನ್ನು ತೀವ್ರಗೊಳಿಸಿತು. 1953 ರಲ್ಲಿ ಜರುಗಿದ ಹುಬ್ಬಳ್ಳಿಯ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಅಭ್ಯರ್ಥಿ ಜಯಶಾಲಿಯಾದರು. ಆಗ ಎಸ್. ನಿಜಲಿಂಗಪ್ಪ ನೇತೃತ್ವದ ನಿಯೋಗವು ಕನ್ನಡ ರಾಜ್ಯ ರಚನೆಯ ಅಗತ್ಯವನ್ನು ಪ್ರಧಾನಿ ನೆಹರುರಿಗೆ ಮನವರಿಕೆ ಮಾಡಿಕೊಟ್ಟಿತು. ಆಗ ಲೋಕಸಭೆಯಲ್ಲಿ ನೆಹರು ಕರ್ನಾಟಕ ಸೇರಿದಂತೆ ಭಾರತದ ಇತರ ಭಾಷಾಧಾರಿತ ಹೋರಾಟಗಳ ಬೇಡಿಕೆಯನ್ನು ಪರಿಶೀಲಿಸಿ ವರದಿ ನೀಡಲು ರಾಜ್ಯಗಳ ಪುನರ್‌ವಿಂಗಡಣಾ ಆಯೋಗವನ್ನು ರಚಿಸುವುದಾಗಿ ಹೇಳಿಕೆ ನೀಡಿದರು. ಡಿಸೆಂಬರ್ 29, 1953 ರಂದು ರಾಜ್ಯಗಳ ಪುನರ್‌ವಿಂಗಡಣಾ ಆಯೋಗ ರಚನೆಗೊಂಡಿತು. ಈ ಆಯೋಗದ ಅಧ್ಯಕ್ಷರಾಗಿ ಒರಿಸ್ಸಾದ ರಾಜ್ಯಪಾಲರಾಗಿದ್ದ ಫಜಲ್ ಅಲಿ ಮತ್ತು ಸದಸ್ಯರಾಗಿ ರಾಜ್ಯಸಭಾ ಸದಸ್ಯ ಹೃದಯನಾಥ ಕುಂಜ್ರೂ ಹಾಗೂ ಈಜಿಪ್ಟಿನಲ್ಲಿ ಭಾರತದ ರಾಯಭಾರಿಯಾಗಿದ್ದ ಕೆ. ಎಂ. ಪಣಿಕ್ಕರ್ ನಾಮಕರಣಗೊಂಡಿದ್ದರು. 30-6-1955 ರ ಒಳಗೆ ವರದಿಯನ್ನು ಸಲ್ಲಿಸಲು ಆಯೋಗಕ್ಕೆ ಸೂಚನೆ ನೀಡಲಾಗಿತ್ತು.

ಫೇಬ್ರವರಿ 23, 1954ರಂದು ಆಯೋಗವು ನೀಡಿದ ಪತ್ರಿಕಾ ಪ್ರಕಟಣೆಗೆ ಉತ್ತರವಾಗಿ ಸುಮಾರು 1,52,250 ಮನವಿಗಳು ಸ್ವೀಕೃತಗೊಂಡವು. ಅವುಗಳಲ್ಲಿ ಸುಮಾರು 2000 ಮನವಿಗಳು ವಿಸ್ತೃತವಾಗಿದ್ದವು. ಜೊತೆಗೆ 1954 ರ ಮಾರ್ಚ್ ಆರಂಭದಿಂದ 1954 ರ ಅಂತ್ಯದವರೆಗೂ ಗೌಪ್ಯ ಸಂದರ್ಶನ ಜರುಗಿತು. ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿದ ಆಯೋಗವು ಸುಮಾರು 9000 ವ್ಯಕ್ತಿಗಳನ್ನು ಸಂದರ್ಶಿಸಿತು. ಅಂತಿಮವಾಗಿ ಆಯೋಗವು ತನ್ನ ವರದಿಯನ್ನು ಸೆಪ್ಟಂಬರ್ 30, 1955 ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತು.

[H.] **ರಾಜ್ಯ ಪುನರ್ವಿಂಗಡಣಾ ಆಯೋಗಕ್ಕೆ ಕನ್ನಡಿಗರ ಮನವಿ:** ಆರ್. ಎ. ಜಹಗೀರದಾರ್ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಸಮಿತಿಯು ಕನ್ನಡಿಗರ ಏಕೀಕರಣಕ್ಕಾಗಿ ಅದುವರೆಗೆ ಘಟಿಸಿದ ಎಲ್ಲಾ ಬೆಳವಣಿಗೆ ಮತ್ತು ಅಧ್ಯಯನ ಆಧರಿಸಿ ಸಿದ್ಧಪಡಿಸಿದ ವರದಿಯನ್ನು ಆಯೋಗಕ್ಕೆ ಸಲ್ಲಿಸಿತು. ಈ ವರದಿಯಲ್ಲಿ ಮೈಸೂರು ಸಂಸ್ಥಾನದ ಸಂಪೂರ್ಣ ಪ್ರದೇಶದೊಡನೆ ಮುಂಬಯಿ ಕರ್ನಾಟಕದ ಧಾರವಾಡ, ಉತ್ತರ ಕನ್ನಡ, ಬೆಳಗಾವಿ ಮತ್ತು

ವಿಜಯಪುರ ಜಿಲ್ಲೆಗಳು ಸಂಪೂರ್ಣವಾಗಿ ನವ ಮೈಸೂರು ರಾಜ್ಯಕ್ಕೆ ಸೇರಬೇಕೆಂದು ಪ್ರತಿಪಾದಿಸಲಾಯಿತು. ಜೊತೆಗೆ ಹೈದರಾಬಾದ್ ಪ್ರಾಂತದಲ್ಲಿನ ಬೀದರ್, ಗುಲಬರ್ಗ ಮತ್ತು ರಾಯಚೂರು ಜಿಲ್ಲೆಗಳು ಕನ್ನಡಿಗರಿಂದ ಕೂಡಿರುವ ಕಾರಣಕ್ಕೆ ಮೈಸೂರು ರಾಜ್ಯದೊಡನೆ ಪುನರ್‌ಸಂಘಟನೆಗೊಳ್ಳಬೇಕೆಂದು ವಾದಿಸಲಾಯಿತು. ಅಂತೆಯೇ ಮದ್ರಾಸ್ ಪ್ರಾಂತಕ್ಕೆ ಸೇರಿದ್ದ ದಕ್ಷಿಣ ಕನ್ನಡ, ನೀಲಗಿರಿ, ಕೊಯಿಮತ್ತೂರು, ಸೇಲಂ ಜಿಲ್ಲೆಯ ಭಾಗಗಳು ನೂತನ ಮೈಸೂರಿನ ಭಾಗವಾಗಬೇಕೆಂದು ಪ್ರಸ್ತಾಪಿಸಲಾಗಿತ್ತು. ಮುಂದುವರಿದು, ಆಂಧ್ರ ಪ್ರದೇಶದ ಅನಂತಪುರ ಹಾಗೂ ಕರ್ನೂಲು ಜಿಲ್ಲೆಗಳ ಕೆಲವು ಭಾಗಗಳು ಮತ್ತು ಕೊಡಗು ಸೇರಿಸಿ ಕರ್ನಾಟಕ ರಾಜ್ಯವನ್ನು ನಿರ್ಮಿಸಲು ಒತ್ತಾಯಿಸಲಾಯಿತು.

ಕೆ. ಪಿ. ಸಿ. ಸಿ.ಯು ವಿಸ್ತೃತವಾದ ಮನವಿಯೊಂದನ್ನು ತಯಾರಿಸಿ ಸರ್ವ ಕನ್ನಡಿಗರ ಪರವಾಗಿ ಆಯೋಗಕ್ಕೆ ಮನವಿ ಸಲ್ಲಿಸಿತು. ಅಂತೆಯೇ ದಾವಣಗೆರೆಯ ಅಖಿಲ ಕರ್ನಾಟಕ ಪ್ರತಿನಿಧಿ ಸಮಾವೇಶ, ಗುಡಿಬಂಡೆ ಪುರಸಭೆ, ಹುಬ್ಬಳ್ಳಿಯ ಬಹುತೇಕ ಸಂಘ-ಸಂಸ್ಥೆಗಳು ಮತ್ತು ಗಣ್ಯರು, ಅ. ಕ. ರಾ. ನಿ. ಪರಿಷತ್ತು, ಮಂಗಳೂರಿನ ಅನೇಕ ಸಂಘ-ಸಂಸ್ಥೆಗಳು ಮನವಿ ಸಲ್ಲಿಸಿದವು. ಬೆಂಗಳೂರಿನಲ್ಲೂ ಆಯೋಗವು ಹಲವಾರು ಗಣ್ಯರನ್ನು ಕಂಡು ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿತು.

[I.] **ಮೈಸೂರು ರಾಜ್ಯದ ಪುನರ್‌ಸಂಘಟನೆ ಕುರಿತಂತೆ ರಾಜ್ಯಗಳ ಪುನರ್ ವಿಂಗಡಣಾ ಆಯೋಗದ ಶಿಫಾರಸುಗಳು:** ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ತನ್ನ ವರದಿಯಲ್ಲಿ ರಾ. ಪು. ಆಯೋಗವು ಮೈಸೂರು ರಾಜ್ಯದ ಪುನರ್‌ಸಂಘಟನೆಗೆ ಸಂಬಂಧಿಸಿದಂತೆ ಕೆಳಗಿನ ಪ್ರದೇಶಗಳನ್ನು ಸೇರ್ಪಡೆಗೊಳಿಸಲು ಶಿಫಾರಸುಗಳನ್ನು ಮಾಡಿತ್ತು.

1. ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಿರಗುಪ್ಪ, ಹೊಸಪೇಟೆ ತಾಲ್ಲೂಕುಗಳನ್ನು ಹೊರತುಪಡಿಸಿ ಅಸ್ತಿತ್ವದಲ್ಲಿರುವ ಸಮಗ್ರ ಮೈಸೂರು ರಾಜ್ಯ.
2. ಬಾಂಬೇ ಪ್ರಾಂತದ ದಕ್ಷಿಣದ ಧಾರವಾಡ, ವಿಜಯಪುರ, ಉತ್ತರ ಕನ್ನಡ ಮತ್ತು ಚಾಂದಗಡ ತಾಲ್ಲೂಕು ಹೊರತುಪಡಿಸಿದ ಬೆಳಗಾವಿ ಜಿಲ್ಲೆಗಳು.
3. ಹೈದರಾಬಾದ್ ಪ್ರಾಂತದ ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳು
4. ಕಾಸರಗೋಡು ತಾಲ್ಲೂಕನ್ನುಳಿದು ದಕ್ಷಿಣ ಕನ್ನಡ ಜಿಲ್ಲೆ
5. ಮದ್ರಾಸ್ ರಾಜ್ಯದ ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು
6. ಕೊಡಗು

ಈ ವರದಿಯಿಂದ ಕನ್ನಡಿಗರಿಗೆ ಆಘಾತವಾಯಿತು. ಕೇವಲ ಎರಡೇ ವರ್ಷದ ಹಿಂದೆ ಸೇರಿದ್ದ ಬಳ್ಳಾರಿ ಜಿಲ್ಲೆಯ ಮೂರು ತಾಲ್ಲೂಕುಗಳು, ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲ್ಲೂಕು, ಇಡೀ ಬೀದರ್ ಜಿಲ್ಲೆ ಪುನರ್‌ಸಂಘಟನೆಗೊಂಡ ಮೈಸೂರು ರಾಜ್ಯಕ್ಕೆ ಸೇರಿರಲಿಲ್ಲ. ಕಾಸರಗೋಡಿನ ಜನರಿಗಾದ ನೋವನ್ನು ಆ ಭಾಗದ ಕವಿ ಕಯ್ಯಾರ



ಕಿಯ್ಯಣ್ಣ ರೈ ತಮ್ಮ 'ಬೆಂಕಿ ಬಿದ್ದಿದೆ ಮನೆಗೆ 'ಕವನದಲ್ಲಿ ಅಭಿವ್ಯಕ್ತಿಗೊಳಿಸಿದರು. ಬಳ್ಳಾರಿಯ ಜನರು ಸತ್ಯಾಗ್ರಹವನ್ನು ಆರಂಭಿಸಿ ವೃದ್ಧ, ಮಹಿಳೆ, ಮಕ್ಕಳೆನ್ನದೆ ಪ್ರತಿಭಟಿಸಿದರು. ರಾ.ಪು. ಆಯೋಗದ ಶಿಫಾರಸುಗಳನ್ನು ಕುರಿತು ಸಾರ್ವಜನಿಕರಿಗಾದ ಅಸಮಧಾನಗಳನ್ನು ಗಮನಿಸಿ ಲೋಕಸಭೆಯಲ್ಲಿ ಸುದೀರ್ಘ ಚರ್ಚೆ ಜರುಗಿತು. ಅಂತಿಮವಾಗಿ ಭಾರತ ಸರ್ಕಾರವು 16-3-1956ರಂದು ರಾಜ್ಯಗಳ ಪುನರ್‌ವಿಂಗಡಣಾ ವಿಧೇಯಕವನ್ನು ಮಂಡಿಸಿತು. ಆ ವಿಧೇಯಕದನ್ವಯ ಕೆಳಗಿನ ಕನ್ನಡ ಭಾಷಿಕರ ಪ್ರದೇಶಗಳಿಂದ ಮೈಸೂರು ರಾಜ್ಯ ಪುನರ್ ಸಂಘಟನೆಗೊಂಡಿತು. ಆ ಪ್ರದೇಶಗಳೆಂದರೆ

1. ಸಮಗ್ರ ಮೈಸೂರು ರಾಜ್ಯ.
2. ಬಾಂಬೇ ಪ್ರಾಂತದ ವಿಜಯಪುರ, ಧಾರವಾಡ, ಉತ್ತರ ಕನ್ನಡ ಮತ್ತು ಬೆಳಗಾವಿ (ಚಾಂದಗಡ ತಾಲ್ಲೂಕನ್ನು ಹೊರತುಪಡಿಸಿ)
3. ಹೈದರಾಬಾದ್ ಪ್ರಾಂತದ ಕೋಡಂಗಲ್ಲು ಮತ್ತು ತಾಂಡೂರು ತಾಲ್ಲೂಕುಗಳನ್ನು ಹೊರತುಪಡಿಸಿದ ಗುಲ್ಬರ್ಗ ಜಿಲ್ಲೆ, ಆಲಂಪುರ ಮತ್ತು ಗದ್ವಾಲ ತಾಲ್ಲೂಕುಗಳನ್ನು ಹೊರತುಪಡಿಸಿದ ರಾಯಚೂರು ಜಿಲ್ಲೆ ಮತ್ತು ಬೀದರ್ ಜಿಲ್ಲೆಯ ಬೀದರ್, ಭಾಲ್ಕಿ, ಔರಾದ್, ಹುಮನಾಬಾದ್ ತಾಲ್ಲುಕುಗಳು
4. ಮದ್ರಾಸ್ ಪ್ರಾಂತದ ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ತಾಲ್ಲೂಕು ಮತ್ತು ಅಮೀನ್ ದ್ವೀಪಗಳನ್ನು ಹೊರತುಪಡಿಸಿ) ಮತ್ತು ಕೊಯಮತ್ತೂರು ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕು.
5. ಕೊಡಗು

[J.] **ಲೋಕಸಭೆಯಲ್ಲಿ ವಿಧೇಯಕದ ಮಂಡನೆ ಮತ್ತು ಸ್ವೀಕಾರ :** ರಾಜ್ಯಗಳ ಪುನರ್ ವಿಂಗಡಣಾ ವಿಧೇಯಕವನ್ನು ಎಲ್ಲಾ ರಾಜ್ಯಗಳ ವಿಧಾನ ಮಂಡಲಗಳೂ ಒಪ್ಪಿದ ನಂತರ, 18-4-1956ರಂದು ಗೃಹ ಸಚಿವ ಗೋವಿಂದ ವಲ್ಲಭ ಪಂತರು ಲೋಕಸಭೆಯಲ್ಲಿ ಮಂಡಿಸಿದರು. ಮೂರು ದಿನಗಳ ಚರ್ಚೆಯ ನಂತರ ವಿಧೇಯಕವನ್ನು ಜಂಟಿ ಸದನ ಸಮಿತಿಗೆ ವರ್ಗಾಯಿಸಲು ತೀರ್ಮಾನಿಸಲಾಯಿತು. ಈ ನಿರ್ಣಯವನ್ನು 2-5-1956ರಂದು ರಾಜ್ಯಸಭೆಯೂ ಒಪ್ಪಿತು. ಜಂಟಿ ಸದನ ಸಮಿತಿಯು ಪರಿಶೀಲಿಸಿದ ವಿಧೇಯಕವು ಲೋಕಸಭೆಯ ಮುಂದೆ 26-7-1956ರಂದು ಚರ್ಚೆಗೆ ಬಂದು 10-8-1956ರಂದು ಅನುಮೋದಿಸಲಾಯಿತು. ನಂತರ ವಿಧೇಯಕ ಕುರಿತಂತೆ ರಾಜ್ಯ ಸಭೆಯಲ್ಲೂ ಚರ್ಚೆ ನಡೆದು ಅಲ್ಲಿಯೂ ಒಪ್ಪಿಗೆ ದೊರೆಯಿತು. 31-8-1956ರಂದು ರಾ.ಪು.ವಿಧೇಯಕಕ್ಕೆ ರಾಷ್ಟ್ರಪತಿಗಳ ಅಂಗೀಕಾರ ದೊರಕುವುದರೊಡನೆ 1956ರ ನವೆಂಬರ್ 1 ಪುನರ್ವಿಂಗಡಣೆಗೊಂಡ ರಾಜ್ಯಗಳೆಲ್ಲವೂ ಅಸ್ತಿತ್ವಕ್ಕೆ ಬರುವುವೆಂಬ ಸಾರ್ವಜನಿಕ ಪ್ರಕಟಣೆ ಹೊರಬಿದ್ದಿತು.

ಪುನರ್‌ಸಂಘಟಿತಗೊಂಡ ಕನ್ನಡಿಗರ ಮೈಸೂರು ರಾಜ್ಯವು ನವ ಮೈಸೂರು ಎಂದೇ ಚಿರಪರಿಚಿತವಾಯಿತು. ಕಾಸರಗೋಡು ಮತ್ತು ಸೊಲ್ಲಾಪುರಗಳು ಕರ್ನಾಟಕದಿಂದ ಹೊರಗುಳಿದದ್ದು ನೋವಿನ ವಿಷಯವಾದರೂ ಪುನರ್‌ಸಂಘಟಿತಗೊಂಡ ಕನ್ನಡ ಭಾಷಿಕರ ಪ್ರದೇಶಗಳ ಎಲ್ಲಾ ವಿಧಾನ ಸಭಾ ಸದಸ್ಯರೂ 21-10-1956ರಂದು ಬೆಂಗಳೂರಿನಲ್ಲಿ ಸಭೆ ಸೇರಿ ಎಸ್. ನಿಜಲಿಂಗಪ್ಪನವರನ್ನು ತಮ್ಮ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿಕೊಂಡರು. ಮೈಸೂರು ಸಂಸ್ಥಾನ ಮತ್ತು ಕರ್ನಾಟಕ ಪ್ರದೇಶಗಳೆರಡರ ಜೊತೆಗೂ ಸಂಪರ್ಕ ಹೊಂದಿದ್ದ ನಿಜಲಿಂಗಪ್ಪನವರು ಏಕೀಕರಣಗೊಂಡ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯಾದರು.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ಮೈಸೂರಿನಲ್ಲಿ ಯದುವಂಶದ ಆಡಳಿತ ಆರಂಭವಾಗಲು ಕಾರಣವೇನು?
2. ಮೈಸೂರು ಸಂಸ್ಥಾನದ ಆರಂಭಿಕ ದೊರೆಗಳನ್ನು ಹೆಸರಿಸಿರಿ.
3. ಮೈಸೂರಿನಲ್ಲಿ ಸ್ವತಂತ್ರ ಆಡಳಿತವು ಯಾವಾಗ ಮತ್ತು ಯಾರಿಂದ ಆರಂಭವಾಯಿತು?
4. ಒಂದನೇ ರಾಜ ಒಡೆಯರ್ ಕಾಲಾವಧಿಯ ಎರಡು ಆಡಳಿತಾತ್ಮಕ ಸಾಧನೆಗಳನ್ನು ಬರೆಯಿರಿ.
5. ದೊಡ್ಡ ದೇವರಾಜ ಒಡೆಯರ್ ಪಡೆದಿದ್ದ ಬಿರುದುಗಳನ್ನು ಹೆಸರಿಸಿರಿ.
6. ಅಠಾರಾ ಕಚೇರಿ ಎಂದರೇನು?
7. ನವ ಕೋಟಿ ನಾರಾಯಣ ಎನಿಸಿಕೊಂಡ ಮೈಸೂರಿನ ಅರಸ ಯಾರು? ಆತನಿಗೆ ಈ ಬಿರುದು ಬರಲು ಕಾರಣವೇನು?
8. ಮೈಸೂರನ್ನು ಆಳಿದ ಇಬ್ಬರು ಕಮೀಶನರುಗಳನ್ನು ಹೆಸರಿಸಿರಿ.
9. ಬ್ರಿಟಿಷರು ಅಧಿಕಾರವನ್ನು ಹಸ್ತಾಂತರಿಸುವಾಗ ಮೈಸೂರಿನ ಸಂಸ್ಥಾನಕ್ಕೆ ಸೂಚಿಸಿದ ಮೂರು ಶರತ್ತುಗಳನ್ನು ತಿಳಿಸಿರಿ.
10. ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲಾವಧಿಯಲ್ಲಿ ಆಡಳಿತ ನಡೆಸಿದ ಮೂವರು ದಿವಾನರನ್ನು ಹೆಸರಿಸಿರಿ.
11. ಮೈಸೂರು ಸಂಸ್ಥಾನದ ಆಡಳಿತ ಅಂತ್ಯವಾಗಲು ಕಾರಣವೇನು?
12. ದರ್ ಆಯೋಗದ ವರದಿಯಲ್ಲಿನ ಎರಡು ನಿಲುವುಗಳನ್ನು ಬರೆಯಿರಿ.
13. ಜೆ. ವಿ. ಪಿ ಸಮಿತಿಯ ಸದಸ್ಯರನ್ನು ಹೆಸರಿಸಿರಿ.
14. ರಾಜ್ಯಗಳ ಪುನರ್‌ವಿಂಗಡಣಾ ಆಯೋಗದ ಅಧ್ಯಕ್ಷ ಮತ್ತು ಸದಸ್ಯರನ್ನು ಹೆಸರಿಸಿರಿ.



15. ರಾಜ್ಯಗಳ ಪುನರ್‌ವಿಂಗಡಣಾ ಆಯೋಗದ ವರದಿಯಿಂದ ಕನ್ನಡಿಗರು ಅಸಮಧಾನಗೊಳ್ಳಲು ಕಾರಣವೇನು?

**[B.] ಐದು ಅಂಕದ ಪ್ರಶ್ನೆಗಳು:**

1. ಚಿಕ್ಕ ದೇವರಾಜ ಒಡೆಯರ್‌ರ ಜನಪರ ಸಾಧನೆಗಳನ್ನು ಪಟ್ಟಿ ಮಾಡಿರಿ.
2. ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವೆನಿಸಿಕೊಳ್ಳಲು ಕಾರಣಗಳನ್ನು ಚರ್ಚಿಸಿರಿ.
3. ದರ್ ಸಮಿತಿಯನ್ನು ಕುರಿತು ಟಿಪ್ಪಣಿ ಬರೆಯಿರಿ.
4. ರಾಜ್ಯಗಳ ಪುನರ್‌ವಿಂಗಡಣಾ ಆಯೋಗವು ನೀಡಿದ ಸಲಹೆಗಳನ್ನು ಪರಿಶೀಲಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ಮೈಸೂರು ಸಂಸ್ಥಾನದಲ್ಲಿನ ಆಡಳಿತವನ್ನು ಸಂಕ್ಷೇಪ್ತವಾಗಿ ವಿವರಿಸಿರಿ.
2. ಮೈಸೂರು ರಾಜ್ಯದ ಪುನರ್‌ಸಂಘಟನೆಯನ್ನು ಸಂಕ್ಷೇಪ್ತವಾಗಿ ಚರ್ಚಿಸಿರಿ.

ಅಧ್ಯಾಯ 4:

# ಕರ್ನಾಟಕದ ಏಕೀಕರಣ ಚಳುವಳಿ

## [Unification Movement of Karnataka].

### ಪ್ರಸ್ತಾವನೆ [Introduction]:

ಭಾರತವು ವೈವಿಧ್ಯಮಯ ಭಾಷೆಗಳನ್ನಾಡುವ ಜನರನ್ನುಳ್ಳ ವಿಶಾಲ ದೇಶ. ವಸಾಹತು ಕಾಲದಲ್ಲಿ ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕಾಗಿ ವಿವಿಧ ಭಾಷೆಗಳನ್ನಾಡುವ ಜನರನ್ನು ಒಳಗೊಂಡ ಪ್ರಾಂತ್ಯಗಳನ್ನು ರಚಿಸಿಕೊಂಡರು. ಈ ಬೆಳವಣಿಗೆಯಿಂದ ಒಂದು ನಿರ್ದಿಷ್ಟ ಭಾಷೆಯನ್ನು ಮಾತನಾಡುವ ಜನರು ಹಲವು ಪ್ರಾಂತ್ಯಗಳಲ್ಲಿ ವಿಭಜನೆಗೊಂಡರು. ಫಲವಾಗಿ ಜನರು ಶೈಕ್ಷಣಿಕ ಮತ್ತು ಆಡಳಿತಾತ್ಮಕ ತೊಂದರೆಗಳನ್ನು ಎದುರಿಸಬೇಕಾಯಿತು. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಜೊತೆಗೆ ಭಾರತದ ಕೆಲ ಭಾಗಗಳಲ್ಲಿ ಭಾಷಾಧಾರಿತ ಪ್ರಾದೇಶಿಕ ಏಕೀಕರಣದ ಹೋರಾಟಗಳು ಉಗಮಗೊಂಡವು. ಈ ನಿಟ್ಟಿನಲ್ಲಿ ತೆಲಗು ಭಾಷಿಕರ ಆಂಧ್ರ ಪ್ರದೇಶದ ಚಳುವಳಿ ಮತ್ತು ಕನ್ನಡ ಭಾಷಿಕರ ಕರ್ನಾಟಕದ ಏಕೀಕರಣ ಚಳುವಳಿಗಳು ಪ್ರಧಾನವಾಗಿದ್ದವು. ಪ್ರಸ್ತುತ ಅಧ್ಯಾಯದಲ್ಲಿ ಕರ್ನಾಟಕದ ಏಕೀಕರಣ ಚಳುವಳಿಯ ಐತಿಹಾಸಿಕ ಹಿನ್ನೆಲೆ ಮತ್ತು ಕಾರಣಗಳನ್ನು ಕುರಿತು ಬೆಳಕು ಚೆಲ್ಲಲಾಗಿದೆ.

[I] ಏಕೀಕರಣ ಚಳುವಳಿಯ ಪರಿಕಲ್ಪನೆ [ ]: ನಿರ್ದಿಷ್ಟ ಭಾಷೆಯನ್ನು ಮಾತನಾಡುವ ಜನರು ಒಂದೇ ಪ್ರಾಂತ್ಯದ ಆಡಳಿತಕ್ಕೆ ಒಳಪಡಬೇಕೆಂಬುದು ಏಕೀಕರಣ ಚಳುವಳಿಯ ತಿರುಳು. ವಿವಿಧ ಪ್ರಾಂತ್ಯಗಳಲ್ಲಿ ಹಂಚಿ ಹೋದರೆ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದು ಅಸಾಧ್ಯವೆಂಬ ಆತಂಕದಿಂದ ಸ್ವಾತಂತ್ರ್ಯ ಪೂರ್ವದಲ್ಲಿಯೇ ಏಕೀಕರಣ ಚಳುವಳಿಯ ಪರಿಕಲ್ಪನೆಯು ಜನ್ಮತಾಳಿತ್ತು. ಇದರೊಡನೆ 1928 ರ ಮೋತಿಲಾಲ್ ನೆಹರು ವರದಿಯು ಒಂದು ಪ್ರಾಂತ್ಯ ಸಾಕ್ಷರತೆ ಸಾಧಿಸಲು ಹಾಗೂ ದಿನನಿತ್ಯದ ಆಡಳಿತವನ್ನು ಉತ್ತಮವಾಗಿ ನಡೆಸಲು ಭಾಷೆಯ ಪಾತ್ರ ಅಪಾರವೆಂದು ಪ್ರತಿಪಾದಿಸಿದ್ದುದು ಏಕೀಕರಣ ಚಳುವಳಿಗೆ ಬಲ ನೀಡಿತ್ತು. ಈ ಹಿನ್ನೆಲೆಯಲ್ಲಿ ಭಾರತದ ಹಲವೆಡೆ ಭಾಷಾಧಾರಿತ ಪ್ರಾಂತ್ಯಗಳ ಸ್ಥಾಪನೆಗೆ ಏಕೀಕರಣದ ಹೋರಾಟಗಳು ಜರುಗಿದವು. ಕೆಳಗಿನ ಅಂಶಗಳು ಭಾಷಾಧಾರದ ಏಕೀಕರಣ ಚಳುವಳಿಯನ್ನು ಸಮರ್ಥಿಸುತ್ತವೆ.



1. ಭಾಷೆ ಒಂದು ಪ್ರದೇಶದ ಸಂಸ್ಕೃತಿ ಹಾಗೂ ಸಂಪ್ರದಾಯಗಳೊಡನೆ ನಿಕಟವಾಗಿರುತ್ತದೆ.
2. ಮಾತೃ ಭಾಷೆಯಲ್ಲಿ ಸರಳವಾಗಿ ಶಿಕ್ಷಣ ಪಡೆದು ಸಾಕ್ಷರರಾಗಬಹುದು.
3. ಜನರ ಭಾಷೆಯಲ್ಲಿ ರಾಜಕಾರಣ ಹಾಗೂ ಆಡಳಿತ ನಡೆದರೆ ಪ್ರಜಾಪ್ರಭುತ್ವ ಯಶಸ್ವಿಯಾಗುವುದು.
4. ಶಿಕ್ಷಣ, ನ್ಯಾಯದಾನ ಮುಂತಾದವನ್ನು ಏಕಭಾಷಾ ಪ್ರಾಂತ್ಯಗಳಲ್ಲಿ ಸರ್ವರಿಗೂ ನೀಡಬಹುದು.
5. ಏಕ ಭಾಷೆಯ ರಾಜ್ಯ ಜನರ ಸಹಕಾರದಿಂದ ಪ್ರಗತಿ ಹೊಂದಬಹುದು.

ಈ ಮೇಲಿನ ಕಾರಣಗಳಿಂದ ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೇ ಕೆಲ ಭಾಗಗಳಲ್ಲಿ ಏಕೀಕರಣ ಚಳುವಳಿ ಕಂಡು ಬಂದಿದ್ದು ಅವುಗಳಲ್ಲಿ ಕರ್ನಾಟಕದ ಏಕೀಕರಣ ಚಳುವಳಿಯೂ ಒಂದು. ಭಾರತ ಸ್ವಾತಂತ್ರ ಗಳಿಸಿದ ಕೆಲವೇ ವರ್ಷಗಳಲ್ಲಿ ಭಾಷಾಧಾರಿತ ರಾಜ್ಯಗಳ ರಚನೆಗೆ ಒತ್ತಾಯಿಸಿ ಏಕೀಕರಣ ಚಳುವಳಿಗಳು ತೀವ್ರಗೊಂಡವು. ದೇಶದ ಏಕತೆಗೆ ಭಾಷಾಧಾರಿತ ರಾಜ್ಯಗಳು ಅಪಾಯಕಾರಿ ಎಂಬುದಾಗಿ ಅನೇಕ ಸಮಿತಿಗಳು ಸೂಚಿಸಿದರೂ ಏಕೀಕರಣ ಚಳುವಳಿಗೆ ಮಣಿದ ಭಾರತ ಸರ್ಕಾರ 1956 ರಲ್ಲಿ ರಾಜ್ಯಗಳ ಪುನರ್ವಿಂಗಡಣಾ ಕಾಯಿದೆಯಂತೆ ಭಾಷಾಧಾರಿತ ರಾಜ್ಯಗಳನ್ನು ಜಾರಿಗೊಳಿಸಿತು. ಈ ಏಕೀಕರಣ ಚಳುವಳಿ ಇಂದಿಗೂ ಅಲ್ಲಲ್ಲಿ ಕಂಡು ಬರುತ್ತಿರುವುದು ದೇಶದ ಐಖ್ಯತೆಗೆ ಸವಾಲಾಗಿದೆ.

### [II.] ಕರ್ನಾಟಕ ಏಕೀಕರಣದ ಸಂಕ್ಷಿಪ್ತ ಇತಿಹಾಸ [Brief History of Karnataka Unification]:

ಪ್ರಾಚೀನ ಭಾರತದ ಇತಿಹಾಸವು ಕನ್ನಡ ಭಾಷಿಕರ ಭೌಗೋಳಿಕ ವಿಸ್ತಾರವನ್ನು ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೆ ಗುರುತಿಸುತ್ತದೆ. ಅಂತೆಯೇ ಕವಿರಾಜ ಮಾರ್ಗ ಕೃತಿಯು ದಕ್ಷಿಣ ಭಾರತದ ಅರ್ಧ ಭಾಗವನ್ನು ಕನ್ನಡಿಗರ ಪ್ರದೇಶ ಆವರಿಸಿತ್ತೆಂದು ವಿವರಿಸುತ್ತದೆ. ಈ ಪ್ರದೇಶವನ್ನು ಕ್ರಮವಾಗಿ ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ಒಡೆಯರ್ ಮುಂತಾದ ಕನ್ನಡದ ಹಿನ್ನೆಲೆಯುಳ್ಳ ರಾಜವಂಶಗಳು ಆಳಿದವು. ಈ ಕನ್ನಡಿಗರ ಪ್ರದೇಶವನ್ನು ರಾಜಕೀಯವಾಗಿ ಏಕೀಕರಿಸಲು ಶ್ರಮಿಸಿದ ಟಿಪ್ಪು 1799 ರ ನಾಲ್ಕನೇ ಆಂಗ್ಲೊ ಮೈಸೂರು ಯುದ್ಧದಲ್ಲಿ ಬ್ರಿಟಿಷರಿಂದ ಸೋತು ಮರಣ ಹೊಂದಿದ. ನಂತರ ಕನ್ನಡ ಮಾತನಾಡುವ ಪ್ರದೇಶಗಳನ್ನು ಬ್ರಿಟಿಷರು ಬಾಂಬೇ, ಮದ್ರಾಸ್ ಮತ್ತು ಹೈದರಾಬಾದ್ ಪ್ರಾಂತ್ಯಗಳಿಗೆ ವಿಂಗಡಿಸಿದ್ದರಿಂದ ಕನ್ನಡಿಗರು ಪ್ರತ್ಯೇಕಗೊಳ್ಳಬೇಕಾಯಿತು. ಫಲವಾಗಿ ಕನ್ನಡ ಭಾಷೆ ಮಾತನಾಡುತ್ತಿದ್ದ ಹಾಗೂ ಕನ್ನಡ ಸಂಸ್ಕೃತಿ ಮೈಗೂಡಿಸಿಕೊಂಡಿದ್ದ ಜನರಿದ್ದರೂ ಕರ್ನಾಟಕ ಅಸ್ತಿತ್ವದಲ್ಲಿರಲಿಲ್ಲ. ಆದರೆ, 19 ನೇ ಶತಮಾನದ ಕೊನೆಯ ಹೊತ್ತಿಗೆ ಒಂದೇ ಪ್ರಾಂತ್ಯ ಮತ್ತು ಒಂದೇ ಆಡಳಿತದಡಿ ಒಂದಾಗಲು ಕನ್ನಡಿಗರು

ಪ್ರಯತ್ನಿಸತೊಡಗಿದರು. ಭಿನ್ನ ಪ್ರಾಂತ್ಯಗಳಿಗೆ ಒಳಪಟ್ಟಿದ್ದ ಕನ್ನಡಿಗರು ಒಂದುಗೂಡಲು ನಡೆಸಿದ ಹೋರಾಟವನ್ನೇ ಕರ್ನಾಟಕ ಏಕೀಕರಣ ಚಳುವಳಿ ಎಂದು ಕರೆಯಲಾಗುತ್ತದೆ.

ಕಾಲಾನುಕ್ರಮದಲ್ಲಿ ಕನ್ನಡಿಗರು ಒಂದೇ ಪ್ರಾಂತ್ಯ ಮತ್ತು ಒಂದು ಆಡಳಿತದ ಅಡಿಯಲ್ಲಿ ಒಗ್ಗೂಡಲು ಪ್ರಜ್ಞಾಪೂರ್ವಕ ಹೋರಾಟಕ್ಕೆ ಮುಂದಾದರು. ಆಸಕ್ತಿದಾಯಕ ಅಂಶವೇನೆಂದರೆ, ಏಕೀಕರಣದ ಆರಂಭಿಕ ಪ್ರಯತ್ನಗಳನ್ನು ಬಾಂಬೆ ಕರ್ನಾಟಕ ಪ್ರದೇಶದ ಜನರು ಮೊದಲು ಪ್ರಾರಂಭಿಸಿದರು. ಆರ್.ಎಚ್. ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ 1890 ರಲ್ಲಿ ಸ್ಥಾಪನೆಯಾದ ಧಾರವಾಡದ 'ಕರ್ನಾಟಕ ವಿದ್ಯಾವರ್ಧಕ ಸಂಘ' ಏಕೀಕರಣದ ಕನಸಿಗೆ ಸಾಂಸ್ಥಿಕ ರೂಪವನ್ನು ಒದಗಿಸಿತು. ಕನ್ನಡ ಸಾಹಿತ್ಯ ಪರಿಷತ್ತು 1915 ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡು ಏಕೀಕರಣದ ಬಯಕೆ ಹೆಮ್ಮರವಾಗಲು ಶ್ರಮಿಸಿತು. ಕನ್ನಡ ಭಾಷೆ ಮತ್ತು ಸಾಹಿತ್ಯದ ಪ್ರಗತಿಯೊಡನೆ ಕನ್ನಡ ಪ್ರೇಮವನ್ನು ವೃದ್ಧಿಸಲು ಮತ್ತು ಕನ್ನಡ ಮಾತನಾಡುವ ಪ್ರದೇಶಗಳನ್ನು ಬೆಸೆಯಲು ಸಹಾಯ ಮಾಡುವಲ್ಲಿ ಸಾಹಿತ್ಯ ಪರಿಷತ್ತು ನೆರವಾಯಿತು. ಅಂತೆಯೇ 1916 ರಲ್ಲಿ ಕರ್ನಾಟಕ ಏಕೀಕರಣ ಸಭಾ ಧಾರವಾಡದಲ್ಲಿ ಪ್ರಾರಂಭವಾಯಿತು. ಈ ವಿವಿಧ ಸಂಘಟನೆಗಳು ಏಕೀಕರಣಕ್ಕಾಗಿ ಹೋರಾಟವನ್ನು ತೀವ್ರಗೊಳಿಸಿದವು. ಗಮನಾರ್ಹ ಅಂಶವೇನೆಂದರೆ, ಕರ್ನಾಟಕ ಏಕೀಕರಣದ ಕನಸನ್ನು ಬಿತ್ತಿ ಕನ್ನಡವನ್ನು ಸಮರ್ಥವಾಗಿ ಕಟ್ಟುವಲ್ಲಿ ಸರ್ ವಾಲ್ಟರ್ ಎಲಿಯಟ್, ಸರ್ ಥಾಮಸ್ ಮನ್ರೋ, ಗ್ರೀನ್ ಹಿಲ್ ಆರ್. ಗ್ರಾಂಟ್, ಡಬ್ಲ್ಯು. ಎ. ರಸೆಲ್, ಜೆ. ಎಫ್. ಪ್ಲೀಟ್‌ರಂತಹ ಬ್ರಿಟಿಷ್ ಅಧಿಕಾರಿಗಳ ಕೊಡುಗೆ ಅಪಾರ. ಇವರಿಗೆ ಕೈಜೋಡಿಸಿದ್ದೇ ಕನ್ನಡಿಗರಾದ ಚೆನ್ನಬಸಪ್ಪ, ರಾ.ಹ. ದೇಶಪಾಂಡೆ, ರೊದ್ದ ಶ್ರೀನಿವಾಸರಾವ್, ಆಲೂರು ವೆಂಕಟರಾಯ, ಕಾರ್ನಾಡ್ ಸದಾಶಿವರಾಯ್, ಶಿವಮೂರ್ತಿ ಸ್ವಾಮಿಗಳಂತಹ ಮುಂತಾದ ಹಿರಿಯರು.

1924 ರಲ್ಲಿ ಜರುಗಿದ ಬೆಳಗಾವಿಯ ಕಾಂಗ್ರೆಸ್‌ನ ರಾಷ್ಟ್ರೀಯ ಅಧಿವೇಶನದಲ್ಲಿ ಹುಯಿಲಗೋಳ ನಾರಾಯಣ ರಾಯರು ಸ್ವಾಗತ ಗೀತೆಯಾಗಿ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' (ನಮ್ಮ ಕನ್ನಡ ನಾಡು ಉದಯವಾಗಲಿ) ಎಂದು ಹಾಡುವ ಮೂಲಕ ಕರ್ನಾಟಕ ಏಕೀಕರಣದ ಪ್ರಕ್ರಿಯೆಯನ್ನು ಔಪಚಾರಿಕವಾಗಿ ಪ್ರಾರಂಭಿಸಿದರು. ಸಮಾವೇಶದ ಅಧ್ಯಕ್ಷರಾಗಿದ್ದ ಗಾಂಧೀಜಿಯವರು ಕನ್ನಡಿಗರ ಏಕೀಕರಣದ ಚಳುವಳಿಗೆ ತಮ್ಮ ಬೆಂಬಲವನ್ನು ನೀಡಿದರು. ಇಲ್ಲಿಂದ ಮುಂದೆ ಏಕೀಕರಣ ಚಳುವಳಿಯು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಬೆಳವಣಿಗೆ ಹೊಂದುತ್ತಾ ಸಾಗಿತು.

ಅಂತಿಮವಾಗಿ ಭಾರತವು 1947 ರ ಭಾರತದ ಸ್ವಾತಂತ್ರ್ಯ ಕಾಯಿದೆಯಂತೆ ಸ್ವತಂತ್ರಗೊಂಡಿತು. ಈ ಕಾಯಿದೆಯು ಬ್ರಿಟಿಷ್ ಪ್ರಾಂತ್ಯಗಳನ್ನು ಭಾರತ ಮತ್ತು ಪಾಕಿಸ್ತಾನಕ್ಕೆ ವಿಭಜಿಸಿ ದೇಶೀಯ ಸಂಸ್ಥಾನಗಳಿಗೆ ಭಾರತದ ಒಕ್ಕೂಟಕ್ಕೆ ಸೇರುವ, ಪಾಕಿಸ್ತಾನದೊಡನೆ ಸೇರುವ ಅಥವಾ ಸ್ವತಂತ್ರವಾಗಿ ಉಳಿಯುವ ಅವಕಾಶವನ್ನು ಕಲ್ಪಿಸಿತು. ಈ ವೇಳೆಯಲ್ಲಿ ಅಂದಿನ ಗೃಹ ಮಂತ್ರಿಯಾಗಿದ್ದ ಸರದಾರ್ ಪಟೇಲರು ವಿಲೀನ ಒಪ್ಪಂದದ ನೆರವಿನಿಂದ



ದೇಶೀಯ ಸಂಸ್ಥಾನಗಳನ್ನು ಭಾರತದ ಒಕ್ಕೂಟಕ್ಕೆ ಸೇರಿಸಲು ಯಶಸ್ವಿಯಾದರು. ಬಳಿಕ ಸಂವಿಧಾನ ರಚನಾಕಾರರು ಎ. ಬಿ. ಸಿ. ಡಿ. ವರ್ಗದ ಪ್ರಾಂತ್ಯಗಳಿಗೆ ಭಾರತದ ಒಕ್ಕೂಟದಲ್ಲಿ ಅವಕಾಶ ಕಲ್ಪಿಸಿ ಭಾಷಾಧಾರಿತ ಪ್ರಾಂತ್ಯಗಳ ರಚನೆಯನ್ನು ಪುರಸ್ಕರಿಸಲಿಲ್ಲ. ಹೀಗಾಗಿ ಭಾಷಾಧಾರಿತ ಪ್ರಾಂತ್ಯ ಅಥವಾ ರಾಜ್ಯಗಳ ಬೇಡಿಕೆ ತೀವ್ರಗೊಂಡಾಗ ಕೇಂದ್ರ ಸರ್ಕಾರವು 1948 ರಲ್ಲಿ ಧರ್ ಆಯೋಗ ಮತ್ತು 1949 ರಲ್ಲಿ ಜೆ. ವಿ. ಪಿ ಸಮಿತಿಯನ್ನು ರಚಿಸಿ ಭಾಷಾಧಾರಿತ ಏಕೀಕರಣದ ಪ್ರಶ್ನೆಯನ್ನು ಕುರಿತಂತೆ ವರದಿ ಪಡೆಯಿತು. ಈ ಎರಡೂ ಸಮಿತಿಗಳು ರಾಷ್ಟ್ರೀಯ ಭಾವೈಕ್ಯತೆಗೆ ಹಾನಿಯಾಗುವ ಸಾಧ್ಯತೆಯ ಕಾರಣಕ್ಕೆ ಭಾಷಾಧಾರಿತ ಏಕೀಕರಣವನ್ನು ತಿರಸ್ಕರಿಸಿದವು.

• 1953 ರಲ್ಲಿ ತೆಲುಗು ಭಾಷಿಕರಿಗೆ ಆಂಧ್ರಪ್ರದೇಶದ ರಚನೆಗೆ ಒತ್ತಾಯಿಸಿ ಪೊಟ್ಟಿ ಶ್ರೀರಾಮುಲು 58 ದಿನಗಳವರೆಗೆ ಆಮರಣಾಂತ ಉಪವಾಸ ಕೈಗೊಂಡು ನಿಧನ ಹೊಂದಿದರು. ಈ ಘಟನೆಯಿಂದ ಮಣಿದ ಕೇಂದ್ರ ಸರ್ಕಾರವು ಭಾಷಾ ಆಧಾರದ ಮೇಲೆ ಆಂಧ್ರಪ್ರದೇಶ ರಾಜ್ಯವನ್ನು ತೆಲುಗು ಭಾಷಿಕರಿಗಾಗಿ ರಚಿಸಿತು. ಈ ಬೆಳವಣಿಗೆಯಿಂದ ಉಳಿದ ಭಾಷಾಧಾರಿತ ಏಕೀಕರಣ ಚಳುವಳಿಗಳು ತೀವ್ರಗೊಂಡವು. ಅಂದಾನೆಪ್ಪ ದೊಡ್ಡ ಮೇಟಿಯವರು ಬಾಂಬೇಯ ವಿಧಾನ ಪರಿಷತ್ತಿನ ಸದಸ್ಯತ್ವಕ್ಕೆ ರಾಜೀನಾಮೆ ನೀಡುವ ಮೂಲಕ ಕರ್ನಾಟಕದ ಏಕೀಕರಣಕ್ಕೆ ಒತ್ತಾಯಿಸಿದರು.

ಜೊತೆಗೆ ಹುಬ್ಬಳ್ಳಿಯ ಸಮೀಪದ ಅದರಗುಂಚಿಯಲ್ಲಿ ಶಂಕರಗೌಡ ಪಾಟೀಲರು 1953 ರಲ್ಲಿ ಕರ್ನಾಟಕ ಏಕೀಕರಣಕ್ಕೆ ಆಗ್ರಹಿಸಿ ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡರು. ಇದೇ ರೀತಿಯ ಹಲವು ಏಕೀಕರಣದ ಚಳುವಳಿಗಳು ಭಾರತದಾದ್ಯಂತ ಬಲಗೊಂಡ ಫಲವಾಗಿ ಡಿಸೆಂಬರ್ 29, 1953 ರಂದು ಕೇಂದ್ರ ಸರ್ಕಾರವು ಫಜಲ್ ಅಲಿ ಅಧ್ಯಕ್ಷತೆಯ ಹೃದಯನಾಥ ಕುಂಜ್ರು ಮತ್ತು ಕವಾಲಂ ಮಾಧವ ಫಣಿಕರ್ ಸದಸ್ಯರಾಗಿದ್ದ ತ್ರಿಸದಸ್ಯ ರಾಜ್ಯಗಳ ಪುನರ್‌ವಿಂಗಡಣಾ ಆಯೋಗವನ್ನು ನೇಮಿಸಿತು. 21 ತಿಂಗಳ ಅಧ್ಯಯನದ ಬಳಿಕ ಸೆಪ್ಟೆಂಬರ್ 30, 1955 ರಂದು ಈ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ತನ್ನ ವರದಿಯಲ್ಲಿ ಫಜಲ್ ಆಲಿ ಆಯೋಗವು ಭಾಷಾವಾರು ರಾಜ್ಯಗಳ ವಿಂಗಡಣೆ ಸೂಕ್ತವೆಂದು ತಿಳಿಸಿತು. ಪರಿಣಾಮ 1956 ರಲ್ಲಿ ಸಂವಿಧಾನಕ್ಕೆ ಏಳನೇ ತಿದ್ದುಪಡಿ ಮೂಲಕ ಮೊದಲಿನ ಎ. ಬಿ. ಸಿ. ಡಿ ವರ್ಗದ ರಾಜ್ಯಗಳನ್ನು ರದ್ದುಗೊಳಿಸಿ ರಾಜ್ಯ ಪುನರ್ವಿಂಗಡಣಾ ಕಾಯ್ದೆಯನ್ವಯ 14 ಭಾಷಾಧಾರಿತ ರಾಜ್ಯಗಳನ್ನು ರಚಿಸಲಾಯಿತು. ಇದರೊಡನೆ ಹಳೆ ಮೈಸೂರು ಸಂಸ್ಥಾನದಲ್ಲಿದ್ದ ಮೈಸೂರು, ಬೆಂಗಳೂರು, ಕೋಲಾರ, ಮಂಡ್ಯ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗಾ ಜಿಲ್ಲೆಗಳ ಕನ್ನಡಿಗರೊಡನೆ ಬಾಂಬೇ ಪ್ರಾಂತ್ಯದ ಧಾರವಾಡ, ವಿಜಯಪುರ, ಬೆಳಗಾವಿ, ಉತ್ತರ ಕನ್ನಡ ಜಿಲ್ಲೆಗಳ ಕನ್ನಡಿಗರು ಸೇರಿಕೊಂಡರು. ಜೊತೆಗೆ ಮದ್ರಾಸ್ ಪ್ರಾಂತ್ಯದಲ್ಲಿದ್ದ ಮಂಗಳೂರು, ಕೊಡಗು ಮತ್ತು ಬಳ್ಳಾರಿಯ ಕನ್ನಡಿಗರೂ ಏಕೀಕರಣಗೊಂಡರು. ಅಂತೆಯೇ ಹೈದರಾಬಾದಿಗೆ ಸೇರಿದ್ದ ಕಲ್ಬುರ್ಗಿ, ಬೀದರ್ ಹಾಗೂ ರಾಯಚೂರು ಕನ್ನಡಿಗರು ಮತ್ತು

ಸ್ವತಂತ್ರ ಸಂಸ್ಥಾನಗಳಾಗಿದ್ದ ಸವಣೂರು, ಜಮಖಂಡಿ, ಸೊಂಡೂರು, ರಾಯಭಾಗ, ಮುಧೋಳದಲ್ಲಿನ ಕನ್ನಡಿಗರು ಒಂದುಗೂಡಿದ ವಿಶಾಲ ಮೈಸೂರು ಸಂಸ್ಥಾನವೆಂಬ ಹೆಸರಿನ ಪ್ರಾಂತ್ಯವೊಂದು ನವೆಂಬರ್ 1, 1956 ರಂದು ರಚನೆಗೊಳ್ಳುವ ಮೂಲಕ ಕನ್ನಡಿಗರ ಏಕೀಕರಣದ ಕನಸು ನನಸಾಯಿತು. ಹಳೆ ಮೈಸೂರು ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದ ಎಸ್ . ನಿಜಲಿಂಗಪ್ಪನವರ ನೇತೃತ್ವದಲ್ಲಿ ನವ ಮೈಸೂರು ಸಂಸ್ಥಾನ ಕನ್ನಡಿಗರ ಪ್ರದೇಶಗಳ ಏಕೀಕರಣದೊಡನೆ ರಚನೆಯಾಯಿತು. ಅಂತಿಮವಾಗಿ ವಿಶಾಲ ಅಥವಾ ನವ ಮೈಸೂರು ಸಂಸ್ಥಾನವು 1973 ನವೆಂಬರ್ 1 ರಂದು ಕರ್ನಾಟಕವೆಂದು ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ್ ಅರಸುರವರ ಕಾಲದಲ್ಲಿ ನಾಮಕರಣಗೊಂಡಿತು.

1956 ರಲ್ಲಿ ಜರುಗಿದ ರಾಜ್ಯಗಳ ಪುನರ್ವಿಂಗಡಣೆಯು ಹಲವು ದಶಕಗಳ ಕನ್ನಡಿಗರ ಏಕೀಕರಣದ ಬೇಡಿಕೆಯನ್ನು ಸಾಕಾರಗೊಳಿಸಿತು. ಗಡಿಯಲ್ಲಿ ವಾಸಿಸುವ ಅನೇಕ ಕನ್ನಡಿಗರು ಬೇರೆ ಬೇರೆ ರಾಜ್ಯಗಳಲ್ಲಿ ಇಂದಿಗೂ ವಾಸಿಸುತ್ತಿದ್ದಾರೆ. ಇತರ ಭಾಷಾ ಪ್ರದೇಶಗಳೊಂದಿಗೆ ಸಂಯೋಜಿಸಲ್ಪಟ್ಟ ಕಾರಣಕ್ಕೆ ಕನ್ನಡ ಪರ ಹೋರಾಟಗಾರರು ಮತ್ತು ಕರ್ನಾಟಕ ಸರ್ಕಾರ ಅವರನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಹೋರಾಟ ನಡೆಸುತ್ತಿರುವುದು ಗಮನಾರ್ಹ.

[III.] **ಕರ್ನಾಟಕದ ಏಕೀಕರಣಕ್ಕೆ ಕಾರಣವಾದ ಅಂಶಗಳು** [Factors Responsible Unification of Karnataka]:

ಈಗಾಗಲೇ ತಾವು ತಿಳಿದಂತೆ, 19 ನೇ ಶತಮಾನದಲ್ಲಿ ಘಟಿಸಿದ ಸಾಮಾಜಿಕ ಪುನರುತ್ಥಾನ, ಆಂಗ್ಲ ಶಿಕ್ಷಣದ ಹೆಚ್ಚಳ, ಸಾರಿಗೆ ಹಾಗೂ ಸಂಪರ್ಕದಲ್ಲಿನ ಕ್ರಾಂತಿಗಳು ಭಾರತದಲ್ಲಿ ಹಲವು ಬದಲಾವಣೆಗಳಿಗೆ ಕಾರಣವಾದವು. ಆ ಶತಮಾನದ ಕೊನೆಯ ದಶಕಗಳಲ್ಲಿ ಪ್ರಸ್ತಾಪಿತ ಬದಲಾವಣೆಗಳು ಕನ್ನಡ ಸಾಹಿತ್ಯ ರಚನೆ ಮತ್ತು ಐತಿಹಾಸಿಕ ಪ್ರಜ್ಞೆಗೆ ಕಾರಣವಾಗಿ ಕನ್ನಡಿಗರು ತಮ್ಮ ಅನನ್ಯತೆಯನ್ನು ಕಂಡುಕೊಂಡು ಏಕೀಕರಣಗೊಳ್ಳಲು ಮುಂದಾಗುವಂತಾಯಿತು. ನಂತರ ಸ್ವಾತಂತ್ರ್ಯ ಚಳುವಳಿ ಬಲಗೊಂಡಂತೆ ಕರ್ನಾಟಕದ ಏಕೀಕರಣದ ಚಳುವಳಿಯೂ ಬಲಗೊಳ್ಳುತ್ತಾ ಸಾಗಲು ಒಡಿಸ್ಸಾ ಮತ್ತು ಬಿಹಾರಗಳಲ್ಲಿನ ಭಾಷಾ ಏಕೀಕರಣಗಳು ಕನ್ನಡಿಗರಿಗೆ ಪ್ರೇರಣೆ ಒದಗಿಸಿದವು. ಭಾರತ ಸ್ವಾತಂತ್ರ್ಯಗೊಂಡ ಕೆಲವೇ ವರ್ಷಗಳಲ್ಲಿ ಕರ್ನಾಟಕದ ಏಕೀಕರಣದ ಕನಸು ಸಾಕಾರಗೊಂಡಿತು. ಆರು ದಶಕಗಳ ಇತಿಹಾಸ ಹೊಂದಿರುವ ಕರ್ನಾಟಕದ ಏಕೀಕರಣ ಚಳುವಳಿಗೆ ಜವಾಬ್ದಾರಿಯಾದ ಅಂದರೆ ಕಾರಣವಾದ ಪ್ರಧಾನ ಅಂಶಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

1. **ಕನ್ನಡ ಪತ್ರಿಕೆಗಳ ಪ್ರಕಟಣೆ:** ಸಂಯುಕ್ತ ಕರ್ನಾಟಕ, ವಿಶಾಲ ಕರ್ನಾಟಕ, ಕರ್ನಾಟಕ ವೃತ್ತ ಮುಂತಾದ ವೃತ್ತ ಪತ್ರಿಕೆಗಳು ಕನ್ನಡದಲ್ಲಿ ಪ್ರಕಟಗೊಳ್ಳತೊಡಗಿದವು. ಈ ಪತ್ರಿಕೆಗಳು ವಿವಿಧ ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದ ಕನ್ನಡ ಮಾತನಾಡುವ ಜನರ ನಡುವಿನ ಅಂತರವನ್ನು ಹೋಗಲಾಡಿಸಿದವು. ಜೊತೆಗೆ ಕನ್ನಡಿಗರಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಬೆಳೆಸಿ ಅವರನ್ನು ಒಗ್ಗೂಡಿಸಲು ಕಾರಣವಾದವು.



2. **ನಾಯಕರ ಪ್ರಜ್ಞಾಪೂರ್ವಕ ಪ್ರಯತ್ನಗಳು:** ಡೆಪ್ಯುಟಿ ಚನ್ನಬಸಪ್ಪನವರು ಕನ್ನಡ ಶಾಲೆಗಳನ್ನು ಸ್ಥಾಪಿಸಲು ಶ್ರಮಿಸಿದರು. ಅಂತೆಯೇ ಆಲೂರು ವೆಂಕಟರಾಯರು ಪ್ರಸಿದ್ಧ ಕೃತಿ 'ಕರ್ನಾಟಕ ಗತ ವೈಭವ' ರಚಿಸಿ ಜನರಲ್ಲಿ ಸಾಂಸ್ಕೃತಿಕ ಮನೋಭಾವವನ್ನು ಎಚ್ಚರಗೊಳಿಸಿದರು. ಸಿದ್ದಪ್ಪ ಕಂಬಳಿಯವರು ಆಡಳಿತಾತ್ಮಕವಾಗಿ ಕನ್ನಡಿಗರಿಗೆ ಸ್ಥಾನಮಾನ ದೊರಕುವಂತೆ ಹೋರಾಡಿದರು. ಇವರೊಡನೆ ಗುದ್ಲೆಪ್ಪ ಹಳ್ಳಿಕೇರಿ, ಆರ್.ಎಚ್. ದೇಶಪಾಂಡೆ, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಶ್ರೀನಿವಾಸರಾವ್ ಮಂಗಳವೇಡೆ, ಕೆಂಗಲ್ ಹನುಮಂತಯ್ಯ, ಎಸ್. ನಿಜಲಿಂಗಪ್ಪ, ಅಂದಾನಪ್ಪ ದೊಡ್ಡಮೇಟಿ ಮುಂತಾದ ನಾಯಕರ ಪ್ರಯತ್ನಗಳು ಕರ್ನಾಟಕದ ಏಕೀಕರಣವನ್ನು ಸಾಕಾರಗೊಳಿಸಲು ಕಾರಣವಾದವು.

3. **ಸಂಘ ಸಂಸ್ಥೆಗಳ ಸ್ಥಾಪನೆ:** ಕರ್ನಾಟಕ ವಿದ್ಯಾವರ್ಧಕ ಸಂಘವು ಆರ್. ಎಚ್. ದೇಶಪಾಂಡೆಯವರಿಂದ ಧಾರವಾಡದಲ್ಲಿ ಸ್ಥಾಪನೆಗೊಂಡು ಕನ್ನಡ ಸಂಸ್ಕೃತಿಯನ್ನು ಪೋಷಿಸಲು ಶ್ರಮಿಸಿತು. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಗೊಂಡು ಕನ್ನಡ ಸಾಹಿತ್ಯವನ್ನು ಪ್ರೋತ್ಸಾಹಿಸಿತು. ಇದರೊಡನೆ ಕರ್ನಾಟಕ ಏಕೀಕರಣ ಸಭಾ ರಚನೆಗೊಂಡು ಏಕೀಕರಣದ ಕನಸಿಗೆ ಬಲ ನೀಡಿತು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸ್ಥಾಪನೆಗೊಂಡು ಕನ್ನಡಿಗರನ್ನು ಒಗ್ಗೂಡಿಸಲು ರಾಷ್ಟ್ರೀಯ ನಾಯಕರ ಬೆಂಬಲವನ್ನು ಗಳಿಸಲು ಕಾರಣವಾಯಿತು.

4. **ಕನ್ನಡ ಗೀತೆಗಳ ಪ್ರಭಾವ:** ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು, ಶಾಂತ ಕವಿಯ 'ರಕ್ಷಿಸು ಕರ್ನಾಟಕ ದೇವಿ', ಕುವೆಂಪುರವರ 'ಜಯ ಭಾರತ ಜನನಿಯ ತನುಜಾತೆ', ಬಿ.ಎಂ.ಶ್ರೀಯವರ 'ಏರಿಸು ಹಾರಿಸು ಕನ್ನಡದ ಬಾವುಟ', ಗೋವಿಂದ ಪೈಯವರ 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ' ಮುಂತಾದ ಕವನಗಳು ಜನರಲ್ಲಿ ಕರ್ನಾಟಕದ ಅಸ್ಮಿತೆಯನ್ನು ಮೂಡಿಸಿ ಏಕೀಕರಣದ ತೀವ್ರತೆಯನ್ನು ಅಧಿಕಗೊಳಿಸಿದವು.

5. **ಭಾಷಾಧಾರಿತ ರಾಜ್ಯ ರಚನೆಗೆ ದೊರೆತ ಬೆಂಬಲ:** ಗಾಂಧೀಜಿ 1924 ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾಧಾರಿತ ರಾಜ್ಯಗಳ ರಚನೆಯನ್ನು ಒಪ್ಪಿಕೊಂಡರು. ಜೊತೆಗೆ 1928 ರ ಮೋತಿಲಾಲ್ ನೆಹರೂ ನೇತೃತ್ವದ ಸರ್ವ ಪಕ್ಷಗಳ ಸಮಿತಿಯ ವರದಿಯು ಕರ್ನಾಟಕದ ಏಕೀಕರಣಕ್ಕೆ ಪೂರಕವಾದ ಶಿಫಾರಸ್ಸು ಮಾಡಿತ್ತು. ಇದರೊಡನೆ ಭಾರತದ ಇತರ ಪ್ರದೇಶಗಳಲ್ಲಿ ಜರುಗಿದ ಭಾಷಾಧಾರಿತ ಏಕೀಕರಣದ ಪ್ರಯತ್ನಗಳು ಕರ್ನಾಟಕದ ಏಕೀಕರಣದ ಹೋರಾಟ ತೀವ್ರಗೊಳ್ಳಲು ಭೂಮಿಕೆಯೊದಗಿಸಿದವು.

6. **ಕನ್ನಡ ಭಾಷಿಕರ ಪರಿಸ್ಥಿತಿ:** ವಿವಿಧ ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದ ಕನ್ನಡಿಗರು ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸವಾಲುಗಳನ್ನು ಎದುರಿಸಬೇಕಿತ್ತು. ಅನಿವಾರ್ಯವಾಗಿ

ಬಾಂಬೇ ಪ್ರಾಂತ್ಯದ ಕನ್ನಡಿಗರು ಮರಾಠಿಯನ್ನು ಮತ್ತು ಹೈದರಾಬಾದಿನ ಕನ್ನಡಿಗರು ತೆಲುಗು ಭಾಷೆಯನ್ನು ಕಲಿಯಬೇಕಿತ್ತು. ಇದರೊಡನೆ ಆಡಳಿತಾತ್ಮಕವಾಗಿ ಕನ್ನಡಿಗರು ಅನ್ಯ ಭಾಷಿಕರ ಪ್ರಾಂತ್ಯದಲ್ಲಿ ವಿವಿಧ ಶೋಷಣೆ ಎದುರಿಸಬೇಕಿತ್ತು. ಕನ್ನಡಿಗರ ಈ ದಯನೀಯ ಪರಿಸ್ಥಿತಿಗಳೂ ಸಹ ಕರ್ನಾಟಕದ ಏಕೀಕರಣಕ್ಕೆ ಕಾರಣವೆನಿಸಿದವು.

7. **ಸಂವಿಧಾನಾತ್ಮಕ ತಿದ್ದುಪಡಿ:** ಭಾರತವು ಸ್ವತಂತ್ರಗೊಂಡಾಗ ಎ. ಬಿ. ಸಿ. ಡಿ ವರ್ಗದ ರಾಜ್ಯಗಳು ಭಾರತದ ಒಕ್ಕೂಟದಲ್ಲಿದ್ದವು. ಆದರೆ, ಫಜಲ್ ಆಲಿಯವರ ರಾಜ್ಯಗಳ ಪುನರ್‌ವಿಂಗಡಣಾ ಸಮಿತಿಯ ಸಲಹೆಯಂತೆ ಮೊದಲಿನ ರಾಜ್ಯಗಳನ್ನು ರದ್ದುಗೊಳಿಸಿ ಭಾಷಾಧಾರಿತ ವಿಂಗಡಣೆಯ ಅಗತ್ಯವನ್ನು ಪ್ರತಿಪಾದಿಸಿತು. ಫಲವಾಗಿ ಸಂವಿಧಾನಾತ್ಮಕ ತಿದ್ದುಪಡಿ ಮೂಲಕ ಕರ್ನಾಟಕದ ಏಕೀಕರಣವು ಸಾಕಾರಗೊಂಡಿತು.

ಈ ಮೇಲೆ ಸಂಕ್ಷೇಪ್ತವಾಗಿ ತಿಳಿಸಲಾಗಿರುವ ಅಂಶಗಳು ಕರ್ನಾಟಕದ ಏಕೀಕರಣ ಚಳುವಳಿಗೆ ಜವಾಬ್ದಾರಿಯಾಗಿದ್ದವು. ಪ್ರಸ್ತಾಪಿತ ಅಂಶಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಏಕೀಕರಣದ ಚಳುವಳಿಯನ್ನು ಹೆಮ್ಮರವಾಗಿ ಬೆಳೆಸಲು ಕಾರಣವಾಗಿದ್ದವು. ಈ ಕುರಿತಾದ ವಿವರಗಳನ್ನು ಇದೇ ಪತ್ರಿಕೆಯ ಅನ್ಯ ಅಧ್ಯಾಯಗಳಲ್ಲಿ ತಾವು ಸೂಚ್ಯವಾಗಿ ಗುರುತಿಸಬಹುದಾಗಿದೆ.

[IV.] ಕರ್ನಾಟಕದ ಏಕೀಕರಣದಲ್ಲಿ ಕರ್ನಾಟಕ ವಿದ್ಯಾ ವರ್ಧಕ ಸಂಘದ ಪಾತ್ರ [Role of Karnataka Vidya Vardhaka Sangha in Karnataka Unification]:

19 ನೇ ಶತಮಾನದ ಕೊನೆಯ ದಶಕಗಳಲ್ಲಿ ಮುಂಬೈ ಕರ್ನಾಟಕ ಪ್ರದೇಶದಲ್ಲಿ ಕರ್ನಾಟಕದ ಏಕೀಕರಣವು ಮೊಳಕೆಯೊಡೆಯಿತು. ಈ ಏಕೀಕರಣ ಚಳುವಳಿಗೆ ಸಾಂಸ್ಥಿಕ ಸ್ವರೂಪವನ್ನು ನೀಡಿದ ಸಂಘವೇ ಧಾರವಾಡದ ಕರ್ನಾಟಕ ವಿದ್ಯಾ ವರ್ಧಕ ಸಂಘ. ಆರ್. ಎಚ್. ದೇಶಪಾಂಡೆಯವರ ಮುಂದಾಳತ್ವದಲ್ಲಿ ಜುಲೈ 20, 1890 ರಂದು ಈ ಸಂಘವು ಅಧಿಕೃತವಾಗಿ ಸ್ಥಾಪನೆಗೊಂಡಿತು. ಕನ್ನಡ ಭಾಷಿಕರ ಪ್ರದೇಶಗಳ ಅಖಂಡತೆಯ ಪ್ರತಿಪಾದನೆಯೊಡನೆ ಅದರ ಸಮಗ್ರತೆಯನ್ನು ಕಾಪಾಡುವುದು ಕೆ. ಶಾಮರಾವ್ ಅಧ್ಯಕ್ಷರಾಗಿದ್ದ ಕರ್ನಾಟಕ ವಿದ್ಯಾ ವರ್ಧಕ ಸಂಘದ ಸ್ಥಾಪನೆಗೆ ಪ್ರಧಾನ ಕಾರಣವಾಗಿತ್ತು. ಕನ್ನಡಕ್ಕಾಗಿ ದುಡಿದ ವಿದೇಶಿಯರಾದ ಆರ್. ಎಫ್. ಝಿಗ್ಲರ್, ರೆವರಂಡ್ ಎಫ್. ಕಿಟೆಲ್, ಬಿ. ಎಲ್. ರೈಸ್, ಜಾನ್ ಪ್ಲಿಟ್ ಮೊದಲಾದ ಕ್ರಿಶ್ಚಿಯನ್ ಮಿಶನರಿಗಳು ಈ ಸಂಘದ ಗೌರವ ಸದಸ್ಯರಾಗಿದ್ದರು. ಬಿ. ಎಂ.ಶ್ರೀ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾವ್, ಎ. ಆರ್. ಕೃಷ್ಣಶಾಸ್ತ್ರಿ, ಮಧುರ ಚೆನ್ನ, ಕಡಂಗೋಡ್ಲು ಶಂಕರಭಟ್ಟರಂಥ ಪ್ರಮುಖ ಸದಸ್ಯರ ಸಾರಥ್ಯದೊಂದಿಗೆ ಕನ್ನಡಕ್ಕಾಗಿ ಕಾರ್ಯ ಆರಂಭಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘವು ಕರ್ನಾಟಕ ಏಕೀಕರಣದ ಪ್ರಮುಖ ಚೈತನ್ಯ ಶಕ್ತಿ ಎನಿಸಿಕೊಂಡಿತ್ತು. ಭಾರತದ ಭೂಪಟದಲ್ಲಿ ಅಖಂಡ ಕರ್ನಾಟಕದ ನಕ್ಷೆ ಮೂಡಲು ಅಂದರೆ ಕರ್ನಾಟಕದ ಏಕೀಕರಣ ಹೋರಾಟಕ್ಕೆ ಮೂಲ ಕಾರಣವಾದ



ಕರ್ನಾಟಕ ವಿದ್ಯಾ ವರ್ಧಕ ಸಂಘದ ಪಾತ್ರವನ್ನು ಕೆಳಗೆ ವಿವರಿಸಲಾದ ಅಂಶಗಳ ಬೆಳಕಿನಲ್ಲಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ.

1. **ಕನ್ನಡ ಪರವಾದ ಉದ್ದೇಶಗಳು:** ಕರ್ನಾಟಕದ ಏಕೀಕರಣ ಚಳುವಳಿಯ ಆಧಾರವೇ ಕನ್ನಡ ಭಾಷೆ. ವಿದ್ಯಾ ವರ್ಧಕ ಸಂಘವು ಕನ್ನಡದ ಬಲವರ್ಧನೆಗೆ ಪೂರಕವಾದ ಪ್ರಾಥಮಿಕ ಉದ್ದೇಶಗಳನ್ನು ಹೊಂದುವ ಮೂಲಕ ಏಕೀಕರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿತು. ಆ ಉದ್ದೇಶಗಳೆಂದರೆ

ಅ. ಕನ್ನಡ ಭಾಷೆಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ರಕ್ಷಿಸುವುದು.

ಆ. ಕನ್ನಡ ಭಾಷೆಯ ಗ್ರಂಥಗಳ ರಚನೆಯನ್ನು ಪ್ರೋತ್ಸಾಹಿಸುವುದು.

ಇ. ಕನ್ನಡ ಭಾಷೆಗೆ ಅನ್ಯ ಭಾಷೆಯ ಗ್ರಂಥಗಳನ್ನು ಅನುವಾದಿಸಲು ಉತ್ತೇಜಿಸುವುದು.

ಈ. ಕನ್ನಡ ಭಾಷಿಕರಲ್ಲಿ ಏಕತೆಯನ್ನು ಮೂಡಿಸುವುದು.

ಉ. ಕನ್ನಡ ಭಾಷಿಕರಿಗಾಗಿ ಪ್ರತ್ಯೇಕ ಪ್ರಾಂತ್ಯ ರಚನೆಗೆ ಸರ್ಕಾರವನ್ನು ಒತ್ತಾಯಿಸುವುದು.

2. **ಪತ್ರಿಕೆಗಳ ಪ್ರಕಟಣೆ:** ತನ್ನ ಉದ್ದೇಶಗಳನ್ನು ಸಾಧಿಸಲು ಸಂಘವು 1896 ರಲ್ಲಿ ವಾಗ್ಭೂಷಣ ಎಂಬ ಪತ್ರಿಕೆಯನ್ನು ಆರಂಭಿಸಿತು. ಮುಂದೆ ಬೆನಗಲ್ ರಾಮರಾಯರ ಸಂಪಾದಕತ್ವದಲ್ಲಿ ಸುವಾಸಿನಿ ಎಂಬ ಪತ್ರಿಕೆಯನ್ನು ಹೊರ ತಂದಿತು. ಈ ಪತ್ರಿಕಾ ಪ್ರಕಟಣೆಯು ಕನ್ನಡಿಗರಲ್ಲಿ ಭಾಷಾಭಿಮಾನ ಮತ್ತು ಏಕತೆಯನ್ನು ಬೆಳೆಸಲು ನೆರವಾಯಿತಲ್ಲದೇ 1903 ರಲ್ಲಿ ಏಕೀಕೃತ ಕರ್ನಾಟಕದ ಬೇಡಿಕೆಯನ್ನು ಪ್ರತಿಪಾದಿಸಲು ಕಾರಣವಾಯಿತು.

3. **ಪುಸ್ತಕಗಳ ಪ್ರಕಟಣೆ:** ನೂರಾ ಮೂವತ್ತೆರಡು ವರ್ಷಗಳ ತನ್ನ ಇತಿಹಾಸದಲ್ಲಿ ಸಂಘವು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಗ್ರಂಥ ಪ್ರಕಟಣೆಯೇ ಅಸಾಧ್ಯ ಎನ್ನುವ ಹಂತದಲ್ಲಿ ಪ್ರಕಟಣಾ ಕಾರ್ಯ ಕೈಗೆತ್ತಿಕೊಂಡಿದ್ದರಿಂದ ಮಹತ್ವದ ಪ್ರಕಟಣೆಗಳು ಹಸ್ತಪ್ರತಿ ರೂಪದಿಂದ ಪುಸ್ತಕ ರೂಪ ಪಡೆದವು. 1892 ರಲ್ಲಿ ಭವಭೂತಿಯ ಸಂಸ್ಕೃತ ನಾಟಕದ ಕನ್ನಡಾನುವಾದ `ಉತ್ತರ ರಾಮ ಚರಿತೆ' ಸಂಘದ ಮೊದಲ ಪ್ರಕಟಣೆಯಾಗಿ ಹೊರಬಂದಿತು. ನಂತರದಲ್ಲಿ ಮಾಲವಿಕಾಗ್ನಿ ಮಿತ್ರ, ವೇಣಿ ಸಂಹಾರ, ಬಾಣ ಕಾದಂಬರಿ, ಶಬ್ದಾನುಶಾಸನ, ಕನ್ನಡದ ನೆಲ, ಕರ್ನಾಟಕ ಜನಜೀವನ ಮೊದಲಾದ ಮೌಲಿಕ ಕೃತಿಗಳು ಹೊರಬಂದವು. ಈ ಉಪಕ್ರಮವು ಜನರಲ್ಲಿ ತಮ್ಮ ಭಾಷೆಯ ಶ್ರೀಮಂತಿಕೆಯನ್ನು ಜಾಗೃತಗೊಳಿಸಿ ಏಕೀಕರಣಕ್ಕೆ ಅಣಿಗೊಳ್ಳುವಂತೆ ಮಾಡಿತು.

4. **ನಾಡ ಹಬ್ಬಕ್ಕೆ ಚಾಲನೆ:** 1926 ರಲ್ಲಿ ಡಾ. ದ. ರಾ. ಬೇಂದ್ರೆ ಹಾಗೂ ಬೆಟಗೇರಿ ಕೃಷ್ಣ ಶರ್ಮರಿಂದ ಸಂಘದಡಿ ಆರಂಭಗೊಂಡ ನಾಡಹಬ್ಬ ಕಾರ್ಯಕ್ರಮವು ಏಕೀಕರಣದಲ್ಲಿ ತನ್ನದೇಯಾದ ಪ್ರಭಾವ ಬೀರಿದೆ. ವಿಜಯದಶಮಿಯ ಸಮಯದಲ್ಲಿ ಆಯೋಜಿಸಲ್ಪಡುವ ಕಾರ್ಯಕ್ರಮದಲ್ಲಿ ಸಾಹಿತ್ಯಗೋಷ್ಠಿ ಸೇರಿದಂತೆ ಕನ್ನಡದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು

ಸಂಘ ಆಯೋಜಿಸುತ್ತಾ ಬಂದಿದೆ. ಈ ಪರಿಪಾಠವು ಕನ್ನಡ ನಾಡಿನೆಲ್ಲೆಡೆ ವಿಜಯ ದಶಮಿಯನ್ನು ನಾಡಹಬ್ಬವೆಂದು ಪರಿಗಣಿಸಿ ಸಾಂಸ್ಕೃತಿಕ ಮಹತ್ವ ಪಡೆಯುವಂತೆ ಮಾಡಿದೆ.

5. **ಸಾಂಸ್ಕೃತಿಕ ಚಟುವಟಿಕೆಗಳ ವಿಸ್ತರಣೆ:** ಕೇವಲ ಗ್ರಂಥ ಪ್ರಕಟಣೆಯಲ್ಲದೆ ಕರ್ನಾಟಕ ವಿದ್ಯಾ ವರ್ಧಕ ಸಂಘವು ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಸ್ತಿವ ಒದಗಿಸುತ್ತಾ ಬಂದಿದೆ. ಕನ್ನಡ ಭಾಷೆಯ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ, ಹಳೆಗನ್ನಡ ಬಳಕೆಯನ್ನು ಪೋಷಿಸಲು ಸಾಹಿತ್ಯಿಕ ಪರೀಕ್ಷೆಗಳು, ವಿದ್ವಾಂಸರಿಗಾಗಿ ಗಮಕ ವರ್ಗಗಳು, ಗ್ರಂಥಾಲಯಗಳ ಸಂಘ ರಚನೆಯಂತಹ ಸಾಂಸ್ಕೃತಿಕ ಚಟುವಟಿಕೆಗಳಿಗೆ ಕಾಲಾನುಕ್ರಮದಲ್ಲಿ ಆದ್ಯತೆ ನೀಡುತ್ತಾ ಸಂಘ ಮುನ್ನಡೆಯಿತು. ಜೊತೆಗೆ 1907 ರಲ್ಲಿ ಗ್ರಂಥಕರ್ತರ ಸಮ್ಮೇಳನ ಏರ್ಪಡಿಸಿ ಕನ್ನಡ ಭಾಷೆಯನ್ನು ಕ್ರಮಬದ್ಧಗೊಳಿಸಲು ಕಾರಣವಾಯಿತು. ಇದರೊಡನೆ ಕನ್ನಡ ಸಾಹಿತ್ಯ ಪರಿಷತ್ತಿನ ರಚನೆಗೆ ಮಾರ್ಗದರ್ಶನವನ್ನು ಸಂಘ ನೀಡಿತು. ಗಡಿ ಕನ್ನಡಿಗರ ಹಿತರಕ್ಷಣೆಗೆ ಧ್ವನಿಸುವ ಮೂಲಕ ಸಾಂಸ್ಕೃತಿಕ ಅಸ್ಮಿತೆಯನ್ನು ಕಾಪಾಡಲು ಸಂಘ ಶ್ರಮಿಸುತ್ತಾ ಬಂದಿದೆ. ಫಲವಾಗಿ ಏಕೀಕರಣ ಚಳುವಳಿಯು ಕರ್ನಾಟಕ ವಿದ್ಯಾವರ್ಧಕ ಸಂಘದ ಸಾಂಸ್ಕೃತಿಕ ಮೈಲಿಗಲ್ಲುಗಳಿಂದ ಆಳವಾಗಿ ಬೇರೂರಿತು.

6. **ವಿವಿಧ ಗೊತ್ತುವಳಿಗಳ ಅಂಗಿಕಾರ:** 1907ರಲ್ಲಿ ಪಠ್ಯಪುಸ್ತಕಗಳ ಭಾಷೆಯಲ್ಲಿ ಏಕರೂಪ ಅವಶ್ಯವೆಂಬ ನಿರ್ಧಾರವನ್ನು ಸಂಘ ಕೈಗೊಂಡಿತು. ಅಂತೆಯೇ ವರ್ನಾಕ್ಯುಲರ್ ಟೆಕ್ಸ್ಟ್ ಬುಕ್ ಕಮಿಟಿಯಲ್ಲಿ ತನಗೆ ಪ್ರಾತಿನಿಧ್ಯ ಅವಶ್ಯವೆಂದು 1931 ರಲ್ಲಿ ನಿಲುವಳಿಯೊಂದನ್ನು ಸಂಘವು ಅಂಗಿಕರಿಸಿತು. ಇದರೊಡನೆ ಅಖಿಲ ಭಾರತ ಆಕಾಶವಾಣಿಯಲ್ಲಿ ಕನ್ನಡಕ್ಕೆ ಮಿಕ್ಕ ಭಾಷೆಗಳ ಕಾರ್ಯಕ್ರಮದಷ್ಟೇ ಅವಕಾಶ ಬೇಕು ಎಂಬುದಾಗಿ 1939 ರಲ್ಲಿ ಒತ್ತಾಯಿಸಿತು. ಇವೇ ಮೊದಲಾದ ಗೊತ್ತುವಳಿಗಳನ್ನು ಅಂಗೀಕರಿಸಿ ಅವನ್ನು ಕಾರ್ಯಗತಗೊಳಿಸಲು ಸಂಘ ಮಾಡಿದ ಪ್ರಯತ್ನಗಳು ಸ್ಮರಣೀಯವಾಗಿವೆ.

ಈ ಮೇಲೆ ಪ್ರಸ್ತಾಪಿಸಲಾಗಿರುವ ವಿವಿಧ ಅಂಶಗಳ ಬೆಳಕಿನಲ್ಲಿ ಕರ್ನಾಟಕದ ಏಕೀಕರಣದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾತ್ರವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಕನ್ನಡ, ಕನ್ನಡಿಗ ಹಾಗೂ ಕರ್ನಾಟಕದ ಪರಿಕಲ್ಪನೆಯನ್ನು ಮೂಡಿಸಿ ಬೆಳೆಸುವಲ್ಲಿ ಕಾರ್ಯಾಚರಿಸಿದ ಕರ್ನಾಟಕ ವಿದ್ಯಾ ವರ್ಧಕ ಸಂಘದ ಕಾಣಿಕೆ ಅಪಾರವೆಂಬುದು ಅದರ ಮೇಲಿನ ಪಾತ್ರದಿಂದ ನಮಗೆ ಸ್ಪಷ್ಟವಾಗುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ, ಇಂದಿಗೂ ಕನ್ನಡ ನಾಡು ಮತ್ತು ನುಡಿಗಳ ಸಂರಕ್ಷಣೆಗೆ ಕರ್ನಾಟಕ ವಿದ್ಯಾ ವರ್ಧಕ ಸಂಘವು ಶ್ರಮಿಸುತ್ತಿದೆ.

**[V.] ಕರ್ನಾಟಕದ ಏಕೀಕರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರ [Role of Kannada Sahitya Parishat in Karnataka Unification]:**

ಕರ್ನಾಟಕದ ನಾಡು ಮತ್ತು ನುಡಿಗಳ ಪೋಷಣೆಯಲ್ಲಿ ಅನೇಕ ವ್ಯಕ್ತಿಗಳ ಕೊಡುಗೆಯಂತೆ ಕೆಲವು ಸಂಘ ಸಂಸ್ಥೆಗಳೂ ಕಾಣಿಕೆ ನೀಡಿವೆ. ಈ ಪೈಕಿ ಧಾರವಾಡದ ವಿದ್ಯಾ ವರ್ಧಕ ಸಂಘವು ಮೊದಲ ಸ್ಥಾನದಲ್ಲಿದ್ದರೆ ನಂತರದ ಸ್ಥಾನವನ್ನು ಕನ್ನಡ ಸಾಹಿತ್ಯ ಪರಿಷತ್ತು ಗಳಿಸಿದೆ. ಧಾರವಾಡದ ವಿದ್ಯಾ ವರ್ಧಕ ಸಂಘವು ಬೆಂಗಳೂರಿನಲ್ಲಿ ಸಂಘಟಿಸಿದ್ದ ಮೂರನೇ ಗ್ರಂಥ ಕರ್ತರ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ನಿರ್ಧಾರ ಕೈಗೊಳ್ಳಲಾಯಿತು. ಬೆಂಗಳೂರಿನ ಪ್ರಸ್ತುತ ಕೋಟೆ ಪ್ರೌಢಶಾಲೆಯಲ್ಲಿ 1915 ಮೇ ಮೂರರಿಂದ ಐದರವರೆಗೆ ಮೂರು ದಿನಗಳ ಕಾಲ ಸಮಾಲೋಚಿಸಿದ ಬಳಿಕ ಮೇ 5, 1915 ರಂದು ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಗೊಂಡಿತು. ಕನ್ನಡಿಗರು ವಾಸವಾಗಿದ್ದ ಹಲವು ಪ್ರಾಂತ್ಯಗಳ ಪ್ರತಿನಿಧಿಗಳು ಇದರ ಸ್ಥಾಪನೆಗೆ ಸಾಕ್ಷಿಯಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ ಅಧ್ಯಕ್ಷರಾಗಿ ಎಚ್. ವಿ. ನಂಜುಂಡಯ್ಯ ನೇಮಕಗೊಂಡರೆ ಎಂ. ಶಾಮರಾವ್ ಉಪಾಧ್ಯಕ್ಷರಾಗಿ, ಡಾ. ಪಿ. ಎಸ್. ಅಚ್ಯುತರಾವ್ ಕೋಶಾಧ್ಯಕ್ಷರಾಗಿ, ಬಿ. ಕೃಷ್ಣಪ್ಪ ಕಾರ್ಯದರ್ಶಿಯಾಗಿ ನಿಯುಕ್ತರಾದರು. ಪ್ರಥಮ ಕಾರ್ಯನಿರ್ವಾಹಕ ಮಂಡಳಿಗೆ ಮೈಸೂರು ಸಂಸ್ಥಾನದಿಂದ 12 ಮಂದಿ, ಬೊಂಬಾಯಿ ಪ್ರಾಂತ್ಯದಿಂದ 8, ಮದರಾಸು ಪ್ರಾಂತ್ಯದಿಂದ 5, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಇಬ್ಬರು, ಹೈದರಾಬಾದು ಪ್ರಾಂತ್ಯದ ಇಬ್ಬರು ಮತ್ತು ಕೊಡಗು ಪ್ರಾಂತ್ಯದ ಒಬ್ಬರು ಒಟ್ಟು ಮೂವತ್ತು ಮಂದಿ ಸದಸ್ಯರು ಆಯ್ಕೆಗೊಂಡರು. ಕೆ. ಪಿ. ಪುಟ್ಟಣ್ಣಶೆಟ್ಟಿ, ಕರ್ಪೂರ ಶ್ರೀನಿವಾಸರಾವ್, ಎಂ. ಕಾಂತರಾಜೇ ಅರಸು, ಆರ್. ನರಸಿಂಹಾಚಾರ್, ಮುದವೀಡು ಕೃಷ್ಣರಾವ್, ಆಲೂರು ವೆಂಕಟರಾವ್, ಬಿ. ರಾಮರಾವ್, ಟಿ. ಎಸ್. ಚಿಕ್ಕೋಡಿ, ಎಂ. ಮುತ್ತಣ್ಣ ಕಾರ್ಯಕಾರಿ ಮಂಡಳಿಯಲ್ಲಿದ್ದ ಪ್ರಮುಖರು. ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ಏಕೀಕರಣದ ಹೋರಾಟಗಾರರು, ಸಾಹಿತಿಗಳು, ವಿದ್ವಾಂಸರು, ಮೈಸೂರಿನ ಆಡಳಿತಗಾರರು, ಅಧ್ಯಾಪಕರು ಹಾಗೂ ಸಾರ್ವಜನಿಕ ಗಣ್ಯರುಗಳಿಂದ ಕೂಡಿದ್ದ ಪರಿಪೂರ್ಣ ಸಂಸ್ಥೆ ಎನಿಸಿಕೊಂಡು ಕನ್ನಡ ನಾಡು ಮತ್ತು ನುಡಿಗಳ ಸಂರಕ್ಷಣೆಗೆ ಶ್ರಮಿಸಿತು. ಈ ಕೆಳಗಿನ ಅಂಶಗಳ ನೆರವಿನಿಂದ ಕರ್ನಾಟಕದ ಏಕೀಕರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಪಾತ್ರವನ್ನು ನಾವು ಮನವರಿಕೆ ಮಾಡಿಕೊಳ್ಳಬಹುದಾಗಿದೆ.

1. **ಕನ್ನಡ ಭಾಷೆಯ ಪ್ರಚಾರ:** ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆಯನ್ನು ಪ್ರೋತ್ಸಾಹಿಸುವ ಮೂಲಕ ಹಂಚಿ ಹೋಗಿದ್ದ ಕನ್ನಡಿಗರನ್ನು ಒಂದುಗೂಡಿಸಲು ಶ್ರಮಿಸಿತು. ಶಿಕ್ಷಣ, ಸಾಹಿತ್ಯ ಹಾಗೂ ಆಡಳಿತದಲ್ಲಿ ಕನ್ನಡ ಭಾಷೆಗೆ ಆದ್ಯತೆ ಒದಗಿಸುವಂತೆ ಒತ್ತಾಯಿಸುವ ಮೂಲಕ ಕನ್ನಡವನ್ನು ಪ್ರಚುರಪಡಿಸಿತು. ಈ ವಿದ್ಯಮಾನವು ಏಕೀಕರಣದ ಚಳುವಳಿಗೆ ಬಲ ನೀಡಲು ಕಾರಣವಾಯಿತು.

2. **ಸಾಹಿತ್ಯಿಕ ಪುನರುಜ್ಜೀವನ:** ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಪೋಷಿಸಿತು. ಫಲವಾಗಿ ಅನೇಕ ಬರಹಗಾರರು, ಕವಿಗಳು, ನಾಟಕಕಾರರು, ಚಿಂತಕರು ಸಾಹಿತ್ಯ ಕೃಷಿಯಲ್ಲಿ ತೊಡಗುವಂತಾಯಿತು. ಇದರಿಂದ ವಿವಿಧ ಪ್ರಾಂತ್ಯಗಳಲ್ಲಿ ಕನ್ನಡಿಗರು ಹಂಚಿ ಹೋಗಿದ್ದರೂ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಒಂದುಗೂಡಿ ಏಕೀಕರಣಗೊಳ್ಳಲು ಸಾಧ್ಯವಾಯಿತು.

3. ಏಕೀಕರಣದ ಪ್ರತಿಪಾದನೆ: ಕನ್ನಡ ಸಾಹಿತ್ಯ ಪರಿಷತ್ತು ಐತಿಹಾಸಿಕವಾಗಿ ಹಲವು ಸಂಸ್ಥಾನ ಮತ್ತು ಬ್ರಿಟಿಷ್ ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದ ಕನ್ನಡಿಗರ ಏಕೀಕರಣಕ್ಕೆ ಒತ್ತಾಯಿಸಿತು. ತನ್ನ ವಾರ್ಷಿಕ ಸಮ್ಮೇಳನಗಳಲ್ಲಿ ಪರಿಷತ್ತು ಕೈಗೊಂಡ ಗೊತ್ತುವಳಿಗಳು ಕನ್ನಡಿಗರ ಏಕೀಕರಣಕ್ಕೆ ಒತ್ತಾಸೆಯಾಗುವ ಅಂಶಗಳನ್ನು ಒಳಗೊಂಡಿದ್ದವು. ಏಕೀಕರಣದ ಚಳುವಳಿಗೆ ಬೆಂಬಲವಾಗಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದುದಕ್ಕೆ ಹಲವು ನಿದರ್ಶನಗಳಿವೆ. ಹೀಗೆ ಏಕೀಕರಣದಲ್ಲಿ ಪರಿಷತ್ತು ತನ್ನದೇಯಾದ ಪಾತ್ರವನ್ನು ನಿರ್ವಹಿಸಲು ಯಶಸ್ವಿಯಾಯಿತು.

4. ಸಾಂಸ್ಕೃತಿಕ ಅಸ್ಮಿತೆಯ ರಚನೆ: ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಾಹಿತ್ಯ ಸಮ್ಮೇಳನ, ಸಾಹಿತ್ಯ ಪ್ರಕಟಣೆಗಳು ಮತ್ತು ಸಾಹಿತ್ಯ ಕಾರ್ಯಕ್ರಮಗಳ ಮೂಲಕ ಕನ್ನಡಿಗರಲ್ಲಿ ಸಾಂಸ್ಕೃತಿಕ ಅಸ್ಮಿತೆಯನ್ನು ಮೂಡಿಸಿತು. ವಿವಿಧ ಪ್ರದೇಶಗಳಲ್ಲಿ ಹಂಚಿ ಹೋಗಿದ್ದರೂ ಕನ್ನಡಿಗರು ಸಾಂಸ್ಕೃತಿಕ ಅಸ್ಮಿತೆಯಡಿ ಒಂದುಗೂಡಲು ಪರಿಷತ್ತು ನೆರವಾಯಿತು. ಈ ಬೆಳವಣಿಗೆಯು ಏಕೀಕರಣದ ಕೂಗನ್ನು ಇಮ್ಮಡಿಗೊಳಿಸಿತು.

ಈ ಮೇಲೆ ಚರ್ಚಿಸಲಾದ ಅಂಶಗಳ ಬೆಳಕಿನಲ್ಲಿ ಕರ್ನಾಟಕದ ಏಕೀಕರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರವನ್ನು ನಾವು ಸೂಚ್ಯವಾಗಿ ಗುರುತಿಸಬಹುದಾಗಿದೆ. ಕನ್ನಡ ನಾಡು ಮತ್ತು ನುಡಿಗಳ ಉತ್ತೇಜಕ ಸಂಸ್ಥೆಯಾಗಿ ಏಕೀಕರಣದ ಕನಸನ್ನು ನನಸಾಗಿಸುವಲ್ಲಿ ಇತರ ಸಂಘ ಸಂಸ್ಥೆಗಳಿಗಿಂತ ಕಡಿಮೆಯಿಲ್ಲದ ಪಾತ್ರವನ್ನು ಸಾಹಿತ್ಯ ಪರಿಷತ್ತು ನಿರ್ವಹಿಸಿದುದು ಗಮನಾರ್ಹ ಸಂಗತಿ.

## ಮಾದರಿ ಪ್ರಶ್ನೆಗಳು [Model Questions]:

### [A.] ಎರಡು ಅಂಕದ ಪ್ರಶ್ನೆಗಳು:

1. ಏಕೀಕರಣ ಚಳುವಳಿಯ ಅರ್ಥವನ್ನು ಬರೆಯಿರಿ.
2. ಭಾಷಾಧಾರಿತ ಏಕೀಕರಣ ಚಳುವಳಿಗೆ ಕಾರಣಗಳಾವುವು?
3. ಕರ್ನಾಟಕದ ಏಕೀಕರಣ ಚಳುವಳಿಗೆ ಕಾರಣವೇನು?
4. ಕರ್ನಾಟಕದ ಏಕೀಕರಣ ಚಳುವಳಿಗೆ ನೆರವಾದ ವಿದೇಶಿಯರನ್ನು ಹೆಸರಿಸಿರಿ.
5. ಕರ್ನಾಟಕದ ಏಕೀಕರಣ ಚಳುವಳಿಗೆ ಸಹಕಾರಿಯಾಗಿದ್ದ ಮೂರು ಸಂಸ್ಥೆಗಳನ್ನು ತಿಳಿಸಿರಿ.
6. ಭಾಷಾಧಾರಿತ ರಾಜ್ಯಗಳ ರಚನೆ ಕುರಿತಂತೆ ಸ್ವತಂತ್ರ ಭಾರತದಲ್ಲಿ ರಚನೆಗೊಂಡಿದ್ದ ಮೂರು ಸಮಿತಿಗಳನ್ನು ಹೆಸರಿಸಿರಿ.
7. ವಿಶಾಲ ಮೈಸೂರು ರಚನೆಗೂ ಮುನ್ನ ಬಾಂಬೇ ಪ್ರಾಂತ್ಯದಲ್ಲಿದ್ದ ಕನ್ನಡಿಗರ ಪ್ರದೇಶಗಳನ್ನು ತಿಳಿಸಿರಿ.



8. ಕರ್ನಾಟಕದ ಏಕೀಕರಣದ ಮೊದಲು ಕನ್ನಡಿಗರನ್ನು ಒಳಗೊಂಡಿದ್ದ ನಾಲ್ಕು ಸಂಸ್ಥಾನಗಳನ್ನು ಹೆಸರಿಸಿರಿ.
9. ಕರ್ನಾಟಕದ ಏಕೀಕರಣವನ್ನು ಬೆಂಬಲಿಸಿದ ಪ್ರಮುಖ ಪತ್ರಿಕೆಗಳನ್ನು ಹೆಸರಿಸಿರಿ.
10. ಕರ್ನಾಟಕದ ಏಕೀಕರಣ ಚಳುವಳಿಗೆ ಪ್ರಭಾವ ಬೀರಿದ ಗೀತೆಗಳಾವುವು?
11. ಕರ್ನಾಟಕ ವಿದ್ಯಾ ವರ್ಧಕ ಸಂಘವು ಎಲ್ಲಿ ಮತ್ತು ಯಾವಾಗ ಸ್ಥಾಪನೆಗೊಂಡಿತು?
12. ಕರ್ನಾಟಕ ವಿದ್ಯಾ ವರ್ಧಕ ಸಂಘದ ಮೂರು ಉದ್ದೇಶಗಳನ್ನು ಬರೆಯಿರಿ.
13. ಕನ್ನಡ ಸಾಹಿತ್ಯ ಪರಿಷತ್ತು ಎಲ್ಲಿ ಮತ್ತು ಯಾವಾಗ ಸ್ಥಾಪನೆಗೊಂಡಿತು?
14. ಸಾಂಸ್ಕೃತಿಕ ಅಸ್ಮಿತೆಯ ರಕ್ಷಣೆಗೆ ಕನ್ನಡ ಸಾಹಿತ್ಯ ಪರಿಷತ್ತು ಕಾರಣವಾಯಿತು. ಹೇಗೆ?

### [B.] ಐದು ಅಂಕದ ಪ್ರಶ್ನೆಗಳು:

1. ಏಕೀಕರಣ ಚಳುವಳಿ ಕುರಿತು ಟಿಪ್ಪಣಿ ಬರೆಯಿರಿ.
2. ಕರ್ನಾಟಕದ ಏಕೀಕರಣ ಚಳುವಳಿಗೆ ಕಾರಣವಾದ ಅಂಶಗಳನ್ನು ಚರ್ಚಿಸಿರಿ.
3. ಕರ್ನಾಟಕದ ಏಕೀಕರಣದಲ್ಲಿ ಕರ್ನಾಟಕ ವಿದ್ಯಾ ವರ್ಧಕ ಸಂಘದ ಪಾತ್ರವನ್ನು ಪರಿಶೀಲಿಸಿರಿ.
4. ಏಕೀಕರಣದಲ್ಲಿ ಕನ್ನಡ ಸಾಹಿತಯ ಪರಿಷತ್ತಿನ ಪಾತ್ರವನ್ನು ಪರಿಶೀಲಿಸಿರಿ.

### [C.] ಹತ್ತು ಅಂಕದ ಪ್ರಶ್ನೆಗಳು:

1. ಕರ್ನಾಟಕದ ಏಕೀಕರಣದ ಚಳುವಳಿಯನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
2. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕರ್ನಾಟಕ ವಿದ್ಯಾ ವರ್ಧಕ ಸಂಘಟನೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತುಗಳ ಪಾತ್ರವನ್ನು ಪರಿಶೀಲಿಸಿರಿ.

ಅಧ್ಯಾಯ 5:

# ಕರ್ನಾಟಕತ್ವಕ್ಕೆ ಕಾಣಿಕೆಗಳು

## [Contributions to Karnatakatva].

### ಪ್ರಸ್ತಾವನೆ [Introduction]:

ಭಾರತವು ಸ್ವತಂತ್ರಗೊಂಡ ಬಳಿಕ 1956 ರಲ್ಲಿ ಭಾಷಾಧಾರಿತ ರಾಜ್ಯಗಳನ್ನು ರಚಿಸಲಾಯಿತು. ಈ ವೇಳೆಯಲ್ಲಿ ಕನ್ನಡ ಭಾಷಿಕರಿಗೆ ವಿಶಾಲ ಮೈಸೂರು ರಾಜ್ಯ ಸೃಷ್ಟಿಸಲ್ಪಟ್ಟಿತು. ಆ ಮೊದಲು ಮೈಸೂರು ಸಂಸ್ಥಾನದಲ್ಲಿ ಮಾತ್ರವಲ್ಲದೇ ಮದ್ರಾಸ್, ಹೈದರಾಬಾದ್, ಬಾಂಬೇ ಪ್ರಾಂತ್ಯಗಳು ಸೇರಿದಂತೆ ಇತರ ಪ್ರದೇಶಗಳಲ್ಲಿ ಕನ್ನಡಿಗರು ಹಂಚಿ ಹೋಗಿದ್ದರು. ಕರ್ನಾಟಕ ಏಕೀಕರಣ ಚಳುವಳಿಯ ಫಲವಾಗಿ ಹಳೆಯ ಮೈಸೂರಿನೊಡನೆ ನೂತನ ಪ್ರದೇಶಗಳನ್ನು ಸೇರ್ಪಡೆಗೊಳಿಸುವ ಮೂಲಕ ವಿಶಾಲ ಮೈಸೂರು ರಾಜ್ಯ ರಚನೆಗೊಂಡಿತು. ಮುಂದೆ 1973 ರಲ್ಲಿ ವಿಶಾಲ ಮೈಸೂರು ರಾಜ್ಯವು ಕರ್ನಾಟಕವೆಂದು ಮರು ನಾಮಕರಣಗೊಂಡು ಪ್ರಸ್ತುತ ಕನ್ನಡಿಗರ ನೆಲೆಯಾಗಿದೆ. ಕನ್ನಡ ಭಾಷೆ ಮತ್ತು ಕನ್ನಡಿಗರ ಪ್ರದೇಶವನ್ನು ಪ್ರತಿನಿಧಿಸುವ ಕರ್ನಾಟಕತ್ವ ಸಾಕಾರಗೊಳಿಸಲು ಅನೇಕ ಮುತ್ಸದ್ದಿಗಳು ಶ್ರಮಿಸಿದ್ದು ಅವರುಗಳಲ್ಲಿ ರಾಜಕೀಯ ಆಯಾಮದೊಡನೆ ಕರ್ನಾಟಕತ್ವಕ್ಕೆ ಕೊಡುಗೆ ನೀಡಿದ ಪ್ರಮುಖರನ್ನು ಕುರಿತಂತೆ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

### [I.] ಕರ್ನಾಟಕತ್ವಕ್ಕೆ ಆಲೂರು ವೆಂಕಟರಾಯರ ಕೊಡುಗೆ [Contribution of Alooru Venkatarao to Karnatakatva]:

ಕನ್ನಡ ಹಾಗೂ ಕರ್ನಾಟಕತ್ವದ ಕಲ್ಪನೆ ಇಲ್ಲದಿದ್ದ ಸಮಯದಲ್ಲಿಯೇ ಕನ್ನಡ ನಾಡಿನ ಕನಸನ್ನು ಕಂಡು ಕರ್ನಾಟಕದ ಅಸ್ತಿತ್ವವನ್ನು ಸಾಧ್ಯವಾಗಿಸಲು ಹರಸಾಹಸ ಮಾಡಿದವರಲ್ಲಿ ಆಲೂರು ವೆಂಕಟರಾಯರು ಅಗ್ರಗಣ್ಯರು. ಕನ್ನಡ ಭಾಷೆ, ಸಂಸ್ಕೃತಿ, ಪ್ರದೇಶಗಳ ವಿಚಾರದಲ್ಲಿ ಮಹತ್ವದ ಕಾಣಿಕೆ ನೀಡುವ ಮೂಲಕ ಆಲೂರು ವೆಂಕಟರಾಯರು 'ಕನ್ನಡ ಕುಲಪುರೋಹಿತ' ಎಂದೇ ಖ್ಯಾತರಾಗಿರುವರು. ಮೈಸೂರು ಪ್ರಾಂತಕ್ಕೆ ಮಾತ್ರ ಸೀಮಿತವಾಗಿದ್ದ ಕನ್ನಡತ್ವ ಹಾಗೂ ಕರ್ನಾಟಕತ್ವ ವಿಚಾರಗಳನ್ನು ಹೈದ್ರಾಬಾದ್, ಕೊಡಗು, ಮದ್ರಾಸ್ ಮತ್ತು ಬೆಳಗಾವಿ ಪ್ರಾಂತಗಳಲ್ಲಿನ ಜನರಿಗೆ ತುಂಬಿ ಅವರೂ ಸಹ ಕರ್ನಾಟಕ ಏಕೀಕರಣ ಚಳುವಳಿಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿದವರು ಆಲೂರರು. ವಕೀಲರಾಗಿ, ಸಾಹಿತಿಗಳಾಗಿ, ಪತ್ರಿಕಾ ಸಂಪಾದಕರಾಗಿ, ಪ್ರಕಾಶಕರಾಗಿ, ಅನೇಕ ಸಂಘ ಸಂಸ್ಥೆಗಳ



ಸಂಸ್ಥಾಪಕರಾಗಿ, ಸಂಘಟಕರಾಗಿ, ಸಂಶೋಧಕರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಆಲೂರರು ಕರ್ನಾಟಕತ್ವಕ್ಕೆ ನೀಡಿದ ಕಾಣಿಕೆಯು ಅನನ್ಯ.

ಆಲೂರು ವೆಂಕಟರಾಯರು ಜುಲೈ 12, 1880 ರಂದು ಜನಿಸಿದರು. ಅವರ ಜನ್ಮಸ್ಥಳ ವಿಜಯಪುರವಾದರೂ ಅವರು ಬೆಳೆದ ಊರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹೊಳೆ ಆಲೂರು. ಭೀಮರಾಯ ಮತ್ತು ಭಾಗೀರಥಿಬಾಯಿ ಆಲೂರರ ತಂದೆ ತಾಯಿಗಳಾಗಿದ್ದರು. ಧಾರವಾಡದ ವಿದ್ಯಾರ್ಥಿ ಜೀವನವು ವೆಂಕಟರಾಯರ ಜೀವನದ ಎಲ್ಲ ಬೆಳವಣಿಗೆಗಳಿಗೆ ನಾಂದಿಯಾಯಿತು. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ಅವರು ಕನ್ನಡದ ವಿಚಾರದಲ್ಲಿ ಆಸಕ್ತಿ ತಳೆದಿದ್ದರು. ಮುಂದೆ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಓದುತ್ತಿದ್ದಾಗ ಭಾಟೆ, ಕರ್ವೆ, ರಾಜವಾಡೆ, ಗೋಖಲೆ ಮುಂತಾದವರು ಆಲೂರರಿಗೆ ಸ್ಫೂರ್ತಿಯ ಸೆಲೆಯಾದರು. ಬಾಲ ಗಂಗಾಧರ ತಿಲಕರು ವೆಂಕಟರಾಯರ ತಾರುಣ್ಯದ ಧೀರೋದಾತ್ತ ನಾಯಕರಾದರು. ಕರ್ನಾಟಕತ್ವಕ್ಕೆ ಸಂಬಂಧಿಸಿದಂತೆ ಆಲೂರು ವೆಂಕಟರಾಯರ ಪ್ರಧಾನ ಪಾತ್ರವನ್ನು ಕೆಳಗಿನ ಅವರ ಉಪಕ್ರಮಗಳ ಬೆಳಕಿನಲ್ಲಿ ಅರ್ಥೈಸಲು ಪ್ರಯತ್ನಿಸಲಾಗಿದೆ.

**1. ಕರ್ನಾಟಕದ ಗತ ವೈಭವದ ಮನವರಿಕೆಗೆ ಪ್ರಯತ್ನ:** 1905 ರಲ್ಲಿ ಹಂಪಿಯ ಆನೆಗೊಂದಿ ಸೇರಿದಂತೆ ಹಂಪಿಯ ಪ್ರವಾಸಕ್ಕೆ ಆಲೂರರು ತೆರಳಿದ್ದರು. ಅಲ್ಲಿನ ಪರಿಸರವನ್ನು ಕಂಡ ಆಲೂರರು ಹಿಂದಿನ ವೈಭವವನ್ನು ಮರಳಿ ಸ್ಥಾಪಿಸಬೇಕೆಂಬ ಚಿಂತನೆ ಮೂಡಿಸಿಕೊಂಡರು. ಈ ಚಿಂತನೆಯು ಅವರ ಮನದಲ್ಲಿ ಅನೇಕ ವಿಚಾರ ತರಂಗಗಳನ್ನು ಮೂಡಿಸಿ ಕರ್ನಾಟಕತ್ವದ ಕಲ್ಪನೆ ಒಡಮೂಡಿತ್ತು. ಹೃದಯದಲ್ಲಿ ಒಡಮೂಡಿದ್ದ ಕರ್ನಾಟಕತ್ವದ ಕಲ್ಪನೆಯನ್ನು ಸಾಕಾರಗೊಳಿಸಲು ಆಲೂರರು ತಮ್ಮನ್ನು ತಾವೇ ಮಾನಸಿಕವಾಗಿ ಮತ್ತು ದೈಹಿಕವಾಗಿ ಅಣಿಗೊಳಿಸಿಕೊಂಡರು. ಕರ್ನಾಟಕದ ಬಗ್ಗೆ ಕನ್ನಡಿಗರಲ್ಲಿ ಆಳವಾದ ಅಭಿಮಾನದ ಕೊರತೆಯನ್ನು ಹೋಗಲಾಡಿಸಿ ಕರ್ನಾಟಕದ ನಿಜ ವೈಭವವನ್ನು ಕನ್ನಡಿಗರ ಮುಂದಿಡುವುದೇ ಗತ ವೈಭವದ ಸ್ಥಾಪನೆಗೆ ಮದ್ದು ಎಂಬ ನಿಲುವಿಗೆ ಆಲೂರರು ಬದ್ಧರಾದರು.

ಸುಮಾರು 12 ವರ್ಷಗಳ ಕಾಲ ಕರ್ನಾಟಕದ ಐತಿಹಾಸಿಕ ಸ್ಥಳಗಳಾದ ಅಣ್ಣಿಗೇರಿ, ಲಕ್ಕುಂಡಿ, ಲಕ್ಷ್ಮೇಶ್ವರ, ಹಳೇಬೀಡು, ಬೇಲೂರು, ಕಾರ್ಲೆ, ಕಾನ್ಹೇರಿ, ಬಂಕಾಪುರ, ಬದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದವುಗಳನ್ನು ಎತ್ತಿನ ಬಂಡಿಯಲ್ಲಿ ಸುತ್ತಾಡಿ ಮಾಹಿತಿ ಸಂಗ್ರಹಿಸಿದರು. ವಿವಿಧ ಮಾಹಿತಿಯನ್ನು ಅಧ್ಯಯನ ನಡೆಸಿದುದರ ಫಲವಾಗಿ 1917 ರಲ್ಲಿ "ಕರ್ನಾಟಕ ಗತವೈಭವ" ಎಂಬ ಕೃತಿಯನ್ನು ಆಲೂರರು ರಚಿಸಿದರು. ಆಲೂರರ ಈ ಕೃತಿಯು ಕನ್ನಡಿಗರಲ್ಲಿ ಕನ್ನಡಾಭಿಮಾನವನ್ನು ಮೂಡಿಸಿತಲ್ಲದೇ ಕರ್ನಾಟಕತ್ವದ ಕಿಚ್ಚನ್ನು ಹೊತ್ತಿಸಿ ತಾಯ್ನೆಲ ಮತ್ತು ತಾಯ್ನಾಡಿನ ರಕ್ಷಣೆಗಾಗಿ ಕನ್ನಡಿಗರನ್ನು ಬಡಿದೆಬ್ಬಿಸಿತು.

**2. ರಾಷ್ಟ್ರೀಯ ಶಾಲೆಗಳ ಸ್ಥಾಪನೆ:** ಸ್ವಧರ್ಮ, ಸ್ವದೇಶಿ, ಸ್ವಭಾಷೆ ಹಾಗೂ ಸ್ವರಾಜ್ಯ ಇವುಗಳ ಸಾಧನೆಗಾಗಿ ಆಲೂರರು ವಕೀಲಿ ವೃತ್ತಿಯನ್ನು ತ್ಯಜಿಸಿ ತಮ್ಮ ಕನಸಿನ ಕೂಸಾದ

ಕರ್ನಾಟಕ ನೂತನ ವಿದ್ಯಾಲಯವೆಂಬ ರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸಿದರು. ಹುಬ್ಬಳ್ಳಿ, ನರಗುಂದ, ನವಲಗುಂದ, ಹಾನಗಲ್ಲು, ಅಗಡಿ, ಬಾಗಲಕೋಟೆ, ಬದಾಮಿ, ಮುಂತಾದ ಕಡೆಗಳಲ್ಲಿ ರಾಷ್ಟ್ರೀಯ ಶಾಲೆಗಳನ್ನು ತೆರೆದರು. ಅಲ್ಲಿ ಕಲಿಯುವ ಕನ್ನಡಿಗರು ಸ್ವಾವಲಂಬಿಗಳಾಗಬೇಕೆಂಬ ಆಶಯದೊಡನೆ ಬೆಂಕಿಕಡ್ಡಿ, ಸೀಸದಕಡ್ಡಿ, ಮಂಗಳೂರು ಹೆಂಚು, ಸಕ್ಕರೆ ತಯಾರಿಕೆ, ಬಡಿಗತನ, ಮುದ್ರಣ ಮುಂತಾದ ಗುಡಿಕೈಗಾರಿಕೆಗಳನ್ನು ಕಲಿಸುತ್ತಿದ್ದರು. ನಂತರದ ದಿನಗಳಲ್ಲಿ ಕೈಗಾರಿಕೀಕರಣದ ಪೈಪೋಟಿ ಎದುರಿಸಲಾರದೆ ರಾಷ್ಟ್ರೀಯ ಶಾಲೆಗಳನ್ನು ಮುಚ್ಚುವ ಸ್ಥಿತಿ ತಲುಪಿದಾಗ ಆಲೂರರು ಎದೆಗುಂದಲಿಲ್ಲ. ಕನ್ನಡಿಗರ ಸ್ವಾವಲಂಬಿ ಬದುಕಿಗಾಗಿ ಅವಿರತವಾಗಿ ಆಲೂರರು ತಮ್ಮ ಶಾಲೆಗಳ ಮೂಲಕ ಶ್ರಮಿಸಿದರು.

3. **ಕರ್ನಾಟಕದ ಏಕೀಕರಣ ಹೋರಾಟಕ್ಕೆ ಬೆಂಬಲ:** 1915 ರಿಂದ ಕರ್ನಾಟಕ ಏಕೀಕರಣ ಚಳುವಳಿ ಅತ್ಯಂತ ಬಿರುಸಿನಿಂದ ಸಾಗಿತು. ಆಲೂರರು ನಾರಾಯಣ ರಾಜಪುರೋಹಿತ, ನರಗುಂದದ ಭೀಮರಾಯರು, ನಾರಾಯಣ ದೇಶಪಾಂಡೆ ಮುಂತಾದವರೊಡನೆ ಸೇರಿ ಧಾರವಾಡ ಹಾಗೂ ಬೆಳಗಾವಿಗಳ ಪರಿಸರದಲ್ಲಿ ಹೋರಾಟ ನಡೆಸಿದರು. ಸಾರ್ವಜನಿಕ ಸಭೆಗಳನ್ನು ಕನ್ನಡದಲ್ಲಿಯೇ ನಡೆಸಬೇಕೆಂದು ಆಗ್ರಹಿಸಿದ ಇವರುಗಳು ಕನ್ನಡಿಗರು ಕನ್ನಡದಲ್ಲಿಯೇ ಮಾತನಾಡಲು ಪ್ರೇರೇಪಿಸಿದರು. ರಾಜ್ಯದ ನಾನಾ ಭಾಗಗಳಲ್ಲಿ ಬೇರೆಬೇರೆ ನಾಯಕರ ನೇತೃತ್ವದಲ್ಲಿ ಚಳುವಳಿ ನಡೆಸುತ್ತಿದ್ದವರನ್ನೆಲ್ಲಾ ಒಂದೆಡೆ ಸೇರಿಸುವ ಉದ್ದೇಶದಿಂದ 1936 ರಲ್ಲಿ ಜರುಗಿದ ಹಂಪಿಯ 'ವಿಜಯನಗರ ಷಟ್ಶತಮಾನೋತ್ಸವ'ವನ್ನು ಏರ್ಪಡಿಸಿದ ಆಲೂರರು ಅದರ ಸಾಕಾರಕ್ಕೆ ದುಡಿದರು.

4. **ಕನ್ನಡ ಸಾಹಿತ್ಯ ಪರಿಷತ್‌ನ ಸ್ಥಾಪನೆಗೆ ಪ್ರೇರಣೆ:** ಕನ್ನಡ ನಾಡು ನುಡಿಯ ಸೇವೆಗಾಗಿ ಒಂದು ಪ್ರತ್ಯೇಕವಾದ ಸಂಸ್ಥೆಯ ಅವಶ್ಯಕತೆಯನ್ನು ಆಲೂರರು ಮನಗಂಡರು. ಫಲವಾಗಿ 1914 ರಲ್ಲಿ ಬೆಂಗಳೂರಿನಲ್ಲಿ 'ಕನ್ನಡ ಗ್ರಂಥಕರ್ತರ ಸಮ್ಮೇಳನ' ನಡೆಸುವ ಮೂಲಕ ತಮ್ಮ ಮನದಾಳದ ಅನಿಸಿಕೆಯನ್ನು ಪ್ರಸ್ತಾಪಿಸಿದರು. ನಂಜುಂಡಯ್ಯನವರ ಸಹಾನುಭೂತಿ ಹಾಗೂ ಸರ್. ಎಂ. ವಿಶ್ವೇಶ್ವರಯ್ಯನವರ ಬಲದಿಂದ 1915 ರಲ್ಲಿ 'ಕರ್ನಾಟಕ ಸಾಹಿತ್ಯ ಪರಿಷತ್' ನ್ನು ಸ್ಥಾಪಿಸಲು ಆಲೂರರು ಕಾರಣೀಭೂತರಾದರು. ಈ ಸಂಸ್ಥೆ ಕಾಲಾನುಕ್ರಮದಲ್ಲಿ ಕನ್ನಡತ್ವವನ್ನು ಹರಡುವ ಮೂಲಕ ಕರ್ನಾಟಕತ್ವದ ಸಾಕಾರಕ್ಕೆ ಪ್ರಧಾನ ವೇದಿಕೆಯೊದಗಿಸಿತು.

5. **ಸಾಹಿತ್ಯ ಸೇವೆಗೆ ಪ್ರಯತ್ನ:** ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖವಾಣಿಯಾಗಿದ್ದ 'ವಾಗ್ಭೂಷಣ' ಪತ್ರಿಕೆಯ ಸಂಪಾದಕರಾದ ಆಲೂರರು ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ತಿಳಿಸಿದರಲ್ಲದೇ ಕನ್ನಡಿಗರ ಸ್ವಾಭಿಮಾನವನ್ನು ಬಡಿದೆಬ್ಬಿಸುವಂತಹ ಲೇಖನಗಳನ್ನು ಬರೆದು ಪ್ರಕಟಿಸಿದರು. ಧಾರವಾಡದಲ್ಲಿ 'ಕರ್ನಾಟಕ ಗ್ರಂಥ ಪ್ರಸಾರಕ ಮಂಡಳಿ'ಯನ್ನು ಸ್ಥಾಪಿಸುವ ಮೂಲಕ ಕನ್ನಡ ಗ್ರಂಥಗಳ ಪ್ರಕಟಣೆ ಮತ್ತು ಪ್ರಸಾರ ಕಾರ್ಯದಲ್ಲಿ ಆಲೂರರು ತಮ್ಮನ್ನು ತೊಡಗಿಸಿಕೊಂಡರು. ಜೊತೆಗೆ ವಿವಿಧ



ಉದ್ದೇಶಗಳ ಸಾಧನೆಗೆ ನೆರವಾಗಬಲ್ಲ ವಿಶೇಷ ಕೃತಿಗಳನ್ನು ಆಲೂರರೇ ರಚಿಸಿದ್ದು ಅವುಗಳಲ್ಲಿ ಶಿಕ್ಷಣ ಮೀಮಾಂಸೆ(1908), ಕರ್ನಾಟಕ ಗತವೈಭವ(1917), ಗೀತಾ ರಹಸ್ಯ(1918), ಕರ್ನಾಟಕದ ವೀರ ರತ್ನಗಳು(1930), ರಾಷ್ಟ್ರೀಯತ್ವದ ಮೀಮಾಂಸೆ , ನನ್ನ ಜೀವನ ಸ್ಮೃತಿಗಳು (ಆತ್ಮ ಕಥನ)(1940) ಪ್ರಧಾನವಾದವುಗಳಾಗಿವೆ. ಅಲ್ಲದೇ ಅನೇಕ ಕನ್ನಡ ಪತ್ರಿಕೆಗಳಿಗೆ ಸಂಪಾದಕರಾಗಿ ಮತ್ತು ಲೇಖಕರಾಗಿ ಸೇವೆ ಸಲ್ಲಿಸಿದ್ದಾರೆ. ಕೇವಲ ಗ್ರಂಥ ರಚನೆ ಮತ್ತು ಸಂಪಾದನೆಯನ್ನಷ್ಟೇ ಮಾಡದ ಆಲೂರರು ಜನರಲ್ಲಿ ವಾಚನಾಭಿರುಚಿಯನ್ನೂ ಸಹ ಹುಟ್ಟಿಸಿದರು. ಧಾರವಾಡದ ಜನರಿಗೆ ಮಹತ್ವದ ಗ್ರಂಥಗಳು ದೊರೆಯಬೇಕೆಂಬ ಉದ್ದೇಶಕ್ಕಾಗಿ ತಮ್ಮ ಸ್ವಂತ ಹಣಹೂಡಿ 'ಭಾರತ ಪುಸ್ತಕಾಲಯ' ಎಂಬ ಹೆಸರಿನ ಗ್ರಂಥಾಲಯ ಪ್ರಾರಂಭಿಸಿದರು.

6. **ಸಂಶೋಧನೆಗಳಿಗೆ ಒಲವು:** ಇತಿಹಾಸದಲ್ಲಿ ಆಸಕ್ತಿ ಹೊಂದಿದ್ದ ಆಲೂರರು ಕನ್ನಡ ನಾಡಿನ ಅಧ್ಯಯನದ ಉದ್ದೇಶಕ್ಕಾಗಿ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿಯನ್ನು ಸ್ಥಾಪಿಸಿದರು. ಸ್ವತಃ ನಾಡಿನಾದ್ಯಂತ ಸಂಚರಿಸುವ ಮೂಲಕ ಸಂಶೋಧನೆಗಳನ್ನು ಯಶಸ್ವಿಯಾಗಿ ನಡೆಸುವುದರೊಡನೆ ಸಂಶೋಧನಾ ಕ್ಷೇತ್ರಕ್ಕೆ ಹೊಸ ಸ್ಥಾನ ಮತ್ತು ಗೌರವ ದೊರೆಯುವಂತೆ ಮಾಡಿದರು. 1919 ರಲ್ಲಿ ಪುಣೆಯಲ್ಲಿ ಜರುಗಿದ ಅಂತರಾಷ್ಟ್ರೀಯ ಇತಿಹಾಸ ಸಮ್ಮೇಳನದಲ್ಲಿ ಕರ್ನಾಟಕ ಇತಿಹಾಸ ಮಂಡಳಿಯ ಪ್ರತಿನಿಧಿಯಾಗಿ ಭಾಗವಹಿಸಿ ಕರ್ನಾಟಕದ ಕಂಪನ್ನು ಎಲ್ಲೆಡೆ ಪಸರಿಸಿದರು.

ಈ ಮೇಲೆ ವಿವರಿಸಿದ ಹಲವು ಕ್ಷೇತ್ರಗಳಲ್ಲಿ ತಮ್ಮದೇಯಾದ ಕಾಣಿಕೆ ನೀಡಿರುವ ಆಲೂರು ವೆಂಕಟರಾಯರು ಕರ್ನಾಟಕತ್ವದ ಪ್ರಬಲ ಪ್ರತಿಪಾದಕರಾಗಿದ್ದರು. ಅವರ ಅಭಿಪ್ರಾಯದಲ್ಲಿ "ಕರ್ನಾಟಕತ್ವವೆಂದರೆ ಕೇವಲ ದೇಶಾಭಿಮಾನವಲ್ಲ; ಕೇವಲ ಭಾಷಾಭಿಮಾನವಲ್ಲ; ಕೇವಲ ಇತಿಹಾಸಾಭಿಮಾನವಲ್ಲ; ಇವೆಲ್ಲವುಗಳನ್ನು ಮೀರಿದ, ಇವೆಲ್ಲವುಗಳನ್ನು ಒಳಗೊಂಡ ಪರಿಶುದ್ಧ ಭಾವನೆ" ಎನಿಸಿತ್ತು. ಕನ್ನಡ ಭಾಷಿಕರ ಪ್ರದೇಶವಾಗಿ ಸಮಗ್ರ ಕರ್ನಾಟಕವು ಪ್ರಸ್ತುತ ಅಸ್ತಿತ್ವದಲ್ಲಿರಲು ಆಲೂರರ ಕಾಣಿಕೆ ಅವರ್ಣನೀಯ. ತಮ್ಮ ಇಡೀ ಆಯುಷ್ಯದಲ್ಲಿ ಕರ್ನಾಟಕವೊಂದನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು ಅದರ ಸಿದ್ಧಿಗಾಗಿ ಅವಿರತವಾಗಿ ಶ್ರಮಿಸಿದ ಆಲೂರು ವೆಂಕಟರಾಯರು ನಿಜಕ್ಕೂ ಕನ್ನಡ ಕುಲಪುರೋಹಿತರೇ ಸರಿ. ಕನ್ನಡ-ಕನ್ನಡಿಗ-ಕರ್ನಾಟಕಗಳ ಏಳ್ಗೆಗಾಗಿ ತನು-ಮನ-ಧನ ಅರ್ಪಿಸಿ ದುಡಿದ ಆಲೂರರ ಕೊಡುಗೆ ಅನನ್ಯ.

## [II.] ಕರ್ನಾಟಕಕ್ಕೆ ಡೆಪ್ಯುಟಿ ಚನ್ನಬಸಪ್ಪನವರ ಕೊಡುಗೆ [Contribution of Deputy Channabasappa to Karnataka]:

ಕರ್ನಾಟಕದ ಏಕೀಕರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದವರಲ್ಲಿ ಡೆಪ್ಯುಟಿ ಚನ್ನಬಸಪ್ಪನವರೂ ಒಬ್ಬರು. ಕನ್ನಡ, ಮರಾಠಿ, ಇಂಗ್ಲಿಷ್ ಹಾಗೂ ಗಣಿತದಲ್ಲಿ ಅದ್ಭುತ ಪರಿಣತಿಯನ್ನು ಪಡೆದಿದ್ದ ಚನ್ನಬಸಪ್ಪನವರು ವ್ಯಕ್ತಿಯ ಸಾಧನೆಗೆ ಮಾತೃಭಾಷೆಯೇ ಆಗತ್ಯವೆಂಬ ತತ್ವವನ್ನು ನಂಬಿದ್ದರು. ಶಿಕ್ಷಣವು ಮಾತೃಭಾಷೆಯಲ್ಲಿಯೇ ಇರಬೇಕೆಂದು

ಸರ್ಕಾರಕ್ಕೆ ಪತ್ರ ಬರೆಯುತ್ತಿದ್ದ ಚನ್ನಬಸಪ್ಪನವರು ತಮ್ಮ ನೇತೃತ್ವದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದ್ದರು. ಅವರ ಪ್ರಯತ್ನದಿಂದಲೇ ಮರಾಠರ ಪಾಲಾಗುತ್ತಿದ್ದ ಹಲವು ಪ್ರದೇಶಗಳು ಕರ್ನಾಟಕದಲ್ಲಿಯೇ ಉಳಿಯುವಂತಾಯಿತು. ಈ ಹಿನ್ನೆಲೆಯಲ್ಲಿಯೇ ಚನ್ನಬಸಪ್ಪನವರನ್ನು ಕರ್ನಾಟಕದ ಹುಲಿ ಎನ್ನಲಾಗುತ್ತದೆ. ಈ ಕೆಳಗೆ ಡೆಪ್ಯುಟಿ ಚನ್ನಬಸಪ್ಪನವರ ಸಂಕ್ಷಿಪ್ತ ಜೀವನ ಮತ್ತು ಕರ್ನಾಟಕಕ್ಕೆ ಅವರ ಕೊಡುಗೆಗಳನ್ನು ಸಂಕ್ಷೀಪ್ತವಾಗಿ ನೀಡಲಾಗಿದೆ.

ಡೆಪ್ಯುಟಿ ಚನ್ನಬಸಪ್ಪನವರು ನವೆಂಬರ್ 1, 1834 ರಂದು ಧಾರವಾಡದಲ್ಲಿ ಜನಿಸಿದರು. ಇವರ ಮೂಲ ಸ್ಥಳ ಬೆಳಗಾವಿ ಜಿಲ್ಲೆಯ ಗೋಕಾಕ. ಬಸಲಿಂಗಪ್ಪ ಹಾಗೂ ತಿಮ್ಮಮ್ಮ ದಂಪತಿಗಳು ಚನ್ನಬಸಪ್ಪನವರ ತಂದೆ ತಾಯಿಗಳಾಗಿದ್ದರು. ಆರಂಭಿಕ ಶಿಕ್ಷಣವನ್ನು ಧಾರವಾಡದಲ್ಲಿ ಪಡೆದ ಚನ್ನಬಸಪ್ಪನವರು ಇಂಗ್ಲಿಷ್ ಕಲಿಕೆಗಾಗಿ ನಡೆದುಕೊಂಡೇ ಪುಣೆಗೆ ತೆರಳಿದ್ದರು. ಇಂಗ್ಲೆಂಡಿಗೆ ತೆರಳಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಕೈಗೊಳ್ಳಲು ಆಯ್ಕೆಗೊಂಡಿದ್ದ ಪ್ರತಿಭಾವಂತರಲ್ಲಿ ಒಬ್ಬರಾಗಿದ್ದ ಚನ್ನಬಸಪ್ಪನವರು ಕಾರಣಾಂತರದಿಂದ ಉನ್ನತ ವ್ಯಾಸಂಗಕ್ಕೆ ತೆರಳಲಾಗಲಿಲ್ಲ. ಧಾರವಾಡಕ್ಕೆ ಬಂದ ಚನ್ನಬಸಪ್ಪನವರು ಕೆಲ ಸಮಯ ಅಂಚೆ ಕಚೇರಿಯಲ್ಲಿ ಉದ್ಯೋಗಿಯಾಗಿದ್ದರು. ಬಳಿಕ ಶಾಲಾ ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸಿದರು. ಮುಂದೆ ಬೆಳಗಾವಿ ವಲಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಹುದ್ದೆ ಪಡೆದರು. ಈ ಹಿನ್ನೆಲೆಯಲ್ಲಿಯೇ ಚನ್ನಬಸಪ್ಪನವರ ಹೆಸರಿನೊಡನೆ ಡೆಪ್ಯುಟಿ ಎಂಬುದು ಅಂಟಿಕೊಂಡಿದೆ. ಚನ್ನಬಸಪ್ಪನವರು ಕನ್ನಡ ಭಾಷೆ ಹಾಗೂ ಕರ್ನಾಟಕದ ಏಳಿಗೆಗೆ ಅಪಾರ ಕಾಣಿಕೆಯನ್ನು ತಮ್ಮ ಜೀವಿತಾವಧಿಯಲ್ಲಿ ನೀಡಿದ್ದು ಆ ಕುರಿತಂತೆ ಕೆಳಗಿನ ಅಂಶಗಳು ಬೆಳಕು ಚೆಲ್ಲುತ್ತವೆ.

1. **ಕನ್ನಡ ಭಾಷೆಯಲ್ಲಿ ಶಿಕ್ಷಣಕ್ಕೆ ಪ್ರಯತ್ನ:** ಚನ್ನಬಸಪ್ಪನವರು ಶಿಕ್ಷಣ ಇಲಾಖೆಯ ಡೆಪ್ಯುಟಿ ನಿರ್ದೇಶಕರಾಗಿ ಅಧಿಕಾರಕ್ಕೆ ಬರುವ ಮುನ್ನ ಧಾರವಾಡ, ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ಕೇವಲ 34 ಕನ್ನಡ ಶಾಲೆಗಳಿದ್ದು ಮರಾಠಿ ಪ್ರಭಾವ ಅಧಿಕವಾಗಿತ್ತು. ಚನ್ನಬಸಪ್ಪನವರ ಪ್ರಯತ್ನದಿಂದ ಮುಂದಿನ ಹತ್ತು ವರ್ಷಗಳಲ್ಲಿ ಕನ್ನಡ ಶಾಲೆಗಳ ಸಂಖ್ಯೆ 668ಕ್ಕೆ ಏರಿತು. ಈ ನಡುವೆ ಚನ್ನಬಸಪ್ಪನವರ ಪ್ರಯತ್ನದ ಫಲವಾಗಿ ಕನ್ನಡ ಶಿಕ್ಷಕರನ್ನು ತಯಾರು ಮಾಡಲು 1856ರಲ್ಲಿ ಧಾರವಾಡದ ನಾರ್ಮಲ್ ಸ್ಕೂಲ್ ಆರಂಭವಾಯಿತು. ಡೆಪ್ಯುಟಿ ಚನ್ನಪ್ಪನವರೇ ಈ ಶಾಲೆಯ ಮೊದಲ ಪ್ರಾಂಶುಪಾಲರಾಗಿ ಶಿಕ್ಷಣ ಕ್ರಮದಲ್ಲಿ ಕನ್ನಡ ಭಾಷೆ ತಲೆಯೆತ್ತಲು ಕಾರಣರಾದರು. ಜೊತೆಗೆ ಹತ್ತು ಸೂತ್ರಗಳುಳ್ಳ ಶಿಕ್ಷಣ ನೀತಿಯನ್ನು ರೂಪಿಸಿ ಕನ್ನಡದ ಕಂಪನ್ನು ಹರಡಲು ಯಶಸ್ವಿಯಾದರು. ಒಟ್ಟು 99 ಸುತ್ತೋಲೆಗಳನ್ನು ಹೊರಡಿಸುವ ಮೂಲಕ ಕನ್ನಡ ಭಾಷೆಯ ಶಿಕ್ಷಣಕ್ಕೆ ಬಲ ತುಂಬಿದ್ದರು. ಕನ್ನಡಿಗ ವಿದ್ಯಾರ್ಥಿಗಳಿಗಾಗಿ ಮೂರು ವಿದ್ಯಾರ್ಥಿ ನಿಲಯಗಳನ್ನೂ ಚನ್ನಬಸಪ್ಪನವರು ಆರಂಭಿಸಿದ್ದರು.

2. **ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ:** ರಾಮಚಂದ್ರ ಚುರಮುರಿ, ಗಂಗಾಧರ ಮಡಿವಾಳೇಶ್ವರ ತುರಮರಿ, ಎಚ್. ಭುಜಂಗರಾವ್, ಎಸ್. ಆರ್. ಕಿತ್ತೂರ ಮೊದಲಾದ



ಕನ್ನಡಿಗರಿಗೆ ಕನ್ನಡದಲ್ಲಿ ಗ್ರಂಥ ರಚಿಸಲು ಚನ್ನಬಸಪ್ಪನವರು ಪ್ರೇರಣೆ, ಪ್ರೋತ್ಸಾಹ, ಬೆಂಬಲಗಳನ್ನು ನೀಡಿದರು. ಸ್ವಯಂ ತಾವೇ ಪಠ್ಯ ಪುಸ್ತಕಗಳನ್ನು ರಚಿಸುವ ಮೂಲಕ ಕನ್ನಡ ಭಾಷೆಯ ವಿದ್ಯಾರ್ಥಿಗಳಿಗೆ ನೆರವಾದರು. ಎದರೊಡನೆ ಚನ್ನಬಸಪ್ಪನವರು 'ಕಾಮೆಡಿ ಆಫ್ ಎರರ್ಸ್' ಮತ್ತು 'ಮ್ಯಾಕ್‌ಬೆತ್' ಕೃತಿಗಳನ್ನು ಪ್ರಕಟಿಸಿದರು. 'ಮ್ಯಾಕ್‌ಬೆತ್' ಕೃತಿಯ ಮೂಲಕ ಶೇಕ್ಸ್‌ಪಿಯರ್‌ನ ನಾಟಕಗಳನ್ನು ಕನ್ನಡಕ್ಕೆ ಪರಿಚಯಿಸಿದರು. ಮುಂದುವರಿದು, ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಗಣಿತಕ್ಕೆ ಸಂಬಂಧಿಸಿದ ಕೃತಿಗಳನ್ನೂ ಅವರು ರಚಿಸಿದ್ದರು.

3. **ಕನ್ನಡ ಪತ್ರಿಕೋದ್ಯಮಕ್ಕೆ ಬೆಂಬಲ:** ಚನ್ನಬಸಪ್ಪನವರು ಬದುಕಿದ್ದ ಕಾಲದಲ್ಲಿ ಕನ್ನಡ ಪತ್ರಿಕೆಗಳು ಹೆಚ್ಚಾಗಿರಲಿಲ್ಲ. ಇದಕ್ಕೆ ಅವುಗಳ ಪ್ರಕಟಕರು ಅನುಭವಿಸುತ್ತಿದ್ದ ನಷ್ಟ ಪ್ರಧಾನ ಕಾರಣವಾಗಿತ್ತು. ಅಂದು ಶಿಕ್ಷಣವನ್ನು ನೀಡುತ್ತಿದ್ದ ಮಠಗಳಿಗೆ ಚನ್ನಬಸಪ್ಪನವರು ಮಾಸಿಕ ಪತ್ರಿಕೆ ಹೊರಡಿಸಲು ಶಿಕ್ಷಣಾಧಿಕಾರಿಯಾಗಿ ಸೂಚಿಸಿದರು. ಕಲಿಕಾ ವಿಧಾನ, ಬೋಧನಾ ವಿಧಾನ, ಶೈಕ್ಷಣಿಕ ನಿಯಮಾವಳಿ, ಪ್ರಚಲಿತ ವಿದ್ಯಮಾನಗಳನ್ನು ಈ ಪತ್ರಿಕೆಗಳು ಒಳಗೊಂಡಿರಬೇಕೆಂದು ನಿರ್ದೇಶಿಸಿದ್ದರು. ಫಲವಾಗಿ ಕನ್ನಡ ಪತ್ರಿಕಾ ರಂಗ ಬಲಗೊಂಡಿತು. ಜೀವನ ಶಿಕ್ಷಣ ಎಂಬ ಶಿರ್ಷಿಕೆ ಪಡೆದ ಈ ಮಾಸಿಕ ಪತ್ರಿಕೆಯು ಶತಮಾನೋತ್ಸವ ಕಂಡಿತಲ್ಲದೇ ಇತರ ಕನ್ನಡ ಪತ್ರಿಕೆಗಳಿಗೆ ಪ್ರೇರಣೆಯೊದಗಿಸಿತು.

4. **ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಒಲವು:** ಚನ್ನಬಸಪ್ಪನವರು ಕನ್ನಡದ ಸರ್ವಾಂಗೀಣ ಪ್ರಗತಿಗೆ ಚಾಲನೆ ನೀಡಿದ್ದರು. ಧಾರವಾಡದಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಕಾರಣರಾದರು. ಜೊತೆಗೆ ಧಾರವಾಡವು ಸಾಂಸ್ಕೃತಿಕ ಮತ್ತು ವಿದ್ಯಾ ಕೇಂದ್ರವಾಗಿ ರೂಪುಗೊಳ್ಳಲು ಶ್ರಮಿಸಿದರು. ಅಂತೆಯೇ ಚನ್ನಬಸಪ್ಪನವರ ಪ್ರಯತ್ನದಿಂದ ಕರ್ನಾಟಕದ ಏಕೀಕರಣದ ಕಲ್ಪನೆ ರೂಪುಗೊಂಡಿತು.

ಒಟ್ಟಾರೆ ಡೆಪ್ಯುಟಿ ಚನ್ನಬಸಪ್ಪನವರು ಅಪ್ಪಟ ಕನ್ನಡ ಪ್ರೇಮಿಯಾಗಿದ್ದರು. ತಮ್ಮ ಅಧಿಕಾರ, ಕೃತಿಗಳು, ಗೆಳೆಯರು, ಪತ್ರಿಕೆ, ವ್ಯಕ್ತಿತ್ವಗಳ ನೆರವಿನಿಂದ ಕನ್ನಡದ ಪುನರುಜ್ಜೀವನಕ್ಕೆ ಕಾರಣರಾಗಿದ್ದರು. ಈ ಹಿನ್ನೆಲೆಯಲ್ಲಿ ಅವರನ್ನು ಕನ್ನಡದ ದೀಪ ಎಂದು ಪರಿಗಣಿಸಲಾಗಿದೆ. ಅಂತೆಯೇ ಬ್ರಿಟಿಷ್ ಆಡಳಿತಾವಧಿಯಲ್ಲಿ ಅವರ ಸಹಕಾರದೊಡನೆ ಏಕಾಂಗಿಯಾಗಿ ಕನ್ನಡದ ಏಳಿಗೆಗೆ ಶ್ರಮಿಸಿದ್ದರಿಂದ ಚನ್ನಬಸಪ್ಪನವರನ್ನು ಕರ್ನಾಟಕದ ಹುಲಿ ಎಂದೂ ಕರೆಯಲಾಗುತ್ತದೆ. 20 ನೇ ಶತಮಾನದ ಕರ್ನಾಟಕದ ಏಕೀಕರಣದ ಹೋರಾಟ, ವಿಶಾಲ ಕರ್ನಾಟಕ, ಕನ್ನಡದ ಅಭಿವೃದ್ಧಿಗೆ ಉತ್ತಮ ತಳಹದಿಯನ್ನು ಹಾಕಿದ ಕೆಲವೇ ವ್ಯಕ್ತಿಗಳಲ್ಲಿ ಡೆಪ್ಯುಟಿ ಚನ್ನಬಸಪ್ಪನವರು ಪ್ರಮುಖರೆಂದರೆ ತಪ್ಪಾಗಲಾರದು.

### [III.] ಕರ್ನಾಟಕಕ್ಕೆ ಗುದ್ಲೆಪ್ಪ ಹಳ್ಳಿಕೇರಿಯವರ ಕೊಡುಗೆ [Contribution of Gudleppa Hallikeri to Karnataka]:

ಕರ್ನಾಟಕದ ಗಾಂಧಿವಾದಿಗಳಲ್ಲಿ ಗುದ್ಲೆಪ್ಪ ಹಳ್ಳಿಕೇರಿಯವರದು ಅಗ್ರಗಣ್ಯ ಹೆಸರು. ಗಾಂಧೀಜಿಯವರು ಕೈಗೊಂಡ ಹಲವು ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ

ಮೂಲಕ ಹಳ್ಳಿಕೇರಿಯವರು ಸ್ವಾತಂತ್ರ ಚಳುವಳಿಯ ಸೇನಾನಿ ಎಂದು ಕರೆಯಿಸಿಕೊಂಡಿರುವರು. ಕನ್ನಡ ನುಡಿ ಮತ್ತು ನಾಡಿಗಾಗಿ ಜರುಗಿದ ವಿವಿಧ ವಿದ್ಯಮಾನಗಳಲ್ಲಿ ಗುದ್ಲೆಪ್ಪನವರು ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಕರ್ನಾಟಕದ ಉಕ್ಕಿನ ಮನುಷ್ಯ ಹಾಗೂ ಗುರುಕುಲ ಪ್ರವರ್ತಕ ಎಂಬುದಾಗಿಯೂ ಗುದ್ಲೆಪ್ಪನವರನ್ನು ಗುರುತಿಸಲಾಗುತ್ತದೆ. ಸ್ವಾತಂತ್ರ್ಯೋತ್ತರ ಸಮಯದಲ್ಲಿ ರಾಜಕೀಯವಾಗಿ ತೊಡಗಿಸಿಕೊಂಡ ಗುದ್ಲೆಪ್ಪನವರು ಕರ್ನಾಟಕಕ್ಕೆ ತಮ್ಮದೇಯಾದ ಕೊಡುಗೆಗಳನ್ನು ಬಿಟ್ಟು ಹೋಗಿದ್ದಾರೆ. ಈ ಕೆಳಗೆ ಹಳ್ಳಿಕೇರಿಯವರ ಸಂಕ್ಷಿಪ್ತ ಜೀವನ ಮತ್ತು ಕೊಡುಗೆಗಳನ್ನು ನೀಡಲಾಗಿದೆ.

ಜೂನ್ 6, 1906 ರಂದು ಗುದ್ಲೆಪ್ಪನವರ ಜನನವಾಯಿತು. ಇವರ ಜನ್ಮ ಸ್ಥಳ ಹಾವೇರಿ ಜಿಲ್ಲೆಯ ಹೊಸರಿತ್ತಿ. ವೀರಪ್ಪ ಮತ್ತು ವೀರಮ್ಮ ದಂಪತಿಗಳು ಗುದ್ಲೆಪ್ಪನವರ ತಂದೆ ತಾಯಿಗಳಾಗಿದ್ದರು. ಹೊಸರಿತ್ತಿಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ ಗುದ್ಲೆಪ್ಪನವರು ಮಾಧ್ಯಮಿಕ ಹಾಗೂ ಕಾಲೇಜು ಶಿಕ್ಷಣವನ್ನು ಧಾರವಾಡದಲ್ಲಿ ಪಡೆದುಕೊಂಡರು. ವಿದ್ಯಾರ್ಥಿ ದೆಸೆಯಲ್ಲಿಯೇ ಗಾಂಧಿ ಮತ್ತು ಮೃತ್ಯುಂಜಯ ಸ್ವಾಮಿಗಳ ಪ್ರಭಾವಕ್ಕೆ ಗುದ್ಲೆಪ್ಪ ಒಳಗಾಗಿದ್ದರು. ಜೊತೆಗೆ ಟಾಲ್‌ಸ್ಟಾಯ್, ಲೆನಿನ್, ಠಾಗೂರ್, ಸ್ವಾಮಿ ವಿವೇಕಾನಂದ, ಅರವಿಂದರ ಚಿಂತನೆಗಳಿಂದ ಆಕರ್ಷಿತರಾಗಿದ್ದರು. ಹೀಗಾಗಿ ಗುದ್ಲೆಪ್ಪ ಹಳ್ಳಿಕೇರಿಯವರು ಕನ್ನಡ ನಾಡಿನ ಅಭಿವೃದ್ಧಿಗೆ ಶ್ರಮಿಸಲು ಅಣಿಗೊಂಡರು. ಕರ್ನಾಟಕಕ್ಕೆ ಹಳ್ಳಿಕೇರಿಯವರು ಕೈಗೊಂಡ ಕಾರ್ಯಗಳು ಕೊಡುಗೆಗಳಾಗಿದ್ದು ಅವುಗಳ ಸಂಕ್ಷಿಪ್ತ ಮಾಹಿತಿಯನ್ನು ಕೆಳಗೆ ನೀಡಲಾಗಿದೆ.

1. **ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿ:** ಗುದ್ಲೆಪ್ಪನವರು ವಿದ್ಯಾರ್ಥಿ ದೆಸೆಯಲ್ಲಿಯೇ ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದರು. ಗಾಂಧಿ ಕೈಗೊಂಡ ಉಪ್ಪಿನ ಸತ್ಯಾಗ್ರಹದಲ್ಲಿ ಕನ್ನಡಿಗರ ಪ್ರತಿನಿಧಿಯಾಗಿ ಗುದ್ಲೆಪ್ಪ ಭಾಗವಹಿಸಿದ್ದರು. ಜೊತೆಗೆ ವಿದೇಶಿ ವಸ್ತುಗಳ ಬಹಿಷ್ಕಾರ, ಅಸಹಕಾರ, ಕರ ನಿರಾಕರಣೆ, ಕಾನೂನು ಭಂಗ ಚಳುವಳಿ, ಸೈಮನ್ ಕಮಿಶನ್ ಮುಂತಾದ ಹೋರಾಟ ಚಳವಳಿಗಳಲ್ಲಿ ಜನಸಾಮಾನ್ಯರು ಭಾಗವಹಿಸುವಂತೆ ಮಾಡಿದ ಶ್ರೇಯಸ್ಸು ಗುದ್ಲೆಪ್ಪನವರದಾಗಿತ್ತು. ಕಾನೂನು ಭಂಗ ಚಳುವಳಿ ಮತ್ತು ಭಾರತ ಬಿಟ್ಟು ತೊಲಗಿ ಚಳುವಳಿಗಳ ವೇಳೆಯಲ್ಲಿ ಗುದ್ಲೆಪ್ಪನವರು ಜೈಲುವಾಸ ಅನುಭವಿಸಿದ್ದರು.

2. **ಗ್ರಾಮೀಣಾಭಿವೃದ್ಧಿಗೆ ಪ್ರೋತ್ಸಾಹ:** ಗ್ರಾಮೀಣ ಪ್ರದೇಶದಲ್ಲಿ ಜನಿಸಿದ್ದ ಗುದ್ಲೆಪ್ಪನವರು ಗ್ರಾಮಗಳ ಪ್ರಗತಿಗೆ ಒಲವು ಹೊಂದಿದ್ದರು. ಗ್ರಂಥಾಲಯ ಮತ್ತು ಉಚಿತ ಚಿಕಿತ್ಸಾಲಯಗಳನ್ನು ಸ್ಥಾಪಿಸಿ ಗ್ರಾಮಗಳ ಸುಧಾರಣೆಗೆ ಮುಂದಾಗಿದ್ದರು. ಜೊತೆಗೆ ಸಾರ್ವಜನಿಕ ಸೇವೆಗೆ ಗ್ರಾಮೀಣ ಯುವಕರನ್ನು ಸನ್ನದ್ಧಗೊಳಿಸಲು ಹಳ್ಳಿಕೇರಿಯವರು ಶ್ರಮಿಸಿದರು. ಇದರೊಡನೆ ಕೃಷಿ, ಗ್ರಾಮೋದ್ಯೋಗ, ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣೆ ಮತ್ತು ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ ನೀಡುವ ಮೂಲಕ ಗ್ರಾಮಗಳ ಏಳಿಗೆಗೆ ಗುದ್ಲೆಪ್ಪನವರು ಕಾಣಿಕೆ ನೀಡಿರುವರು.



3. **ಸಮಾಜ ಸೇವೆಗೆ ಪ್ರಯತ್ನ:** ಗುದ್ಲೆಪ್ಪನವರು ಸಮಾಜದ ಸಂಕಷ್ಟಗಳಿಗೆ ಸ್ಪಂದಿಸಲು ಸದಾ ಹಾತೊರೆಯುತ್ತಿದ್ದರು. 1960 ರಲ್ಲಿ ವರದಾ ನದಿಯ ಪ್ರವಾಹದಿಂದ ಅನೇಕ ಹಳ್ಳಿಗಳು ಸಂಕಷ್ಟಕ್ಕೆ ಗುರಿಯಾದಾಗ ಹಳ್ಳಿಕೇರಿಯವರು ಸ್ಥಳದಲ್ಲಿಯೇ ಉಳಿದುಕೊಂಡು ಪರಿಹಾರ ಕಾರ್ಯಗಳು ಸರ್ವರಿಗೂ ದೊರೆಯುವಂತೆ ನೋಡಿಕೊಂಡಿದ್ದರು. ಅಂತೆಯೇ 1966 ರಲ್ಲಿ ಬಿರುಗಾಳಿಯಿಂದ ನಲುಗಿದ ಮುಂಡರಗಿಯ ಸಂತ್ರಸ್ತರಿಗೆ ಸೂಕ್ತ ಪರಿಹಾರ ಒದಗಿಸಿ ಜನಾನುರಾಗಿಯಾದರು. ಪತ್ನಿ ಗಂಗಮ್ಮನವರ ಸಹಕಾರದಿಂದ ಹರಿಜನ ಸೇವೆಯನ್ನು ನಿರಂತರವಾಗಿ ನಿರ್ವಹಿಸುತ್ತಿದ್ದರು. ಸಂಘಟನೆ, ಹೋರಾಟ, ಸೇವೆಯ ಮೂಲಕ ಸಾರ್ವಜನಿಕರಲ್ಲಿ ಯಜಮಾನ ಎಂಬ ಖ್ಯಾತಿಗೆ ಪಾತ್ರರಾಗಿದ್ದರು.

4. **ಗುರುಕುಲ ಮಾದರಿ ಶಿಕ್ಷಣಕ್ಕೆ ಒಲವು:** ಬಿರ್ಲಾ ಅವರ ಪಿಲಾನಿ, ರವೀಂದ್ರರ ಶಾಂತಿನಿಕೇತನ, ಶ್ರದ್ಧಾನಂದರ ಕಾಂಗ್ರಿ ಗುರುಕುಲ, ಗಾಂಧೀಜಿಯವರ ಸಬರಮತಿ ಆಶ್ರಮದಿಂದ ಪ್ರಭಾವಿತರಾಗಿದ್ದ ಗುದ್ಲೆಪ್ಪನವರು ತಮ್ಮ ಹುಟ್ಟೂರು ಹೊಸರಿತ್ತಿಯಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿಯನ್ನು ಪ್ರಾರಂಭಿಸಿ ಗ್ರಾಮೀಣ ಭಾಗದಲ್ಲಿ ಗುರುಕುಲ ಸ್ಥಾಪಿಸುವ ಕನಸನ್ನು ಕಂಡರು. ಫಲವಾಗಿ 1960 ರ ವೇಳೆಗೆ ಗ್ರಾಮೀಣ ಭಾಗದಲ್ಲಿ ಗುರುಕುಲವೊಂದು ಆರಂಭವಾಯಿತು. ಪ್ರಶಾಂತವಾದ 32 ಎಕರೆ ವಿಸ್ತಾರವಾದ ಭೂಮಿಯಲ್ಲಿ ಗಾಂಧಿ ಗ್ರಾಮೀಣ ಗುರುಕುಲ ನೆಲೆಸಿತು. ಸುಸಜ್ಜಿತ ಶಾಲಾ ಕಟ್ಟಡ, ವಸತಿ ಗೃಹ, ಆಟದ ಮೈದಾನ, ಹೂದೋಟದಿಂದ ಕೂಡಿರುವ ಗುರುಕುಲದ ವಿದ್ಯಾರ್ಥಿಗಳಿಗೆ ಖಾದಿ ಸಮವಸ್ತ್ರ, ಊಟ, ಉಪಹಾರಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಸಾಮಾನ್ಯ ಶಿಕ್ಷಣದ ಜೊತೆಗೆ ಕೃಷಿ, ಕೈತೋಟ, ರೇಷ್ಮೆ ವ್ಯವಸಾಯ, ನೂಲು ನೇಯ್ಗೆ, ಹೈನುಗಾರಿಕೆ, ಕಂಪ್ಯೂಟರ್ ಜ್ಞಾನವನ್ನೂ ಪ್ರಸ್ತುತ ಈ ಗುರುಕುಲದಲ್ಲಿ ನೀಡಲಾಗುತ್ತಿದೆ. ಪರಿಣಿತರಿಂದ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿ ನಾಗರಿಕ ಪ್ರಜ್ಞೆಯನ್ನು, ಸ್ವದೇಶಾಭಿಮಾನವನ್ನು, ಸ್ವಾವಲಂಬನೆಯ ಜೀವನ ಕ್ರಮವನ್ನು ಬೋಧಿಸಲಾಗುತ್ತಿದೆ. ಇಲ್ಲಿಯ ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಸಂಕಲ್ಪವನ್ನು ಪ್ರಚಾರ ಮಾಡುತ್ತಿದ್ದಾರೆ.

ಈ ಮೇಲೆ ಚರ್ಚಿಸಿದಂತೆ ಗುದ್ಲೆಪ್ಪನವರು ತಮ್ಮದೇಯಾದ ಕಾರ್ಯಗಳ ಮೂಲಕ ಸ್ವಾತಂತ್ರ್ಯ ಚಳುವಳಿಯ ಸೇನಾನಿ, ಕರ್ನಾಟಕದ ಉಕ್ಕಿನ ಮನುಷ್ಯ, ಹಿರಿಯ ಗಾಂಧಿವಾದಿ ಮತ್ತು ಗುರುಕುಲ ಪ್ರವರ್ತಕರೆಂದು ಗುರುತಿಸಲ್ಪಟ್ಟಿದ್ದಾರೆ. ಕರ್ನಾಟಕದ ಏಕೀಕರಣದ ವೇಳೆ ಅಗತ್ಯ ಸಹಕಾರ ನೀಡುವ ಮೂಲಕ ಏಕೀಕರಣದ ಸಾಕಾರಕ್ಕೂ ಗುದ್ಲೆಪ್ಪನವರು ಶ್ರಮಿಸಿದ್ದಾರೆ. ಜೊತೆಗೆ ಸ್ವಾತಂತ್ರ್ಯೋತ್ತರ ವೇಳೆಯಲ್ಲಿ ಹಾವೇರಿ ಜಿಲ್ಲೆಯನ್ನು ಪ್ರತಿನಿಧಿಸುವ ಮೂಲಕ ಸಕ್ರಿಯ ರಾಜಕಾರಣದಲ್ಲಿಯೂ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ.

### [IV.] ಕರ್ನಾಟಕಕ್ಕೆ ಸಿದ್ದಪ್ಪ ಕಂಬಳಿಯವರ ಕೊಡುಗೆ [Contribution of Siddappa Kambali to Karnataka]:

ಕರುನಾಡಿನ ಹೆಮ್ಮೆಯ ಪುತ್ರರಲ್ಲಿ ಸಿದ್ದಪ್ಪ ಕಂಬಳಿಯವರೂ ಒಬ್ಬರು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಬ್ರಿಟಿಷರ ನಿಯಂತ್ರಣದ ನಡುವೆ ಹಲವು ಸಮಾಜಮುಖಿ

ಕಾರ್ಯಗಳನ್ನು ಕೈಗೊಂಡಿದ್ದ ಕೀರ್ತಿ ಕಂಬಳಿಯವರಿಗೆ ಸಲ್ಲುತ್ತದೆ. ರಾಜಕಾರಣಿಯಾಗಿ, ಕನ್ನಡ ಭಾಷಾಭಿಮಾನಿಯಾಗಿ, ಶಿಕ್ಷಣ ಪ್ರೇಮಿಯಾಗಿ, ದುರ್ಬಲರ ಧ್ವನಿಯಾಗಿ ಸಿದ್ದಪ್ಪನವರು ನಿರ್ವಹಿಸಿದ ಪಾತ್ರ ಅಪಾರವಾದದ್ದು. ಪ್ರಸ್ತುತ ಅವರ ಸಂಕ್ಷಿಪ್ತ ಜೀವನ ಮತ್ತು ವಿವಿಧ ಕೊಡುಗೆಗಳನ್ನು ಕೆಳಗೆ ವಿವರಿಸಲಾಗಿದೆ.

ಸಿದ್ದಪ್ಪನವರು ಸೆಪ್ಟೆಂಬರ್ 11, 1882 ರಂದು ಜನಿಸಿದರು. ತೋಟಪ್ಪ ಮತ್ತು ಗಂಗವ್ವ ಎಂಬ ದಂಪತಿಗಳು ಸಿದ್ದಪ್ಪನವರ ತಂದೆ ತಾಯಿಗಳಾಗಿದ್ದರು. ಸಿದ್ದಪ್ಪನವರ ತಂದೆ ಕಂಬಳಿ ಮಾರುತ್ತಿದ್ದ ವೃತ್ತಿಯಲ್ಲಿ ತೊಡಗಿದ್ದರಿಂದ ಅವರು ಸಿದ್ದಪ್ಪ ಕಂಬಳಿ ಎಂಬ ಹೆಸರನ್ನು ಪಡೆದುಕೊಂಡರು. ಪ್ರಸ್ತುತ ಗದಗ ಜಿಲ್ಲೆಯ ಲಕ್ಕುಂಡಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದ ಕಂಬಳಿಯವರು ಧಾರವಾಡದಲ್ಲಿ ತಮ್ಮ ಪ್ರೌಢ ಶಿಕ್ಷಣವನ್ನು ಪೂರೈಸಿದರು. ಮುಂದೆ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಬಿ. ಎ. ಪದವಿಯನ್ನು ಗಳಿಸಿದ ಸಿದ್ದಪ್ಪನವರು ಕಾನೂನು ಪದವಿಗಾಗಿ ಮುಂಬೈಗೆ ತೆರಳಿದರು.

ವ್ಯಾಸಂಗದ ಬಳಿಕ ಹುಬ್ಬಳ್ಳಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡ ಕಂಬಳಿಯವರು ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದ್ದರು. 1917 ರಲ್ಲಿ ಹುಬ್ಬಳ್ಳಿ ನಗರಸಭೆಯ ಸದಸ್ಯರಾಗಿ, 1921 ರಲ್ಲಿ ಅದರ ಅಧ್ಯಕ್ಷರಾಗಿ ಹಾಗೂ ಜಿಲ್ಲಾ ಬೋರ್ಡಿನ ಸದಸ್ಯರಾಗಿ ನೇಮಕಗೊಂಡಿದ್ದರು. ಇದರೊಡನೆ ವಕೀಲರ ಸಂಘದ ಅಧ್ಯಕ್ಷರಾಗಿಯೂ ಕಂಬಳಿಯವರು ನೇಮಕಗೊಂಡಿದ್ದರು. 1937 ರ ಚುನಾವಣೆಯ ವೇಳೆಯಲ್ಲಿ ತಮ್ಮ ಎದುರಾಳಿಯ ಪರವಾಗಿ ಜವಾಹರಲಾಲ್ ನೆಹರು ಮತ್ತು ವಲ್ಲಭಬಾಯ್ ಪಟೇಲರ ಪ್ರಚಾರ ನಡೆಸಿದರೂ ಅಧಿಕ ಮತಗಳೊಂದಿಗೆ ಹುಬ್ಬಳ್ಳಿಯಿಂದ ಜಯಶಾಲಿಯಾಗಿ ಮುಂಬೈ ಶಾಸನ ಸಭೆಯನ್ನು ಕಂಬಳಿ ಪ್ರವೇಶಿಸಿದ್ದರು. ಸ್ವತಂತ್ರ ಭಾರತದಲ್ಲಿ ಕಿಸಾನ್ ಪಕ್ಷವನ್ನು ಸೇರಿದ್ದ ಸಿದ್ದಪ್ಪನವರು ಪಾರ್ಶ್ವ ರೋಗಕ್ಕೆ ತುತ್ತಾಗಿ ಏಪ್ರಿಲ್ 1956 ರಲ್ಲಿ ಕೊನೆಯುಸಿರೆಳೆದರು. ಬಹುಮುಖಿ ವ್ಯಕ್ತಿತ್ವದ ಕಂಬಳಿಯವರು ಕರ್ನಾಟಕಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ಈ ಕೆಳಗಿನ ಅಂಶಗಳ ನೆರವಿನಿಂದ ಮನವರಿಕೆ ಮಾಡಿಕೊಳ್ಳಬಹುದಾಗಿದೆ.

1. ಮುಂಬೈ ಸರ್ಕಾರದಲ್ಲಿ ಕನ್ನಡಿಗರ ಪ್ರಾತಿನಿಧ್ಯ: ಬ್ರಾಹ್ಮಣೇತರ ಪಕ್ಷವನ್ನು ಸ್ಥಾಪಿಸಿ 1924 ರಲ್ಲಿ ಮುಂಬೈನ ಶಾಸನ ಪರಿಷತ್ತಿಗೆ ಸದಸ್ಯರಾಗಿ ಕಂಬಳಿಯವರು ಚುನಾಯಿತರಾದರು. ಮುಂದೆ ಮುಂಬೈ ವಿಧಾನ ಪರಿಷತ್ತಿನ ಉಪಾಧ್ಯಕ್ಷರಾಗಿ ನೇಮಕಗೊಂಡ ಮೊದಲ ಕನ್ನಡಿಗರೆನಿಸಿದರು. 1930 ರ ದಶಕದಲ್ಲಿ ಏಳು ವಿವಿಧ ಇಲಾಖೆಗಳ ಮಂತ್ರಿಯಾಗಿ ಅಧಿಕಾರ ಚಲಾಯಿಸುವ ಮೂಲಕ ಮುಂಬೈ ಸರ್ಕಾರದಲ್ಲಿ ಮೊದಲ ಕನ್ನಡಿಗ ಮಂತ್ರಿ ಎನಿಸಿದರು.

2. ಕನ್ನಡಿಗರ ಶಿಕ್ಷಣಕ್ಕೆ ಪ್ರೋತ್ಸಾಹ: ಶಿಕ್ಷಣ ಮಂತ್ರಿಯಾಗಿ ಕರುನಾಡಿನ ಶೈಕ್ಷಣಿಕ ಪ್ರಗತಿಗೆ ಕಂಬಳಿಯವರು ಶ್ರಮಿಸಿದ್ದರು. ಧಾರವಾಡದ ಕರ್ನಾಟಕ ಕಾಲೇಜು ಮತ್ತು ಶಿಕ್ಷಕರ ತರಬೇತಿ ಕೇಂದ್ರಗಳಿಗೆ ಬ್ರಿಟಿಷ್ ಸರ್ಕಾರ ಆರ್ಥಿಕ ಕೊರತೆಯಿಂದ ಅನುದಾನವನ್ನು



ನಿರಾಕರಿಸಿದಾಗ ಕಂಬಳಿಯವರು ಅವುಗಳನ್ನು ಉಳಿಸಿಕೊಳ್ಳಲು ಹೋರಾಡಿದರು. ಜೊತೆಗೆ ಬೆಳಗಾವಿಯ ಲಿಂಗರಾಜ ಕಾಲೇಜಿಗೆ ಪುನಾ ವಿಶ್ವ ವಿದ್ಯಾಲಯವು ಅನುಮತಿ ನೀಡಲು ಹಿಂದೇಟು ಹಾಕಿದಾಗ ಹೋರಾಡಿ ಅನುಮತಿ ದೊರಕಿಸಲು ಕಂಬಳಿಯವರು ಶ್ರಮಿಸಿದ್ದರು. ಇದರೊಡನೆ ಶಿಕ್ಷಣ ಮಂತ್ರಿಯಾಗಿದ್ದ ವೇಳೆ ಕರ್ನಾಟಕ ವಿಶ್ವ ವಿದ್ಯಾಲಯಕ್ಕೆ ಮಂಜೂರಾತಿ ನೀಡುವ ಮೂಲಕ ಧಾರವಾಡದ ಸುತ್ತಲಿನ ಪ್ರದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಕಂಬಳಿಯವರು ಕಾರಣರಾದರು.

3. ಕರ್ನಾಟಕದ ಏಕೀಕರಣಕ್ಕೆ ಪ್ರಯತ್ನ: 1926 ರಲ್ಲಿ ಕಂಬಳಿಯವರು ಕರ್ನಾಟಕ ಏಕೀಕರಣ ಸಮಿತಿಯ ಅಧ್ಯಕ್ಷರಾಗಿ ಕನ್ನಡಿಗರನ್ನು ಒಗ್ಗೂಡಿಸಲು ಶ್ರಮಿಸಿದ್ದರು. ಜೊತೆಗೆ ಭಾಷಾಧಾರಿತ ಪ್ರಾಂತ್ಯಗಳ ರಚನೆಗೆ ಸ್ವಾತಂತ್ರ್ಯೋತ್ತರದಲ್ಲಿ ಕಾಂಗ್ರೆಸ್ ನಾಯಕರನ್ನು ಕಂಬಳಿಯವರು ಒತ್ತಾಯಿಸುವ ಮೂಲಕ ಕರ್ನಾಟಕದ ರಚನೆಗೆ ಪ್ರಯತ್ನಿಸಿದ್ದರು. ಈ ಮೊದಲೇ, ಮುಂಬೈ ಸರ್ಕಾರಕ್ಕೆ ವಿಜಯಪುರ, ಬೆಳಗಾವಿ, ಕೆನರಾ ಹಾಗೂ ಧಾರವಾಡ ಜಿಲ್ಲೆಗಳಿಂದ ಕೂಡಿರುವ ಕನ್ನಡಿಗರ ಪ್ರದೇಶವನ್ನು ಮುಂಬೈ ಪ್ರಾಂತ್ಯದಿಂದ ಪ್ರತ್ಯೇಕಗೊಳಿಸಲು ಮನವಿ ಸಲ್ಲಿಸಿದ್ದರು.

4. ಹಿಂದುಳಿದ ವರ್ಗಗಳ ಕನ್ನಡಿಗರ ಕಲ್ಯಾಣಕ್ಕೆ ಒಲವು: ಹುಬ್ಬಳ್ಳಿಯಲ್ಲಿ ಬ್ರಾಹ್ಮಣೇತರ ಸಮಾವೇಶವನ್ನು ಏರ್ಪಡಿಸಿ ಆ ವರ್ಗದ ಕನ್ನಡಿಗರಿಗೆ ಸರ್ಕಾರಿ ಉದ್ಯೋಗವಕಾಶ ದೊರೆಯುವಂತೆ ಕ್ರಮ ಕೈಗೊಳ್ಳಲು ಬ್ರಿಟಿಷರನ್ನು ಕಂಬಳಿಯವರು ಒತ್ತಾಯಿಸಿದ್ದರು.

ಒಟ್ಟಾರೆ ಕಂಬಳಿಯವರು ಸತತ 25 ವರ್ಷಗಳ ಕಾಲ ಮುಂಬೈನ ಶಾಸನ ಪರಿಷತ್ತಿನ ಸದಸ್ಯರಾಗಿ ಕರುನಾಡಿನ ಹಿತಕ್ಕೆ ಶ್ರಮಿಸಿದ್ದರು. ಜೊತೆಗೆ ಶಿಕ್ಷಣದಿಂದ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯವೆಂದು ಪ್ರತಿಪಾದಿಸುತ್ತಿದ್ದ ಸಿದ್ದಪ್ಪನವರು ಶೈಕ್ಷಣಿಕ ಸಂಸ್ಥೆಗಳ ಬಲವರ್ಧನೆಗೆ ಆಸಕ್ತಿ ಹೊಂದಿದ್ದರು. ಬ್ರಾಹ್ಮಣರೂ ಇತರ ಬ್ರಾಹ್ಮಣೇತರರಂತೆ ಶ್ರಮ ಪಡುವಂತಾಗುವವರೆಗೆ ತಮಗೆ ವಿಶ್ರಾಂತಿಯಿಲ್ಲವೆಂಬ ಮಾತನ್ನು ಹೇಳುತ್ತಿದ್ದ ಕಂಬಳಿಯವರು ಬ್ರಾಹ್ಮಣೇತರರ ಸುಧಾರಣೆಗೆ ಆದ್ಯತೆ ನೀಡಿದ್ದರು. ಇವರ ಸಾಧನೆಯನ್ನು ಗುರುತಿಸಿದ್ದ ಬ್ರಿಟಿಷ್ ಸರ್ಕಾರ ಜಸ್ಟಿಸ್ ಆಫ್ ಪೀಸ್ ಹಾಗೂ ಸರ್ ಪದವಿಗಳನ್ನು ನೀಡಿ ಗೌರವಿಸಿದ್ದುದು ಉಳಿದೆಲ್ಲ ಕನ್ನಡಿಗರಿಗೆ ಸಂದ ಗೌರವದಂತೆ ಎಂದರೆ ತಪ್ಪಾಗಲಾರದು.

## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ಕರ್ನಾಟಕತ್ವ ಎಂದರೇನು?
2. ಆಲೂರು ವೆಂಕಟರಾಯರನ್ನು ಕನ್ನಡದ ಕುಲ ಪುರೋಹಿತ ಎನ್ನಲು ಕಾರಣವೇನು?

3. ಆಲೂರರ ರಾಷ್ಟ್ರೀಯ ಶಾಲೆಗಳ ಗುರಿಗಳಾವುವು?
4. ಆಲೂರು ವೆಂಕಟರಾಯರ ಪ್ರಧಾನ ಕೃತಿಗಳನ್ನು ಹೆಸರಿಸಿರಿ.
5. ಚನ್ನಬಸಪ್ಪನವರ ಹೆಸರಿನೊಡನೆ ಡೆಪ್ಯುಟಿ ಅಂಟಿಕೊಳ್ಳಲು ಕಾರಣವೇನು?
6. ನನ್ನತ ಭಾಷೆಯ ಶಿಕ್ಷಣಕ್ಕೆ ಚನ್ನಬಸಪ್ಪನವರ ಕೊಡುಗೆಯನ್ನು ಬರೆಯಿರಿ.
7. ಗುದ್ಲೆಪ್ಪನವರನ್ನು ಆಕರ್ಷಿಸಿದ ವ್ಯಕ್ತಿಗಳನ್ನು ಹೆಸರಿಸಿರಿ.
8. ಸಮಾಜದ ಸಂಕಷ್ಟಗಳಿಗೆ ಚನ್ನಬಸಪ್ಪನವರು ಸ್ಪಂದಿಸಿದ ನಿದರ್ಶನಗಳನ್ನು ಬರೆಯಿರಿ.
9. ಬ್ರಿಟಿಷರು ಸಿದ್ದಪ್ಪ ಕಂಬಳಿಯವರಿಗೆ ನೀಡಿದ ಪ್ರಶಸ್ತಿಗಳನ್ನು ಬರೆಯಿರಿ.
10. ಸಿದ್ದಪ್ಪನವರು ಶಿಕ್ಷಣ ಪ್ರೇಮಿ. ಹೇಗೆ?

[B.] ಐದು ಅಂಕದ ಪ್ರಶ್ನೆಗಳು:

1. ಆಲೂರು ವೆಂಕಟರಾಯರ ಕರ್ನಾಟಕತ್ವದ ಕಾಣಿಕೆಗಳನ್ನು ವಿವರಿಸಿರಿ.
2. ಡೆಪ್ಯುಟಿ ಚನ್ನಬಸಪ್ಪನವರು ಶಿಕ್ಷಣ ಪ್ರೇಮಿ ಎಂಬುದನ್ನು ಸಮರ್ಥಿಸಿರಿ.
3. ಗುದ್ಲೆಪ್ಪ ಹಳ್ಳಿಕೇರಿಯವರನ್ನು ಕುರಿತು ಟಿಪ್ಪಣಿ ಬರೆಯಿರಿ.
4. ಕರ್ನಾಟಕಕ್ಕೆ ಸಿದ್ದಪ್ಪ ಕಂಬಳಿಯವರ ಕೊಡುಗೆಗಳನ್ನು ಪರಿಶೀಲಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಆಲೂರು ವೆಂಕಟರಾಯರ ಜೀವನ ಮತ್ತು ಕರ್ನಾಟಕತ್ವದ ಪರಿಕಲ್ಪನೆಯನ್ನು ವಿವರಿಸಿರಿ.
2. ಕರ್ನಾಟಕಕ್ಕೆ ಡೆಪ್ಯುಟಿ ಚನ್ನಬಸಪ್ಪ ಮತ್ತು ಸಿದ್ದಪ್ಪ ಕಂಬಳಿಯವರ ಕೊಡುಗೆಗಳನ್ನು ಪರಿಶೀಲಿಸಿರಿ.



ಅಧ್ಯಾಯ 6:

# ಬೆಳಗಾವಿಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ [Indian National Congress Conference in Belgaum]

## ಪ್ರಸ್ತಾವನೆ [Introduction]:

ಭಾರತೀಯ ರಾಷ್ಟ್ರೀಯ ಹೋರಾಟದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ಅಖಿಲ ಭಾರತೀಯ ಮಟ್ಟದ ಮೊದಲ ಸಂಘಟನೆಯಾಗಿತ್ತು. ನಿವೃತ್ತ ಬ್ರಿಟಿಷ್ ಅಧಿಕಾರಿ ಎ. ಒ. ಹ್ಯೂಮ್ ಇದರ ಸ್ಥಾಪನೆಯ ಜವಾರಿ. ಬಾಂಬೇಯ ಗೋಕುಲದಾಸ್ ತೇಜ್ಪಾಲ್ ಸಂಸ್ಕೃತ ಕಾಲೇಜಿನಲ್ಲಿ ಡಿಸೆಂಬರ್ 28, 1885 ರಂದು ಐ. ಎನ್. ಸಿ ಆರಂಭವಾಯಿತು. ಅಂದು ಇದರ ಮೊದಲ ಅಧಿವೇಶನದ ಅಧ್ಯಕ್ಷತೆಯನ್ನು ಉಮೇಶ್ಚಂದ್ರ ಬ್ಯಾನರ್ಜಿ ವಹಿಸಿದ್ದು 72 ಪ್ರತಿನಿಧಿಗಳು ಭಾಗವಹಿಸಿದ್ದರು. ಭಾರತದ ವೈವಿಧ್ಯಮಯ ಜನರು ಮತ್ತು ಪ್ರದೇಶಗಳನ್ನು ಬೆಸೆಯಲು ವಾರ್ಷಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ಆಯೋಜಿಸಲು ತೀರ್ಮಾನಿಸಲಾಗಿತ್ತು. ಫಲವಾಗಿ 1887 ರಲ್ಲಿ ಜರುಗಿದ ಮದ್ರಾಸ್‌ನ ಐ. ಎನ್. ಸಿ ಯ ಮೂರನೇ ಅಧಿವೇಶನದ ಅಧ್ಯಕ್ಷತೆಯನ್ನು ಬದುರುದ್ದೀನ್ ತ್ಯಾಬ್ಜಿ ವಹಿಸಿದ್ದು ಮೊದಲ ಮುಸ್ಲಿಂ ನಾಯಕರಾಗಿದ್ದರು. ಅಂತೆಯೇ ಜಾರ್ಜ್ ಯೂಲ್ 1888 ರ ಅಲಹಾಬಾದ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಮೊದಲ ವಿದೇಶಿ ಪ್ರಜೆಯಾಗಿದ್ದರು. ಹೀಗೆ ವೈವಿಧ್ಯಮಯ ಜನರನ್ನು ಒಳಗೊಂಡ ಕಾಂಗ್ರೆಸ್ ಕಾಲಾನುಕ್ರಮದಲ್ಲಿ ಪರಿವರ್ತನೆಗೊಳ್ಳುತ್ತಾ ಸಾಗಿ ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿತು. ಗಮನಾರ್ಹ ಅಂಶವೇನೆಂದರೆ ಭಾರತದ ಪಿತಾಮಹನೆನಿಸಿರುವ ಮಹಾತ್ಮ ಗಾಂಧಿ ತಮ್ಮ ಜೀವಿತಾವಧಿಯಲ್ಲಿ ಒಂದೇ ಬಾರಿ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷತೆ ವಹಿಸಿದ್ದು ಅದುವೇ ಬೆಳಗಾವಿಯ ಅಧಿವೇಶನ. ಪ್ರಸ್ತುತ ಅಧ್ಯಾಯದಲ್ಲಿ ಕರ್ನಾಟಕದ ಬೆಳಗಾವಿಯಲ್ಲಿ ಜರುಗಿದ ಮಹತ್ವಪೂರ್ಣ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನ ಮತ್ತು ಅದಕ್ಕೆ ಸಂಬಂಧಿಸಿದ ಕನ್ನಡಿಗರ ಕೊಡುಗೆಗಳ ಮೇಲೆ ಬೆಳಕು ಚೆಲ್ಲಲಾಗಿದೆ.

## [I.] ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬೆಳಗಾವಿ ಅಧಿವೇಶನ [Belgaum Conference of Indian National Congress]:

[A.] ಹಿನ್ನೆಲೆ [Background]: 1923 ರಲ್ಲಿ 38 ನೇ ಕಾಂಗ್ರೆಸ್ ಅಧಿವೇಶನವು ಕಾಕಿನಾಡದಲ್ಲಿ ಜರುಗಿತ್ತು. ಗಂಗಾಧರರಾವ್ ದೇಶಪಾಂಡೆ, ಸೈಫುದ್ದೀನ್ ಕಿಚ್ಲು ಮತ್ತು

ಜವಾಹರಲಾಲ್ ನೆಹರು ಆ ಅಧಿವೇಶನದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಈ ವೇಳೆಯಲ್ಲಿ ದೇಶಪಾಂಡೆಯವರು ಮುಂದಿನ ಅಂದರೆ 39 ನೇ ಅಧಿವೇಶನವನ್ನು ಕನ್ನ ನಾಡಿನಲ್ಲಿ ನಡೆಸಲು ಒತ್ತಾಯಿಸಿದರು. 38 ನೇ ಅಧಿವೇಶನದ ಅಧ್ಯಕ್ಷರಾಗಿದ್ದ ಮೌಲಾನಾ ಮಹಮ್ಮದ್ ಅಲಿಯವರು ದೇಶಪಾಂಡೆಯವರ ಬೇಡಿಕೆಯನ್ನು ಸಮ್ಮತಿಸಿದರು ಗಮನಾರ್ಹ ಅಂಶವೇನೆಂದರೆ, 38 ನೇ ಅಧಿವೇಶನದ ಸಮಯದಲ್ಲಿ ಪುಣೆಯ ಯರವಾಡ ಜೈಲಿನಲ್ಲಿದ್ದ ಗಾಂಧೀಜಿ ಅಪೆಂಡಿಕ್ಸ್ ಸಮಸ್ಯೆಯಿಂದ ಅನಾರೋಗ್ಯಕ್ಕೆ ತುತ್ತಾ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಇದೇ ಸಮಯದಲ್ಲಿ, ಹಿಂದೂಗಳು ಮತ್ತು ಮುಸ್ಲಿಮರ ನಡು ದೇಶದಲ್ಲಿ ಹಿಂಸಾಚಾರ ಭುಗಿಲೆದ್ದ ಕಾರಣ ಗಾಂಧಿ ಬೇಸರಗೊಂಡಿದ್ದರು. 39 ನೇ ಅಧಿವೇಶನದ ಅಧ್ಯಕ್ಷತೆ ವಹಿಸಿಕೊಳ್ಳಲು ಗಾಂಧೀಜಿಯವರನ್ನು ಆಹ್ವಾನಿಸಲು ಕಾಂಗ್ರೆ ಕಾರ್ಯಕರ್ತರು ಅವರನ್ನು ಸಂಪರ್ಕಿಸಿದಾಗ 'ನಾನು ಈ ಬಗ್ಗೆ ಯೋಚಿಸುತ್ತೇನೆ' ಎಂದ ತಿಳಿಸಿದ್ದರು. ಈ ಮಧ್ಯೆ 39 ನೇ ಅಧಿವೇಶನಕ್ಕೆ ಸ್ಥಳ ಗುರುತಿಸಲು ಹುಬ್ಬಳ್ಳಿಯ ಸಭೆಯೊಂದು ಜರುಗಿತು. ಈ ಸಭೆಯಲ್ಲಿ ಕಾರ್ನಾಡ್ ಸದಾಶಿವರಾಯರು ಮಂಗಳೂರಿನ ಅಧಿವೇಶನ ಜರುಗಬೇಕೆಂಬ ಒತ್ತಾಯ ಮುಂದಿಟ್ಟರು. ಅಂತೆಯೇ ಧಾರವಾಡ ಮತ್ತ ವಿಜಯಪುರದ ಕಾರ್ಯಕರ್ತರು ತಮ್ಮ ಊರಿನಲ್ಲಿಯೇ ಅಧಿವೇಶನ ಜರುಗಬೇಕೆಂದ ಪಟ್ಟು ಹಿಡಿದರು. ಅಂತಿಮವಾಗಿ ಗಂಗಾಧರರಾವ್ ದೇಶಪಾಂಡೆಯವರ ದೂರದೃಷ್ಟಿಯ ಸಮರ್ಪಕ ವಾದದ ಪರಿಣಾಮ ಅವರ ಆಶಯದಂತೆ ಬೆಳಗಾವಿಯಲ್ಲಿ ಸಭೆ ಜರುಗಿಸಲು ಒಕ್ಕೊರಲಿನಿಂದ ನಿರ್ಣಯಿಸಲಾಯಿತು.

[B.] ಅಧಿವೇಶನದ ಸಿದ್ಧತೆ [Preperation of the Conference] ಬೆಳಗಾವಿಯ ತಿಲಕವಾಡಿ ಎಂಬ ಹೆಸರಿನ ಬಯಲು ಪ್ರದೇಶದಲ್ಲಿ ಅಧಿವೇಶ ಆಯೋಜಿಸಲು ತೀರ್ಮಾನಿಸಲಾಯಿತು. ಅಧಿವೇಶನಕ್ಕೆ ಬರುವ ಜನರ ನೀರಿಗಾ ಬಾವಿಯೊಂದನ್ನು ತೋಡಲಾಯಿತು. ಅಂದು ಆ ಬಾವಿಗೆ ಪಂಪ ಸಾಗರ ಎಂದ ಹೆಸರಿಸಲಾಗಿದ್ದು ಪ್ರಸ್ತುತ ಕಾಂಗ್ರೆಸ್ ಬಾವಿ ಎಂದೇ ಆ ಬಾವಿಯು ಜನಪ್ರಿಯವಾಗಿದೆ. ಅಧ್ಯಕ್ಷತೆ ವಹಿಸಲಿದ್ದ ಗಾಂಧಿಯವರಿಗೆ ಬಿದಿರಿನ ನಿವಾಸವೊಂದನ್ನು ನಿರ್ಮಿಸಲು ತೀರ್ಮಾನಿಸಲಾಗಿದ್ದರೂ ಗಾಂಧಿ ಟೆಂಟಿನಲ್ಲಿ ಉಳಿದುಕೊಳ್ಳಲು ಬಯಸಿದ್ದ ಕಾರಣ ಸರಳ ಟೆಂಟ್‌ಗಳು ರಚನೆಗೊಂಡವು. ಅಧಿವೇಶನಕ್ಕೆ ಬರುವ ಜನರಿಗೆ ಊಟ ಮತ್ತು ವಸತಿಯನ್ನು ಕಲ್ಪಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಜೊತೆಗೆ ಅಧಿವೇಶನಕ್ಕೆ ಬರುವ ಜನರ ಅನುಕೂಲಕ್ಕಾಗಿ ತಿಲಕವಾಡಿಯ ಸಮೀಪ ತಾತ್ಕಾಲಿಕ ರೈಲು ನಿಲ್ದಾಣವನ್ನು ಮಾಡಲಾಗಿತ್ತು. ಹೀಗೆ ಐತಿಹಾಸಿಕ ಅಧಿವೇಶನಕ್ಕೆ ಗಂಗಾಧರರಾವ್ ದೇಶಪಾಂಡೆಯವರ ನೇತೃತ್ವದಲ್ಲಿ ಭರದ ಸಿದ್ಧತೆಯನ್ನು ಸ್ಥಳೀಯ ಕಾಂಗ್ರೆಸ್ ನಾಯಕರು ಮಾಡಿಕೊಂಡಿದ್ದರು.

[C.] ಅಧಿವೇಶನದ ವಿಶೇಷತೆಗಳು [Distincts of the Conference]: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬೆಳಗಾವಿ ಅಧಿವೇಶನವನ್ನು 1924ರ ಡಿಸೆಂಬರ್ 26 ಮತ್ತು 27 ರಂದು ನಡೆಸಲು ನಿರ್ಧರಿಸಲಾಗಿತ್ತು. ಕನ್ನಡ ನಾಡಿನಲ್ಲಿ ಜರುಗಿದ ಏಕೈಕ



ಅಧಿವೇಶನವಾದ ಬೆಳಗಾವಿ ಅಧಿವೇಶನವು ತನ್ನದೇಯಾದ ವಿಶೇಷತೆಗಳನ್ನು ಹೊಂದಿತ್ತು. ಅಧಿವೇಶನದ ಐದು ದಿನಗಳ ಮುನ್ನವೇ ಗಾಂಧಿ ಬೆಳಗಾವಿಗೆ ಆಗಮಿಸಿ ಸುತ್ತಲಿನ ಗ್ರಾಮಗಳಿಗೆ ಭೇಟಿ ನೀಡುವ ಮೂಲಕ ಸ್ವಾತಂತ್ರ್ಯ ಚಳುವಳಿಯ ಬಗೆಗೆ ಜಾಗೃತಿ ಮೂಡಿಸಲು ಪ್ರಯತ್ನಿಸಿದರು. ಅಧಿವೇಶನದಲ್ಲಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಗಾಂಧಿ ಅಹಿಂಸಾ ಮಾರ್ಗದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಸಬೇಕೆಂದು ಸಲಹೆ ನೀಡಿದರು. ದೇಶದ ಜನರು ಹಿಂಸೆಯ ಮಾರ್ಗ ತುಳಿಯದೇ ಅಹಿಂಸಾತ್ಮಕವಾಗಿ ವರ್ತಿಸಬೇಕೆಂದು ಸೂಚಿಸಿದರು. ಜೊತೆಗೆ ಅಸಹಕಾರ ಚಳುವಳಿ ಮೂಲಕ ಬ್ರಿಟಿಷರು ದೇಶ ಬಿಟ್ಟು ತೊಡಗುವಂತೆ ಮಾಡಬೇಕೆಂದು ಗಾಂಧೀಜಿ ಅಭಿಪ್ರಾಯಪಟ್ಟರು. ಇದರೊಡನೆ ಮಹಾತ್ಮ ಗಾಂಧೀಜಿ ಮಾಡಿದ್ದ ಭಾಷಣದಲ್ಲಿ ದೇಶದ ಜನರಲ್ಲಿ ಒಗ್ಗಟ್ಟು, ಸ್ಥಳೀಯ ಭಾಷೆಯ ಮಹತ್ವ ಹಾಗೂ ಅಸ್ಪೃಶ್ಯತೆಯ ನಿವಾರಣೆಗಳು ಪ್ರಸ್ತಾಪಿಸಲ್ಪಟ್ಟಿದ್ದವು. ಈ ಅಧಿವೇಶನದ ವಿಶೇಷತೆಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದಾಗಿದೆ.

1. ಅಧಿವೇಶನ ಜರುಗುವ ಸ್ಥಳವನ್ನು ವಿಜಯನಗರ ಎಂದು ಹೆಸರಿಸಿ ಹಂಪಿಯ ವಿರುಪಾಕ್ಷ ದೇವಾಲಯದ ಗೋಪುರ ಶೈಲಿಯ ಪ್ರವೇಶ ದ್ವಾರವನ್ನು ನಿರ್ಮಾಣ ಮಾಡಲಾಗಿದ್ದುದು.
2. ಅಧಿವೇಶನಕ್ಕೆ ಗಾಂಧೀಜಿಯವರನ್ನು ಮೆರವಣಿಗೆ ಮೂಲಕ ಕರೆ ತರಲಾಗಿದ್ದು ಈ ವೇಳೆ ಕರ್ನಾಟಕದ ಸಾಂಸ್ಕೃತಿಕ ಅಸ್ಮಿತೆಯನ್ನು ಪ್ರದರ್ಶಿಸಲು ಆದ್ಯತೆ ನೀಡಲಾಗಿತ್ತು. ಉದಾ: ಹುಯಿಲಗೋಳ ನಾರಾಯಣರಾಯರು ರಚಿಸಿದ್ದ ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು ಹಾಡನ್ನು ಬಾಲಕಿಯಾಗಿದ್ದ ಗಂಗೂಬಾಯಿ ಹಾನಗಲ್ ಅಧಿವೇಶನದಲ್ಲಿ ಹಾಡಿದ್ದುದು.
3. ಅಧಿವೇಶನಕ್ಕೆ ಸುಮಾರು 30 ಸಾವಿರ ಕಾರ್ಯಕರ್ತರು ಸಾಕ್ಷಿಯಾಗಿದ್ದು ಅವರಿಗೆ ಅಗತ್ಯ ಸೇವೆಗಳನ್ನೊದಗಿಸಲು ಎನ್. ಎಸ್. ಹರಡೇಕರ್ ನೇತೃತ್ವದ ಹಿಂದೂಸ್ತಾನ್ ಸೇವಾ ದಳದ ಸ್ವಯಂ ಸೇವಕರು ನೆರವಾದುದು.
4. ಮೋತಿಲಾಲ್ ನೆಹರೂ, ಜವಾಹರಲಾಲ್ ನೆಹರೂ, ಮೌಲಾನಾ ಮಹಮ್ಮದ್‌ಅಲಿ, ಮೌಲಾನಾ ಶೌಕತ್‌ಅಲಿ, ಸರೋಜಿನಿ ನಾಯ್ಡು, ಲಾಲಾ ಲಜಪತ ರಾಯ್, ಅನಿಬೆಸೆಂಟ್ ಮುಂತಾದ ನಾಯಕರು ಭಾಗವಹಿಸಿದುದು.
5. ಕನ್ನಡ ಭಾಷಿಕರ ಏಕೀಕರಣ ಚಳುವಳಿಗೆ ತೀವ್ರತೆ ದೊರಕಿದುದು.
6. ದೇಶಕ್ಕೆ ಸ್ವಾತಂತ್ರ್ಯ ಸಿಗುವವರೆಗೂ, ಯಾವುದೇ ಕಾರಣಕ್ಕೂ ಹೋರಾಟದಿಂದ ಹಿಂದೆ ಸರಿಯಬಾರದು' ಎನ್ನುವ ನಿರ್ಣಯ ಅಂಗೀಕರಿಸಿದ್ದುದು.

7. ಅಧಿವೇಶನವು ಹಿಂದು ಮುಸ್ಲಿಂ ಏಕತೆ, ಸ್ವದೇಶಿ ವಸ್ತುಗಳ ಪ್ರೋತ್ಸಾಹ, ಖಾದಿ ಬಳಕೆಗೆ ಬೆಂಬಲ, ಅಸ್ಪೃಶ್ಯತೆಯ ನಿವಾರಣೆಯಂತಹ ಉದ್ದೇಶವನ್ನು ಸಾಧಿಸುವ ಗುರಿಗಳನ್ನು ಹೊಂದಿದುದು.

8. ಅಧಿವೇಶನವು ಚರಕದ ಪ್ರಾಮುಖ್ಯತೆಯನ್ನು ತೆರೆದಿಟ್ಟಿತಲ್ಲದೇ ರೈತ ಹೋರಾಟಗಳಿಗೆ ಪ್ರೇರಣೆ ಒದಗಿಸಿದುದು.

ಒಟ್ಟಿನಲ್ಲಿ ಬೆಳಗಾವಿಯಲ್ಲಿ ಜರುಗಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನವು ಮುಂದೆ ಕರ್ನಾಟಕದ ಭಾಗದಲ್ಲಿ ಸಂಚಲನ ಉಂಟು ಮಾಡುವಲ್ಲಿ ಯಶಸ್ವಿಯಾಯಿತು. ಜೊತೆಗೆ ಕನ್ನಡ ನಾಡಿನ ಏಕೀಕರಣಕ್ಕೆ ಆನೆ ಬಲವನ್ನು ಒದಗಿಸಿತು. ಇದರೊಡನೆ ಸ್ವಾತಂತ್ರ್ಯ ಹೋರಾಟದಲ್ಲಿ ಗಂಗಾಧರರಾವ್ ದೇಶಪಾಂಡೆ, ಶ್ರೀನಿವಾಸ ಕೌಜಲಗಿ, ಆರ್. ಆರ್. ದಿವಾಕರ, ಕಡಪ ರಾಘವೇಂದ್ರರಾಯರು ತೊಡಗಿಕೊಳ್ಳಲು ಪ್ರೇರಣೆಯೊದಗಿಸಿತು. ಬೆಳಗಾವಿ ಅಧಿವೇಶನದ ಆಯೋಜನೆಗಾಗಿ ಗಂಗಾಧರರಾವ ದೇಶಪಾಂಡೆಯವರು ಗಾಂಧೀಜಿಯವರಿಂದ ಕರ್ನಾಟಕದ ಸಿಂಹ ಎನಿಸಿಕೊಂಡರು.

## [II.] ಹರ್ಡೇಕರ್ ಮಂಜಪ್ಪನವರ ಸ್ವದೇಶಿ ಮತ್ತು ರಾಷ್ಟ್ರೀಯವಾದದ ಪರಿಕಲ್ಪನೆ [Concept of Swadeshi and Nationalism by Hardekar Manjappa]:

ನಿಸ್ವಾರ್ಥ ಸಮಾಜ ಸುಧಾರಕರಾಗಿ, ದೇಶ ಭಕ್ತರಾಗಿ, ಸರಳ ಜೀವಿಯಾಗಿ, ಬಸವಾಭಿಮಾನಿಯಾಗಿ ಬದುಕಿದ್ದ ಕನ್ನಡ ನಾಡನ್ನು ಒಗ್ಗೂಡಿಸಿರುವ ಧೀಮಂತ ಸಂತ ಹರ್ಡೇಕರ ಮಂಜಪ್ಪನವರು. ಶೈಕ್ಷಣಿಕ ಮತ್ತು ಸಾಹಿತ್ಯ ಕ್ಷೇತ್ರಗಳನ್ನೊಳಗೊಂಡಂತೆ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಕೀರ್ತಿ ಮಂಜಪ್ಪನವರಿಗೆ ಸಲ್ಲುತ್ತದೆ. ಸೇವೆಯೇ ಶ್ರೇಷ್ಠ ಜೀವನವೆಂದು ತಿಳಿದು ಬಾಳಿ ಬದುಕಿದ ಕರುನಾಡಿನ ಮೇರು ವ್ಯಕ್ತಿತ್ವದ ಮಹಾನ ಸಾಧಕರಾಗಿರುವ ಮಂಜಪ್ಪನವರು ಕರ್ನಾಟಕದ ಗಾಂಧಿ ಎಂದೇ ಹೆಸರಾಗಿದ್ದವರು. ಸ್ವಾತಂತ್ರ್ಯ ಹೋರಾಟಗಾರರಾಗಿ ಮಂಜಪ್ಪನವರು ಸ್ವದೇಶಿ ಮತ್ತು ರಾಷ್ಟ್ರೀಯವಾದದ ಪರಿಕಲ್ಪನೆಗೆ ಕರ್ನಾಟಕದಲ್ಲಿ ನೂತನ ಆಯಾಮ ಒದಗಿಸಿದುದು ಗಮನಾರ್ಹ.

[A.] **ಮಂಜಪ್ಪನವರ ಜೀವನ ಮತ್ತು ಸಾಧನೆ:** ಮಂಜಪ್ಪನವರು ಫೆಬ್ರವರಿ 18, 1886 ರಂದು ಜನಿಸಿದರು. ಬನವಾಸಿ ಎಂಬ ಗ್ರಾಮವು ಮಂಜಪ್ಪನವರ ಹುಟ್ಟೂರು. 1903 ರಲ್ಲಿ ಕನ್ನಡ ಮುಲ್ಕಿ ಪ್ರಾಥಮಿಕ ಶಿಕ್ಷಣ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಮೂಲಕ ಮಂಜಪ್ಪನವರು ಶಿರಸಿಯಲ್ಲಿ ಶಾಲಾ ಅಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿದರು. ಆದರೆ 1906 ರಲ್ಲಿ ತಿಲಕರ ಸ್ವದೇಶಿ ಚಳುವಳಿಯಿಂದ ಪ್ರಭಾವಿತರಾಗಿ ಅಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡಿದರು. ಬಳಿಕ 1906ರ ಸೆಪ್ಟಂಬರ್‌ನಲ್ಲಿ "ಧನುರ್ಧಾರಿ" ಹೆಸರಿನ ಪತ್ರಿಕೆಯನ್ನು ದಾವಣಗೆರೆಯಿಂದ ಪ್ರಕಟಿಸತೊಡಗಿದರು. ಈ ಪತ್ರಿಕೆಯು



ಲೋಕಮಾನ್ಯ ತಿಲಕರು ಮಹಾರಾಷ್ಟ್ರದಲ್ಲಿ ಹೊರಡಿಸುತ್ತಿದ್ದ ಮರಾಠಿ ಪತ್ರಿಕೆ ಕೇಸರಿಯ ಲೇಖನಗಳ ಕನ್ನಡ ಅನುವಾದವನ್ನು ಪ್ರಕಟಿಸುತ್ತಿತ್ತು. ಪತ್ರಿಕೆಯ ಉಗ್ರ ಧೋರಣೆಯನ್ನು ಇಷ್ಟಪಡದ ಮುದ್ರಕರು ಬಾಡಿಗೆ ಹೆಚ್ಚಿಸಿದ್ದರಿಂದ ಪತ್ರಿಕೆ ನಿಂತುಹೋಯಿತು.

1910 ರಲ್ಲಿ ಮದುವೆಯು ಸಮಾಜ ಸೇವೆಗೆ ತೊಡಕು ಎಂದು ಭಾವಿಸಿದ ಮಂಜಪ್ಪನವರು ತಮ್ಮ 25 ನೆ ವಯಸ್ಸಿನಲ್ಲಿ ಮದುವೆ ಮಾಡಿಕೊಳ್ಳಬಾರದೆಂಬ ನಿರ್ಧಾರವನ್ನು ಕೈಗೊಂಡರು. ಜೊತೆಗೆ ಬ್ರಹ್ಮಚರ್ಯಕ್ಕೆ ಪೂರಕವಾಗುವ ಆಹಾರ ಸೇವನೆಯ ಪ್ರಯುಕ್ತ ಉಪ್ಪು, ಹುಳಿ, ಖಾರ ಹಾಗೂ ಸಿಹಿ ಪದಾರ್ಥಗಳನ್ನು ತ್ಯಜಿಸಿದರು. 1911 ರಲ್ಲಿ ದಾವಣಗೆರೆಯಲ್ಲಿ ಮೃತ್ಯುಂಜಯ ಮಹಾಸ್ವಾಮಿಗಳವರ ಸಹಕಾರದೊಂದಿಗೆ ಶ್ರಾವಣ ಉಪನ್ಯಾಸ ಮಾಲೆ 'ಸಾಮೂಹಿಕ ಭಜನೆ ಮತ್ತು ವ್ಯಾಖ್ಯಾನ ಕಾರ್ಯಕ್ರಮ' ಪ್ರಾರಂಭಿಸಿದರು.

ಮುಂದೆ 1930ರಲ್ಲಿ ಮಂಜಪ್ಪನವರು "ಉದ್ಯೋಗ" ಎನ್ನುವ ಮಾಸಪತ್ರಿಕೆ ಹಾಗೂ ಮಕ್ಕಳ ಸಾಹಿತ್ಯಮಾಲೆಯನ್ನು ಪ್ರಾರಂಭಿಸಿದರು. ಇದರೊಡನೆ 1931 ರಲ್ಲಿ ಶರಣ ಸಂದೇಶ ಎನ್ನುವ ಮಾಸ ಪತ್ರಿಕೆಯನ್ನು ಹೊರಡಿಸಿದ್ದುದು ಅವರ ಸಾಧನೆ ಎನಿಸಿಕೊಂಡಿತು. ಮಂಜಪ್ಪನವರು ತಮ್ಮ ಬರಹಗಳ ಮೂಲಕ ಸರ್ಕಾರದ ಜನ ವಿರೋಧಿ ನೀತಿಗಳನ್ನು ಕಟುವಾಗಿ ಟೀಕಿಸುತ್ತಿದ್ದರು. ಫಲವಾಗಿ ಜನರ ಪ್ರೀತಿಗೆ ಮಂಜಪ್ಪ ಪಾತ್ರರಾದರು. ನಿಧಾನವಾಗಿ ಮಂಜಪ್ಪನವರು ಬಸವಣ್ಣನವರ ವೈಜ್ಞಾನಿಕ, ವೈಚಾರಿಕ, ಸಮತಾವಾದಿ ನೆಲೆಗಟ್ಟಿನ ಚಿಂತನೆಗಳತ್ತ ವಾಲಿದರು. ಈ ಕೆಳಗಿನ ಅಂಶಗಳು ಮಂಜಪ್ಪನವರ ಪ್ರಧಾನ ಸಾಧನೆಗಳನ್ನು ಸಂಕ್ಷೇಪ್ತವಾಗಿ ಅರಿತುಕೊಳ್ಳಲು ನೆರವಾಗುತ್ತವೆ.

1. ಆಲಮಟ್ಟಿಯಲ್ಲಿ ಶಿಕ್ಷಣ ಸಂಸ್ಥೆ ಸ್ಥಾಪನೆ...
2. ಹುಬ್ಬಳ್ಳಿಯಲ್ಲಿ ಸತ್ಯಾಗ್ರಹ ಸಮಾಜ ಸಂಘಟನೆ.
3. ಜನರಲ್ಲಿ ಬೇರು ಬಿಟ್ಟ ದುಶ್ಚಟಗಳ ನಿರ್ಮೂಲನಕ್ಕಾಗಿ ದೇಶೀ ಚಳುವಳಿಯ ಆರಂಭ.
4. 1935 ರಲ್ಲಿ ಸ್ತ್ರೀ ಜಾಗೃತಿಗಾಗಿ ಅಕ್ಕ ಮಹಾದೇವಿಯ ಜಯಂತಿ ಆಚರಣೆಗೆ ಚಾಲನೆ.
5. 1923 ರಲ್ಲಿ ಹರಿಹರದ ಸಮೀಪ ತುಂಗಭದ್ರಾ ನದಿ ತೀರದಲ್ಲಿ ಸತ್ಯಾಗ್ರಹ ಆಶ್ರಮ ಸ್ಥಾಪನೆ,
6. ಮಂಜಪ್ಪನವರು ಸಂಘಟಿಸಿದ್ದ ಬಸವೇಶ್ವರ ಸೇವಾ ದಳವು 1924ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿತ್ತು.
7. ಬಸವಣ್ಣನವರ ವಚನಗಳ ಆಳವಾದ ಅಧ್ಯಯನದ ಬಳಿಕ ಸ್ವಕರ್ತವ್ಯ ಸಿದ್ಧಾಂತ, ವಾರದ ಮಲ್ಲಪ್ಪನವರ ಚರಿತ್ರೆ, ಸ್ತ್ರೀನೀತಿ ಸಂಗ್ರಹ, ಗಾಂಧೀ ಚರಿತ್ರೆ, ಭಾರತೀಯರ ದೇಶಭಕ್ತಿ, ಬಸವ ಚರಿತ್ರೆ, ಆಧುನಿಕ ಜರ್ಮನ್, ಸತ್ಯಾಗ್ರಹ ಧರ್ಮ, ಬಸವ ಬೋಧಾಮೃತ, ಸುಬೋಧಸಾರ, ಎಚ್ಚತ್ತ ಹಿಂದುಸ್ಥಾನ ಕೃತಿಗಳನ್ನು ಮಂಜಪ್ಪನವರು ರಚಿಸಿದ್ದಾರೆ.

[B.] ಮಂಜಪ್ಪನವರ ಸ್ವದೇಶಿ ಮತ್ತು ರಾಷ್ಟ್ರೀಯವಾದದ ಪರಿಕಲ್ಪನೆ: ಮಂಜಪ್ಪನವರು ಬಾಲ ಗಂಗಾಧರ ತಿಲಕರ ರಾಜಕೀಯ ವಿಚಾರಗಳಿಂದ ಆರಂಭದಲ್ಲಿ ಪ್ರಭಾವಕ್ಕೊಳಗಾಗಿದ್ದರು. 1917 ರಲ್ಲಿ ಹೋಮ್ ರೂಲ್ ಚಳುವಳಿಯಿಂದ ಆಕರ್ಷಿತರಾಗಿ ಅದನ್ನು ಸಂಘಟಿಸಲು ಮುಂದಾದರು. ತಮ್ಮ ಸಹೋದರನೊಡನೆ ಸೇರಿ ಗಾಂಧೀಜಿಯವರ ಪ್ರಭಾವದಿಂದ ಸ್ವದೇಶಿ ಚಳುವಳಿಗೆ ಧುಮುಕಿದರು. ಸ್ವದೇಶಿ ಪರಿಕಲ್ಪನೆಯ ಭಾಗವಾಗಿ ಖಾದಿಯನ್ನು ಚರಕದ ಮೂಲಕ ಉತ್ಪಾದಿಸಲು ಜನರಿಗೆ ಕರೆ ಕೊಟ್ಟರು. ಜೊತೆಗೆ ಸ್ವಾವಲಂಬನೆ ಮತ್ತು ಸರಳ ಜೀವನಕ್ಕೆ ಚರಕದ ಅಗತ್ಯವನ್ನು ಪ್ರತಿಪಾದಿಸುವ ಮೂಲಕ ಖಾದಿ ಉತ್ಪಾದನೆಯ ಹೆಚ್ಚಳಕ್ಕೆ ಕಾರಣರಾದರು. ಗುಡಿ ಕೈಗಾರಿಕೆಗಳ ಉಳಿವು ಮತ್ತು ಪುನಶ್ಚೇತನಕ್ಕೆ ಆದ್ಯತೆ ನೀಡುವ ಮೂಲಕ ಸ್ವದೇಶಿ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಮಂಜಪ್ಪನವರು ಬಯಸಿದ್ದರು. ತಮ್ಮ ಅನೇಕ ಕೃತಿಗಳಲ್ಲಿ ಗಾಂಧೀಜಿಯವರ ಸ್ವದೇಶಿ ಪರಿಕಲ್ಪನೆ ಜನಪ್ರಿಯಗೊಳಿಸಲು ಪ್ರಯತ್ನಿಸಿದರಲ್ಲದೇ ಸತ್ಯಾಗ್ರಹಿಗಳಿಗೆ ಸ್ವದೇಶಿ ಪರಿಕಲ್ಪನೆ ಕುರಿತು ತರಬೇತಿ ಒದಗಿಸಲು ಆಶ್ರಮವೊಂದನ್ನು ಸ್ಥಾಪಿಸಿದ್ದರು.

ಭಾರತೀಯರ ದೇಶ ಭಕ್ತಿ ಎಂಬ ತಮ್ಮ ಕೃತಿಯಲ್ಲಿ ಮಂಜಪ್ಪನವರು ಭಾರತೀಯ ರಾಷ್ಟ್ರೀಯವಾದದ ಉಗಮ ಮತ್ತು ವಿಕಾಸ ಕುರಿತಂತೆ ಬೆಳಕು ಚೆಲ್ಲಿರುವರು. ದೇಶ ಮತ್ತು ರಾಷ್ಟ್ರ ಹಾಗೂ ದೇಶ ಭಕ್ತಿ ಮತ್ತು ರಾಷ್ಟ್ರೀಯವಾದದಲ್ಲಿ ವ್ಯತ್ಯಾಸ ಗುರುತಿಸುವ ಮಂಜಪ್ಪನವರು ತಮ್ಮದೇಯಾದ ಆಯಾಮವನ್ನು ರಾಷ್ಟ್ರೀಯವಾದಕ್ಕೆ ನೀಡಿರುವರು. ದೇಶಕ್ಕಿಂತ ಭಿನ್ನವಾಗಿರುವ ರಾಷ್ಟ್ರವನ್ನು ಸಂಕಲಿತ ಮಾನವ ವ್ಯವಸ್ಥೆ ಎಂದಿರುವ ಮಂಜಪ್ಪನವರು ರಾಷ್ಟ್ರದ ಸೇವೆಯ ಮೂಲಕ ದೇಶ ಭಕ್ತಿ ಕಂಡು ಬರುವುದೆಂದು ಅಭಿಪ್ರಾಯಪಟ್ಟಿರುವರು. ಮಾನವ ಸಮಾಜ ಜೀವಿಯಾಗಿರುವ ಕಾರಣ ಮಾನವ ಸಮುದಾಯವು ಕುಟುಂಬದಿಂದ ರಾಷ್ಟ್ರದವರೆಗೆ ವಿಸ್ತರಿಸಿದೆ ಎಂಬುದು ಮಂಜಪ್ಪನವರ ನಿಲುವಾಗಿತ್ತು. ಕುಟುಂಬವೊಂದರ ಸದಸ್ಯರು ತಮ್ಮ ಹಿತಾಸಕ್ತಿಗಾಗಿ ಪರಸ್ಪರ ಸಹ ಜೀವನ ನಡೆಸುವಂತೆ ದೇಶವೊಂದರ ಪ್ರಜೆಗಳು ಪರಾವಲಂಬಿಯಾಗಿರುವ ಕಾರಣ ಸಹಬಾಳ್ವೆ ನಡೆಸಬೇಕೆಂದು ಅವರು ಪ್ರತಿಪಾದಿಸಿದ್ದರು. ಐಕ್ಯತೆ ಹಾಗೂ ಸಾಮರಸ್ಯಗಳು ರಾಷ್ಟ್ರದ ಕೀರ್ತಿಯನ್ನು ಉತ್ತುಂಗಕ್ಕೆ ತಲುಪಿಸಿದರೆ ಅನೈಕ್ಯತೆ ಹಾಗೂ ಸಂಘರ್ಷಗಳು ರಾಷ್ಟ್ರದ ಘನತೆಯನ್ನು ನಾಶಗೊಳಿಸುವುವೆಂದು ಮಂಜಪ್ಪನವರು ಎಚ್ಚರಿಸಿದ್ದರು. ತಮ್ಮ ರಾಷ್ಟ್ರೀಯವಾದದ ವಿಚಾರಗಳನ್ನು ಹರಡಲು ಕನ್ನಡ ನಾಡಿನಾದ್ಯಂತ ಸಂಚರಿಸಿದ್ದ ಮಂಜಪ್ಪನವರು ಪತ್ರಿಕೆ, ಕೃತಿಗಳು ಮತ್ತು ವಿದ್ಯಾ ಸಂಸ್ಥೆಗಳ ಮೂಲಕವೂ ಭಾರತೀಯ ರಾಷ್ಟ್ರೀಯವಾದವನ್ನು ಬಲಗೊಳಿಸಲು ಶ್ರಮಿಸಿದ್ದರು.

ಒಟ್ಟಾರೆ ತಮ್ಮ ಜೀವನದಲ್ಲಿ ಮಹತ್ವದ ಕೊಡುಗೆಗಳನ್ನು ನೀಡಿದ ಬಹಳಷ್ಟು ಮಂದಿ ಇದ್ದಾಗ್ಯೂ ಹರ್ಡೇಕರ ಮಂಜಪ್ಪನವರಂತೆ ಅತ್ಯಂತ ಕಟ್ಟುನಿಟ್ಟಿನ ಸ್ವಯಂ ನಿಯಂತ್ರಣದ ಬದುಕನ್ನು ಸಾಧಿಸಿದವರು ತೀರಾ ವಿರಳ. ಮಂಜಪ್ಪನವರು ತಮ್ಮ ಬರಹಗಳ ಮೂಲಕ ಸರ್ಕಾರದ ಜನ ವಿರೋಧಿ ನೀತಿಗಳನ್ನು ಕಟುವಾಗಿ ಟೀಕಿಸುತ್ತಿದ್ದರು. ಇಂತಹ ಪ್ರಯತ್ನವು



ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಜಾಪ್ರಭುತ್ವದ ಅಡಿಪಾಯಕ್ಕೆ ನಾಂದಿಯಾಗಿತ್ತು. ಈ ಹಿನ್ನೆಲೆಯಲ್ಲಿ ಮಂಜಪ್ಪನವರನ್ನು ಕರ್ನಾಟಕದ ಯುಗ ಪುರುಷ ಎಂದು ಕರೆಯಲಾಗುತ್ತದೆ. ಇದರೊಡನೆ ಕನ್ನಡ ನಾಡಿನ ಜನತೆಗೆ ಚರಕದ ಮಹತ್ವವನ್ನು ತಿಳಿಸಿ ಸ್ವಾವಲಂಬಿ ಮತ್ತು ಸರಳ ಜೀವನಕ್ಕೆ ಮಂಜಪ್ಪ ಮಾದರಿಯಾಗಿದ್ದರು. ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕಿ ಬಡತನದ ಬವಣೆ ಅನುಭವಿಸುತ್ತಿರುವವರಿಗಾಗಿ ಬದುಕಿದವರು ಮಂಜಪ್ಪನವರು. ಆದ್ದರಿಂದಲೇ ಅವರನ್ನು ಕರ್ನಾಟಕದ ಗಾಂಧಿ ಎನ್ನಲಾಗುತ್ತದೆ.

## [III.] ಹುಯಿಲಗೋಳ್ ನಾರಾಯಣ ರಾವ್ [Huilgol Narayan Rao]:

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಗೀತೆಯ ಮೂಲಕ ಕನ್ನಡ ನಾಡಿನ ಜನಮಾನಸದಲ್ಲಿ ಚಿರಸ್ಥಾಯಿಯಾದ ಕವಿ ಹುಯಿಲಗೋಳ ನಾರಾಯಣರಾಯರು. ಕನ್ನಡ ನಾಡು ಮತ್ತು ನುಡಿಗೆ ನಾರಾಯಣ ರಾಯರು ಕಾವ್ಯ, ನಾಟಕ, ವೈಚಾರಿಕ ಪ್ರಬಂಧ ಇತ್ಯಾದಿ ಪ್ರಕಾರಗಳಲ್ಲಿ ಸಾಹಿತ್ಯವನ್ನು ರಚಿಸುವ ಮೂಲಕ ತಮ್ಮದೇಯಾದ ಕೊಡುಗೆ ನೀಡಿರುವರು. ಆಧುನಿಕ ಕನ್ನಡ ಸಾಹಿತ್ಯ ಲೋಕವನ್ನು ಪ್ರಭಾವಿಸಿದ್ದ ಹುಯಿಲಗೋಳರು ಜನರಲ್ಲಿ ಕನ್ನಡ ಪ್ರೇಮವನ್ನು ಬೆಳೆಸಲು ಕಾರಣರಾಗಿದ್ದರು. ನಾಟಕ ಪ್ರದರ್ಶನ ನೀಡುತ್ತಿದ್ದ ನಾರಾಯಣರಾಯರು ಅದರಿಂದ ದೊರೆತ ಆದಾಯವನ್ನು ವಿದ್ಯಾ ದಾನ ಸಮಿತಿಯನ್ನು ಕಟ್ಟಿ ಶಿಕ್ಷಣ ಪ್ರಸಾರಕ್ಕೆ ಬಳಸುತ್ತಿದ್ದರು. ಆಧುನಿಕ ಕನ್ನಡ ಸಾಹಿತ್ಯ, ಕರ್ನಾಟಕದ ಏಕೀಕರಣ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಪರಿಗಣಿಸಲ್ಪಡುವ ಹುಯಿಲಗೋಳ್ ನಾರಾಯಣ ರಾಯರ ಸಂಕ್ಷಿಪ್ತ ವಿವರಗಳನ್ನು ಕೆಳಗೆ ನೀಡಲಾಗಿದೆ.

ಅಕ್ಟೋಬರ್ 4, 1884 ರಂದು ನಾರಾಯಣ ರಾಯರು ಜನಿಸಿದರು. ಇವರ ಜನ್ಮ ಸ್ಥಳ ಗದಗ ಜಿಲ್ಲೆಯ ಹುಯಿಲಗೋಳ. ಬಾಂಬೇಯ ವಿಶ್ವ ವಿದ್ಯಾಲಯದಿಂದ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪದವಿ ಪಡೆದಿದ್ದ ನಾರಾಯಣ ರಾಯರು ಧಾರವಾಡದ ಶಾಲೆಯೊಂದರ ಮೂಲಕ ತಮ್ಮ ವೃತ್ತಿ ಜೀವನ ಆರಂಭಿಸಿದರು. ಆಧುನಿಕ ಕನ್ನಡ ಸಾಹಿತ್ಯಕ್ಕೆ ತಮ್ಮ ಸಾಮಾಜಿಕ ನಾಟಕಗಳ ಮೂಲಕ ಕಾಣಿಕೆ ನೀಡಿರುವ ಹುಯಿಲಗೋಳರು ರಾಷ್ಟ್ರೀಯ ಸ್ವತಂತ್ರ ಚಳುವಳಿ ಮತ್ತು ಕರ್ನಾಟಕದ ಏಕೀಕರಣಕ್ಕೆ ತಮ್ಮದೇಯಾದ ಕಾಣಿಕೆ ನೀಡಿದ್ದರು.

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆ: ಹುಯಿಲಗೋಳ ನಾರಾಯಣರು ರಚಿಸಿದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆ ಕರ್ನಾಟಕ ರಾಜ್ಯದ ನಾಡಗೀತೆಯೆಂದು ಖ್ಯಾತಿ ಪಡೆದಿತ್ತು. ಈ ಗೀತೆಯನ್ನು ಬೆಳಗಾವಿಯಲ್ಲಿ ಜರುಗಿದ 1924 ರ ಕಾಂಗ್ರೆಸ್ ಅಧಿವೇಶನದಲ್ಲಿ ಹಾಡಲಾಗಿತ್ತು. ಮಹಾತ್ಮ ಗಾಂಧಿಯವರು ಈ ಅಧಿವೇಶನದ ಅಧ್ಯಕ್ಷರಾಗಿದ್ದು ಆಗಿನ್ನೂ ಬಾಲಕಿಯಾಗಿದ್ದ ದಿವಂಗತ ಗಂಗೂಬಾಯಿ ಹಾನಗಲ್ ಪ್ರಸ್ತಾಪಿತ ಗೀತೆಯನ್ನು ಅಂದು ಹಾಡಿದ್ದರು. ಇಂದೂ ಕೂಡ ಈ ಹಾಡು ಕನ್ನಡಿಗರ ಹೃದಯದಲ್ಲಿ ನೆಲೆನಿಂತಿದೆ.

**ಕರ್ನಾಟಕದ ಏಕೀಕರಣದ ಹೋರಾಟದಲ್ಲಿ ಭಾಗಿ:** ನಾರಾಯಣ ರಾಯರು ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣಕ್ಕಾಗಿ ಜರುಗಿದ ಹೋರಾಟದ ಮುಂಚೂಣಿ ನಾಯಕರಾಗಿದ್ದರು. ಏಕೀಕರಣದಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದ್ದ ಧಾರವಾಡದ ವಿದ್ಯಾವರ್ಧಕ ಸಂಘದ ಚಟುವಟಿಕೆಗಳಲ್ಲಿ ನಾರಾಯಣ ರಾಯರು ಸಕ್ರಿಯವಾಗಿ ಭಾಗವಹಿಸಿದ್ದರು. ಜೊತೆಗೆ ಪ್ರದೇಶ ಮತ್ತು ಭಾಷಾ ಪ್ರೇಮವನ್ನು ಉತ್ತೇಜಿಸಬಲ್ಲ ನಾಟಕ ಮತ್ತು ಕವಿತೆಗಳ ಮೂಲಕ ಏಕೀಕರಣದ ಬಲವರ್ಧನೆಗೆ ಕಾರಣರಾಗಿದ್ದರು.

**ಸಾಹಿತ್ಯ ರಚನೆ:** ನಾರಾಯಣರಾಯರು ಮೂಲತಃ ನಾಟಕಕಾರರು. ಕನ್ನಡ ರಂಗಭೂಮಿಗಾಗಿ ಕಾಲ್ಪನಿಕ, ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಮುಂತಾದ ವಿವಿಧ ಬಗೆಯ ನಾಟಕಗಳನ್ನು ರಚಿಸಿ ಪ್ರದರ್ಶಿಸಿದ್ದರು. ಇವರ ಅನೇಕ ಕವನಗಳು ಅಂದಿನ ಪತ್ರಿಕೆಗಳಾದ 'ಶ್ರೀ ಕರ್ನಾಟಕ ವೃತ್ತ', 'ಪ್ರಭಾತ', 'ಧನಂಜಯ' ಇತ್ಯಾದಿಗಳಲ್ಲಿ ಪ್ರಕಟಗೊಂಡಿವೆ. ನಾರಾಯಣರಾಯರು ತಮ್ಮ ನಾಟಕಗಳಿಗಾಗಿ ಗೀತೆಗಳನ್ನು ರಚಿಸಿದ್ದರು. 'ಮೂಡಲು ಹರಿಯಿತು' ಎಂಬ ಕಾದಂಬರಿಯನ್ನೂ ಬರೆದಿದ್ದಾರೆ. ನಾರಾಯಣರಾಯರು 'ಕನಕ ವಿಲಾಸ', 'ಪ್ರೇಮಾರ್ಜುನ', 'ಮೋಹಹರಿ', 'ಅಜ್ಞಾತವಾಸ', 'ಪ್ರೇಮ ವಿಜಯ', 'ಸಂಗೀತ', 'ಬಿಮಾರರಾಮ ಚರಿತ', 'ವಿದ್ಯಾರಣ್ಯ', 'ಭಾರತ ಸಂದೇಶ', 'ಉತ್ತರ ಗೋಗ್ರಹಣ', 'ಧರ್ಮ ರಹಸ್ಯ', 'ಶಿಕ್ಷಣ ಸಂಭ್ರಮ', 'ಪತಿತೋದ್ಧಾರ' ನಾಟಕಗಳನ್ನು ರಚಿಸಿದ್ದರು.

**ಪ್ರಶಸ್ತಿ ಹಾಗೂ ಗೌರವಗಳು:** ಕವಿ, ಸಾಹಿತಿ ಮತ್ತು ನಾಟಕ ರಚನಾಕಾರರಾಗಿದ್ದ ಹುಯಿಲಗೋಳ ನಾರಾಯಣ ರಾಯರು ಕೆಳಗಿನ ಪ್ರಶಸ್ತಿ ಮತ್ತು ಗೌರವಗಳನ್ನು ಪಡೆದಿದ್ದರು.

- 1954 ರಲ್ಲಿ ಮುಂಬೈ ಸರ್ಕಾರವು ಪತಿತೋದ್ಧಾರ ನಾಟಕಕ್ಕೆ ಬಹುಮಾನ ಘೋಷಿಸಿತ್ತು.
- 1952 ರಲ್ಲಿ ಕಲೋಪಾಸಕ ಮಂಡಳಿಯಿಂದ ಸನ್ಮಾನ.
- 1935 ರಲ್ಲಿ ಗದಗ - ಬೆಟಗೇರಿ ನಾಗರಿಕರಿಂದ ಸನ್ಮಾನ.
- 1955 ರಲ್ಲಿ ಗದಗ ವಕೀಲರ ಸಂಘದಿಂದ ಗೌರವ.
- 1956 ರಲ್ಲಿ ಕರ್ನಾಟಕ ಸರ್ಕಾರದಿಂದ ಪ್ರಥಮ ರಾಜ್ಯೋತ್ಸವ ಪುರಸ್ಕಾರ.
- 1963 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನೀಡಿದ ಗೌರವ.

**ನಿಧನ:** ಹುಯಿಲಗೋಳ ನಾರಾಯಣರಾಯರು ತಮ್ಮ ಆಧುನಿಕ ಕನ್ನಡ ಸಾಹಿತ್ಯಕ್ಕೆ [illegible] ಮತ್ತು ಧಾರವಾಡದಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿದ್ದರು. ಅಂತಿಮವಾಗಿ ಜುಲೈ 4, 1971 ರಂದು ಹುಬ್ಬಳ್ಳಿಯಲ್ಲಿ ನಾರಾಯಣ ರಾಯರು ನಿಧನರಾದರು.



## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನದ ವಿಶೇಷವೇನು?
2. ಬೆಳಗಾವಿಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ವಿಶೇಷತೆಯನ್ನು ತಿಳಿಸಿರಿ.
3. ಬೆಳಗಾವಿ ಅಧಿವೇಶನದ ಸಿದ್ಧತೆಯನ್ನು ಬರೆಯಿರಿ.
4. ಬೆಳಗಾವಿ ಅಧಿವೇಶನವು ಎಂದು ಮತ್ತು ಎಲ್ಲಿ ಜರುಗಿತು?
5. ಬೆಳಗಾವಿ ಅಧಿವೇಶನದ ಎರಡು ವಿಶೇಷತೆಗಳನ್ನು ಬರೆಯಿರಿ.
6. ಸ್ವದೇಶಿ ಚಳುವಳಿಗೆ ಹರಡೇಕರ್ ಮಂಜಪ್ಪನವರ ಕೊಡುಗೆಯನ್ನು ಬರೆಯಿರಿ.
7. ಹರಡೇಕರ್ ಮಂಜಪ್ಪನವರ ರಾಷ್ಟ್ರೀಯವಾದ ಕುರಿತ ವಿಚಾರಗಳನ್ನು ಬರೆಯಿರಿ.
8. ಹರಡೇಕರ್ ಮಂಜಪ್ಪನವರು ಎಲ್ಲಿ ಮತ್ತು ಎಂದು ಜನಿಸಿದರು?
9. ಹುಯಿಲಗೋಳ್ ನಾರಾಯಣ ರಾಯರು ರಚಿಸಿದ್ದ ನಾಟಕಗಳನ್ನು ಹೆಸರಿಸಿರಿ.
10. ಕರ್ನಾಟಕದ ಏಕೀಕರಣದಲ್ಲಿ ನಾರಾಯಣ ರಾಯರ ಕೊಡುಗೆಯನ್ನು ತಿಳಿಸಿರಿ.

**[B.] ಐದು ಅಂಕದ ಪ್ರಶ್ನೆಗಳು:**

1. ಬೆಳಗಾವಿಯ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದ ವಿಶೇಷತೆಗಳನ್ನು ಪಟ್ಟಿ ಮಾಡಿರಿ.
2. ಹರಡೇಕರ್ ಮಂಜಪ್ಪನವರ ಸ್ವದೇಶಿ ಮತ್ತು ರಾಷ್ಟ್ರೀಯವಾದದ ವಿಚಾರಗಳನ್ನು ವಿವರಿಸಿರಿ.
3. ಕರ್ನಾಟಕಕ್ಕೆ ಹುಯಿಲಗೋಳ ನಾರಾಯಣ ರಾಯರ ಕೊಡುಗೆಗಳನ್ನು ಚರ್ಚಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ಬೆಳಗಾವಿಯಲ್ಲಿ ಜರುಗಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನವನ್ನು ವಿವರಿಸಿರಿ.

ಅಧ್ಯಾಯ 7:

# ಕರ್ನಾಟಕದಲ್ಲಿ ಜಾತಿ ಮತ್ತು ರಾಜಕೀಯ

# [Caste and Politics in Karnataka]

## ಪ್ರಸ್ತಾವನೆ [Introduction]:

ಭಾರತದ ಸಾಮಾಜಿಕ ವ್ಯವಸ್ಥೆಯು ಜಾತಿ ವ್ಯವಸ್ಥೆಯನ್ನಾಧರಿಸಿ ಸಂರಚನೆಗೊಂಡಿದೆ. ಫಲವಾಗಿ ಜಾತಿ ವ್ಯವಸ್ಥೆಯು ಜನರ ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಪ್ಪು ಆಳವಾದ ಪ್ರಭಾವವನ್ನು ಹೊಂದಿದೆ. ಅಂತೆಯೇ ಜನರ ರಾಜಕೀಯ ಚಟುವಟಿಕೆಗಳ ಮೇಲೆಯೂ ಜಾತಿ ವ್ಯವಸ್ಥೆ ವ್ಯಾಪಕ ಪ್ರಭಾವ ಹೊಂದಿದೆ. ಆದ್ದರಿಂದಲೇ ಗೇಲ್ ಆಲ್ಮಂಡ 'ಭಾರತದಲ್ಲಿ ಜಾತಿಯು ದೇಶದ ರಾಜಕೀಯದಲ್ಲಿನ ಪ್ರಧಾನ ಅಂಶ' ಎಂದಿರುವರು. ಈ ಹಿನ್ನೆಲೆಯಲ್ಲಿ ಜನರ ಜಾತಿ ಮತ್ತು ದೇಶದ ರಾಜಕೀಯ ವ್ಯವಸ್ಥೆಯ ನಡುವೆ ಗಾಢವಾದ ಸಂಬಂಧವನ್ನು ಗುರುತಿಸಬಹುದಾಗಿದೆ. ಸಮಕಾಲೀನ ಭಾರತದ ರಾಜಕೀಯದಲ್ಲಿ ಜಾತಿ ವಿವಿಧ ರೂಪದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದು ಕರ್ನಾಟಕದ ರಾಜಕೀಯವೂ ಜಾತಿಯಿಂದ ಮುಕ್ತವಾಗಿಲ್ಲ. ಈ ಕಾರಣಕ್ಕೆ ಪ್ರಸ್ತುತ ಅಧ್ಯಾಯದಲ್ಲಿ ಕರ್ನಾಟಕದಲ್ಲಿನ ಜಾತಿ ಮತ್ತು ರಾಜಕೀಯವನ್ನು ಆಧರಿಸಿರುವ ಪ್ರಬಲ ಜಾತಿಗಳು, ಹಿಂದುಳಿದ ವರ್ಗಗಳ ಚಳುವಳಿ, ಅಹಿಂದ ಚಳುವಳಿ, ಜಾತಿಗಳ ಅಸ್ಮಿತೆ ಮತ್ತು ಧರ್ಮ ಹಾಗೂ ರಾಜಕಾರಣ ಇವುಗಳ ಕುರಿತಂತೆ ಬೆಳಕು ಚೆಲ್ಲಲಾಗಿದೆ.

### [I.] ಕರ್ನಾಟಕದಲ್ಲಿ ಪ್ರಬಲ ಜಾತಿ [Dominant Caste in Karnataka]:

**[A.] ಪ್ರಬಲ ಜಾತಿಯ ಪರಿಕಲ್ಪನೆ [Concept of Dominant Caste]:** ಪ್ರಬಲ ಜಾತಿ ಎಂಬ ಪರಿಕಲ್ಪನೆಯನ್ನು ಮೊಟ್ಟ ಮೊದಲ ಬಾರಿಗೆ ಪ್ರಖ್ಯಾತ ಸಮಾಜಶಾಸ್ತ್ರಜ್ಞರಾದ ಎಂ. ಎನ್. ಶ್ರೀನಿವಾಸರು ಪ್ರತಿಪಾದಿಸಿದರು. ಇವರು ಮೈಸೂರು ಹಳ್ಳಿಗಳ ಸಾಮಾಜಿಕ ವ್ಯವಸ್ಥೆ ಎಂಬ ತಮ್ಮ ಪ್ರಬಂಧದಲ್ಲಿ ಪ್ರಬಲ ಜಾತಿ ಎಂಬ ಪರಿಕಲ್ಪನೆಯನ್ನು ಅಭಿವ್ಯಕ್ತಿಪಡಿಸಿದರು. ಆರ್ಥಿಕ ಹಾಗೂ ರಾಜಕೀಯವಾಗಿ ಸಾಕಷ್ಟು ಶಕ್ತಿಯನ್ನು ಹೊಂದಿರುವ ಮತ್ತು ಸಾಮಾಜಿಕವಾಗಿ ಶ್ರೇಣೀಕೃತ ವ್ಯವಸ್ಥೆಯಲ್ಲಿ ಉನ್ನತ ಸ್ಥಾನವನ್ನು ಹೊಂದಿರುವ ಜಾತಿಯನ್ನು ಪ್ರಬಲ ಜಾತಿ ಎಂದು ಕರೆಯಲಾಗುತ್ತದೆ. ಇದು ನಿರ್ದಿಷ್ಟ ಪ್ರದೇಶದಲ್ಲಿ ಗಮನಾರ್ಹ ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರಭಾವವನ್ನು ಹೊಂದಿರುವ ನಿರ್ದಿಷ್ಟ ಜಾತಿ ಗುಂಪನ್ನು ಸೂಚಿಸುತ್ತದೆ. ಜನಸಂಖ್ಯೆಯ ಗಾತ್ರ, ಆರ್ಥಿಕ ಶಕ್ತಿ



ಹಾಗೂ ರಾಜಕೀಯ ಪ್ರಾತಿನಿಧ್ಯದಂತಹ ವಿವಿಧ ಅಂಶಗಳು ನಿರ್ದಿಷ್ಟ ಪ್ರದೇಶದಲ್ಲಿ ಜಾತಿಯ ಪ್ರಾಬಲ್ಯಕ್ಕೆ ಕಾರಣವಾಗಬಹುದು. ಕರ್ನಾಟಕದಲ್ಲಿ ಐತಿಹಾಸಿಕವಾಗಿ ಪ್ರಾಬಲ್ಯ ಹೊಂದಿರುವಂತಹ ಒಕ್ಕಲಿಗ ಮತ್ತು ಲಿಂಗಾಯತ ಜಾತಿಗಳು ಪ್ರಬಲ ಜಾತಿಗಳಾಗಿ ಕಂಡು ಬರುತ್ತವೆ.

**[B.] ಲಿಂಗಾಯತರು [Lingayats]:** ಲಿಂಗಾಯತರು 12 ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಹುಟ್ಟಿಕೊಂಡ ಧಾರ್ಮಿಕ ಹಾಗೂ ಸಾಮಾಜಿಕ ಗುಂಪಾಗಿದೆ. ಇವರು ತತ್ವಜ್ಞಾನಿ ಮತ್ತು ಶಕ್ತಿ ವಿಶಿಷ್ಟಾದ್ವೈತದ ಪ್ರತಿಪಾದಕರಾದ ಬಸವಣ್ಣನವರ ಬೋಧನೆಗಳನ್ನು ಅನುಸರಿಸುವ ಶೈವ ಪಂಥದವರಾಗಿದ್ದಾರೆ. ಲಿಂಗಾಯತರು ಕರ್ನಾಟಕದಲ್ಲಿ ಶೇಕಡಾ 16 ರಷ್ಟು ಜನಸಂಖ್ಯೆಯನ್ನು ಹೊಂದಿದ್ದು ಅತಿ ದೊಡ್ಡ ಸಮುದಾಯಗಳಲ್ಲಿ ಒಂದಾಗಿದೆ. ಇವರು ಉತ್ತರ ಮತ್ತು ಮಧ್ಯ ಕರ್ನಾಟಕ ಭಾಗದಲ್ಲಿ ಹೆಚ್ಚು ಕೇಂದ್ರಿಕೃತಗೊಂಡಿದ್ದಾರೆ. ಸಾಂಪ್ರದಾಯಿಕವಾಗಿ ಕರ್ನಾಟಕದಲ್ಲಿ ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಪ್ರಬಲ ಜಾತಿಯಾಗಿದ್ದು ಭೂಮಿ ಹಾಗೂ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಹೆಚ್ಚಿನ ಪಾಲನ್ನು ಲಿಂಗಾಯತರು ಪಡೆದಿದ್ದಾರೆ. ಜೊತೆಗೆ ಸರ್ಕಾರದಲ್ಲಿ ಉತ್ತಮ ಪ್ರಾತಿನಿಧ್ಯವನ್ನು ಲಿಂಗಾಯತರು ಹೊಂದಿದ್ದಾರೆ. ಅಲ್ಲದೇ ಕರ್ನಾಟಕದಲ್ಲಿನ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಬ್ರಾಹ್ಮಣರ ನಂತರದ ಸ್ಥಾನವನ್ನು ಅಲಂಕರಿಸಿದ್ದಾರೆ.

**[C.] ಒಕ್ಕಲಿಗರು [Okkaligas]:** ಒಕ್ಕಲಿಗರು ಕರ್ನಾಟಕದ ದಕ್ಷಿಣ ಮತ್ತು ಮಧ್ಯ ಭಾಗಗಳಲ್ಲಿ ಕೇಂದ್ರಿಕೃತವಾಗಿರುವ ರೈತ ಸಮುದಾಯವಾಗಿದೆ. ಇವರು ರಾಜ್ಯದ ಜನಸಂಖ್ಯೆಯ ಶೇಕಡಾ 11 ರಷ್ಟಿದ್ದಾರೆ. ಒಕ್ಕಲಿಗರು ಸಾಂಪ್ರದಾಯಿಕವಾಗಿ ಭೂಮಾಲಿಕ ಜಾತಿಯವರಾಗಿದ್ದಾರೆ. ಜೊತೆಗೆ ವ್ಯಾಪಾರ ಹಾಗೂ ವಾಣಿಜ್ಯದಲ್ಲಿ ತೊಡಗಿಕೊಂಡಿದ್ದಾರೆ. ಲಿಂಗಾಯತರಂತೆ ಒಕ್ಕಲಿಗರೂ ಸಹ ಕರ್ನಾಟಕದಲ್ಲಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲ ಜಾತಿಯವರೆನಿಸಿದ್ದಾರೆ. ರಾಜ್ಯ ರಾಜಕಾರಣದಲ್ಲಿ ತಮ್ಮದೇಯಾದ ಪ್ರಾಬಲ್ಯವನ್ನು ಮತ್ತು ಸರ್ಕಾರದಲ್ಲಿ ಉತ್ತಮ ಪ್ರಾತಿನಿಧ್ಯವನ್ನು ಹೊಂದಿದ್ದಾರೆ. ಅಲ್ಲದೇ ರಾಜ್ಯದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಜೀವನದಲ್ಲಿ ಒಕ್ಕಲಿಗರು ಪ್ರಮುಖ ಪಾತ್ರವನ್ನು ವಹಿಸಿದ್ದಾರೆ.

**[D.] ಕರ್ನಾಟಕದಲ್ಲಿ ಪ್ರಬಲ ಜಾತಿಯ ಗುಣ ಲಕ್ಷಣಗಳು [Characteristics of Dominant Castes in Karnataka]:** ಯಾವುದೇ ಜಾತಿ ಪ್ರಾಬಲ್ಯ ಹೊಂದಲು ಅದು ಸ್ಥಳೀಯವಾಗಿ ಲಭ್ಯವಾಗಿರುವ ಕೃಷಿ ಯೋಗ್ಯ ಭೂಮಿಯಲ್ಲಿ ಗಣನೀಯ ಪ್ರಮಾಣದ ಮಾಲಿಕತ್ವ ಹೊಂದಿರಬೇಕು. ಅಧಿಕ ಜನಸಂಖ್ಯಾ ಗಾತ್ರವನ್ನು ಹೊಂದಿರಬೇಕು. ಜೊತೆಗೆ ಸ್ಥಳೀಯ ಜಾತಿ ಶ್ರೇಣಿಗಳಲ್ಲಿ ಉನ್ನತ ಸ್ಥಾನದಲ್ಲಿರಬೇಕು. ಈ ಅಂಶಗಳನ್ನು ಹೊಂದಿದ್ದರೆ ಅದನ್ನು ಪ್ರಬಲ ಜಾತಿ ಎಂದು ನಿರ್ಣಯಿಸಬಹುದೆಂದು ಎಂ. ಎನ್. ಶ್ರೀನಿವಾಸರು ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ ಪ್ರಬಲ ಜಾತಿಗಳ ಗುಣ ಲಕ್ಷಣಗಳನ್ನು ಗುರುತಿಸಿದ್ದಾರೆ. ಅವುಗಳ ಸಂಕ್ಷಿಪ್ತ ವಿವರಗಳು ಕೆಳಗಿನಂತಿವೆ.

1. ಜಾತಿ ಶ್ರೇಣಿಯಲ್ಲಿ ಉನ್ನತ ಸ್ಥಾನ: ಸಾಮಾನ್ಯವಾಗಿ ಜಾತಿಯ ಶ್ರೇಣಿಯ ಸಾಂಪ್ರದಾಯಿಕವಾಗಿ ಉನ್ನತವಾಗಿರುವ ಜಾತಿಯು ಪ್ರಾಬಲ್ಯದ ಸ್ಥಾನವ ಅನುಭವಿಸುತ್ತದೆ. ಕರ್ನಾಟಕದಲ್ಲಿ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಗ ಸ್ಥಳೀಯ ಸಾಮಾಜಿಕ ಶ್ರೇಣಿಯಲ್ಲಿ ಉನ್ನತ ಸ್ಥಾನವನ್ನು ಆಕ್ರಮಿಸಿವೆ. ಸಾಂಪ್ರದಾಯಿಕವಾ ಪ್ರಬಲ ಜಾತಿಗಳು ತಮ್ಮ ಸಾಮಾಜಿಕ ರೂಢಿಗಳು ಮತ್ತು ಅಭ್ಯಾಸಗಳನ್ನು ಅಸ್ತಿತ್ವದಲ್ಲಿಟ್ಟು ಇತರೆ ಹಿಂದುಳಿದ ಜಾತಿಗಳು ಅನುಸರಿಸುವಂತೆ ಪ್ರಭಾವ ಬೀರುತ್ತವೆ. ಆದ್ದರಿಂದಲೆ ಶ್ರೀನಿವಾಸರು ಸ್ಥಳೀಯ ಜಾತಿ ಶ್ರೇಣಿಯಲ್ಲಿ ಉನ್ನತ ಸ್ಥಾನವನ್ನು ಹೊಂದಿರುವ ದೊಡ್ಡ ಮತ್ತು ಪ್ರಬಲವಾದ ಜಾತಿಯ ಗುಂಪು ಸುಲಭವಾಗಿ ಪ್ರಾಬಲ್ಯ ಸಾಧಿಸಬಹುದು ಎಂದಿದ್ದಾರೆ.

2. ರಾಜಕೀಯ ಪ್ರಾಬಲ್ಯ: ರಾಜಕೀಯ ಪ್ರಾಬಲ್ಯವೂ ಸಹ ಪ್ರಬಲ ಜಾತಿಗಳ ಒಂದು ಪ್ರಮುಖ ವೈಶಿಷ್ಟ್ಯವಾಗಿದೆ. ಪ್ರಬಲ ಜಾತಿಗಳು ರಾಜಕಾರಣದಲ್ಲಿ ಹೆಚ್ಚಿನ ಹಿಡಿತವನ್ನು ಸಾಧಿಸಿರುತ್ತವೆ. ಕರ್ನಾಟಕದಲ್ಲಿ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯಗಳು ರಾಜ್ಯ ಮತ್ತು ಸ್ಥಳೀಯ ರಾಜಕಾರಣದಲ್ಲಿ ತುಂಬಾ ಪ್ರಭಾವಶಾಲಿಗಳಾಗಿವೆ. ಕರ್ನಾಟಕ ಕಂಡ 23 ಮುಖ್ಯಮಂತ್ರಿಗಳಲ್ಲಿ 15 ಜನರು ಈ ಎರಡೂ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇದರಲ್ಲಿ ಲಿಂಗಾಯತ ಸಮುದಾಯದಿಂದ ಒಂಬತ್ತು ಜನ ಮುಖ್ಯಮಂತ್ರಿಗಳಾಗಿದ್ದರೆ ಒಕ್ಕಲಿಗ ಸಮುದಾಯದಿಂದ ಆರು ವ್ಯಕ್ತಿಗಳು ಮುಖ್ಯಮಂತ್ರಿಗಳಾಗಿದ್ದಾರೆ. ಜೊತೆಗೆ ಪ್ರತಿ ವಿಧಾನಸಭೆಯಲ್ಲಿ ಶೇಕಡಾ 50 ಕ್ಕಿಂತ ಹೆಚ್ಚಿನ ಸದಸ್ಯರು ಇವೆರಡು ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಅಲ್ಲದೇ ಸ್ಥಳೀಯ ಮಟ್ಟದ ರಾಜಕೀಯ ವ್ಯವಸ್ಥೆಯಲ್ಲಿ ಈ ಸಮುದಾಯಗಳ ಪ್ರಭಾವ ಅಧಿಕವಾಗಿರುತ್ತದೆ.

3. ಆರ್ಥಿಕ ಪ್ರಾಬಲ್ಯ: ಕರ್ನಾಟಕದಲ್ಲಿ ಪ್ರಬಲ ಜಾತಿಗಳಾದ ಒಕ್ಕಲಿಗರು ಮತ್ತು ಲಿಂಗಾಯತರು ಸಮುದಾಯಗಳು ಸಾಂಪ್ರದಾಯಿಕವಾಗಿ ಹೆಚ್ಚಿನ ಭೂ ಒಡೆತನ ಮತ್ತು ವ್ಯಾಪಾರದಲ್ಲಿ ಹೆಚ್ಚಿನ ಪಾಲನ್ನು ಹೊಂದಿದ್ದಾರೆ. ಈ ಬೆಳವಣಿಗೆಯು ಅವರಿಗೆ ಇತರೆ ಜಾತಿಗಳವರಿಗಿಂತ ಗಮನಾರ್ಹ ಆರ್ಥಿಕ ಪ್ರಯೋಜನವನ್ನು ನೀಡಿದೆ. ಸಾಮಾನ್ಯವಾಗಿ ಒಕ್ಕಲಿಗರ ಸಮುದಾಯವು ಕೃಷಿ ಭೂಮಿಯ ಮಾಲಿಕತ್ವವನ್ನು ಹೊಂದಿದ್ದಾರೆ. ಅದೇರೀತಿಯಲ್ಲಿ ಲಿಂಗಾಯತರು ಕೃಷಿಯೊಡನೆ ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ತೊಡಗಿಸಿಕೊಂಡಿದ್ದಾರೆ. ನಿರ್ದಿಷ್ಟ ಜಾತಿಯೊಂದರ ಅಧಿಕಾರವು ಭೂಮಿಯ ಒಡೆತನದಲ್ಲಿದ್ದು ಪ್ರಬಲ ಜಾತಿಗಳು ತಮ್ಮ ಆರ್ಥಿಕ ಪ್ರಗತಿಯನ್ನು ಸಾಧಿಸುತ್ತವೆ.

4. ಜನಸಂಖ್ಯಾ ಪ್ರಾಬಲ್ಯ: ಪ್ರಬಲ ಜಾತಿಗಳು ಸಾಮಾನ್ಯವಾಗಿ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯನ್ನು ಹೊಂದಿರುತ್ತವೆ. ಕರ್ನಾಟಕದಲ್ಲಿ ಪ್ರಬಲ ಜಾತಿಗಳಾದ ಒಕ್ಕಲಿಗ ಮತ್ತು ಲಿಂಗಾಯತರು ಶೇಕಡಾ 16 ರಷ್ಟಿದ್ದರೆ ಒಕ್ಕಲಿಗರು 11 ರಷ್ಟಿದ್ದಾರೆ. ಒಟ್ಟಾರೆಯಾಗಿ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 27 ರಷ್ಟು ಜನಬಲವನ್ನು ಇವೆರಡೂ ಸಮುದಾಯಗಳು ಪಡೆದಿರುತ್ತವೆ. ಅಧಿಕ ಜನಸಂಖ್ಯಾ ಗಾತ್ರವು ಜೀವನದ ವಿವಿಧ ಕ್ಷೇತ್ರಗಳಲ್ಲಿ ಅವರಿಗೆ ಗಣನೀಯ ಪ್ರಭಾವವನ್ನು ಒದಗಿಸುತ್ತದೆ.



5. ಸಾಂಸ್ಕೃತಿಕ ಪ್ರಾಬಲ್ಯ: ಕರ್ನಾಟಕದಲ್ಲಿ ಪ್ರಬಲ ಜಾತಿಗಳು ಸಾಂಸ್ಕೃತಿಕ ಮತ್ತು ಧಾರ್ಮಿಕ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವರು ರಾಜ್ಯದಲ್ಲಿ ಕಲೆ, ಸಂಗೀತ, ಸಾಹಿತ್ಯ ಮತ್ತು ಚಲನಚಿತ್ರ ರಂಗಗಳಲ್ಲಿ ಹೆಚ್ಚಿನ ಪ್ರಭಾವವನ್ನು ಹೊಂದಿದ್ದಾರೆ. ಅಲ್ಲದೇ ಪ್ರಬಲ ಜಾತಿಗಳು ರಾಜ್ಯದ ಅನೇಕ ಧಾರ್ಮಿಕ ಸಂಸ್ಥೆಗಳು ಮತ್ತು ದೇವಾಲಯಗಳನ್ನು ನಿಯಂತ್ರಿಸುತ್ತಿವೆ.

6. ಶಿಕ್ಷಣ ಮತ್ತು ಸಾರ್ವಜನಿಕ ಉದ್ಯೋಗದ ಪ್ರಾಬಲ್ಯ: ಶಿಕ್ಷಣ ಮತ್ತು ಸಾರ್ವಜನಿಕ ಉದ್ಯೋಗದಲ್ಲಿ ಪ್ರಾಬಲ್ಯವನ್ನು ಸಾಧಿಸುವ ಪ್ರಬಲ ಜಾತಿಯ ಒಂದು ಪ್ರಮುಖ ಲಕ್ಷಣವಾಗಿದೆ. ಕರ್ನಾಟಕದಲ್ಲಿ ಪ್ರಬಲ ಜಾತಿಗಳು ಐತಿಹಾಸಿಕವಾಗಿಯೇ ಶಿಕ್ಷಣ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ ಹೆಚ್ಚಿನ ಪಾಲು ಹೊಂದುತ್ತಾ ಬಂದಿವೆ. ಇತ್ತೀಚಿನ ದಿನಗಳಲ್ಲಿ ಪ್ರಬಲ ಜಾತಿಗಳು ಶಿಕ್ಷಣದಲ್ಲಿ ಧಾಪುಗಾಲು ಹಾಕಿವೆ. ಈ ಸಮುದಾಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಅಲ್ಲದೇ ಸರ್ಕಾರದ ಉನ್ನತ ಹುದ್ದೆಗಳಾದ ರಾಜ್ಯ ಮಟ್ಟದ ಕಾರ್ಯದರ್ಶಿ ಹುದ್ದೆಗಳು, ಅಖಿಲ ಭಾರತೀಯ ಸೇವೆಯ ಹುದ್ದೆಗಳು ಮತ್ತು ರಾಜ್ಯ ನಾಗರಿಕ ಸೇವಾ ಹುದ್ದೆಗಳು ಈ ಸಮುದಾಯದಿಂದಲೇ ಭರ್ತಿಗೊಳ್ಳುತ್ತಿವೆ.

ಈ ಮೇಲೆ ವಿವರಿಸಲಾದ ಲಕ್ಷಣಗಳನ್ನು ಒಳಗೊಂಡಿರುವ ಪ್ರಬಲ ಜಾತಿಗಳ ಪರಿಕಲ್ಪನೆಯು ಸಮಾಜದಲ್ಲಿ ವ್ಯಾಪಕ ಪರಿಣಾಮಗಳಿಗೆ ಕಾರಣವಾಗಿದೆ. ಈ ಕೆಳಗೆ ಪ್ರಬಲ ಜಾತಿಯ ಪ್ರಧಾನವಾದ ಪರಿಣಾಮಗಳನ್ನು ಪಟ್ಟಿ ಮಾಡಲಾಗಿದೆ.

1. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಶಾಶ್ವತಗೊಳಿಸುತ್ತದೆ.
2. ಅಂಚಿನಲ್ಲಿರುವ ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳನ್ನು ನಿರಾಕರಿಸುತ್ತದೆ.
3. ಪ್ರಬಲ ಜಾತಿಗಳು ಸಾಮಾಜಿಕ ಶ್ರೇಣಿ ವ್ಯವಸ್ಥೆಯನ್ನು ಬಲಪಡಿಸಿ ಅಂಚಿನಲ್ಲಿರುವ ಸಮುದಾಯಗಳ ತಾರತಮ್ಯ ಮತ್ತು ಹೊರಗಿಡುವಿಕೆಗೆ ಕಾರಣವಾಗುತ್ತವೆ.
4. ಸರ್ಕಾರಗಳು ಜಾತಿಯಾಧಾರಿತ ಅಸಮಾನತೆಯನ್ನು ಹೋಗಲಾಡಿಸಲು ಮೀಸಲಾತಿಗಳನ್ನು ಜಾರಿಗೆ ತಂದಿವೆ. ಆದರೆ, ಪ್ರಬಲ ಜಾತಿಗಳು ಇದನ್ನು ವಿರೋಧಿಸುವುದರಿಂದ ಸಾಮಾಜಿಕ ಮತ್ತು ರಾಜಕೀಯ ಉದ್ವಿಗ್ನತೆಗೆ ಕಾರಣವಾಗಬಹುದು.
5. ಪ್ರಬಲ ಜಾತಿಗಳ ಪ್ರಭಾವವು ಕೆಲವೊಮ್ಮೆ ಅಂತರ್‌ಜಾತಿ ಸಂಘರ್ಷಗಳಿಗೆ ಕಾರಣವಾಗಬಹುದು.
6. ಪ್ರಬಲ ಜಾತಿಗಳು ಹೊಂದಿರುವ ಸಂಪನ್ಮೂಲಗಳು ಅಂದರೆ ಭೂಮಿ ಮತ್ತು ರಾಜಕೀಯ ಅದಿಕಾರಗಳ ಮೇಲಿನ ವಿವಾದಗಳು ಸಾಮಾಜಿಕ ಅಶಾಂತಿ ಮತ್ತು ಹಿಂಸಾಚಾರಕ್ಕೆ ಕಾರಣವಾಗಬಹುದು.

7. ಪ್ರಬಲ ಜಾತಿಗಳಿಂದಾಗಿ ಸಂಕೀರ್ಣ ಸಾಮಾಜಿಕ ಚಲನಶೀಲತೆಗೆ ಕಾರಣವಾಗುತ್ತದೆ.
8. ಭೂಮಿ ಮತ್ತು ಇತರ ಸಂಪನ್ಮೂಲಗಳ ಮೇಲೆ ಪ್ರಬಲ ಜಾತಿಗಳ ನಿಯಂತ್ರಣ ಅಧಿಕವಾಗಿರುತ್ತದೆ.

ಗಮನಾರ್ಹ ಅಂಶವೇನೆಂದರೆ, ಒಂದು ಜಾತಿಯ ಪ್ರಾಬಲ್ಯವು ಕರ್ನಾಟಕದಲ್ಲಿನ ಜಿಲ್ಲೆಯಿಂದ ಜಿಲ್ಲೆಗೆ ಬದಲಾಗಬಹುದು. ರಾಜಕೀಯ ಬೆಳವಣಿಗೆಗಳು, ಆರ್ಥಿಕ ಬದಲಾವಣೆಗಳು ಮತ್ತು ಸಾಮಾಜಿಕ ಪರಿವರ್ತನೆಗಳಿಂದಾಗಿ ಜಾತಿಯ ಪ್ರಭಾವವು ಕಾಲಾಂತರದಲ್ಲಿ ಬದಲಾಗಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಬ್ರಾಹ್ಮಣ, ಕುರುಬ, ದಲಿತ ಸಮುದಾಯಗಳು ಪ್ರಬಲ ಜಾತಿಗಳಿಗೆ ಪೈಪೋಟಿಯನ್ನು ಹೊಂದುತ್ತಿವೆ. ಆದರೂ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯಗಳು ರಾಜ್ಯ ಮಟ್ಟದಲ್ಲಿ ಇಂದಿಗೂ ತಮ್ಮ ಗಮನಾರ್ಹ ಪ್ರಾಬಲ್ಯವನ್ನು ಉಳಿಸಿಕೊಂಡಿವೆ.

### [II.] ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿ [Backward Class Movement in Karnataka]:

20ನೇ ಶತಮಾನದಲ್ಲಿ ಮೈಸೂರು ಸಂಸ್ಥಾನದಲ್ಲಿ ಹಲವು ಸಾಮಾಜಿಕ ಚಳುವಳಿಗಳು ಜರುಗಿದವು. ಅವುಗಳಲ್ಲಿ ಹಿಂದುಳಿದ ವರ್ಗಗಳ ಚಳುವಳಿಯೂ ಒಂದು. ಈ ಚಳುವಳಿಯ ಉದ್ದೇಶವೆಂದರೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದಿದ್ದ ಜನರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದು. ಸರ್ಕಾರಿ ಸೇವೆಯಲ್ಲಿ ಮೀಸಲಾತಿ ದೊರಕಿಸಿ ಕೊಡುವುದು ಮತ್ತು ಅವರ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಾಗಿತ್ತು. ಆರಂಭದಲ್ಲಿ ಮೈಸೂರುಸಂಸ್ಥಾನದಲ್ಲಿಉಗಮಗೊಂಡ ಈ ಚಳುವಳಿಯು ಮುಂದೆ ರಾಜ್ಯವ್ಯಾಪ್ತಿಯಂತ ಹರಡಿ ಹಿಂದುಳಿದ ವರ್ಗಗಳು ಮತ್ತು ಶೋಷಿತರ ಸಂಘಟನೆಗೆ ನಾಂದಿ ಹಾಡಿತು. ಅಧ್ಯಯನದ ಅನುಕೂಲಕ್ಕಾಗಿ ಕರ್ನಾಟಕದಲ್ಲಿನ ಹಿಂದುಳಿದ ವರ್ಗಗಳ ಚಳುವಳಿಯನ್ನು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎಂದು ವಿಂಗಡಿಸಿಕೊಂಡು ಕೆಳಗೆ ವಿವರಿಸಲಾಗಿದೆ.

### [A.] ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದ ಹಿಂದುಳಿದ ವರ್ಗಗಳ ಚಳುವಳಿ [Backward Class Movement in Karnataka before Independence]:

ಕರ್ನಾಟಕದಲ್ಲಿ ಹಿಂದುಳಿದ ವರ್ಗದವರ ಚಳುವಳಿ ಬ್ರಾಹ್ಮಣೇತರ ಚಳುವಳಿಯ ಭಾಗವಾಗಿ ಮುನ್ನೆಲೆಗೆ ಬಂತು. ಮೈಸೂರಿನಲ್ಲಿ ಕಮೀಷನರ್ ಆಡಳಿತವಿದ್ದಾಗ ಅಂದರೆ 1850 ರಿಂದ 1881 ರ ನಡುವೆ ಎಲ್ಲ ಉನ್ನತ ಸೇವೆಗಳಲ್ಲಿ ಬ್ರಾಹ್ಮಣರು ಏಕಸ್ವಾಮ್ಯತೆಯನ್ನು ಸಾಧಿಸಿದ್ದರು. 1881 ರ ಬಳಿಕ ಮೈಸೂರಿನಲ್ಲಿ ದಿವಾನ್ ಹುದ್ದೆ ಸೇರಿದಂತೆ ಪ್ರಮುಖ ಹುದ್ದೆಗಳು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗಳ ಮೂಲಕ ಮದ್ರಾಸ್ ಬ್ರಾಹ್ಮಣರ ಪಾಲಾಗತೊಡಗಿದವು. ಮೈಸೂರು ಬ್ರಾಹ್ಮಣರು ಅತೃಪ್ತರಾಗಿ ಮೈಸೂರು ಮೈಸೂರಿನವರಿಗೆ ಎಂಬ ಘೋಷಣೆಯೊಂದಿಗೆ ಚಳುವಳಿ ನಡೆಸಿದರು. ಮಹಾರಾಜರು ಈ ಚಳುವಳಿಯಿಂದ



ಪ್ರಭಾವಿತರಾಗಿ ಮದ್ರಾಸ್ ಬ್ರಾಹ್ಮಣರ ಬದಲಿಗೆ ಮೈಸೂರಿನ ಬ್ರಾಹ್ಮಣರಾದ ವಿಶ್ವೇಶ್ವರಯ್ಯನವರನ್ನು 1912 ರಲ್ಲಿ ನೇಮಿಸಿಕೊಳ್ಳುವ ಮೂಲಕ ಮದ್ರಾಸ್ ಮತ್ತು ಮೈಸೂರು ಬ್ರಾಹ್ಮಣರ ವಿವಾದವನ್ನು ಅಂತ್ಯಗೊಳಿಸಿದರು. ಇದರಿಂದ ದಿಗ್ಭ್ರಮೆಗೊಂಡ ಹಿಂದುಳಿದ ವರ್ಗವು ತಮ್ಮ ಸವಲತ್ತುಗಳಿಗಾಗಿ ಜಾಗೃತಗೊಂಡಿತು.

ಈ ಸಮಯದಲ್ಲಿ ಹಿಂದುಳಿದ ವರ್ಗಗಳಲ್ಲಿ ಕೊಂಚ ಮೇಲ್‌ಸ್ತರದಲ್ಲಿದ್ದ ಲಿಂಗಾಯತರು, ಒಕ್ಕಲಿಗರು ಹಾಗೂ ಮುಸ್ಲಿಂರು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಉನ್ನತಿ ಸಾಧಿಸಿ ಸರ್ಕಾರಿ ಸೇವೆಯಲ್ಲಿ ಮೀಸಲಾತಿ ಪಡೆಯಲು ಮುಂದಾದರು. ಈ ನಿಟ್ಟಿನಲ್ಲಿ ಮೈಸೂರು ಸಂಸ್ಥಾನದ ಪ್ರಭಾವಶಾಲಿ ಒಕ್ಕಲಿಗ ಮುಖಂಡರಾದ ಕೆ. ಎಚ್. ರಾಮಯ್ಯನವರು 1906 ರಲ್ಲಿ ಒಕ್ಕಲಿಗರ ಸಂಘವನ್ನು ಸ್ಥಾಪಿಸಿ ಅವರ ಹಕ್ಕು ಮತ್ತು ಏಳ್ಗೆಗಾಗಿ ಶ್ರಮಿಸಿದರು. 1904 ರಲ್ಲಿ ವೀರಶೈವ ಮಹಾಸಭೆ, 1917 ರಲ್ಲಿ ಕುರುಬರ ಸಂಘ, ಬಂಟರ ಸಂಘ ಮುಂತಾದ ಜಾತಿಯ ಸಂಘಗಳೂ ಸ್ಥಾಪನೆಯಾಗಿ ತಮ್ಮ ಜಾತಿಗಳ ಏಳಿಗೆಗೆ ಶ್ರಮಿಸತೊಡಗಿದವು.

ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಚಳುವಳಿಯ ಸಂಸ್ಥಾಪಕರೆಂದರೆ ಎಂ. ಬಸ್ಸಯ್ಯ ಮತ್ತು ಸಿ. ಆರ್. ರೆಡ್ಡಿ. ಇವರು ಮದ್ರಾಸ್ ಪ್ರಾಂತ್ಯದ ಜಸ್ಟಿಸ್ ಪಕ್ಷದ ಚಳುವಳಿಯಿಂದ ಸ್ಫೂರ್ತಿಗೊಂಡು ಮೈಸೂರು ರಾಜ್ಯದಲ್ಲಿ ಬ್ರಾಹ್ಮಣೇತರ ಚಳುವಲಿಯನ್ನು ಆರಂಭಿಸಿದರು. ಇವರಲ್ಲದೇ ಸಾಹುಕಾರ ಚನ್ನಯ್ಯ, ಡಿ. ಹನುಮಯ್ಯ, ಎಂ. ಸುಬ್ಬಯ್ಯ, ಅಬ್ಬಾಸ್ ಅಲಿಖಾನ್, ದಿವಾನ್ ಕಾಂತರಾಜ್ ಅರಸ್, ಶಾಂತವೇರಿ ಗೋಪಾಲಗೌಡ ಮೊದಲಾದವರು ಈ ಚಳುವಳಿಯಲ್ಲಿ ಪಾಲು ಹೊಂದಿದ್ದರು. 1916 ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಎಂ. ಬಸವಯ್ಯನವರು ಸ್ಥಳೀಯ ಸಂಸ್ಥೆಗಳಲ್ಲಾಗಲಿ ಅಥವಾ ಸರ್ಕಾರಿ ಸೇವೆಗಳಲ್ಲಾಗಲಿ ಹಿಂದುಳಿದವರ ಪ್ರಾತಿನಿಧ್ಯ ಶೂನ್ಯವಾಗಿರುವ ಅಂಶವನ್ನು ಕಟುವಾಗಿ ಟೀಕಿಸಿ ಸರ್ಕಾರದ ಗಮನ ಸೆಳೆದರು. ಹಿಂದುಳಿದ ವರ್ಗಗಳಿಗೆ ವಿದ್ಯಾರ್ಥಿ ವೇತನ ಮತ್ತು ಸರ್ಕಾರಿ ನೌಕರಿ ಒದಗಿಸುವಂತೆ ಮಹಾರಾಜರನ್ನು ಆಗ್ರಹಿಸಿದರು. ಸಾಮಾಜಿಕವಾಗಿ ಹಿಂದುಳಿದ ವರ್ಗಗಳು ಸಂಘಟಿತಗೊಳ್ಳಬೇಕೆಂದು ಕರೆ ಕೊಟ್ಟರು. ಆಗ ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಗಳು ನಿಜಕ್ಕೂ ಪ್ರಜಾಪ್ರಭುತ್ವಿಯವಾಗಿರಬೇಕಾದರೆ ಕೋಮುವಾರು ಪ್ರಾತಿನಿಧ್ಯವಿರಬೇಕೆಂದು ಪ್ರತಿನಿಧಿ ಸಭೆಯಲ್ಲಿ ಒಂದು ಕಾನೂನು ಹೊರಡಿಸಲಾಯಿತು. ಇದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಬೆಂಬಲ ವ್ಯಕ್ತಪಡಿಸಿದರು.

**ಹಿಂದುಳಿದ ವರ್ಗಗಳ ಸಮಾವೇಶ 1917:** ಎಂ. ಬಸವಯ್ಯನವರ ಬೆಂಬಲದಿಂದ 1917 ರನ ವೆಂಬರ್ 18 ರಂದು ಬೆಂಗಳೂರಿನಲ್ಲಿ ಪ್ರಥಮ ಹಿಂದುಳಿದ ವರ್ಗಗಳ ಸಮಾವೇಶ ಜರುಗಿತು. ಈ ಸಮಾವೇಶದ ಅಧ್ಯಕ್ಷತೆಯನ್ನು ಮದ್ರಾಸ್ ಪ್ರೆಸಿಡೆನ್ಸಿಯ ಹಿಂದುಳಿದ ಜನಾಂಗದ ನೇತಾರರಾದ ಅಗ್ಗಿಸ್ವಾಮಿ ಮೊದಲಿಯಾರ್ ವಹಿಸಿದ್ದರು. ಇದರಲ್ಲಿ ಒಕ್ಕಲಿಗರು, ಲಿಂಗಾಯತರು, ಮುಸ್ಲಿಂರು ಸೇರಿದಂತೆ ಮೂರು ಸಾವಿರ ಪ್ರತಿನಿದಿಗಳು ಭಾಗವಹಿಸಿದ್ದರು. ಈ ಸಮಾವೇಶವು ಹಿಂದುಳಿದ ವರ್ಗದವರಲ್ಲಿ ಜಾಗೃತಿ ಮೂಡಿಸಿತು.

**ಪ್ರಜಾ ಮಿತ್ರ ಮಂಡಳಿ:** ಸಂಘಟನೆಯ ಪ್ರಾಮುಖ್ಯತೆಯನ್ನು ಅರಿತುಕೊಂಡ ಹಿಂದುಳಿದ ವರ್ಗಗಳು 1917 ರ ಡಿಸೆಂಬರ್‌ನಲ್ಲಿ ಮೈಸೂರು ಪ್ರಜಾ ಮಿತ್ರ ಮಂಡಳಿ ಎಂಬ ಪ್ರಥಮ ರಾಜಕೀಯ ಪಕ್ಷವನ್ನು ಸ್ಥಾಪಿಸಿದವು. ಸಾಹುಕಾರ ಚನ್ನಯ್ಯನವರು ಇದರ ಅಧ್ಯಕ್ಷರಾದರು. ಎಂ. ಬಸವಯ್ಯ ಮಿತ್ರ ಮಂಡಳಿಯ ಕಾರ್ಯದರ್ಶಿಯಾಗಿದ್ದರು. ಇದು ಶಾಸಕಾಂಗ ಮತ್ತು ಕಾರ್ಯಾಂಗ ಸೇರಿದಂತೆ ಸರ್ಕಾರಿ ನೌಕರಿಯಲ್ಲಿ ಎಲ್ಲಾ ಕೋಮಿನ ಜನರಿಗೆ ಪ್ರಾತಿನಿಧ್ಯ ನೀಡಬೇಕೆಂದು ಮಹಾರಾಜರನ್ನು ಆಗ್ರಹಿಸಿತು. ಈ ಬಗೆಯ ಬೇಡಿಕೆಗೆ ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ನಡುವಿನ ಚಳುವಳಿಯಾಗಿ ಮಾರ್ಪಾಡಾಯಿತು. ಆ ಸಮಯದಲ್ಲಿ ನೇಮಕ ಮಾಡಿದ್ದ ಆರು ಸಹಾಯಕ ಆಯುಕ್ತರ ಹುದ್ದೆಗಳಲ್ಲಿ ಎಲ್ಲವೂ ಬ್ರಾಹ್ಮಣರ ಪಾಲಾಗಿದ್ದವು. ಇದರಲ್ಲಿ ಬದಲಾವಣೆಯಾಗಿ ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯ ನೀಡುವಂತೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಆದೇಶಿಸಿದರು. ಆದರೆ, ಪ್ರತಿಭೆಗೆ ಆದ್ಯತೆ ನೀಡಬೇಕೆಂದು ವಿಶ್ವೇಶ್ವರಯ್ಯನವರು ಇದನ್ನು ತಿರಸ್ಕರಿಸಿದ್ದರಿಂದ ವಿಷಯ ಬಿಗುಡಾಯಿಸಿತು. ನಂತರ 1918 ರಲ್ಲಿ ವಿಶ್ವೇಶ್ವರಯ್ಯನವರ ರಾಜೀನಾಮೆಯಿಂದಾಗಿ ಪರ್ಯಾವಸಾನಗೊಂಡಿತು.

**ಜಸ್ಟಿಸ್ ಲೆಸ್ಲೆ ಮಿಲ್ಲರ್ ಸಮಿತಿ:** ವಿಶ್ವೇಶ್ವರಯ್ಯನವರ ರಾಜೀನಾಮೆಯ ನಂತರ ಪ್ರಥಮ ಬ್ರಾಹ್ಮಣೇತರ ದಿವಾನರಾದ ಕಾಂತರಾಜ್ ಅರಸರು ಹಿಂದುಳಿದ ವರ್ಗಗಳ ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ನ್ಯಾಯಮೂರ್ತಿ ಲೆಸ್ಲೆ ಮಿಲ್ಲರ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದರು. ಇದು ಹಿಂದುಳಿದವರ್ಗಗಳ ಪ್ರಥಮ ಸಮಿತಿಯಾಗಿದೆ. ಈ ಸಮಿತಿಯು ಸಾಹುಕಾರ ಚನ್ನಯ್ಯಾ, ಎಂ. ಬಸವಯ್ಯ, ಶ್ರೀಕಂಠ ಅಯ್ಯಂಗಾರ, ಗುಲಾಮ್ ಅಹಮದ್ ಮುಂತಾದ ಸದಸ್ಯರನ್ನು ಒಳಗೊಂಡಿತ್ತು. ಈ ಸಮಿತಿಯು ಹಿಂದುಳಿದವರ ಕುಂದುಕೊರತೆಗಳನ್ನು ಅಧ್ಯಯನ ಮಾಡಿ ಬ್ರಾಹ್ಮಣೇತರರೆಲ್ಲ ಹಿಂದುಳಿದವರೆಂದು ವ್ಯಾಖ್ಯಾನಿಸಿ 1919 ರ ಜುಲೈನಲ್ಲಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಇದರ ಶಿಫಾರಸುಗಳು ಕೆಳಗಿನಂತಿವೆ.

1. 1911 ರ ಜನಗಣತಿಯ ಪ್ರಕಾರ ಶೇಕಡಾ ಐದಕ್ಕಿಂತ ಕಡಿಮೆ ಸಾಕ್ಷರತೆ ಹೊಂದಿರುವ ಎಲ್ಲ ಜಾತಿಗಳನ್ನು ಹಿಂದುಳಿದ ವರ್ಗಗಳೆಂದೇ ಪರಿಗಣಿಸುವುದು.
2. ಮುಂದಿನ ಏಳು ವರ್ಷಗಳಲ್ಲಿ ಉನ್ನತ ಹುದ್ದೆಗಳಲ್ಲಿ ಅರ್ಧದಷ್ಟು ಕೆಳ ದರ್ಜೆಯ ಸೇವೆಗಳಲ್ಲಿ ಮೂರನೇ ಎರಡರಷ್ಟು ಹಿಂದುಳಿದ ವರ್ಗದವರಿಗೆ ಅವಕಾಶ ಕಲ್ಪಿಸುವುದು.
3. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿ ವೇತನ ನೀಡಲು ಪ್ರತಿ ವರ್ಷ ಆಯವ್ಯಯದಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಕಾಯ್ದಿಡುವುದು.



4. ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಟ ಪಂಗಡಗಳ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಲ್ಲಿ ಪ್ರವೇಶಾವಕಾಶ ಕಲ್ಪಿಸುವುದು.

ಮಿಲ್ಲರ್ ಸಮಿತಿಯ ವರದಿಯನ್ನು ಬ್ರಾಹ್ಮಣರು ಬಹು ತೀಕ್ಷ್ಣವಾಗಿ ವಿರೋಧಿಸಿದರು. ನಾಲ್ವಡಿ ಕೃಷ್ಣರಾಜರು ಇದನ್ನು ಪುರಸ್ಕರಿಸಿದರೆ ಹಿಂದುಳಿದವರನ್ನು ನನ್ನ ಪ್ರಜೆಗಳೇ ಎಂದು ಉತ್ತರ ನೀಡಿ 1921 ರ ಮೇನಲ್ಲಿ ಮಿಲ್ಲರ್ ವರದಿಯನ್ನು ಅಂಗಿಕರಿಸಿ ಜಾರಿಗೊಳಿಸಿದರು. ಇದರನ್ವಯ ಮುಂದಿನ ದಿನಗಳಲ್ಲಿ ಹಿಂದುಳಿದ ವರ್ಗಗಳಿಗೆ ದಿವಾನರಾದ ಮಿರ್ಜಾಇಸ್ಮಾಯಿಲ್ ಮತ್ತು ನಾಲ್ವಡಿಯವರ ಆದೇಶದಂತೆ ಶೇಕಡಾ 75 ರಷ್ಟು ಮೀಸಲಾತಿಯನ್ನು ಸರ್ಕಾರಿ ಸೇವೆಯಲ್ಲಿ ಕಲ್ಪಿಸಲಾಯಿತು. ಶಾಸಕಾಂಗಗಳಾದ ಪ್ರಜಾ ಪ್ರತಿನಿಧಿ ಸಭೆಯಲ್ಲಿ 25 ಸ್ಥಾನಗಳನ್ನು ಹಾಗೂ ಶಾಸನ ಪರಿಷತ್ತಿನಲ್ಲಿ 18 ಸ್ಥಾನಗಳನ್ನು ಹಿಂದುಳಿದವರಿಗೆ ಬಿಟ್ಟುಕೊಡಲಾಯಿತು. ಮಿಲ್ಲರ್ ಸಮಿತಿಯ ವರದಿಯು ಮೈಸೂರಿನಲ್ಲಿ 1956 ರವರೆಗೂ ಅಸ್ತಿತ್ವದಲ್ಲಿತ್ತು.

ಒಟ್ಟಾರೆ ಮೈಸೂರು ಸಂಸ್ಥಾನವು ಜಾರಿಗೊಳಿಸಿದ ಕ್ರಾಂತಿಕಾರಿ ಬದಲಾವಣೆಗಳಿಂದಾಗಿ ಒಕ್ಕಲಿಗರು ಮತ್ತು ಲಿಂಗಾಯತರು ಮುಸ್ಲಿಂರು ಗಣನೀಯ ಸಂಖ್ಯೆಯಲ್ಲಿ ಸರ್ಕಾರಿ ನೌಕರಿಯನ್ನು ಪಡೆದರು. ಪ್ರಾರಂಭದಲ್ಲಿ ತೀವ್ರ ಗತಿಯಲ್ಲಿ ಸಾಗಿದ್ದ ಹಿಂದುಳಿದ ವರ್ಗಗಳ ಚಳುವಳಿಯು 1940 ರ ನಂತರ ನಿಧಾನವಾಯಿತು. ಹಿಂದುಳಿದ ವರ್ಗವು ಶೂದ್ರರು ಮತ್ತು ಅಸ್ಪೃಷ್ಯರು ಎಂದು ಇಬ್ಭಾಗವಾಯಿತು. 1928 ರ ಗಣಪತಿ ಗಲಭೆ: ಒಕ್ಕಲಿಗರು, ವೀರಶೈವರು, ಮುಸ್ಲಿಂರು ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡಿದ್ದರಿಂದ ಇತರೆ ಹಿಂದುಳಿದವರಿಗೆ ಅಸಮಧಾನ ಉಂಟು ಮಾಡಿತು. ಯುವ ಮುಖಂಡರು ಈ ಚಳುವಳಿಯಲ್ಲಿ ನಂಬಿಕೆ ಕಳೆದುಕೊಂಡರು. ರಾಷ್ಟ್ರೀಯ ಚಳುವಳಿಯತ್ತ ಗಮನ ನೀಡಿದರು. ಫಲವಾಗಿ ಹಿಂದುಳಿದ ವರ್ಗಗಳ ಚಳುವಳಿ ದುರ್ಬಲಗೊಂಡಿತು.

## [B.] ಕರ್ನಾಟಕದಲ್ಲಿ ಸ್ವಾತಂತ್ರೋತ್ತರ ಹಿಂದುಳಿದ ವರ್ಗಗಳ ಚಳುವಳಿ [Backward Class Movement in Karnataka after Independence]:

ಸ್ವಾತಂತ್ರ್ಯಾ ನಂತರ ಕೇಂದ್ರ ಸರ್ಕಾರವು ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಈ ದಿಸೆಯಲ್ಲಿ 1953 ರಲ್ಲಿ ಆ ವರ್ಗಗಳ ಅಭಿವೃದ್ಧಿಯ ಬಗೆಗೆ ವರದಿ ಸಲ್ಲಿಸಲು ಕಾಕಾ ಕಾಲೇಲ್ಕರ್ ಆಯೋಗವನ್ನು ನೇಮಿಸಿತು. ಆದರೆ, ಈ ಆಯೋಗದ ಶಿಫಾರಸುಗಳು ತೃಪ್ತಿಕರವಾಗಿಲ್ಲದ ಕಾರಣ ಭಾರತ ಸರ್ಕಾರ ಹಿಂದುಳಿದ ವರ್ಗಗಳ ರಕ್ಷಣೆಗೆ ಸೌಲಭ್ಯ ಕಲ್ಪಿಸಲು ರಾಜ್ಯಗಳೇ ಸೂಕ್ತ ಆಯೋಗಗಳನ್ನು ರಚಿಸಿಕೊಳ್ಳುವಂತೆ ಸೂಚಿಸಿತು. ಪರಿಣಾಮ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಹೋರಾಟಗಳು ಮುನ್ನೆಲೆಗೆ ಬಂದಾಗಲೆಲ್ಲ ವಿವಿಧ ಸಮಿತಿ ಅಥವಾ ಆಯೋಗಗಳನ್ನು ರಚಿಸಿ ಕರ್ನಾಟಕ ಸರ್ಕಾರ ಅವರನ್ನು ಸಮಾಧಾನಗೊಳಿಸಲು ಪ್ರಯತ್ನಿಸುತ್ತಾ ಬಂದಿತು. ಕೆಳಗೆ ವಿವಿಧ ಸಮಿತಿಗಳ ಬೆಳಕಿನಲ್ಲಿ ಕರ್ನಾಟಕದ ಹಿಂದುಳಿದ

ವರ್ಗಗಳ ಚಳುವಳಿಯ ತೀವ್ರತೆಯನ್ನು ಅರಿತುಕೊಳ್ಳಲು ಪೂರಕವಾದ ವಿವರಗಳನ್ನು ನೀಡಲಾಗಿದೆ.

[1. **ಡಾ. ಆರ್. ನಾಗನಗೌಡ ಸಮಿತಿ:** ಮೈಸೂರು ಸರ್ಕಾರವು 1958 ರಲ್ಲಿ ಕ್ರಿಶ್ಚಿಯನ್ನರು ಮತ್ತು ಮುಸ್ಲಿಂರನ್ನು ಹೊರತುಪಡಿಸಿ ಉಳಿದ ಬ್ರಾಹ್ಮಣೇತರರನ್ನು ಹಿಂದುಳಿದವರೆಂದು ಆದೇಶಿಸಿತು. ಆದರೆ, ಇದನ್ನು 1959 ರಲ್ಲಿ ನ್ಯಾಯಾಲಯವು ಅನೂರ್ಜಿತಗೊಳಿಸಿತು. ಹೀಗಾಗಿ ಹಿಂದುಳಿದ ವರ್ಗಗಳನ್ನು ಸ್ಪಷ್ಟವಾಗಿ ಗುರುತಿಸಿ ಅವುಗಳಿಗೆ ಮೀಸಲಾತಿಯನ್ನು ನೀಡುವ ಸಲುವಾಗಿ ಎಸ್. ನಿಜಲಿಂಗಪ್ಪ ಸರ್ಕಾರವು ಜನೇವರಿ 8, 1960 ರಂದು ಡಾ. ಆರ್. ನಾಗನಗೌಡ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಇದು ಸ್ವಾತಂತ್ರ್ಯ ನಂತರದ ರಾಜ್ಯದ ಪ್ರಥಮ ಹಿಂದುಳಿದ ವರ್ಗಗಳ ಸಮಿತಿಯಾಗಿದೆ.

ಈ ಸಮಿತಿಯು 1961 ರಲ್ಲಿ ತನ್ನ ಅಂತಿಮ ವರದಿಯನ್ನು ಸಲ್ಲಿಸಿ ಅದರಲ್ಲಿ ಪರಿಶಿಷ್ಟ ಜಾತಿಗೆ ಶೇಕಡಾ 15, ಪರಿಶಿಷ್ಟ ಪಂಗಡಕ್ಕೆ ಶೇಕಡಾ 3 ಮತ್ತು ಹಿಂದುಳಿದ ವರ್ಗಗಳಿಗೆ ಶೇಕಡಾ 50 ಒಟ್ಟು ಶೇಕಡಾ 68 ರಷ್ಟು ಮೀಸಲಾತಿ ನೀಡಬೇಕೆಂದು ಶಿಫಾರಸು ಮಾಡಿತ್ತು. ಈ ವರದಿಯನ್ನು ಸರ್ಕಾರ ಜಾರಿಗೊಳಿಸಲು ಹೊರಟಾಗ ಬಾಲಾಜಿ ಹಾಗೂ ಇತರೆ ವಿದ್ಯಾರ್ಥಿಗಳು ಸರ್ವೋಚ್ಚನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿ ಅಸಿಂಧುಗೊಳಿಸಿದರು. ಬಳಿಕ 1967 ಜುಲೈ 26 ರಂದು ಸರ್ಕಾರ ಮತ್ತೊಂದು ಆಜ್ಞೆ ಹೊರಡಿಸಿ ಪರಿಶಿಷ್ಟ ಜಾತಿಗೆ 15, ಪರಿಶಿಷ್ಟ ಪಂಗಡದವರಿಗೆ 3 ಮತ್ತು ಹಿಂದುಳಿದವರಿಗೆ ಶೇಕಡಾ 30 ರಷ್ಟು ಮೀಸಲಾತಿಯನ್ನು ನಿಗದಿಪಡಿಸಿತು. ಜೊತೆಗೆ ವಾರ್ಷಿಕವಾಗಿ 1200 ಕ್ಕಿಂತ ಕಡಿಮೆ ಆದಾಯವನ್ನು ಹೊಂದಿದವರನ್ನು ಹಿಂದುಳಿದ ವರ್ಗವೆಂದು ಗೋಷಿಸಿತು.

2. **ಹಾವನೂರು ಆಯೋಗ:** ಡಿ. ದೇವರಾಜ ಅರಸು ಸರ್ಕಾರ 1972 ರಲ್ಲಿ ಎಲ್. ಜಿ. ಹಾವನೂರುರವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಿಸಿತು. ತನ್ನ ವರದಿಯನ್ನು 1975 ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ ಹಾವನೂರು ಆಯೋಗವು ಹಿಂದುಳಿದವರನ್ನು ಹಿಂದುಳಿದ ಸಮುದಾಯಗಳು, ಹಿಂದುಳಿದ ಜಾತಿಗಳು, ಹಿಂದುಳಿದ ಬುಡಕಟ್ಟುಗಳು ಎಂದು ವಿಂಗಡಿಸಿತು. ರಾಜ್ಯದಲ್ಲಿ ಶೇಕಡಾ 75 ರಷ್ಟು ಪ್ರಜೆಗಳು ಹಿಂದುಳಿದವರಿದ್ದು ಅವರಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಹಾಗೂ ಸರ್ಕಾರಿ ನೌಕರಿಗಳಲ್ಲಿ ಶೇಕಡಾ ಅರ್ಧದಷ್ಟು ಮೀಸಲಾತಿ ನೀಡಬೇಕೆಂದು ಶಿಫಾರಸು ಮಾಡಿತು. ಇದರಲ್ಲಿ ಹಿಂದುಳಿದ ಕೋಮುಗಳಿಗೆ 16, ಹಿಂದುಳಿದ ಜಾತಿಯವರಿಗೆ 10, ಹಿಂದುಳಿದ ಬುಡಕಟ್ಟುಗಳಿಗೆ 06, ಪರಿಶಿಷ್ಟ ಜಾತಿಯವರಿಗೆ 15 ಮತ್ತು ಪರಿಶಿಷ್ಟ ಪಂಗಡದವರಿಗೆ 03 ಶೇಕಡಾವಾರು ಮೀಸಲಾತಿ ನೀಡಬೇಕೆಂದು ಸೂಚಿಸಿತ್ತು.

ಗಮನಾರ್ಹ ಅಂಶವೇನೆಂದರೆ, ದೇವರಾಜ ಅರಸು ಸರ್ಕಾರವು ಶೇಕಡಾ 58 ರಷ್ಟು ಮೀಸಲಾತಿ ಆಜ್ಞೆ ಹೊರಡಿಸಿತು. ಈ ಆಯೋಗದ ವಿಶೇಷವೇನೆಂದರೆ, ಪ್ರಥಮ ಬಾರಿಗೆ ಮುಸ್ಲಿಂರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆಗೊಳಿಸಿತು. ಆದರೆ, ಲಿಂಗಾಯತ



ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ಹೊರಗಿಡಲಾಯಿತು. ಇದರಿಂದಾಗಿ ಲಿಂಗಾಯತರ ವಿರೋಧ ಎದುರಾಯಿತು.

3. **ವೆಂಕಟಸ್ವಾಮಿ ಆಯೋಗ:** ರಾಮಕೃಷ್ಣ ಹೆಗಡೆಯವರು 1983 ರಲ್ಲಿ ಹಿಂದುಳಿದ ವರ್ಗದ ಮೀಸಲಾತಿಗೆ ಸಂಬಂಧಿಸಿದಂತೆ ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಿತು. ಮಾರ್ಚ್ 31, 1986 ರಂದು ಈ ಆಯೋಗವು ತನ್ನ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ರಾಜ್ಯದಲ್ಲಿ ಶೇಕಡಾ 33 ರಷ್ಟು ಜನರು ಹಿಂದುಳಿದವರೆಂದು ಅಂದಾಜು ಮಾಡಿ ಅವರಿಗೆ ಶೇಕಡಾ 27 ರಷ್ಟು ಮೀಸಲಾತಿಯನ್ನು ನೀಡಬಹುದೆಂದು ಘೋಷಿಸಿತು. ಆದರೆ, ಈ ಆಯೋಗವು ವೀರಶೈವ ಮತ್ತು ಒಕ್ಕಲಿಗರನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ಕೈಬಿಟ್ಟಿತ್ತು. ಫಲವಾಗಿ ಹಳೆ ಮೈಸೂರಿನಲ್ಲಿ ಚಳುವಳಿ ನಡೆಸಿದ್ದರಿಂದಾಗಿ ವೆಂಕಟಸ್ವಾಮಿ ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸಲಾಗಲಿಲ್ಲ.

4. **ಚಿನ್ನಪ್ಪ ರೆಡ್ಡಿ ಆಯೋಗ:** ವೆಂಕಟಸ್ವಾಮಿ ಆಯೋಗದ ವರದಿಯನ್ನು ತಿರಸ್ಕರಿಸಿದ ನಂತರ ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರವು ಮಾರ್ಚ್ 9, 1988 ರಂದು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾಗಿದ್ದ ಚಿನ್ನಪ್ಪ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗದವರ ಆಯೋಗವನ್ನು ನೇಮಿಸಿತು. ಹಿಂದುಳಿದ ವರ್ಗಗಳನ್ನು ಗುರುತಿಸುವುದು, ಅವುಗಳಿಗೆ ಮೀಸಲಾತಿಯನ್ನು ಒದಗಿಸುವ ಪ್ರಮಾಣವನ್ನು ತೀರ್ಮಾನಿಸುವ ಜವಾಬ್ದಾರಿಯನ್ನು ಹೊಂದಿತ್ತು. ಈ ಆಯೋಗವು ಏಪ್ರಿಲ್ 7, 1990 ರಂದು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಚಿನ್ನಪ್ಪ ರೆಡ್ಡಿ ಆಯೋಗವು ಹಿಂದುಳಿದ ವರ್ಗದವರನ್ನು ಪ್ರವರ್ಗ 1, 2 ಮತ್ತು 3 ಎಂಬುದಾಗಿ ವಿಂಗಡಿಸಿ ಸರ್ಕಾರಿ ಸೇವೆಗಳು ಮತ್ತು ಶಿಕ್ಷಣದಲ್ಲಿ ಮೀಸಲಾತಿಯನ್ನು ಸ್ಪಷ್ಟಪಡಿಸಿದರು. ಇದು ಲಿಂಗಾಯತರನ್ನು ಅತ್ಯಂತ ಹಿಂದುಳಿದವರೆಂದು ಗುರುತಿಸಿ ಪ್ರವರ್ಗ ಒಂದಕ್ಕೆ ಸೇರಿಸಿತು.

### [III.] ಕರ್ನಾಟಕದಲ್ಲಿ ಅಹಿಂದ ಚಳುವಳಿ [Ahinda Movement in Karnataka]:

1970 ರ ದಶಕದಿಂದ ಕರ್ನಾಟಕದ ರಾಜ್ಯ ರಾಜಕೀಯದಲ್ಲಿ ಚಳುವಳಿಯಾಗಿ ಅಹಿಂದವು ಅಸ್ತಿತ್ವಕ್ಕೆ ಬಂದಿತು. ಅಹಿಂದವು ಚಳುವಳಿಯಾಗಿ ರೂಪುಗೊಳ್ಳಲು ಕಾರಣಕರ್ತರೇ ಡಿ. ದೇವರಾಜ ಅರಸರು. ರಾಜ್ಯ ರಾಜಕೀಯದಲ್ಲಿ ಒಕ್ಕಲಿಗ ಮತ್ತು ಲಿಂಗಾಯತರು ಪಾರುಪತ್ಯ ಸಾಧಿಸಿದ್ದುದಕ್ಕೆ ಪ್ರತಿಯಾಗಿ ರೂಪಿಸಿದ ಹಿಂದುಳಿದ ವರ್ಗಗಳ ಚಳುವಳಿಯೇ ಅಹಿಂದ ಚಳುವಳಿಯಾಗಿ ರೂಪುಗೊಂಡಿತೆಂದು ಹೇಳಬಹುದು. 1990 ರ ದಶಕದಲ್ಲಿ ಅಹಿಂದ ಚಳುವಳಿ ಕರ್ನಾಟಕದಲ್ಲಿ ಒಂದು ಸ್ಪಷ್ಟ ರೂಪವನ್ನು ಪಡೆದುಕೊಂಡಿತು. ನಂತರ 2005 ರಿಂದ ಸಿದ್ಧರಾಮಯ್ಯನವರ ನಾಯಕತ್ವದಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿತು.

[A.] **ಅಹಿಂದದ ಅರ್ಥ** [Meaning of Ahinda]: ಸರಳಾರ್ಥದಲ್ಲಿ ಅಹಿಂದವು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಒಳಗೊಳ್ಳುವಿಕೆ ತತ್ತ್ವಗಳನ್ನು ಆಧರಿಸಿರುವ ಹೋರಾಟವಾಗಿದೆ. ವಿಶಾಲಾರ್ಥದಲ್ಲಿ ಸಮಾಜದಲ್ಲಿ ತುಳಿತಕ್ಕೊಳಗಾದ ಮತ್ತು ಕೆಳಸ್ತರದ ಸಮುದಾಯಗಳ ಹಿತಾಸಕ್ತಿಗಳನ್ನು ಸಂರಕ್ಷಿಸಲು ಹೊರಹೊಮ್ಮಿದ ಸಾಮಾಜಿಕ ಹಾಗೂ ರಾಜಕೀಯ ಚಳುವಳಿಯೇ ಅಹಿಂದವಾಗಿದೆ. ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರನ್ನು ಸಂಕ್ಷೇಪಿಸುವ ಅಕ್ಷರಗಳಿಂದ ಅಹಿಂದ ಪರಿಕಲ್ಪನೆಯು ರಚನೆಗೊಂಡಿದೆ. ಅಹಿಂದ ಚಳುವಳಿಯು ತುಳಿತಕ್ಕೊಳಗಾದ ಸಮುದಾಯಗಳ ಕುಂದುಕೊರತೆಗಳನ್ನು ಪರಿಹರಿಸಲು ಮತ್ತು ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಮುಖ್ಯವಾಹಿನಿಯಲ್ಲಿ ಅವರ ಭಾಗವಹಿಸುವಿಕೆಯನ್ನು ಪ್ರತಿಪಾದಿಸುತ್ತದೆ. ಮುಂದುವರಿದು ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರ ಹಿತಾಸಕ್ತಿಗಳನ್ನು ಉತ್ತೇಜಿಸುವ ಗುರಿಯನ್ನು ಅಹಿಂದ ಹೊಂದಿದೆ. ಅಹಿಂದ ಚಳುವಳಿಯು ಹೆಚ್ಚು ಪ್ರವರ್ಧಮಾನಕ್ಕೆ ಬರಲು ಪ್ರಮುಖ ಕಾರಣಗಳೆಂದರೆ

1. ರಾಜಕೀಯ ಪಕ್ಷಗಳು ಹಿಂದುಳಿದ ವರ್ಗಗಳನ್ನು ಚುನಾವಣಾ ರಾಜಕೀಯದ ಸಾಧನವಾಗಿ ಮಾತ್ರ ಬಳಸಿಕೊಳ್ಳಲು ಮುಂದಾದದ್ದು.
2. ಪ್ರಬಲ ಜಾತಿಗಳ ರಾಜಕೀಯ ಪ್ರಭುತ್ವವನ್ನು ಅಂತ್ಯಗೊಳಿಸುವ ಪ್ರಯತ್ನದ ಭಾಗವಾಗಿ ಹೋರಾಟ ನಡೆಸಿದುದು.
3. ಹಿಂದುಳಿದ ವರ್ಗಗಳ ಚಳುವಳಿಯಿಂದ ಮೇಲ್‌ವರ್ಗದವರು ಮಾತ್ರ ಅವಕಾಶ ಪಡೆದುದು.
4. ತುಳಿತಕ್ಕೊಳಗಾದವರು ಜಾಗೃತಗೊಂಡು ಸಾಮಾಜಿಕ ನ್ಯಾಯವನ್ನು ಬಯಸಿದುದು.

[B.] **ಅಹಿಂದದ ಬೆಳವಣಿಗೆ** [Growth of Ahinda]: ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿಯಿಂದಾಗಿ ಒಕ್ಕಲಿಗರು ಮತ್ತು ಲಿಂಗಾಯತರು ಉದ್ಯೋಗ, ಶಿಕ್ಷಣ ಹಾಗೂ ರಾಜಕೀಯ ಅವಕಾಶಗಳಲ್ಲಿ ಹೆಚ್ಚಿನ ಪಾಲನ್ನು ಪಡೆದುಕೊಂಡರು. ಆದರೆ, ಇತರೆ ಹಿಂದುಳಿದ ವರ್ಗಗಳ ಗುಂಪುಗಳು ತಮ್ಮ ಆರ್ಥಿಕ ಅಸಮರ್ಥತೆಯಿಂದಾಗಿ ಉದ್ಯೋಗ, ಶಿಕ್ಷಣ ಮತ್ತು ರಾಜಕಾರಣದಲ್ಲಿ ಸಾಧನೆ ತೋರಲಾಗಲಿಲ್ಲ. ಪ್ರಬಲ ಜಾತಿಗಳಿಗೆ ಪ್ರತಿಯಾದ ಚಳುವಳಿಯೊಂದನ್ನು ಸಂಘಟಿಸಲು ಸೂಕ್ತ ನಾಯಕರನ್ನು ಎದುರು ನೋಡುತ್ತಿದ್ದ ಇತರೆ ಹಿಂದುಳಿದ ವರ್ಗಗಳಿಗೆ ದೇವರಾಜ ಅರಸು ನಾಯಕತ್ವ ನೀಡಿದರು. 1972 ರಲ್ಲಿ ಡಿ. ದೇವರಾಜ ಅರಸು ಒಕ್ಕಲಿಗೇತರ ಮತ್ತು ಲಿಂಗಾಯಿತೇತರ ಜಾತಿಗಳ ನಾಯಕರಾಗಿ ಮುಖ್ಯಮಂತ್ರಿ ಸ್ಥಾನವೇರಿದರು. ಇತರೆ ಹಿಂದುಳಿದ ವರ್ಗಗಳಿಗೆ ಅರಸುರವರ ನಾಯಕತ್ವವು ಹೊಸ ಆಶಾಕಿರಣವೆನಿಸಿತ್ತು. ದೇವರಾಜ ಅರಸು ಅವರ ಸಹೋದರ ಕೆಂಪರಾಜ ಅರಸು ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಒಕ್ಕೂಟ ರಚನೆಗೊಂಡಿತು. ಬೆಂಗಳೂರಿನಲ್ಲಿ ಈ ಒಕ್ಕೂಟವು ಅಕ್ಟೋಬರ್ 1973



ರಲ್ಲಿ ಇತರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ದಲಿತರ ಬೃಹತ್ ಸಮಾವೇಶವೊಂದನ್ನು ಏರ್ಪಡಿಸಿದ್ದು ಈ ಬೆಳವಣಿಗೆಯನ್ನು ಅಹಿಂದ ಚಳುವಳಿಯ ಉಗಮವೆಂದು ಗುರುತಿಸಬಹುದಾಗಿದೆ. ಅರಸುರವರ ಕಾಲದಲ್ಲಿ ಅಂದರೆ 1970 ರ ದಶಕದಲ್ಲಿ ಅಹಿಂದ ವರ್ಗದವರ ಹಿತರಕ್ಷಣೆಗೆ ಆದ್ಯತೆ ನೀಡಲಾಯಿತು.

ಮುಂದೆ 1980 ಹಾಗೂ 1990 ರ ದಶಕದಲ್ಲಿ ಎಸ್. ಬಂಗಾರಪ್ಪ ಮತ್ತು ಎಂ. ವೀರಪ್ಪ ಮೊಯ್ಲಿ ಅಹಿಂದ ಚಳುವಳಿಗೆ ನಾಯಕತ್ವ ಒದಗಿಸಿದರು. ಈ ಮಧ್ಯೆ ಎಸ್. ದ್ವಾರಕಾನಾಥರು ಅಗಸ್ಟ್ 20, 1998 ರಂದು ಕೋಲಾರದಲ್ಲಿ ಅಹಿಂದ ವರ್ಗಗಳ ಸಮ್ಮೇಳನವೊಂದನ್ನು ಆಯೋಜಿಸಿದ್ದು ಅದರಲ್ಲಿ ಆರ್. ಎಲ್. ಜಾಲಪ್ಪ, ಸಿದ್ಧರಾಮಯ್ಯ, ಧರ್ಮಸಿಂಗ್, ಪ್ರೊ. ನಂಜುಂಡಪ್ಪ, ಎ. ಜೆ. ಸುಧಾಕರ್, ಡಾ. ಲಕ್ಷ್ಮಿಪತಿ ಮುಂತಾದವರು ಪಕ್ಷಾತೀತವಾಗಿ ಭಾಗವಹಿಸಿದ್ದರು. ಕೋಲಾರದ ಈ ಸಮ್ಮೇಳನವು ದೇವರಾಜ ಅರಸು ಕಾಲದ ಅಹಿಂದ ಚಳುವಳಿಗೆ ಮರು ಜನ್ಮ ನೀಡಲು ಯಶಸ್ವಿಯಾಯಿತು. ಜೊತೆಗೆ ಹಂಚಿ ಹೋಗಿದ್ದ ಸಣ್ಣ ಸಮುದಾಯಗಳನ್ನು ಅಧಿಕಾರ ಹಂಚಿಕೆಯ ಕಕ್ಷೆಗೆ ತರಲು ಅಂಬೇಡ್ಕರ್, ಲೋಹಿಯಾ ಮತ್ತು ದೇವರಾಜ ಅರಸುರವರ ಆಶಯಗಳನ್ನು ಜಾರಿಗೊಳಿಸುವ ಸೈದ್ಧಾಂತಿಕ ನೆಲೆಯನ್ನು ಅಹಿಂದ ಚಳುವಳಿಗೆ ಹಾಕಿ ಕೊಡುವಲ್ಲಿ ಸಮ್ಮೇಳನ ಸಫಲಗೊಂಡಿತು. ಈ ಸಮ್ಮೇಳನದಲ್ಲಿ ಕೈಗೊಳ್ಳಲಾದ ನಿರ್ಣಯಗಳೆಂದರೆ

1. 2001 ರ ಜನಗಣತಿಯನ್ನು ಜಾತಿಯಾಧಾರದ ಮೇಲೆ ನಡೆಸಬೇಕು.
2. ಅಲ್ಪಸಂಖ್ಯಾತ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಒದಗಿಸಬೇಕು.
3. ಮಂಡಲ್ ಆಯೋಗದ ಶಿಫಾರಸುಗಳನ್ನು ಆಧರಿಸಿ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ನಡೆಸಬೇಕು.
4. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಇತರೆ ಹಿಂದುಳಿದವರ ಪ್ರಗತಿಗೆ ಗಮನ ಹರಿಸಬೇಕು.
5. ಅಸ್ಪೃಶ್ಯತೆಯ ನಿರ್ಮೂಲನೆಗೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು.
6. ಜನಸಂಖ್ಯೆಯನ್ನು ಆಧರಿಸಿ ಆಯಾ ಜಾತಿಯ ಮಹಿಳೆಯರಿಗೆ ಒಳ ಮೀಸಲಾತಿ ಒದಗಿಸುವುದು.

ಅಹಿಂದ ಚಳುವಳಿಗೆ ವಾಸ್ತವದಲ್ಲಿ ಬಲ ದೊರೆತದ್ದು ಸಿದ್ಧರಾಮಯ್ಯನವರ ನಾಯಕತ್ವದಲ್ಲಿ ಎಂದರೆ ತಪ್ಪಾಗಲಾರದು. ಅವರು ಹುಬ್ಬಳ್ಳಿಯಲ್ಲಿ ಅಹಿಂದ ಸಮ್ಮೇಳನವನ್ನು ಸಂಘಟಿಸುವ ಮೂಲಕ ರಾಜ್ಯ ರಾಜಕಾರಣದಲ್ಲಿ ಸಂಚಲನ ಮೂಡಿಸಿದರು. ಈ ಬೆಳವಣಿಗೆಯಿಂದ 2006 ರಲ್ಲಿ ಉಪ ಮುಖ್ಯಮಂತ್ರಿಯ ಹುದ್ದೆಯನ್ನು ಸಿದ್ಧರಾಮಯ್ಯ ಕಳೆದುಕೊಳ್ಳುವಂತಾಯಿತು. ಈ ಬಳಿಕ ಅಹಿಂದ ಚಳುವಳಿ ಮತ್ತಷ್ಟು ಸಿದ್ಧರಾಮಯ್ಯನವರ

ನೇತೃತ್ವದಲ್ಲಿ ಬಲಗೊಳ್ಳುತ್ತಾ ಸಾಗಿ ಅವರು ಅಹಿಂದದ ಪ್ರಬಲ ನಾಯಕರಾದರು. 2013 ರಲ್ಲಿ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಲು ಅವರ ಬೆಂಬಲಕ್ಕಿದ್ದ ಅಹಿಂದ ಚಳುವಳಿ ಕಾರಣವಾಗಿತ್ತು. ಇಂದಿಗೂ ಸಿದ್ಧರಾಮಯ್ಯನವರು ಅಧಿಕಾರ ನಡೆಸಲು ಅಹಿಂದ ಚಳುವಳಿಯ ನಾಯಕತ್ವವೇ ಕಾರಣವೆಂದರೆ ತಪ್ಪಾಗಲಾರದು.

ಒಟ್ಟಾರೆಯಾಗಿ ಕರ್ನಾಟಕದಲ್ಲಿ ತುಳಿತಕ್ಕೊಳಗಾದ ಮತ್ತು ಸಮಾಜದಲ್ಲಿ ಕಟ್ಟ ಕಡೆಯ ಸಮುದಾಯವೆನಿಸಿದ ಗುಂಪಿನ ಜನರಿಗೆ ಅಹಿಂದ ಚಳುವಳಿಯು ಶಕ್ತಿಯನ್ನು ತುಂಬುವಲ್ಲಿ ಯಶಸ್ವಿಯಾಯಿತು. ಧ್ವನಿಯಿಲ್ಲದ ವರ್ಗಗಳಿಗೆ ಸಾಮಾಜಿಕ ನ್ಯಾಯದಲ್ಲಿ ಒಳಗೊಳ್ಳಲು ಅಹಿಂದ ಚಳುವಳಿಯು ಅವಕಾಶ ಕಲ್ಪಿಸುವಲ್ಲಿ ಸಫಲಗೊಂಡಿತು. ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರಿಗೆ ಸಾಮಾಜಿಕ ಹಾಗೂ ರಾಜಕೀಯ ವೇದಿಕೆಯನ್ನು ಒದಗಿಸುವಲ್ಲಿ ಅಹಿಂದ ಚಳುವಳಿ ನೆರವಾಗಿ ಅವರ ಪ್ರಗತಿಗೆ ಕಾರಣವಾಯಿತು.

[C.] ಅಹಿಂದದ ಉದ್ದೇಶಗಳು [Objectives of Ahinda]: ಕರ್ನಾಟಕದ ರಾಜ್ಯ ರಾಜಕೀಯದಲ್ಲಿ ತನ್ನದೇಯಾದ ಪ್ರಭಾವ ಹೊಂದಿರುವ ಅಹಿಂದ ಚಳುವಳಿಯು ತನ್ನದೇಯಾದ ಉದ್ದೇಶಗಳನ್ನು ಹೊಂದಿ ಕಾರ್ಯಾಚರಿಸುತ್ತಿದೆ. ಅಹಿಂದದ ಪ್ರಾಥಮಿಕ ಉದ್ದೇಶಗಳನ್ನು ಈ ಕೆಳಗಿನ ಅಂಶಗಳು ಸ್ಪಷ್ಟಪಡಿಸುತ್ತವೆ.

1. ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿಗಳ ಹಕ್ಕುಗಳು ಹಾಗೂ ಕಲ್ಯಾಣಕ್ಕಾಗಿ ಶ್ರಮಿಸುವ ಮೂಲಕ ಸಾಮಾಜಿಕ ನ್ಯಾಯವನ್ನು ಉತ್ತೇಜಿಸುವುದು.
2. ಅಹಿಂದ ವರ್ಗಗಳಿಗೆ ಉದ್ಯೋಗವಕಾಶ ಕಲ್ಪಿಸಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು.
3. ಸರ್ಕಾರಿ ಸಂಸ್ಥೆಗಳು, ಶಾಸನ ಸಭೆಗಳು ಮತ್ತು ಇತರ ವೇದಿಕೆಗಳಲ್ಲಿ ಅಹಿಂದ ಸಮುದಾಯಗಳಿಗೆ ಸಾಕಷ್ಟು ರಾಜಕೀಯ ಪ್ರಾತಿನಿಧ್ಯ ನೀಡುವುದು.
4. ಭೂಹೀನರಿಗೆ ಮತ್ತು ಅಂಚಿನಲ್ಲಿರುವ ಸಮುದಾಯಗಳಿಗೆ ಭೂ ಸುಧಾರಣಾ ಕಾಯಿದೆಯನ್ನು ಜಾರಿಗೊಳಿಸಿ ಭೂ ಹಂಚಿಕೆ ಸಮಸ್ಯೆಯನ್ನು ಬಗೆ ಹರಿಸುವುದು.
5. ಅಹಿಂದ ವರ್ಗಗಳಿಗೆ ಶಿಕ್ಷಣ ಮತ್ತು ಸಾರ್ವಜನಿಕ ಉದ್ಯೋಗದಲ್ಲಿ ಸಾಕಷ್ಟು ಮೀಸಲಾತಿ ಕಲ್ಪಿಸುವುದು.

[IV.] ಅಸ್ಮಿತೆ ರಾಜಕಾರಣ ಮತ್ತು ಜಾತಿ [Caste and Identity Politics]:

[A.] ಅಸ್ಮಿತೆ ರಾಜಕೀಯದ ಅರ್ಥ [Meaning of Identity Politics]: ಸಮಾಜದ ಜನರ ಗುಂಪೊಂದು ರಾಜಕೀಯವಾಗಿ ತನ್ನನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆಯನ್ನು ಸರಳವಾಗಿ ಅಸ್ಮಿತೆ ರಾಜಕಾರಣ ಎನ್ನಬಹುದು. ವಿಶಾಲಾರ್ಥದಲ್ಲಿ



ರಾಜಕೀಯ ಮುಖ್ಯವಾಹಿನಿಯಿಂದ ತಾವು ಬದಿಗೆ ಸರಿಸಲ್ಪಟ್ಟಿದ್ದೇವೆ ಎಂಬ ಭಾವನೆಯುಳ್ಳ ಗುಂಪುಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಾಗೂ ನ್ಯಾಯೋಚಿತವಾದ ರಾಜಕೀಯ ಪ್ರಾತಿನಿಧ್ಯವನ್ನು ದೊರಕಿಸಿಕೊಳ್ಳಲು ಸಂಘಟಿತರಾಗುವ ಪ್ರಕ್ರಿಯೆಯು ಅಸ್ಮಿತೆ ರಾಜಕೀಯವಾಗಿದೆ. ಜನಾಂಗ, ಭಾಷೆ, ಧರ್ಮ, ಜಾತಿ, ಪ್ರದೇಶಗಳ ಆಧಾರದ ಮೇಲೆ ನಿರ್ಲಕ್ಷಿತ ಸಮುದಾಯಗಳು ಬಲಶಾಲಿಯಾಗಲು, ಪ್ರಾತಿನಿಧ್ಯ ಪಡೆಯಲು ಹಾಗೂ ಸಾಮಾಜಿಕ ಮುಖ್ಯವಾಹಿನಿಗೆ ತಲುಪಲು ನಡೆಸುವ ಪ್ರಯತ್ನಗಳಲ್ಲಿ ಅಸ್ಮಿತೆ ರಾಜಕಾರಣ ಕಂಡು ಬರುತ್ತದೆ. ಉದಾ: ಮಂತ್ರಿಮಂಡಳದ ರಚನೆಯಲ್ಲಿ ಕಡೆಗಣಿಸಲ್ಪಟ್ಟ ಜಾತಿಯವರು ಕೈಗೊಳ್ಳುವ ಹೋರಾಟ, ತಮ್ಮ ಧಾರ್ಮಿಕ ನಂಬಿಕೆಗಳಿಗೆ ಮಾರಕವಾದ ಕಾನೂನುಗಳನ್ನು ರಚಿಸದಂತೆ ಅಲ್ಪಸಂಖ್ಯಾತ ಧರ್ಮಿಯರು ನಡೆಸುವ ಪ್ರತಿಭಟನೆ, ಕೇಂದ್ರ ಹಾಗೂ ರಾಜ್ಯ ಶಾಸಕಾಂಗದಲ್ಲಿ ತಮಗೆ ಸೂಕ್ತ ಪ್ರಾತಿನಿಧ್ಯ ದೊರಕಲು ನೆರವಾಗುವ ಮೀಸಲಾತಿ ಜಾರಿಗೊಳಿಸಲು ಮಹಿಳೆಯರು ಕೈಗೊಳ್ಳುವ ಚಳುವಳಿ ಮುಂತಾದವುಗಳಲ್ಲಿ ಅಸ್ಮಿತೆ ರಾಜಕೀಯವನ್ನು ಕಾಣಬಹುದಾಗಿದೆ.

ಗಮನಾರ್ಹ ಅಂಶವೇನೆಂದರೆ, ಸಾರ್ವತ್ರಿಕ ಒಳಿತು ಅಸ್ಮಿತೆ ರಾಜಕೀಯದ ಗುರಿಯಾಗಿರುವುದಿಲ್ಲ. ಬದಲಾಗಿ ಮುಖ್ಯವಾಹಿನಿಯಿಂದ ಬದಿಗೆ ಸರಿಸಲ್ಪಟ್ಟ ತನ್ನನ್ನು ಮುಖ್ಯವಾಹಿನಿಯೊಂದಿಗೆ ಗುರುತಿಸಿಕೊಳ್ಳುವಂತೆ ಮಾಡುವುದು ಒಂದು ಗುಂಪಿನ ಅಸ್ಮಿತೆ ರಾಜಕಾರಣದ ಮುಖ್ಯ ಉದ್ದೇಶವಾಗಿರುತ್ತದೆ. ಆದ್ದರಿಂದಲೇ ಹೆಬಮಾರ್ಸ್ ಪ್ರಭುತ್ವದ ನಿಯಂತ್ರಣ ಅಥವಾ ನಿರ್ಣಯಗಳ ಒತ್ತಡಕ್ಕೆ ಒಳಗಾಗಿರುವ ಸಮುದಾಯಗಳು ಪ್ರಭುತ್ವದ ಹಿಡಿತದಿಂದ ತಪ್ಪಿಸಿಕೊಳ್ಳುವ ಪ್ರಯತ್ನದ ಫಲವೇ ಅಸ್ಮಿತೆ ರಾಜಕೀಯ ಎಂದಿರುವರು.

[B.] ಕರ್ನಾಟಕದಲ್ಲಿ ಜಾತಿ ಮತ್ತು ಅಸ್ಮಿತೆ ರಾಜಕೀಯ [Caste and Identity Politics in Karnataka]:

ಕರ್ನಾಟಕದಲ್ಲಿ ಅಸ್ಮಿತೆ ರಾಜಕಾರಣಕ್ಕೆ ಒಂದು ನಿರ್ದಿಷ್ಟವಾದ ಇತಿಹಾಸವಿದೆ. ಇದರ ಇತಿಹಾಸವನ್ನು ಸ್ವತಂತ್ರ ಪೂರ್ವದ ವಸಾಹತು ಕಾಲದಲ್ಲಿಯೇ ಕಾಣಬಹುದು. 1920 ರ ದಶಕದ ಬ್ರಾಹ್ಮಣೇತರ ಚಳುವಳಿಯ ಫಲವಾಗಿ ಅಸ್ಮಿತೆ ರಾಜಕೀಯವು ಉಗಮಗೊಂಡಿತು. ಮಿಲ್ಲರ್ ಆಯೋಗವು ಮುಂದುವರಿದ ಹಾಗೂ ಹಿಂದುಳಿದ ವರ್ಗಗಳನ್ನು ಗುರುತಿಸಿದಾಗ ಹಿಂದುಳಿದ ವರ್ಗಗಳು ಅಸ್ಮಿತೆ ರಾಜಕೀಯಕ್ಕೆ ಪ್ರಯತ್ನಿಸತೊಡಗಿ ಅಲ್ಪ ಮಟ್ಟಿನ ಯಶಸ್ಸನ್ನು ಕಂಡವು. ಸ್ವಾತಂತ್ರ್ಯೋತ್ತರ ಸಮಯದಲ್ಲಿ 1970 ರ ದಶಕದಲ್ಲಿ ಡಿ. ದೇವರಾಜ ಅರಸು ಮುಖ್ಯಮಂತ್ರಿಯಾಗುವುದರೊಡನೆ ಅಸ್ಮಿತೆ ರಾಜಕಾರಣ ಕರ್ನಾಟಕದಲ್ಲಿ ಮುನ್ನೆಲೆಗೆ ಬಂದಿತು. ನಂತರದಲ್ಲಿ ರಚನೆಗೊಂಡ ವಿವಿಧ ಹಿಂದುಳಿದ ವರ್ಗಗಳ ಆಯೋಗಗಳ ವರದಿಯನ್ನು ಆಧರಿಸಿ ಅಸ್ಮಿತೆ ರಾಜಕಾರಣವು ಕರ್ನಾಟಕದಲ್ಲಿ ಬಲಗೊಳ್ಳುತ್ತಲೇ ಸಾಗಿತು. ಇತ್ತೀಚೆಗೆ ಜಾತಿಯಾಧಾರಿತ ರಾಜಕೀಯದ ಬೆಳವಣಿಗೆಯು ಜಾತಿ ಮತ್ತು ಅಸ್ಮಿತೆ ರಾಜಕೀಯದ ಪ್ರಮಾಣವನ್ನು ಅಧಿಕಗೊಳಿಸಿದೆ. ಕರ್ನಾಟಕದಲ್ಲಿ ಜಾತಿ ಮತ್ತು ಅಸ್ಮಿತೆ ರಾಜಕೀಯದ ಪ್ರಮುಖ ಪರಿಣಾಮಗಳನ್ನು ಈ ಕೆಳಗೆ

ನೀಡಲಾಗಿದ್ದು ಅವುಗಳ ಬೆಳಕಿನಲ್ಲಿ ಜಾತಿ ಹಾಗೂ ಅಸ್ಮಿತೆ ರಾಜಕೀಯದ ಕರ್ನಾಟಕದಲ್ಲಿನ ಸಂಬಂಧವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ.

1. **ಜಾತಿಯಾಧಾರಿತ ಮತದಾನ:** ಜನರು ತಮ್ಮನ್ನಾಳಲು ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆಯು ಮತದಾನ. ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿ ಮತದಾನ ಪ್ರಮುಖ ಚಟುವಟಿಕೆ. ನಿಷ್ಪಕ್ಷಪಾತ, ಯೋಗ್ಯ, ಸಮರ್ಥ ಹಾಗೂ ತಮ್ಮ ಹಿತಾಸಕ್ತಿ ಕಾಪಾಡಬಲ್ಲ ವ್ಯಕ್ತಿಯನ್ನು ಪ್ರತಿನಿಧಿಯನ್ನಾಗಿ ಹೊಂದಲು ಜನರಿಗೆ ಮತದಾನ ನೆರವಾಗುತ್ತದೆ. ಆದರೆ ಮತದಾನದ ವೇಳೆ ಜನರು ಕಣದಲ್ಲಿರುವ ತಮ್ಮ ಜಾತಿಯ ಪ್ರತಿನಿಧಿಯನ್ನು ಜಾತಿಯಾಧಾರತ ಮೇಲೆ ಆಯ್ಕೆ ಮಾಡಿಕೊಳ್ಳಲು ಮುಂದಾಗುತ್ತಾರೆ. ಒಂದು ಜಾತಿಯ ಜನರ ಮತದಾನದ ಅಧಿಕಾರ ಅದೇ ಜಾತಿಯ ಪ್ರತಿನಿಧಿ ಆಯ್ಕೆಗೆ ಬಳಕೆಯಾಗಬೇಕೆಂಬ ಭಾವನೆ ಈ ಜಾತಿಯಾಧಾರಿತ ಮತದಾನ ಪ್ರವೃತ್ತಿಯಲ್ಲಿ ಅಡಕವಾಗಿರುತ್ತದೆ. ಇದರಿಂದ ಒಬ್ಬ ಪ್ರತಿನಿಧಿ ಅಸಮರ್ಥ, ಅಯೋಗ್ಯ, ಅವಿದ್ಯಾವಂತನಾಗಿದ್ದರೂ ಜಾತಿಯ ಮತದಾರರ ಬೆಂಬಲದೊಡನೆ ಅಧಿಕಾರಕ್ಕೆ ಮುಂದಾಗುವಂತಾಗಿದೆ. ಇದರಿಂದ ಜಾತಿ ಹಾಗೂ ಅಸ್ಮಿತೆ ರಾಜಕೀಯದ ಸ್ವರೂಪವನ್ನು ಗುರುತಿಸಬಹುದಾಗಿದೆ.

2. **ಜಾತಿಯಾಧಾರಿತ ಟಿಕೆಟ್ ಹಂಚಿಕೆ:** ಸಾಮಾನ್ಯವಾಗಿ ಪ್ರತಿಯೊಂದು ರಾಜಕೀಯ ಪಕ್ಷ ಚುನಾವಣೆಯಲ್ಲಿ ಜಯಗಳಿಸಲು ಪ್ರಯತ್ನಿಸುತ್ತದೆ. ಶತಾಯ ಗತಾಯ ಬಹುಮತ ಹೊಂದಿ ಅಧಿಕಾರಕ್ಕೇರಲು ರಾಜಕೀಯ ಪಕ್ಷಗಳು ಬಯಸುತ್ತವೆ. ಹೀಗಾಗಿ ಪ್ರತಿಯೊಂದು ಮತಕ್ಷೇತ್ರದಲ್ಲಿನ ಅಧಿಕ ಸಂಖ್ಯೆಯ ಜಾತಿಯ ಮತಗಳನ್ನು ಪಡೆದು ತನ್ನ ಬಹುಮತದ ಗುರಿ ತಲುಪಲು ಮುಂದಾಗುತ್ತವೆ. ಈ ಹಿನ್ನೆಲೆಯಲ್ಲಿ ಜಾತಿಯಾಧಾರಿತ ಟಿಕೇಟ್ ಹಂಚಿಕೆ ಮಾಡುತ್ತವೆ. ಒಕ್ಕಲಿಗ, ಲಿಂಗಾಯತ, ಕುರುಬ ಮುಂತಾದ ಜಾತಿಗಳಲ್ಲಿ ಹೆಚ್ಚಿನ ಸಂಖ್ಯೆಯುಳ್ಳ ಜಾತಿಯ ವ್ಯಕ್ತಿಯನ್ನು ಚುನಾವಣಾ ಕಣಕ್ಕಿಳಿಸಲು ರಾಜಕೀಯ ಪಕ್ಷಗಳು ಮುಂದಾಗುತ್ತವೆ. ಜಾತ್ಯಾತೀತ ಸಿದ್ಧಾಂತಕ್ಕೆ ಅಂಟಿಕೊಂಡ ಕಾಂಗ್ರೆಸ್, ಜಾತ್ಯಾತೀತ ಜನತಾ ದಳ, ಭಾರತೀಯ ಕಮ್ಯುನಿಸ್ಟ ಪಕ್ಷಗಳೂ ಸಹ ಜಾತಿಯಾಧಾರಿತ ಟಿಕೇಟ್ ಹಂಚಿಕೆಗೆ ಚುನಾವಣೆಯ ವೇಳೆ ಕಟ್ಟು ಬೀಳುತ್ತವೆ. ಇದರೊಡನೆ ಪ್ರಚಾರದ ವೇಳೆ ಜಾತಿಯಾಧಾರಿತ ಮತದಾನಕ್ಕೆ ಪ್ರಚೋದನೆ ನೀಡುತ್ತವೆ. ಹೀಗಾಗಿ ರಾಜಕೀಯ ಪಕ್ಷಗಳ ಟಿಕೆಟ್ ಹಂಚಿಕೆಯು ಜಾತಿ ಹಾಗೂ ಅಸ್ಮಿತೆ ರಾಜಕೀಯದ ಅವಿನಾಭಾವ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ.

3. **ಜಾತಿ ಅವಲಂಬಿತ ರಾಜಕೀಯ ಪಕ್ಷಗಳು:** ಕರ್ನಾಟಕದಲ್ಲಿ ರಾಷ್ಟ್ರಿಯ ಮತ್ತು ಪ್ರಾದೇಶಿಕ ರಾಜಕೀಯ ಪಕ್ಷಗಳು ಜಾತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವಲಂಬಿಸಿವೆ. ಕೆಲವು ಪಕ್ಷಗಳು ನಿರಂತರವಾಗಿ ನಿರ್ದಿಷ್ಟ ಜಾತಿಯ ತಳಹದಿಯ ಮೇಲೆ ರಾಜಕಾರಣ ಮಾಡಿದರೆ ಮತ್ತೆ ಕೆಲವು ಪಕ್ಷಗಳು ಸಮಯಾನುಸಾರ ಕೆಲ ಜಾತಿಗಳ ಬೆಂಬಲದೊಡನೆ ರಾಜಕೀಯ ಮಾಡುತ್ತವೆ. ಕಾಂಗ್ರೆಸ್ ಪಕ್ಷ ಪರಿಶಿಷ್ಟ ಜಾತಿಗಳ, ಭಾರತಿಯ ಜನತಾ ಪಕ್ಷ ಲಿಂಗಾಯತ ಸೇರಿದಂತೆ ಮೇಲ್ಜಾತಿಗಳ, ಜಾತ್ಯಾತೀತ ಜನತಾ ದಳ ಒಕ್ಕಲಿಗ



ಜಾತಿಯ ನೆರವನ್ನು ಚುನಾವಣೆಗಳ ಗೆಲುವಿಗೆ ಅವಲಂಬಿಸಿವೆ. ಆಯಾ ಜಾತಿಗಳ ಓಲೈಕೆಗೆ ಮೀಸಲಾತಿ ನೀಡಿಕೆ, ಸಹಾಯ ಧನ ನೀಡಿಕೆ, ದಿನಾಚರಣೆಗಳ ಆಚರಣೆಯ ನಿರ್ಧಾರ, ಸಮಾವೇಶಗಳ ಆಯೋಜನೆ ಸರ್ವೇ ಸಾಮಾನ್ಯ ಸಂಗತಿಗಳಾಗಿವೆ.

4. **ಜಾತಿಯ ಕಲ್ಯಾಣಕ್ಕಾಗಿ ಸರ್ಕಾರಗಳ ಅಧಿಕಾರ ಚಲಾವಣೆ:** ಬಹುಮತ ತತ್ವದಂತೆ ಅಧಿಕಾರಕ್ಕೆ ಬಂದು ಸರ್ಕಾರ ನಡೆಸುವ ರಾಜಕೀಯ ಪಕ್ಷಗಳು ರಾಜ್ಯದ ಸರ್ವರ ಕಲ್ಯಾಣಕ್ಕೆ ಶ್ರಮಿಸುವುದು ಅಗತ್ಯ. ಆದರೆ ಕರ್ನಾಟಕದಲ್ಲಿನ ಸರ್ಕಾರಗಳು ತಮ್ಮ ಅಧಿಕಾರ ಚಲಾವಣೆಯ ವೇಳೆ ಸರ್ವರ ಕಲ್ಯಾಣದ ಬದಲು ನಿರ್ದಿಷ್ಟ ಜಾತಿಯ ಕಲ್ಯಾಣಕ್ಕೆ ಹೆಚ್ಚಿನ ಗಮನ ಹರಿಸುತ್ತಿರುವುದನ್ನು ಗುರುತಿಸಬಹುದಾಗಿದೆ. ಉದಾ: ಕಾಂಗ್ರೆಸ್ ಪರಿಶಿಷ್ಟ ಜಾತಿಗಳ ಮತ್ತು ಭಾರತೀಯ ಜನತಾ ಪಕ್ಷ ಮೇಲ್ವರ್ಗದ ಹಿಂದೂ ಜಾತಿಗಳ ಕಲ್ಯಾಣಕ್ಕೆ ತಾವು ಅಧಿಕಾರಕ್ಕೆ ಬಂದಾಗ ಹೆಚ್ಚು ಗಮನ ಹರಿಸುತ್ತವೆ. ಪ್ರಾದೇಶಿಕ ರಾಜಕೀಯ ಪಕ್ಷಗಳಂತೂ ಅಧಿಕಾರ ಚಲಾವಣೆಯ ವೇಳೆ ಚುನಾವಣೆಯಲ್ಲಿ ತಮ್ಮ ಕೈಹಿಡಿದ ಜಾತಿಗಳ ಕಲ್ಯಾಣಕ್ಕೆ ಶ್ರಮಿಸುತ್ತವೆ. ಸರ್ಕಾರಗಳ ಯೋಜನೆ, ನೀತಿ, ನಿರ್ಧಾರಗಳ ಮೇಲೆ ಜಾತಿಗಳು ಪ್ರಭಾವ ಬೀರುತ್ತವೆ. ಸರ್ಕಾರ ಅಥವಾ ಮಂತ್ರಿ ಮಂಡಳ ರಚಿಸುವಾಗ ಜಾತಿವಾರು ಮಂತ್ರಿ ಹುದ್ದೆಗಳನ್ನು ನೀಡಲಾಗುತ್ತದೆ. ಜೊತೆಗೆ ಖಾತೆಗಳ ಹಂಚಿಕೆಯ ಸಮಯದಲ್ಲೂ ಜಾತಿ ಪ್ರಮುಖ ಪಾತ್ರ ನಿರ್ವಹಿಸಿ ಪ್ರಬಲ ಜಾತಿಯವರಿಗೆ ಮುಖ್ಯ ಖಾತೆ ಉಳಿದವರಿಗೆ ಮುಖ್ಯವಲ್ಲದ ಕಾತೆ ನೀಡಲಾಗುತ್ತದೆ. ಇದರೊಡನೆ ರಾಜಕೀಯ ಹುದ್ದೆಗಳನ್ನೂ ಸಹ ಜಾತಿಯಾಧಾರಿತವಾಗಿ ಸರ್ಕಾರಗಳು ಭರ್ತಿ ಮಾಡುತ್ತಿವೆ. ಈ ಬೆಳವಣಿಗೆಗಳಿಂದ ಜಾತಿ ಮತ್ತು ಅಸ್ಮಿತೆ ರಾಜಕಾರಣದ ಅರಿವು ನಮಗಾಗುತ್ತದೆ.

5. **ಸ್ಥಳಿಯ ಸಂಸ್ಥೆಗಳಲ್ಲಿ ಜಾತಿಯಾಧಾರಿತ ಪ್ರಾತಿನಿಧ್ಯ:** ಕರ್ನಾಟಕದಲ್ಲಿ ಗ್ರಾಮೀಣ ಹಾಗೂ ನಗರ ಸ್ಥಳೀಯ ಸರ್ಕಾರಗಳನ್ನು ಸಂವಿಧಾನಾತ್ಮಕವಾಗಿ ಜಾರಿಗೊಳಿಸಲಾಗಿದೆ. ಆದುವರೆಗೆ ಸೀಮಿತವಾಗಿದ್ದ ಜಾತಿಯಾಧಾರಿತ ರಾಜಕೀಯವು ತನ್ನ ಜಾಲವನ್ನು ಗ್ರಾಮಗಳಿಗೂ ವಿಸ್ತರಿಸಿದೆ. ಪ್ರಸ್ತುತ ಸ್ಥಳಿಯ ಸಂಸ್ಥೆಗಳ ಅನುಷ್ಠಾನದ ಫಲವಾಗಿ ಗ್ರಾಮಗಳಲ್ಲಿ ಜಾತಿ ಪ್ರಾತಿನಿಧ್ಯ ಹಾಗೂ ನಾಯಕತ್ವದ ಸಾಧನವಾಗಿ ಮಾರ್ಪಟ್ಟಿದೆ. ಜೊತೆಗೆ ಮತದಾರರು ಹಾಗೂ ರಾಜಕೀಯ ಪ್ರಕ್ರಿಯೆಯ ಸಂಪರ್ಕ ಸಾಧನವಾಗಿ ಜಾತಿ ಗುರುತಿಸಿಕೊಂಡಿದೆ. ಫಲವಾಗಿ ಜಾತಿಯಾಧಾರಿತ ಅಸ್ಮಿತೆ ರಾಜಕೀಯವು ಆಳವಾಗಿ ಬೇರೂರುವಂತಾಗಿದೆ.

6. **ಜಾತಿಯಾಧಾರಿತ ರಾಜಕೀಯ ನಾಯಕರು:** ಭಾರತದಲ್ಲಿ ರಾಜಕೀಯ ನಾಯಕರು ಸೈದ್ಧಾಂತಿಕ ತಳಹದಿಯ ನಾಯಕರಾಗಿರದೇ ಜಾತಿ ಬೆಂಬಲವುಳ್ಳ ನಾಯಕರಾಗಿದ್ದಾರೆ. ಪ್ರತಿಯೊಬ್ಬ ನಾಯಕ ನಿರ್ದಿಷ್ಟ ಜಾತಿಗಳ ನೆರವಿನಿಂದಲೇ ರಾಜಕಾರಣದಲ್ಲಿ ನಾಯಕತ್ವ ಪ್ರತಿಪಾದಿಸುತ್ತಾನೆ. ಉದಾ: ಉತ್ತರ ಪ್ರದೇಶದಲ್ಲಿ ಕಾನ್ಶಿರಾಮ್ ಪರಿಶಿಷ್ಟ ಜಾತಿಗಳ, ಬಿಹಾರದಲ್ಲಿ ಕರ್ಪೂರಿಠಾಕುರ್ ಠಕೂರರ, ಕರ್ನಾಟಕದಲ್ಲಿ ದೇವರಾಜ್ ಅರಸು ಹಿಂದುಳಿದ ಜಾತಿಗಳ, ಬಿಹಾರದಲ್ಲಿ ಲಾಲೂ ಪ್ರಸಾದ್ ಯಾದವ್ ಯಾದವರ ಜಾತಿಗಳಿಂದ ರಾಜಕೀಯದಲ್ಲಿ ನಾಯಕರಾಗಿ ಗುರುತಿಸಿಕೊಂಡವರು. ಪ್ರಸ್ತುತ

ಕರ್ನಾಟಕದಲ್ಲಿಯೂ ಸಿದ್ದರಾಮಯ್ಯನವರಿಗೆ ಕುರುಬರ, ಬಿ. ಎಸ್. ಯಡಿಯೂರಪ್ಪನವರಿಗೆ ಲಿಂಗಾಯಿತರು, ಎಚ್. ಡಿ. ದೇವೇಗೌಡರಿಗೆ ಒಕ್ಕಲಿಗರು, ಮಲ್ಲಿಕಾರ್ಜುನ ಖರ್ಗೆಯವರಿಗೆ ಪರಿಶಿಷ್ಟ ಜಾತಿಗಳವರ ಬೆಂಬಲ ದೊರೆತು ರಾಜಕಾರಣದಲ್ಲಿ ನಾಯಕತ್ವದ ಅವಕಾಶಗಳು ಹೊಂದಿರುವುದನ್ನು ಗಮನಿಸಬಹುದಾಗಿದೆ.

• ಮೇಲಿನ ಜಾತಿ ಹಾಗೂ ರಾಜಕೀಯದ ಸಂಬಂಧವನ್ನು ಅಧ್ಯಯನ ಮಾಡಿದ ಬಳಿಕ ಸ್ವಾತಂತ್ರ್ಯೋತ್ತರ ಕರ್ನಾಟಕದ ಅಧಿಕಾರ ರಾಜಕೀಯದಲ್ಲಿ ಜಾತಿ ತನ್ನ ಬಾಹುಗಳನ್ನು ವಿಸ್ತರಿಸುತ್ತಲೇ ಬಂದಿರುವುದು ಸುಸ್ಪಷ್ಟ. ಪ್ರತಿಯೊಂದು ಜಾತಿ ತನ್ನನ್ನು ಗುರುತಿಸಿಕೊಳ್ಳಲು, ಅಸಮಾನ ಅವಕಾಶಗಳೊಂದಿಗೆ ಸಮಾನಗೊಳ್ಳಲು, ತನ್ನ ಹಿತಾಸಕ್ತಿ ಈಡೇರಿಸಿಕೊಳ್ಳಲು ಹಾಗೂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪ್ರಾತಿನಿಧ್ಯ ಹೊಂದಲು ಜಾತಿಗಳು ಪ್ರಯತ್ನಿಸುವಲ್ಲಿ ಅಸ್ಮಿತೆ ರಾಜಕೀಯದ ಪ್ರಭಾವವನ್ನು ಕಾಣಬಹುದಾಗಿದೆ. ಜಾತಿ ಹಾಗೂ ರಾಜಕೀಯ ಪ್ರತ್ಯೇಕಿಸಲಾಗದಷ್ಟು ಒಂದನ್ನೊಂದು ಅವಲಂಬಿಸಿದ್ದು ಅಧಿಕಾರ ರಚನೆಯಲ್ಲಿ ಮಹತ್ವದ ಸ್ಥಾನ ಜಾತಿಗೆ ದೊರಕುವಂತಾಗಿದೆ. ಚಿಂತಕ ರು ಹೇಳುವಂತೆ ಜಾತಿ ವ್ಯವಸ್ಥೆ ಊಳಿಗಮಾನ್ಯ ಪದ್ಧತಿ, ಬಂಡವಾಳಶಾಹಿ ಕೈಗಾರೀಕರಣ, ಗಣತಂತ್ರ ಸಂವಿಧಾನ ಹಾಗೂ ಜಾಗತೀಕರಣದ ನಡುವೆಯೂ ತನ್ನ ಅಸ್ತಿತ್ವವನ್ನು ಜಾತಿ ವ್ಯವಸ್ಥೆ ಮುಂದುವರೆಸಿಕೊಂಡು ಬರುವಲ್ಲಿ ಅಸ್ಮಿತೆ ರಾಜಕೀಯದ ಪಾತ್ರ ಅಗಾಧವಾಗಿದೆ.

## [V.] ಧರ್ಮ ಮತ್ತು ರಾಜಕೀಯ [Riligion and Politics]

ಧರ್ಮವು ವೈಯಕ್ತಿಕ ನೆಲೆಗಟ್ಟಿನ ಚಟುವಟಿಕೆಯಾದರೆ ರಾಜಕೀಯವು ಸಾರ್ವತ್ರಿಕ ಸ್ವರೂಪದ ಚಟುವಟಿಕೆ. ಇವೆರಡನ್ನೂ ಪ್ರತ್ಯೇಕಿಸದಿದ್ದರೆ ವೈಯಕ್ತಿಕ ನೀತಿ, ಆಶಯ, ದೇಟಿಕೆಗಳು ಸಾರ್ವತ್ರಿಕಗೊಳ್ಳುವ ಸಾಧ್ಯತೆ ಕಂಡುಬರುತ್ತದೆ. ಇದರಿಂದ ಕೋಮುವಾದ ತೀವ್ರವಾಗಿ ಬೆಳೆದು ಅಶಾಂತಿ ಸಮಾಜದ ಎಲ್ಲೆಡೆ ತಾಂಡವವಾಡುತ್ತದೆ. ಧರ್ಮ ಹಾಗೂ ರಾಜಕೀಯ ಅಂತರವು ಪ್ರಜಾಪ್ರಭುತ್ವದ ಯಶಸ್ಸಿಗೂ ಅತ್ಯಗತ್ಯ. ಹೀಗಾಗಿಯೇ ಭಾರತದಲ್ಲಿ ಧರ್ಮ ಹಾಗೂ ರಾಜಕೀಯಗಳ ಸಂಬಂಧವನ್ನು ಕುರಿತಾದ ಜಾತ್ಯತೀತತೆ ಹಾಗೂ ಕೋಮುವಾದದ ಚರ್ಚೆ ಪ್ರಸ್ತುತ ಮಹತ್ವ ಪಡೆದಿದೆ.

ಪ್ರಾಚೀನ ಕಾಲದಿಂದಲೂ ಧರ್ಮ ಹಾಗೂ ರಾಜಕೀಯ ಅಂತರ್ಗತ ಸಂಬಂಧ ಹೊಂದಿರುವುದಕ್ಕೆ ಭಾರತದಲ್ಲಿ ಹಲವು ನಿದರ್ಶನಗಳಿವೆ. ಕಾಲಾನುಕ್ರಮದಲ್ಲಿ ವಿವಿಧ ಧರ್ಮಗಳ ಜನರ ನಾಡಾಗಿ ಭಾರತವು ಪರಿವರ್ತನೆಗೊಂಡಿತು. ಪ್ರತಿಯೊಂದೂ ಧರ್ಮ ತನ್ನ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದ ಫಲವಾಗಿ ಅಸ್ತಿತ್ವದಲ್ಲಿರುವ ಹಿಂದೂ, ಇಸ್ಲಾಮ್, ಕ್ರೈಸ್ತ, ಜೈನ, ಬೌದ್ಧ, ಸಿಖ್ ಹಾಗೂ ಪಾರಸೀ ಧರ್ಮಗಳ ನಡುವೆ ಭಿನ್ನಾಭಿಪ್ರಾಯ ಮತ್ತು ಸಂಘರ್ಷ ಸಹಜವಾಗಿ ತಲೆದೋರಿದವು. ಅಶೋಕ ಹಾಗೂ ಅಕ್ಬರ್ ರಾಜಕೀಯ ಅಧಿಕಾರವನ್ನು ಚಲಾಯಿಸುವ ಮೂಲಕ ಆಯಾ ಕಾಲದ ವಿವಿಧ ಧರ್ಮಗಳ ನಡುವೆ ಸೌಹಾರ್ದತೆ ತರಲು ಪ್ರಯತ್ನಿಸಿದರು. ಮುಂದೆ



ಭಾರತದಲ್ಲಿ ಧರ್ಮಗಳು ತಮ್ಮ ಅಸ್ತಿತ್ವ ಕಾಪಾಡಿಕೊಳ್ಳಲು ಬ್ರಿಟಿಷರ ಕಾಲಾವಧಿಯಲ್ಲಿ ರಾಜಕೀಯವನ್ನು ಪ್ರವೇಶಿಸಲು ಮುಂದಾದವು. ರಾಷ್ಟ್ರೀಯ ಹೋರಾಟದ ಸಮಯದಲ್ಲಿ ಬಹುತೇಕ ನಾಯಕರು ಧರ್ಮ ಹಾಗೂ ರಾಜಕೀಯವನ್ನು ಪ್ರತ್ಯೇಕವೆಂದು ಪ್ರತಿಪಾದಿಸಿದರೂ ಸ್ವತಂತ್ರ್ಯದ ಹೊಸ್ತಿಲಲ್ಲಿ ದೇಶವನ್ನು ವಿಭಜನೆಗೊಳಿಸುವಷ್ಟರ ಮಟ್ಟಿಗೆ ಧರ್ಮವು ರಾಜಕೀಯವನ್ನು ಪ್ರಭಾವಿಸಿತು. ಭಾರತ ಸಂವಿಧಾನ ಜಾರಿಯೊಡನೆ ಸೆಕ್ಯುಲರಿಜಂ ಅಂದರೆ ಜಾತ್ಯತೀತತೆ ಬೆಂಬಲಿಸುವ ಮೂಲಕ ಧರ್ಮ ಹಾಗೂ ರಾಜಕೀಯ ಮೇಲ್ನೋಟಕ್ಕೆ ಪ್ರತ್ಯೇಕಗೊಂಡವು.

ಪಾಶ್ಚಿಮಾತ್ಯ ಜಾತ್ಯತೀತವಾದವು ಧರ್ಮದಿಂದ ರಾಜಕೀಯವನ್ನು ಪ್ರತ್ಯೇಕಿಸುತ್ತದೆ. ಅಲ್ಲಿ ಜನರ ಧಾರ್ಮಿಕ ವ್ಯವಹಾರ ಕುರಿತು ಸರ್ಕಾರ ಯಾವ ಕಾನೂನುಗಳನ್ನು ಮಾಡಲು ಅವಕಾಶ ಪಡೆದಿಲ್ಲ. ಆದರೆ ಭಾರತೀಯ ಜಾತ್ಯತೀತವಾದ ಧರ್ಮ ನಿರಪೇಕ್ಷತೆ ಅಂದರೆ ಯಾವ ಧರ್ಮಕ್ಕೂ ರಾಜ್ಯ ಮಹತ್ವ ನೀಡದಿರುವುದನ್ನು ಪ್ರತಿನಿಧಿಸುತ್ತದೆ. ಅಸ್ತಿತ್ವದಲ್ಲಿರುವ ಎಲ್ಲಾ ಧರ್ಮಗಳನ್ನು ಸಮಾನವಾಗಿ ಗೌರವಿಸುವ ಸರ್ವ ಧರ್ಮ ಸಮ ಭಾವವನ್ನು ಪ್ರತಿಪಾದಿಸುತ್ತದೆ. ಪ್ರತಿಯೊಂದು ಧರ್ಮದ ಗುರಿ ಒಂದೇ ಆಗಿದ್ದು ಅನುಸರಿಸುವ ಮಾರ್ಗಗಳು ಮಾತ್ರ ಭಿನ್ನವಾಗಿರುವುದರಿಂದ ಎಲ್ಲ ಧರ್ಮಗಳಿಗೆ ಸಮಾನ ಗೌರವ ನೀಡಬೇಕೆಂದು ಭಾರತೀಯ ಜಾತ್ಯತೀತವಾದ ಬಯಸುತ್ತದೆ. ಸ್ವಾಮೀ ವಿವೇಕಾನಂದ ಹಾಗೂ ಮಹಾತ್ಮಾ ಗಾಂಧಿಯವರಿಂದ ಪ್ರತಿಪಾದಿಸಿ ಪ್ರೋತ್ಸಾಹಿಸಲ್ಪಟ್ಟ ಭಾರತೀಯ ಜಾತ್ಯತೀತವಾದ ಸಕಾರಾತ್ಮಕ ಜಾತ್ಯತೀತವಾದವೆಂದು ಕರೆಯಲ್ಪಡುತ್ತದೆ.

ಭಾರತವು ಯಾವುದೇ ಧರ್ಮವನ್ನು ರಾಜ್ಯ ಧರ್ಮವೆಂದು ಪರಿಗಣಿಸಿಲ್ಲ. ಅಸ್ತಿತ್ವದಲ್ಲಿರುವ ಹಿಂದೂ, ಇಸ್ಲಾಮ್, ಜೈನ, ಬೌದ್ಧ, ಕ್ರಿಶ್ಚಿಯನ್, ಸಿಕ್ಕ್ ಹಾಗೂ ಪಾರಸಿ ಧರ್ಮಗಳನ್ನು ಸಮಾನವಾಗಿ ಗೌರವಿಸುತ್ತದೆ. ಗಮನಿಸಬೇಕಾದ ಅಂಶವೇನೆಂದರೆ ಆಯಾ ಧರ್ಮದ ಜನರ ವಿವಾಹ, ಉತ್ತರಾಧಿಕಾರ, ವಿಚ್ಛೇಧನ ಮುಂತಾದವುಗಳ ನಿಯಂತ್ರಣಕ್ಕೆ ವೈಯಕ್ತಿಕ ಕಾನೂನುಗಳನ್ನು ರಚಿಸಿ ಜಾರಿಗೊಳಿಸುತ್ತದೆ. ಭಾರತೀಯ ಜಾತ್ಯತೀತವಾದವು ಒಂದು ಗುರಿ ಮಾತ್ರವಾಗಿರದೇ ಭಾರತೀಯ ವೈವಿಧ್ಯಮಯ ಧಾರ್ಮಿಕ ಸಹಬಾಳ್ವೆಯ ಸಾಧನವೂ ಆಗಿದೆ ಎನ್ನಬಹುದು.

ಭಾರತ ಒಕ್ಕೂಟದ ಭಾಗವಾಗಿರುವ ಕರ್ನಾಟಕದಲ್ಲಿಯೂ ಧರ್ಮ ಮತ್ತು ರಾಜಕಾರಣ ಸಹಜವಾಗಿ ಪರಸ್ಪರ ಸಂಬಂಧವನ್ನು ಮೈಗೂಡಿಸಿಕೊಂಡ ಹಲವು ನಿದರ್ಶನಗಳು ನಮಗೆ ಕಂಡು ಬರುತ್ತವೆ. ಕಳೆದೆರಡು ದಶಕಗಳಲ್ಲಿ ಧರ್ಮ ಮತ್ತು ರಾಜಕಾರಣಗಳ ನಡುವಿನ ಅಂತರ್‌ಸಂಬಂಧ ಮುಕ್ತವಾಗಿ ಕರ್ನಾಟಕದಲ್ಲಿ ಗೋಚರಿಸುತ್ತಿದೆ. ಧರ್ಮಾಧಾರಿತ ಟಿಕೆಟ್ ಹಂಚಿಕೆ, ಧರ್ಮಾಧಾರಿತ ಮತ ಯಾಚನೆ, ರಾಜಕೀಯ ವ್ಯವಹಾರಗಳಲ್ಲಿ ಧಾರ್ಮಿಕ ಮುಖಂಡರ ಪ್ರಭಾವ, ಸಹಜ ಘಟನೆಗಳಿಗೆ ಧಾರ್ಮಿಕ ಬಣ್ಣ ಬಳಿದು ರಾಜಕೀಯ ಲಾಭ ಗಳಿಸುವ ಪ್ರಯತ್ನ, ರಾಜಕೀಯ

ಅನುಕೂಲಕ್ಕಾಗಿ ಪ್ರತ್ಯೇಕ ಧರ್ಮಗಳ ಘೋಷಣೆಯ ಪ್ರಯತ್ನಗಳು ಕರ್ನಾಟಕದಲ್ಲಿ ಧರ್ಮ ಹಾಗೂ ರಾಜಕಾರಣಗಳ ಅಂತರಸಂಬಂಧಕ್ಕೆ ಹಿಡಿದ ಕೈಗನ್ನಡಿಯಾಗಿವೆ.

## ಮಾದರಿ ಪ್ರಶ್ನೆಗಳು [Model Questions]:

### [A.] ಎರಡು ಅಂಕದ ಪ್ರಶ್ನೆಗಳು:

1. ಪ್ರಬಲ ಜಾತಿ ಎಂದರೇನು?
2. ಕರ್ನಾಟಕದ ಎರಡು ಪ್ರಬಲ ಜಾತಿಗಳನ್ನು ಹೆಸರಿಸಿರಿ.
3. ಕರ್ನಾಟಕದ ಯಾವ ಭಾಗಗಳಲ್ಲಿ ಒಕ್ಕಲಿಗರು ನೆಲೆಸಿದ್ದಾರೆ?
4. ಪ್ರಬಲ ಜಾತಿಗಳ ಮೂರು ಲಕ್ಷಣಗಳನ್ನು ಬರೆಯಿರಿ.
5. ಪ್ರಬಲ ಜಾತಿಗಳ ನಾಲ್ಕು ಪರಿಣಾಮಗಳನ್ನು ತಿಳಿಸಿರಿ.
6. ಹಿಂದುಳಿದ ವರ್ಗಗಳ ಚಳುವಳಿಯ ಉದ್ದೇಶವನ್ನು ತಿಳಿಸಿರಿ.
7. ಹಿಂದುಳಿದ ವರ್ಗಗಳ ಚಳುವಳಿಯ ನಾಯಕರನ್ನು ಹೆಸರಿಸಿರಿ.
8. ಮಿಲ್ಲರ್ ಸಮಿತಿಯ ಎರಡು ಶಿಫಾರಸುಗಳನ್ನು ಬರೆಯಿರಿ.
9. ಸ್ವಾತಂತ್ರ್ಯೋತ್ತರ ಸಮಯದಲ್ಲಿ ಹಿಂದುಳಿದ ವರ್ಗಗಳನ್ನು ಕುರಿತಂತೆ ರಚನೆಗೊಂಡ ಮೂರು ಆಯೋಗಗಳನ್ನು ಹೆಸರಿಸಿರಿ.
10. ಅಹಿಂದ ಎಂದರೇನು?
11. ಅಹಿಂದ ಚಳುವಳಿಯ ಉಗಮಕ್ಕೆ ಕಾರಣಗಳಾವುವು?
13. ಕೋಲಾರದ ಅಹಿಂದ ಸಮ್ಮೇಳನದ ಮೂರು ನಿರ್ಣಯಗಳನ್ನು ತಿಳಿಸಿರಿ.
14. ಅಹಿಂದ ಚಳುವಳಿಯ ಮೂರು ಉದ್ದೇಶಗಳನ್ನು ಬರೆಯಿರಿ.
15. ಅಸ್ಮಿತೆ ರಾಜಕೀಯ ಎಂದರೇನು?
16. ಕರ್ನಾಟಕದಲ್ಲಿ ಜಾತಿ ಮತ್ತು ಅಸ್ಮಿತೆ ರಾಜಕಾರಣದ ಎರಡು ಪರಿಣಾಮಗಳನ್ನು ಬರೆಯಿರಿ.
17. ಜಾತಿ ಮತ್ತು ಅಸ್ಮಿತೆ ರಾಜಕಾರಣದ ಸಂಬಂಧವನ್ನು ತಿಳಿಸಿರಿ.
18. ಧರ್ಮ ಹಾಗೂ ರಾಜಕೀಯವನ್ನು ಪ್ರತ್ಯೇಕಿಸದಿದ್ದರೆ ಏನಾಗುತ್ತದೆ?
19. ಪಾಶ್ಚಿಮಾತ್ಯ ಮತ್ತು ಭಾರತೀಯ ಜಾತ್ಯತೀತತೆಯ ವ್ಯತ್ಯಾಸವನ್ನು ಬರೆಯಿರಿ.



20. ಕರ್ನಾಟಕದಲ್ಲಿ ಧರ್ಮ ಹಾಗೂ ರಾಜಕೀಯದ ಸಂಬಂಧವನ್ನು ಸೂಚಿಸುವ ನಿದರ್ಶನಗಳಾವುವು?

### [B.] ಐದು ಅಂಕದ ಪ್ರಶ್ನೆಗಳು:

1. ಪ್ರಬಲ ಜಾತಿ ಎಂದರೇನು? ಅವುಗಳ ಲಕ್ಷಣಗಳನ್ನು ವಿವರಿಸಿರಿ.
2. ಲಿಂಗಾಯತರನ್ನು ಕುರಿತು ಟಿಪ್ಪಣಿ ಬರೆಯಿರಿ.
3. ಸ್ವಾತಂತ್ರ್ಯ ಪೂರ್ವದ ಕರ್ನಾಟಕದ ಹಿಂದುಳಿದ ವರ್ಗಗಳ ಚಳುವಳಿಯನ್ನು ಚರ್ಚಿಸಿರಿ.
4. ಕರ್ನಾಟಕದಲ್ಲಿ ರಚಿಸಲಾದ ಹಿಂದುಳಿದ ವರ್ಗಗಳ ವಿವಿಧ ಆಯೋಗಗಳನ್ನು ಪರಿಶೀಲಿಸಿರಿ.
5. ಅಹಿಂದ ಚಳುವಳಿಯ ಬೆಳವಣಿಗೆಯನ್ನು ವಿವರಿಸಿರಿ.
6. ಕರ್ನಾಟಕದಲ್ಲಿ ಜಾತಿ ಅಸ್ಮಿತೆಯ ರಾಜಕಾರಣದ ಪರಿಣಾಮಗಳನ್ನು ಚರ್ಚಿಸಿರಿ.
7. ಧರ್ಮ ಮತ್ತು ರಾಜಕೀಯ ಕುರಿತು ಟಿಪ್ಪಣಿ ಬರೆಯಿರಿ.

### [C.] ಹತ್ತು ಅಂಕದ ಪ್ರಶ್ನೆಗಳು:

1. ಕರ್ನಾಟಕದಲ್ಲಿನ ಪ್ರಬಲ ಜಾತಿಗಳನ್ನು ವಿವರಿಸಿರಿ.
2. ಮೈಸೂರು ಸಂಸ್ಥಾನದಲ್ಲಿನ ಹಿಂದುಳಿದ ವರ್ಗಗಳ ಚಳುವಳಿಯನ್ನು ಪರಿಶೀಲಿಸಿರಿ.
3. ಅಹಿಂದ ಚಳುವಳಿಯ ಉದ್ದೇಶ ಮತ್ತು ಬೆಳವಣಿಗೆಯನ್ನು ವಿವರಿಸಿರಿ.
4. ಅಸ್ಮಿತೆ ರಾಜಕೀಯ ಎಂದರೇನು? ಜಾತಿ ಮತ್ತು ಅಸ್ಮಿತೆ ರಾಜಕೀಯದ ಪರಿಣಾಮಗಳನ್ನು ಚರ್ಚಿಸಿರಿ.
5. ಧರ್ಮ ಹಾಗೂ ರಾಜಕೀಯದ ನಡುವಿನ ಅಂತರಸಂಬಂಧವನ್ನು ಪರಿಶೀಲಿಸಿರಿ.

ಅಧ್ಯಾಯ 8:

# ಕರ್ನಾಟಕದಲ್ಲಿ ಪ್ರಾದೇಶಿಕವಾದ

## [Regionalism in Karnataka].

**ಪ್ರಸ್ತಾವನೆ [Introduction]:**

ಭಾರತೀಯ ಪ್ರಜಾಪ್ರಭುತ್ವವು ಕಾಲಾಂತರದಲ್ಲಿ ವಿವಿಧ ಸವಾಲುಗಳ ಎದುರಿಸುತ್ತಾ ಬಂದಿದೆ. ಈ ಸವಾಲುಗಳನ್ನು ಕಠಿಣ ಪ್ರಯತ್ನದ ಮೂಲ ನಿರ್ಮೂಲನೆಗೊಳಿಸಲು ಅಥವಾ ನಿಯಂತ್ರಿಸಲು ಭಾರತವು ನಿರಂತರವಾ ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ಅನಕ್ಷರತೆ, ಬಡತನ, ಕೋಮುವಾದ, ಜಾತಿಯ ಭಯೋತ್ಪಾದನೆ, ಭ್ರಷ್ಟಾಚಾರ ಪ್ರಧಾನವಾಗಿದ್ದು ಅವುಗಳ ಸಾಲಿಗೆ ಪ್ರಾದೇಶಿಕವಾದವ ಒಂದು ಸವಾಲಾಗಿ ಪರಿಣಮಿಸಿದೆ. ಸಹಜವಾಗಿ ಭಾರತ ಒಕ್ಕೂಟದ ರಾಜ್ಯಗಳಲ್ಲಿಯ ಪ್ರಾದೇಶಿಕವಾದದ ಪ್ರತಿಬಿಂಬವನ್ನು ಗುರುತಿಸಬಹುದಾಗಿದೆ. ಫಲವಾಗಿ ಭಾರತ ಒಕ್ಕೂಟ ಇತರ ರಾಜ್ಯಗಳಂತೆ ಕರ್ನಾಟಕವೂ ಪ್ರಾದೇಶಿಕತಾವಾದದಿಂದ ಹೊರಗುಳಿದಿಲ್ಲ. ಪ್ರಸ್ತು ಅಧ್ಯಾಯದಲ್ಲಿ ಪ್ರಾದೇಶಿಕವಾದದ ಪರಿಕಲ್ಪನೆ, ಪ್ರಾದೇಶಿಕ ಅಸಮತೋಲನ ನಿವಾರಣೆ ಕರ್ನಾಟಕದಲ್ಲಿ ಜಾರಿಗೊಂಡ ನಂಜುಂಡಪ್ಪ ವರದಿ ಮತ್ತು ಕರ್ನಾಟಕದಲ್ಲಿನ ಪ್ರಾದೇ ಅಸಮಾನತೆ ಕುರಿತಂತೆ ಬೆಳಕು ಚೆಲ್ಲಲಾಗಿದೆ.

**[I.] ಪ್ರಾದೇಶಿಕವಾದದ ಪರಿಕಲ್ಪನೆ [Concept of Regionalism]:**

**[A.] ಪ್ರಾದೇಶಿಕವಾದದ ಅರ್ಥ [Meaning of Regionalism]** ಸಾಮಾನ್ಯ ಅರ್ಥದಲ್ಲಿ ವ್ಯಕ್ತಿಯೊಬ್ಬ ತಾನು ನೆಲೆಸಿರುವ ಪ್ರದೇಶವನ್ನು ಕುರಿತಂ ಹೊಂದಿರುವ ಅತಿಯಾದ ಪ್ರೇಮವು ಪ್ರಾದೇಶಿಕವಾದವೆನಿಸುತ್ತದೆ. ರಾಜ್ಯಶಾಸ್ತ್ರೀಯ ಭಾಷೆಯಲ್ಲಿ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಹಿತಾಸಕ್ತಿಗಳಿಗೆ ಒತ್ತು ನೀಡುವ ಸಿದ್ಧಾಂತವೇ ಪ್ರಾದೇಶಿಕವಾದ ಎನಿಸುತ್ತದೆ. ಇನ್ನು ಸಿ. ಸ್ಮಿತ್ ಪ್ರಕಾರ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದೊಳಗಿನ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸಂಸ್ಥೆಗಳ ಸಂಬಂಧ ಮತ್ತು ಕಾರ್ಯಗಳನ್ನು ಪ್ರತಿಪಾದಿಸುವುದೇ ಪ್ರಾದೇಶಿಕವಾದವಾಗಿದೆ.

ಪ್ರಾದೇಶಿಕವಾದವು ಕೇಂದ್ರೀಕರಣಕ್ಕೆ ವಿರುದ್ಧವಾದ ಸಿದ್ಧಾಂತವಾಗಿದೆ. ರಾಜಕೀಯವಾಗಿ ಸ್ವತಂತ್ರವಾದ ಘಟಕವನ್ನು ಸೃಷ್ಟಿಸುವ ಉದ್ದೇಶವನ್ನು ಪ್ರಾದೇಶಿಕವಾದ



ಹೊಂದಿಲ್ಲವಾದರೂ ನಿರ್ದಿಷ್ಟ ಪ್ರದೇಶದ ಸ್ಥಳೀಯ ಅಗತ್ಯಗಳನ್ನು ಪೂರೈಸುವ ಬೇಡಿಕೆಗಳನ್ನು ಹೊಂದಿರುತ್ತದೆ. ನಿರ್ದಿಷ್ಟ ಭೌಗೋಳಿಕ ಪ್ರದೇಶವನ್ನು ಘಟಕವನ್ನಾಗಿಸಿಕೊಂಡು ಅದರ ವರ್ತನೆಯನ್ನು ಪ್ರಾದೇಶಿಕವಾದ ಅಭ್ಯಸಿಸುತ್ತದೆ. ನಿರ್ದಿಷ್ಟ ಪ್ರದೇಶದ ಹಿತಾಸಕ್ತಿಯನ್ನು ರಕ್ಷಿಸುವ ಮೂಲಕ ಅದರ ಜನರ ಕಲ್ಯಾಣವನ್ನು ಉತ್ತೇಜಿಸುತ್ತದೆ. ಅತಿಯಾದ ಪ್ರಾದೇಶಿಕತೆಯು ದೇಶದ ಏಕತೆ ಮತ್ತು ಅಕಂಡತೆಗೆ ಬೆದರಿಕೆಯನ್ನು ಒಡ್ಡುತ್ತದೆ.

**[B.] ಕರ್ನಾಟಕದಲ್ಲಿ ಪ್ರಾದೇಶಿಕವಾದದ ಕಾರಣಗಳು ಮತ್ತು ಪರಿಣಾಮಗಳು [Causes and Impacts of Regionalism in Karnataka]:**

ಕರ್ನಾಟಕದಲ್ಲಿ ವಿವಿಧ ಜನಾಂಗ, ಭಾಷೆ, ಸಂಸ್ಕೃತಿಗೆ ಸೇರಿದ ಜನರು ವಾಸವಾಗಿದ್ದಾರೆ. ಈ ವೈವಿಧ್ಯತೆಯು ಕರ್ನಾಟಕದಲ್ಲಿ ಪ್ರಾದೇಶಿಕತೆಯನ್ನು ಹುಟ್ಟು ಹಾಕುವ ಮೂಲಕ ರಾಜ್ಯದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ರಂಗಗಳನ್ನು ಪ್ರಭಾವಿಸಿದೆ. ಗಮನಾರ್ಹ ಅಂಶವೇನೆಂದರೆ, ಕರ್ನಾಟಕದಲ್ಲಿ 19 ನೇ ಶತಮಾನದ ಕೊನೆಯ ದಶಕಗಳಲ್ಲಿ ಪ್ರಾದೇಶಿಕವಾದ ಜನ್ಮ ತಾಳಿತು. ಅನನ್ಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಆಧರಿಸಿದ್ದ ಕರ್ನಾಟಕದ ಪ್ರಾದೇಶಿಕತೆಯು ಏಕೀಕರಣ ಚಳುವಳಿಯ ಮೂಲಕ ಬಲಗೊಳ್ಳುತ್ತಾ ಸಾಗಿ 1956 ರಲ್ಲಿ ಭಾಷಾಧಾರಿತ ನವ ಮೈಸೂರು ರಾಜ್ಯದ ಉದಯದೊಂದಿಗೆ ಪ್ರಬಲಗೊಂಡಿತು. ಪ್ರಸ್ತುತ ಕರ್ನಾಟಕದ ಪ್ರಾದೇಶಿಕವಾದವು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ, ಮಲೆನಾಡು ಕರ್ನಾಟಕ ಎಂಬ ಆಯಾಮದೊಡನೆ ಜೀವಂತವಾಗಿದೆ. ಈ ಕೆಳಗಿನ ಅಂಶಗಳು ಕರ್ನಾಟಕದಲ್ಲಿನ ಪ್ರಾದೇಶಿಕವಾದಕ್ಕೆ ಪ್ರಧಾನ ಕಾರಣಗಳೆನಿಸಿವೆ.

1. **ಭಾಷಾ ಮತ್ತು ಸಾಂಸ್ಕೃತಿಕ ವೈವಿಧ್ಯತೆ:** ಕರ್ನಾಟಕದಲ್ಲಿ ಕನ್ನಡ ಪ್ರಧಾನ ಭಾಷೆಯಾದರೂ ತುಳು, ಕೊಂಕಣಿ, ಕೊಡವ ಮುಂತಾದ ಭಾಷೆಗಳನ್ನಾಡುವ ಜನರನ್ನು ಕಾಣಬಹುದಾಗಿದೆ. ಜೊತೆಗೆ ಕರ್ನಾಟಕದ ಗಡಿ ಪ್ರದೇಶದಲ್ಲಿ ನೆರೆ ರಾಜ್ಯದ ಭಾಷೆಯ ಪ್ರಭಾವದಿಂದಾಗಿ ತೆಲಗು, ತಮಿಳು, ಮರಾಠಿಯಂತಹ ಇತರ ಭಾಷೆ ಮಾತನಾಡುವ ಜನರೂ ಕಂಡು ಬರುತ್ತಾರೆ. ಭಾಷೆಯೊಡನೆ ಸಹಜವಾಗಿ ಆಹಾರ, ಉಡುಗೆ, ಆಚರಣೆಯಂತಹ ಸಾಂಸ್ಕೃತಿಕ ವೈವಿಧ್ಯತೆ ಕಂಡುಬರುತ್ತದೆ. ಇದರಿಂದಾಗಿ ಕರ್ನಾಟಕದಲ್ಲಿ ಪ್ರಾದೇಶಿಕವಾದ ಆಳವಾಗಿ ಬೇರೂರುವಂತಾಗಿದೆ.

2. **ಗಡಿ ವಿವಾದಗಳು:** 1956 ರಲ್ಲಿ ರಾಜ್ಯಗಳ ಪುನರ್‌ವಿಂಗಡಣೆಯ ನಂತರ ವಿಶಾಲ ಮೈಸೂರು ರಾಜ್ಯ ಅಂದರೆ ಇಂದಿನ ಕರ್ನಾಟಕ ಅಸ್ತಿತ್ವಕ್ಕೆ ಬಂತು. ಈ ಪುನರ್ ವಿಂಗಡಣೆ ವೇಳೆಯಲ್ಲಿ ಕರ್ನಾಟಕ ಮತ್ತು ನೆರೆಯ ರಾಜ್ಯಗಳ ನಡುವೆ ಭೌಗೋಳಿಕ ಗಡಿ ಕುರಿತು ಭಿನ್ನಾಭಿಪ್ರಾಯ ತಲೆದೋರಿ ಇಂದಿಗೂ ಮುಂದುವರಿಯುತ್ತಿವೆ. ಉದಾ: ಕರ್ನಾಟಕ ಹಾಗೂ ಮಹಾರಾಷ್ಟ್ರಗಳ ನಡುವಿನ ಬೆಳಗಾವಿ ವಿವಾದ ಮತ್ತು ಕರ್ನಾಟಕ ಹಾಗೂ

ಕೇರಳಗಳ ನಡುವಿನ ಕಾಸರಗೋಡು ವಿವಾದ. ಇಂತಹ ವಿವಾದಗಳು ಕನ್ನಡಿಗ
ಪ್ರಾದೇಶಿಕತೆಯನ್ನು ಬಲಗೊಳಿಸುತ್ತಾ ಸಾಗಿವೆ.

3. **ಆರ್ಥಿಕ ಅಸಮಾನತೆ:** ಕರ್ನಾಟಕದ ಎಲ್ಲ ಪ್ರದೇಶಗಳೂ ಸಮಾನವಾಗಿ ಆರ್ಥಿ ಪ್ರಗತಿಯನ್ನು ಹೊಂದಿಲ್ಲ. ಕೆಲ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗ ಅಧಿಕವಾಗಿದ್ದರೆ ಕರಾವಳಿ ಮತ್ತು ಬಯಲುಪ್ರದೇಶಗಳಲ್ಲಿ ಸಮರ್ಪಕವಾಗಿಲ್ಲ. ಜೊತೆ ಕೈಗಾರಿಕೆಗಳು ದಕ್ಷಿಣ ಭಾಗದಲ್ಲಿದ್ದಷ್ಟು ಪ್ರಮಾಣದಲ್ಲಿ ಉತ್ತರ ಕರ್ನಾಟಕ ಸ್ಥಾಪನೆಗೊಂಡಿಲ್ಲ. ಇಂತಹ ಆರ್ಥಿಕ ಅವಕಾಶಗಳ ಅಸಮಾನತೆಯು ಪ್ರಾದೇಶಿಕವಾದ ಬಲಗೊಳಿಸಿ ಪ್ರತ್ಯೇಕತಾ ಚಳುವಳಿಗೆ ನಾಂದಿ ಹಾಡುತ್ತವೆ. ಉದಾ: ಉತ್ತರ ಕರ್ನಾಟಕದ ಪ್ರತ್ಯೇಕತಾ ಮನೋಭಾವದ ಬೆಳವಣಿಗೆ.

4. **ರಾಜಕೀಯ ಪಕ್ಷಗಳು ಮತ್ತು ನಾಯಕರು:** ವಿವಿಧ ರಾಜಕೀಯ ಪಕ್ಷಗ ಚುನಾವಣೆಯಲ್ಲಿ ಅಧಿಕ ಮತ ಗಳಿಸುವ ಕಾರಣಕ್ಕೆ ವಿವಿಧ ತಂತ್ರಗಳನ್ನು ರೂಪಿಸುತ್ತವೆ. ಪೈಕಿ ನಿರ್ದಿಷ್ಟ ಪ್ರದೇಶದಲ್ಲಿ ಸಾಧನೆ ತೋರಲು ಆ ಪ್ರದೇಶವು ಇತರ ಪ್ರದೇಶಗಳಿಗಿಂತ ಹಿ ಮತ್ತು ಏಕೆ ಹಿಂದುಳಿದಿದೆ ಎಂಬುದನ್ನು ಮನವರಿಕೆ ಮಾಡಿಕೊ ಪರಿಹಾರೋಪಾಯಗಳನ್ನು ಪ್ರತಿಪಾದಿಸುತ್ತದೆ. ಇದರೊಡನೆ ಅಧಿಕಾರದಾಹಿ ಅಥವಾ ಮಹತ್ವಾಕಾಂಕ್ಷಿ ರಾಜಕೀಯ ನಾಯಕರು ತಮ್ಮ ರಾಜಕೀಯ ಲಾಭಕ್ಕಾಗಿ ನಿರ್ದಿಷ್ಟ ಪ್ರದೇಶ ಪ್ರತ್ಯೇಕತೆಗೆ ನಿರಂತರವಾಗಿ ಒತ್ತಾಯಿಸುವ ಮೂಲಕ ಪ್ರಾದೇಶಿಕವಾದವ ಬಲಗೊಳಿಸುತ್ತಾರೆ. ಉದಾ: ದಿವಂಗತ ಉಮೇಶ ಕತ್ತಿ ಆಗಾಗ ಉತ್ತರ ಕರ್ನಾಟಕದ ಕುರಿ ಮಾತನಾಡುವ ಮೂಲಕ ಪ್ರಾದೇಶಿಕವಾದವನ್ನು ಉತ್ತರ ಕರ್ನಾಟಕದಲ್ಲಿ ಬೆಳೆಸ ಕಾರಣವಾದುದು.

5. **ಆಡಳಿತಾತ್ಮಕ ಧೋರಣೆಗಳು:** ಸರ್ಕಾರದ ಆಡಳಿತಾತ್ಮಕ ಧೋರಣೆಯೂ ಸ ಕರ್ನಾಟಕದಲ್ಲಿ ಪ್ರಾದೇಶಿಕವಾದದ ಬೆಳವಣಿಗೆಗೆ ಕಾರಣವಾಗಬಹುದಾಗಿದೆ. ಆರ್ಥಿ ಸಂಪನ್ಮೂಲಗಳ ಹಂಚಿಕೆ ವಿಚಾರದಲ್ಲಿ ತಾರತಮ್ಯ ಧೋರಣೆ ತಾಳಿದರೆ ಸಹಜವಾ ಅಸಮಾನತೆ ಉಂಟಾಗುತ್ತದೆ. ಇದರೊಡನೆ ಪ್ರಮುಖ ಕೈಗಾರಿಕೆ ಅಥವಾ ಸಂಸ್ಥೆಗ ಸ್ಥಾಪನೆಯ ವೇಳೆಯಲ್ಲಿ ಪ್ರಾದೇಶಿಕವಾದ ಮೂಡಿ ಬರುತ್ತದೆ. ಉದಾ: ಐ. ಐ. ಟಿ ಸ್ಥಾಪನೆ ವಿಚಾರದಲ್ಲಿ ಹೈದರಾಬಾದ್ ಕರ್ನಾಟಕ ಮತ್ತು ಮುಂಬೈ ಕರ್ನಾಟಕದ ಜನರಲ್ಲಿ ಪ್ರಾದೇಶಿಕವಾದ ಜಾಗೃತವಾದುದು.

6. **ಸಂಪನ್ಮೂಲಗಳ ಹಂಚಿಕೆ:** ಪ್ರಾದೇಶಿಕವಾದವು ಕರ್ನಾಟಕದಲ್ಲಿ ಸಂಪನ್ಮೂಲಗಳ ಕಾರಣದಿಂದ ಬಲಗೊಳ್ಳಬಹುದಾಗಿದೆ. ಭಾರತ ಒಕ್ಕೂಟದ ಇತರ ರಾಜ್ಯಗಳಿಗೆ ದೊರೆ ಸಂಪನ್ಮೂಲಗಳು ಕರ್ನಾಟಕಕ್ಕೆ ದೊರೆಯದಿದ್ದಾಗ ಪ್ರಾದೇಶಿಕವಾದ ಕನ್ನಡಿಗರಲ್ಲಿ ಉಗಮಗೊಳ್ಳುತ್ತದೆ. ಜೊತೆಗೆ ಜಲ ಸಂಪನ್ಮೂಲಗಳ ಹಂಚಿಕೆ ಕುರಿತಂತೆಯೂ



ಪ್ರಾದೇಶಿಕವಾದ ಉಲ್ಬಣಗೊಳ್ಳುತ್ತದೆ. ಉದಾ: ಕಾವೇರಿ ನದಿಯ ಜಲ ವಿವಾದದಿಂದ ಕರ್ನಾಟಕದಲ್ಲಿ ಪ್ರಾದೇಶಿಕವಾದ ಬಲಗೊಂಡಿದುದು.

7. **ಜಾತಿ ವ್ಯವಸ್ಥೆ:** ನಿರ್ದಿಷ್ಟ ಜಾತಿಯ ಜನರು ಅಧಿಕವಾಗಿ ನೆಲೆಸಿರುವ ಪ್ರದೇಶವು ಪ್ರಾದೇಶಿಕವಾದಕ್ಕೆ ಕಾರಣವಾಗುತ್ತದೆ. ಉದಾ: ಒಕ್ಕಲಿಗರು ಅಧಿಕವಾಗಿರುವ ದಕ್ಷಿಣ ಕರ್ನಾಟಕ ಮತ್ತು ಲಿಂಗಾಯತರು ಅಧಿಕವಾಗಿ ನೆಲೆಸಿರುವ ಉತ್ತರ ಹಾಗೂ ಮಧ್ಯ ಕರ್ನಾಟಕದಲ್ಲಿ ಪ್ರಾದೇಶಿಕವಾದ ನೆಲೆಗೊಂಡಿದುದು.

8. **ಪ್ರಾತಿನಿಧ್ಯತೆಯ ಕೊರತೆ:** ವಿವಿಧ ಕ್ಷೇತ್ರಗಳಲ್ಲಿ ಸಮಾನ ಪ್ರಾತಿನಿಧ್ಯ ಒಂದು ಪ್ರದೇಶಕ್ಕೆ ದೊರಕದಿದ್ದಾಗ ಪ್ರಾದೇಶಿಕತಾವಾದ ಮುನ್ನೆಲೆಗೆ ಬರುತ್ತದೆ. ಮಂತ್ರಿಮಂಡಳದ ರಚನೆಯ ಸಮಯದಲ್ಲಿ ದಕ್ಷಿಣ ಕರ್ನಾಟಕಕ್ಕೆ ಅಧಿಕ ಸ್ಥಾನ ದೊರೆತು ಉತ್ತರ ಕರ್ನಾಟಕಕ್ಕೆ ಕಡಿಮೆ ಮಂತ್ರಿ ಸ್ಥಾನಗಳು ಲಭ್ಯವಾದರೆ ಪ್ರಾದೇಶಿಕತಾವಾದ ಗರಿಗೆದರುತ್ತದೆ. ಅಂತೆಯೇ ವಿವಿಧ ಯೋಜನೆಗಳು, ರೈಲ್ವೆ ಮಾರ್ಗಗಳು, ಅನುದಾನ ನೀಡಿಕೆಯ ಪ್ರಮಾಣಗಳು ಪ್ರಾದೇಶಿಕವಾದವನ್ನು ಪ್ರಾತಿನಿಧ್ಯದ ಕಾರಣಕ್ಕೆ ಬಲಗೊಳಿಸುತ್ತದೆ.

ಈ ಮೇಲಿನ ಅಂಶಗಳು ಕರ್ನಾಟಕದಲ್ಲಿನ ಪ್ರಾದೇಶಿಕವಾದದ ಪ್ರಮುಖ ಕಾರಣಗಳಾಗಿದ್ದು ಪ್ರಾದೇಶಿಕವಾದವು ಕರ್ನಾಟಕದ ಸಾಮಾಜಿಕ, ಆರ್ಥಿಕ, ರಾಜಕೀಯ ರಂಗಗಳು ಸೇರಿದಂತೆ ವಿವಿಧ ಕ್ಷೇತ್ರಗಳ ಮೇಲೆ ತನ್ನದೇಯಾದ ಸಕಾರಾತ್ಮಕ ಮತ್ತು ನಕಾರಾತ್ಮಕ ಪರಿಣಾಮಗಳನ್ನು ಉಂಟು ಮಾಡುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

1. **ಸಾಂಸ್ಕೃತಿಕ ಸಂರಕ್ಷಣೆ:** ಕರ್ನಾಟಕದ ಸಾಂಸ್ಕೃತಿಕ ಅಸ್ಮಿತೆಯನ್ನು ಮುಂದುವರೆಸುವಲ್ಲಿ ಪ್ರಾದೇಶಿಕವಾದದ ಪಾತ್ರ ಅಪಾರ. ಇದರೊಡನೆ ರಾಜ್ಯದಲ್ಲಿ ನೆಲೆಸಿರುವ ವಿವಿಧ ಸಮುದಾಯಗಳ ಅನನ್ಯ ಸಾಂಸ್ಕೃತಿಕ ಕುರುಹುಗಳಾದ ಭಾಷೆ, ಸಂಪ್ರದಾಯ, ಕಲೆ, ಸಾಹಿತ್ಯಗಳನ್ನು ಪೋಷಿಸಲು ಪ್ರಾದೇಶಿಕವಾದ ಸಹಕಾರಿಯಾಗಿದೆ. ಉದಾ: ಕೊಡವ ಸಂಸ್ಕೃತಿ ಇಂದಿಗೂ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಪ್ರಾದೇಶಿಕವಾದ ನೆರವಾದದ್ದು.

2. **ನಿರ್ಲಕ್ಷಿತ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ:** ಪ್ರಾದೇಶಿಕವಾದವು ಹಿಂದುಳಿದ ಪ್ರದೇಶಗಳ ಜನರಲ್ಲಿ ಹೋರಾಟದ ಕಿಚ್ಚನ್ನು ಬೆಳೆಸುತ್ತದೆ. ಇದರಿಂದ ಸರ್ಕಾರವು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮುಂದಾಗುತ್ತದೆ. ಜೊತೆಗೆ ಸಂಪನ್ಮೂಲಗಳು ಸಮಾನವಾಗಿ ಹಂಚಿಕೆಯಾಗುವಂತೆ ಮಾಡುತ್ತದೆ. ಇದರ ಫಲವಾಗಿ ಕಡೆಗಣಿಸಲ್ಪಟ್ಟ ಪ್ರದೇಶಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ.

3. **ರಾಜಕೀಯ ಪ್ರಾತಿನಿಧ್ಯದ ಹೆಚ್ಚಳ:** ಪ್ರಾದೇಶಿಕವಾದದ ಪರಿಣಾಮ ಅಧಿಕಾರ ಚಲಾವಣೆಯ ಹುದ್ದೆಗಳು ಒಂದೇ ಪ್ರದೇಶಕ್ಕೆ ಸೀಮಿತವಾಗದಂತೆ ನೋಡಿಕೊಳ್ಳಲಾಗುತ್ತದೆ.

ಮಂತ್ರಿ ಸ್ಥಾನಗಳ ಹಂಚಿಕೆ, ಉದ್ಯೋಗವಕಾಶಗಳ ನೀಡಿಕೆ, ಯೋಜನೆಗಳ ಜಾರಿಯ ವೇಳೆಯಲ್ಲಿ ಎಲ್ಲ ಪ್ರದೇಶಗಳಿಗೆ ಸಮಾನವಕಾಶ ದೊರೆಯುವಂತಾಗುತ್ತದೆ.

4. **ಪ್ರತ್ಯೇಕ ರಾಜ್ಯ ರಚನೆಗೆ ಒತ್ತಾಯ:** ಹಿಂದುಳಿದ ಪ್ರದೇಶಗಳಲ್ಲಿ ಪ್ರಾದೇಶಿಕವಾದ ಉಗಮಗೊಂಡು ಪ್ರತ್ಯೇಕಗೊಂಡರೆ ಪ್ರಗತಿ ಹೊಂದಬಹುದೆಂಬ ಕಾರಣಕ್ಕೆ ಪ್ರತ್ಯೇಕ ರಾಜ್ಯದ ಬೇಡಿಕೆ ಮುಂದಿಡುತ್ತವೆ. ಇದರಿಂದ ಚಿಕ್ಕ ರಾಜ್ಯಗಳ ಸೃಷ್ಟಿ ಅನಿವಾರ್ಯವಾಗುತ್ತದೆ. ಉದಾ: ಕರ್ನಾಟಕದಲ್ಲಿ ಕೊಡಗು ಮತ್ತು ತುಳು ನಾಡಿನ ಪ್ರತ್ಯೇಕತೆಯ ಕೂಗು.

5. **ಹಿಂಸಾತ್ಮಕ ಚಟುವಟಿಕೆಗಳ ಬೆಳವಣಿಗೆ:** ಪ್ರಾದೇಶಿಕವಾದದಿಂದ ಪ್ರೇರಿತರಾದವರು ತಮ್ಮ ಪ್ರದೇಶಕ್ಕೆ ವಿರುದ್ಧವಾದ ಪ್ರದೇಶಕ್ಕೆ ಸೇರಿದ ಜನರ ಮೇಲೆ ಹಿಂಸೆಯನ್ನು ಎಸಗಲು ಮುಂದಾಗುತ್ತಾರೆ. ಉದಾ: ಕನ್ನಡಿಗರು ಮತ್ತು ಮರಾಠಿಗರು ಪರಸ್ಪರ ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿದುದು.

6. **ದೇಶದ ಸಮಗ್ರತೆ ಮತ್ತು ಐಕ್ಯತೆಗೆ ಬೆದರಿಕೆ:**

7. **ರಾಜಕೀಯ ಅಸ್ಥಿರತೆ:**

8. **ಉಪ ಪ್ರಾದೇಶಿಕತೆಗಳಿಗೆ ಚಾಲನೆ:**

## [II.] ಡಾ. ನಂಜುಂಡಪ್ಪ ವರದಿ [Dr. Nanjundappa Report]:

ಈಗಾಗಲೇ ತಾವು ತಿಳಿದಿರುವಂತೆ, 1956 ರಲ್ಲಿ ಮೈಸೂರು ರಾಜ್ಯವು ರಾಜ್ಯಗಳ ಪುನರ್‌ವಿಂಗಡಣಾ ಆಯೋಗದ ಸಲಹೆಯಂತೆ ಪುನರ್‌ಸಂಘಟಿತಗೊಂಡು ವಿಶಾಲ ಮೈಸೂರು ರಾಜ್ಯವಾಗಿ ಅಸ್ತಿತ್ವಕ್ಕೆ ಬಂದಿತು. ವಿಶಾಲ ಮೈಸೂರು ರಾಜ್ಯದ ರಚನೆಯೊಡನೆ ಪ್ರಾದೇಶಿಕ ಅಸಮತೋಲನದ ಕೂಗು ಕಾಣಿಸಿಕೊಂಡಿತು. ಮೈಸೂರು ಅಂದರೆ ಕರ್ನಾಟಕ ರಾಜ್ಯದ ಕೆಲ ಪ್ರದೇಶಗಳು ಮುಂದುವರಿದರೆ ಹಲವು ಪ್ರದೇಶಗಳು ಹಿಂದುಳಿದಿವೆ ಎಂಬ ಭಾವನೆ ಆಯಾ ಪ್ರದೇಶದ ಜನರಲ್ಲಿ ಬೇರೂರತೊಡಗಿತು. ಈ ಪ್ರಾದೇಶಿಕ ಅಸಮತೋಲನ ಹೋಗಲಾಡಿಸಲು ಕರ್ನಾಟಕ ಸರ್ಕಾರ ಮುಂದಾಗಿ ಹಲವು ಸಮಿತಿಗಳನ್ನು ರಚಿಸಿದರೂ ಫಲಪ್ರದವಾಗಲಿಲ್ಲ. ಪ್ರಾದೇಶಿಕ ಅಸಮತೋಲನ ನಿವಾರಣೆಯ ಬೇಡಿಕೆ ಕ್ರಮೇಣ ಬಲಗೊಂಡಿತು. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯ ನಿವಾರಣೆಯ ಬೇಡಿಕೆಯು 1999 ರ ಹೊತ್ತಿಗೆ ಚಳುವಳಿಯ ಸ್ವರೂಪವನ್ನು ತಾಳಿತು.

### [A.] ನಂಜುಂಡಪ್ಪ ಸಮಿತಿಯ ರಚನೆ ಹಾಗೂ ಕಾರ್ಯಾಚರಣೆ [Composition and Functioning of Nanjundappa Committee]:

ಕರ್ನಾಟಕ ಸರ್ಕಾರವು ಕರ್ನಾಟಕದಲ್ಲಿನ ವಿವಿಧ ಪ್ರದೇಶಗಳ ಅಸಮಾನತೆಯನ್ನು ವಿವರವಾಗಿ ಅಭ್ಯಸಿಸಿ ವರದಿ ನೀಡಲು ಏಪ್ರಿಲ್ 2000 ರಲ್ಲಿ ಸಮಿತಿಯೊಂದನ್ನು ರಚಿಸಿತು. ಖ್ಯಾತ ಅರ್ಥಶಾಸ್ತ್ರಜ್ಞ ಮತ್ತು ರಾಜ್ಯ ಯೋಜನಾ ಆಯೋಗದ ಮಾಜಿ ಅಧ್ಯಕ್ಷರಾಗಿದ್ದ ಡಾ. ಡಿ. ಎಂ. ನಂಜುಂಡಪ್ಪನವರು ಈ ಸಮಿತಿಯ ನೇತೃತ್ವ ವಹಿಸಿದ್ದರು. ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತ



ಪ್ರಾಧಿಕಾರ ಸಮಿತಿ ಎಂದು ನಂಜುಂಡಪ್ಪ ಸಮಿತಿಯನ್ನು ಗುರುತಿಸಲಾಗುತ್ತದೆ. ಈ ಸಮಿತಿಯು ಹಿಂದೆ ರಾಷ್ಟ್ರ ಹಾಗೂ ಇತರೆ ರಾಜ್ಯಗಳಲ್ಲಿ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ರಚಿಸಲಾಗಿದ್ದ ಸಮಿತಿಗಳ ವರದಿಗಳನ್ನು ಅಧ್ಯಯನ ಮಾಡಿತು . ಈ ಪೈಕಿ ಕೇಂದ್ರ ಯೋಜನಾ ಆಯೋಗದ ವರದಿ , ರಾಜ್ಯ ಯೋಜನಾ ಆಯೋಗದ ವರದಿ , ಪಾಂಡೇ ಸಮಿತಿಯ ವರದಿ , ಚಕ್ರವರ್ತಿ ಸಮಿತಿಯ ವರದಿ ಹಾಗೂ ದಾಂಡೇಕರ್ ಸಮಿತಿಯ ವರದಿಗಳು ಪ್ರಧಾನವಾಗಿದ್ದವು. ಈ ವಿವಿಧ ಸಮಿತಿಗಳು ವೈವಿಧ್ಯಮಯ ಮಾನದಂಡಗಳನ್ನು ಆಧರಿಸಿ ತಮ್ಮ ವರದಿಯನ್ನು ತಯಾರಿಸಿದ್ದವಾದರೂ ಆ ಮಾನದಂಡಗಳು ಎಲ್ಲಾ ಅಂಶಗಳನ್ನು ಒಳಗೊಂಡಿರಲಿಲ್ಲ.

ಜೊತೆಗೆ ಬಹುತೇಕ ಸಮಿತಿಗಳು ಜಿಲ್ಲೆಗಳನ್ನು ಘಟಕಗಳನ್ನಾಗಿಸಿಕೊಂಡು ತಮ್ಮ ವರದಿ ನೀಡಿದ್ದವು . ಆದರೆ, ನಂಜುಂಡಪ್ಪ ಸಮಿತಿಯು ಒಂದು ಜಿಲ್ಲೆಯಲ್ಲಿನ ಭಿನ್ನತೆ ಹಾಗೂ ಅನನ್ಯತೆಗಳನ್ನು ಪರಿಗಣಿಸದೇ ಜಿಲ್ಲೆಗಿಂತಲೂ ಚಿಕ್ಕ ಘಟಕವಾದ ತಾಲ್ಲೂಕುಗಳನ್ನು ಅಭಿವೃದ್ಧಿಯ ಮಾಪನಕ್ಕೆ ಗಣನೆಗೆ ತೆಗೆದುಕೊಂಡಿತು . ಜೊತೆಗೆ ಕೃಷಿ, ಕೈಗಾರಿಕೆ, ವ್ಯಾಪಾರ, ಮೂಲಭೂತ ಸೌಕರ್ಯ, ಜನರ ಜೀವನಮಟ್ಟ ಸೇರಿದಂತೆ 35 ಸೂಚಿಗಳನ್ನು ಮೈಗೂಡಿಸಿಕೊಂಡ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ (CCDI) ಆಧರಿಸಿ ಕರ್ನಾಟಕದ ತಾಲ್ಲೂಕುವಾರು ಪ್ರದೇಶಗಳ ಅಭಿವೃದ್ಧಿಯನ್ನು ಅಧ್ಯಯನ ನಡೆಸಲು ಮುಂದಾಯಿತು. ಒಂದುವರೆ ವರ್ಷಗಳ ಅಧ್ಯಯನದ ಬಳಿಕ 34 ಅಧ್ಯಾಯಗಳುಳ್ಳ ತನ್ನ ವರದಿಯನ್ನು ನಂಜುಂಡಪ್ಪನವರ ಸಮಿತಿ ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿತು. ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಾಂಕ ಹೊಂದಿರದ ತಾಲ್ಲೂಕುಗಳನ್ನು ಹಿಂದುಳಿದ ಪ್ರದೇಶಗಳೆಂದು ಪರಿಗಣಿಸಿದ್ದ ಸಮಿತಿಯು ಕರ್ನಾಟಕದ 175 ತಾಲ್ಲೂಕುಗಳ ಪೈಕಿ 114 ತಾಲ್ಲೂಕುಗಳು ಹಿಂದುಳಿದಿವೆ ಎಂಬುದಾಗಿ ತನ್ನ ವರದಿಯಲ್ಲಿ ತಿಳಿಸಿತ್ತು. ಮುಂದುವರಿದು, ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಿದ ನಂಜುಂಡಪ್ಪನವರ ಸಮಿತಿಯು ಅವುಗಳ ಪ್ರದೇಶವನ್ನು ಮರಳಿ ಮೂರು ಪ್ರಕಾರಗಳಲ್ಲಿ ವಿಂಗಡಿಸಿತ್ತು. ಅವುಗಳೆಂದರೆ

1. **ಹಿಂದುಳಿದ ಪ್ರದೇಶ:** ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಾಂಕದಲ್ಲಿ 89 ರಿಂದ 99 ರವರೆಗಿನ ತಾಲ್ಲೂಕುಗಳು ಹಿಂದುಳಿದ ಪ್ರದೇಶಗಳೆಂದು ಸಮಿತಿ ವರ್ಗೀಕರಿಸಿತ್ತು. ಈ ಬಗೆಯ ಪ್ರದೇಶವನ್ನು 35 ತಾಲ್ಲೂಕುಗಳಲ್ಲಿ ಗುರುತಿಸಲಾಗಿತ್ತು.

2. **ಅತಿ ಹಿಂದುಳಿದ ಪ್ರದೇಶ:** ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಾಂಕದಡಿ 80 ರಿಂದ 88 ರವರೆಗಿನ ತಾಲ್ಲೂಕು ಪ್ರದೇಶಗಳನ್ನು ಅತಿ ಹಿಂದುಳಿದ ಪ್ರದೇಶಗಳೆಂದು ಸಮಿತಿ ನಿರ್ಧರಿಸಿತ್ತು. ಇಂತಹ ತಾಲ್ಲೂಕುಗಳ ಸಂಖ್ಯೆ 40 ಆಗಿತ್ತು.

3. **ಅತ್ಯಂತ ಹಿಂದುಳಿದ ಪ್ರದೇಶ:** ಸಮಗ್ರ ಅಭಿವೃದ್ಧಿ ಸೂಚ್ಯಾಂಕದಲ್ಲಿ 50 ರಿಂದ 79 ರ ನಡುವಿನ ತಾಲ್ಲೂಕುಗಳ ಪ್ರದೇಶವು ಈ ಪ್ರಕಾರದಲ್ಲಿ ಸೇರಿಕೊಳ್ಳುತ್ತವೆ. ತೀರಾ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ 39 ಎಂಬುದಾಗಿ ಸಮಿತಿ ಅಭಿಪ್ರಾಯಪಟ್ಟಿತ್ತು.

ಅಧ್ಯಯನದ ಆಧಾರದಿಂದ, ನಂಜುಂಡಪ್ಪ ಸಮಿತಿಯು ಕರ್ನಾಟಕದ ನಾಲ್ಕು ಕಂದಾಯ ವಿಭಾಗಗಳ ಪೈಕಿ ಗುಲ್ಬರ್ಗ ಹಾಗೂ ಬೆಳಗಾವಿ ವಿಭಾಗಗಳಲ್ಲಿ 59 ಮತ್ತು ಬೆಂಗಳೂರು ಹಾಗೂ ಮೈಸೂರು ವಿಭಾಗಗಳಲ್ಲಿ 55 ತಾಲ್ಲೂಕುಗಳನ್ನು ಹಿಂದುಳಿದ ಪ್ರದೇಶಗಳ ಪಟ್ಟಿಗೆ ಸೇರಿಸಿತು. ಮುಂದುವರಿದು, ಆಯಾ ಪ್ರದೇಶಗಳ ಹಿಂದುಳಿದಿರುವಿಕೆಗೆ ಕಾರಣವಾದ ಅಂಶಗಳನ್ನು ಸ್ಪಷ್ಟವಾಗಿ ಗುರುತಿಸುವ [illegible] ನಿವಾರಿಸುವುದರ ಅಗತ್ಯತೆಯನ್ನು ಒತ್ತಿಹೇಳಿತು.

[B.] ನಂಜುಂಡಪ್ಪ ವರದಿಯ ಶಿಫಾರಸುಗಳು [Recommendations of Nanjundappa Report]:

ಪ್ರಾದೇಶಿಕ ಅಸಮತೋಲನದ ನಿವಾರಣೆಗೆ ರಚನೆಗೊಂಡಿದ್ದ ನಂಜುಂಡಪ್ಪ ಸಮಿತಿಯು ಕೆಳಗಿನ ಶಿಫಾರಸುಗಳನ್ನು ತನ್ನ ವರದಿಯಲ್ಲಿ ಪ್ರತಿಪಾದಿಸಿತ್ತು.

1. ಕರ್ನಾಟಕ ಸರ್ಕಾರವು ವಿಭಾಗ, ಜಿಲ್ಲೆ ಮತ್ತು ತಾಲ್ಲೂಕುಗಳ ನಡುವಿನ ಪ್ರಾದೇಶಿಕ ಅಸಮತೋಲನದ ನಿವಾರಣೆಗೆ ಪ್ರಾದೇಶಿಕ ನೀತಿಯನ್ನು ರಚಿಸಬೇಕು.
2. ರಾಜ್ಯ ಮಟ್ಟದ ಅಭಿವೃದ್ಧಿಯ ಸೂಚ್ಯಂಕಕ್ಕೆ ಪ್ರತಿ ಜಿಲ್ಲೆ ಮತ್ತು ತಾಲ್ಲೂಕುಗಳ ಅಭಿವೃದ್ಧಿಯ ಸೂಚ್ಯಂಕದ ಪ್ರಮಾಣ ಸಮಾನವಾಗಿರುವಂತೆ ನೋಡಿಕೊಳ್ಳಲು ವಿಶೇಷ ಅಭಿವೃದ್ಧಿ ಯೋಜನೆಗಳನ್ನು ಕರ್ನಾಟಕ ಸರ್ಕಾರವು ರೂಪಿಸಬೇಕು.
3. ದಕ್ಷಿಣ ಮತ್ತು ಉತ್ತರ ಕರ್ನಾಟಕಗಳ ನಡುವೆ ಪ್ರಾದೇಶಿಕ ಅಸಮಾನತೆ ಪ್ರಧಾನವಾಗಿರುವ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿಯ ಸಾಮರ್ಥ್ಯವಿದ್ದು, ಅದರ ಸದುಪಯೋಗಕ್ಕೆ ಹೊಸ ಯೋಜನೆಗಳನ್ನು ಸರ್ಕಾರ ರೂಪಿಸಬೇಕು.
4. ಪ್ರಾಥಮಿಕ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳನ್ನು ಖಾಸಗೀಕರಣಗೊಳಿಸದೇ ಸರ್ಕಾರವೇ ನಿರ್ವಹಿಸಬೇಕು.
5. ಸರ್ಕಾರವು ಅನುದಾನ ನೀಡಿಕೆ ಅಥವಾ ಸಂಪನ್ಮೂಲಗಳ ಹಂಚಿಕೆ ವೇಳೆಯಲ್ಲಿ ದಕ್ಷಿಣ ಕರ್ನಾಟಕಕ್ಕೆ ಶೇಕಡಾ 40 ರಷ್ಟು ಮತ್ತು ಉತ್ತರ ಕರ್ನಾಟಕಕ್ಕೆ ಶೇಕಡಾ 60 ರಷ್ಟು ಅನುಪಾತದಲ್ಲಿ ಅನುದಾನ ನೀಡಬೇಕು.
6. ಹಿಂದುಳಿದ ಪ್ರದೇಶಗಳ ಕೈಗಾರಿಕಾ ಪ್ರಗತಿಗೆ ಸರ್ಕಾರವು ಅಧಿಕ [illegible] ಸ್ಥಾಪಿಸುವುದರ ಜೊತೆಗೆ ವೃತ್ತಿ ಶಿಕ್ಷಣ ಸಂಸ್ಥೆಗಳ ಆರಂಭಕ್ಕೆ ಕ್ರಮ ಕೈಗೊಳ್ಳಬೇಕು.
7. 2002 ರಿಂದ 2010 ರ ನಡುವಿನ ಎಂಟು ವರ್ಷಗಳ ಕಾಲಾವಧಿಯಲ್ಲಿ ಸರ್ಕಾರವು ಹಿಂದುಳಿದ 114 ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗೆ 16000 ಕೋಟಿಗಳ ವೆಚ್ಚದಲ್ಲಿ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಬೇಕು.



8. ರಾಜ್ಯದಲ್ಲಿ 6 ಗ್ರಾಮೀಣಾಭಿವೃದ್ಧಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕಲ್ಲದೇ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ರೈತ ತರಬೇತಿ ಕೇಂದ್ರವನ್ನು ಸ್ಥಾಪಿಸಬೇಕು.
9. ಗುಲ್ಬರ್ಗ ಅಂದರೆ ಗುಲ್ಬರ್ಗದಲ್ಲಿ ಕೃಷಿ, ಹಣಕಾಸು ಮತ್ತು ಅಭಿವೃದ್ಧಿ ನಿಗಮವೊಂದನ್ನು ರಚಿಸಲು ಕ್ರಮ ಕೈಗೊಳ್ಳಬೇಕು.
10. ಉತ್ತರ ಕರ್ನಾಟಕದಲ್ಲಿ ಅಂತರ್‌ಜಲದ ಹೆಚ್ಚಳಕ್ಕೆ ಗಮನ ಹರಿಸಬೇಕು. ಈ ನಿಟ್ಟಿನಲ್ಲಿ ಕೆರೆಗಳ ಭರ್ತಿಗೆ ಅಗತ್ಯವಾದ ಕ್ರಮ ಕೈಗೊಳ್ಳಬೇಕು.
11. ಬೆಳಗಾವಿ, ಹುಬ್ಬಳ್ಳಿ, ಮೈಸೂರು, ಕಲ್ಬುರ್ಗಿಗಳಲ್ಲಿ ವಿಮಾನ ನಿಲ್ದಾಣಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕು.
12. ಧಾರವಾಡದಲ್ಲಿರುವ ಮಾನಸಿಕ ರೋಗಿಗಳ ಆಸ್ಪತ್ರೆಯನ್ನು ಬೆಂಗಳೂರಿನ ನಿಮ್ಹಾನ್ಸ್‌ಗೆ ಸಮಾನವಾಗಿ ಅಭಿವೃದ್ಧಿಪಡಿಸಬೇಕು. ಇದಕ್ಕೆ ಅಗತ್ಯವಾದ ಆರ್ಥಿಕ ಬೆಂಬಲವನ್ನು ಸರ್ಕಾರವೇ ಒದಗಿಸಬೇಕು.
13. ಪ್ರತಿ ಜಿಲ್ಲೆಯಲ್ಲಿ ಒಂದು ವೈದ್ಯಕೀಯ ಕಾಲೇಜು ಸ್ಥಾಪನೆಗೆ ಸರ್ಕಾರ ಮುಂದಾಗಬೇಕು.
14. ಹಿಂದುಳಿದ 114 ತಾಲ್ಲೂಕುಗಳಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗ ಖಾತ್ರಿ ಯೋಜನೆಗಳನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು.
15. ಕರ್ನಾಟಕ ಲೋಕಸೇವಾ ಆಯೋಗ, ವಿಶ್ವ ವಿದ್ಯಾಲಯಗಳ ಉಪ ಕುಲಪತಿ, ಸರ್ಕಾರಿ ಉದ್ಯೋಗದಂತಹ ಸಾರ್ವಜನಿಕ ಹುದ್ದೆಗಳಲ್ಲಿ ಎಲ್ಲ ಪ್ರದೇಶದವರಿಗೆ ಅವಕಾಶ ಕಲ್ಪಿಸಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.
16. ಸಂವಿಧಾನದ 371 ನೇ ವಿಧಿಯಡಿ ಕಲ್ಯಾಣ ಕರ್ನಾಟಕದ ಪ್ರದೇಶಗಳ ಅಭಿವೃದ್ಧಿಗಾಗಿ ಹಣವನ್ನು ಮೀಸಲಿಡಲು ಮುಂದಾಗಬೇಕು.
17. ಸರ್ಕಾರದ ಸಂಪನ್ಮೂಲವು ಆಯಾ ತಾಲ್ಲೂಕಿನ ಹಿಂದುಳಿದಿರುವಿಕೆಯ ಪ್ರಮಾಣವನ್ನು ಆಧರಿಸಿರಬೇಕೇ ಹೊರತು ಸಮಾನವಾಗಿ ವಿತರಣೆಗೊಳ್ಳದಂತೆ ನೋಡಿಕೊಳ್ಳಬೇಕು.
18. ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಲು ವಿಜಯಪುರ ಮತ್ತು ಹಾಸನ ಅಥವಾ ಶಿವಮೊಗ್ಗದಲ್ಲಿ ಮಹಿಳಾ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಬೇಕು.

[C.] ನಂಜುಂಡಪ್ಪ ವರದಿಯ ಅನುಷ್ಠಾನ [Implimentation of Nanjundappa Report]:

ಕರ್ನಾಟಕ ಸರ್ಕಾರವು 2006/07 ನೇ ಸಾಲಿನಿಂದ ನಂಜುಂಡಪ್ಪ ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಮುಂದಾಯಿತು.

1. ಸಮಿತಿಯು ಸೂಚಿಸಿದಂತೆ 16000 ಕೋಟಿಗಳಷ್ಟು ಹಣವನ್ನು ಪ್ರತಿ ವರ್ಷಕ್ಕೆ ಎರಡು ಸಾವಿರ ಕೋಟಿಯಂತೆ ಎಂಟು ವರ್ಷಗಳಲ್ಲಿ ಜಾರಿಗೊಳಿಸಲು ನಿರ್ಧರಿಸಿತು.

2013/14 ನೇ ಸಾಲಿನ ವೇಳೆಗೆ 13565 ಕೋಟಿಗಳಷ್ಟು ಹಣವನ್ನು ಸರ್ಕಾರ ವ್ಯಯ ಮಾಡಿದೆ.

2. ಸಂವಿಧಾನದ 371 ನೇ ವಿಧಿಯಡಿ ವಿಶೇಷ ಸ್ಥಾನಮಾನ ಕಲ್ಪಿಸುವ ಮೂಲಕ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಕ್ರಮಗಳನ್ನು ಜಾರಿಗೊಳಿಸಿದೆ. ಶಿಕ್ಷಣ ಮತ್ತು ಉದ್ಯೋಗವಕಾಶಗಳಲ್ಲಿ ಆ ಪ್ರದೇಶದ ಜನರಿಗೆ ಪ್ರಾಶಸ್ತ್ಯ ಒದಗಿಸಲಾಗಿದೆ.

3. ಸಮಿತಿಯ ಆಶಯದಂತೆ ವಿಜಯಪುರದಲ್ಲಿ ಮಹಿಳಾ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಿ ಅಕ್ಕ ಮಹಾದೇವಿ ವಿಶ್ವ ವಿದ್ಯಾಲಯವೆಂದು ನಾಮಕರಣಗೊಳಿಸಲಾಗಿದೆ.

4. ಹುಬ್ಬಳ್ಳಿ ಮತ್ತು ಗುಲ್ಬರ್ಗಗಳಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಿ ಸ್ಥಳೀಯ ಯುವಕರಿಗೆ ಉದ್ಯೋಗವಕಾಶ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

5. ಧಾರವಾಡ ಮತ್ತು ಗುಲ್ಬರ್ಗದಲ್ಲಿ ಉಚ್ಚ ನ್ಯಾಯಾಲಯದ ಪೀಠಗಳನ್ನು ಸ್ಥಾಪಿಸಿ ನ್ಯಾಯದಾನ ಪ್ರಕ್ರಿಯೆಯು ಕೈಗೆಟುಕುವಂತೆ ಶ್ರಮಿಸಲಾಗಿದೆ.

ಈ ಮೇಲೆ ಪ್ರಸ್ತಾಪಿಸಲಾದ ನಂಜುಂಡಪ್ಪ ಸಮಿತಿಯ ಹಲವು ಶಿಫಾರಸುಗಳನ್ನು ಅನುಷ್ಠಾನಗೊಳಿಸಿದ್ದರೂ ಪ್ರಾದೇಶಿಕ ಅಸಮಾನತೆ ಕರ್ನಾಟಕದಲ್ಲಿ ಇಂದಿಗೂ ಜೀವಂತವಾಗಿದೆ. ವಿವಿಧ ಪ್ರದೇಶಗಳ ನಡುವಿನ ಅಂತರ ಕಡೆಗಣಿಸಬಹುದಾದ ಪ್ರಮಾಣಕ್ಕಿಂತಲೂ ಅಧಿಕವಾಗಿದ್ದು ಪ್ರಾದೇಶಿಕ ಅಸಮಾನತೆಯ ಕೂಗು ಹಿಂದಿಗಿಂತ ಕ್ರಮಗಳ ನಡುವೆಯೂ ಬಲಗೊಳ್ಳುತ್ತಾ ಸಾಗಿರುವುದು ವಿಷಾದದ ಸಂಗತಿ.

[III.] ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನಗಳು [Regional Disparities in Karnataka]:

ವಿವಿಧ ಪ್ರದೇಶಗಳ ನಡುವಿನ ಅಂತರ, ವ್ಯತ್ಯಾಸ, ಹೊಂದಾಣಿಕೆಯಿಲ್ಲದ ಅಥವಾ ಸಮಾನತೆಯಿಲ್ಲದ ಸ್ಥಿತಿಯನ್ನು ಪ್ರತಿಪಾದಿಸಲು ರಿಜನಲ್ ಡಿಸ್‌ಪ್ಯಾರಿಟಿ ಪದವನ್ನು ಆಂಗ್ಲ ಭಾಷೆಯಲ್ಲಿ ಪ್ರಯೋಗಿಸಲಾಗುತ್ತದೆ. ಕನ್ನಡದಲ್ಲಿ ರಿಜನಲ್ ಡಿಸ್‌ಪ್ಯಾರಿಟಿಗೆ ಸಮಾನವಾಗಿ ಪ್ರಾದೇಶಿಕ ಅಸಮತೋಲನ ಪದವನ್ನು ನಾವು ಬಳಸಬಹುದಾಗಿದೆ. ಸರಳಾರ್ಥದಲ್ಲಿ ರಾಜ್ಯವೊಂದು ಏಕಕಾಲದಲ್ಲಿ ಅಭಿವೃದ್ಧಿ ಹೊಂದಿದ ಹಾಗೂ ಹಿಂದುಳಿದ ಪ್ರದೇಶಗಳನ್ನು ಹೊಂದಿರುವ ಸನ್ನಿವೇಶವನ್ನು ಪ್ರಾದೇಶಿಕ ಅಸಮತೋಲನ ಎನ್ನಬಹುದಾಗಿದೆ. ಪ್ರಾದೇಶಿಕ ಅಸಮತೋಲನವು ರಾಜ್ಯವೊಂದರ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯನ್ನು ಪ್ರಭಾವಿಸುವ ವಿದ್ಯಮಾನವಾಗಿದ್ದು ರಾಜ್ಯದ ಏಕತೆಯನ್ನು ಧಕ್ಕೆಗೊಳಪಡಿಸಬಲ್ಲ ಸಾಮರ್ಥ್ಯ ಪಡೆದಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಅಸಮಾನತೆಗೆ ತುರ್ತಾಗಿ ಸ್ಪಂದಿಸಬೇಕಾದ ಅನಿವಾರ್ಯತೆ ಆಯಾ ರಾಜ್ಯಗಳಿಗೆ ಎದುರಾಗುತ್ತದೆ. ಕರ್ನಾಟಕವೂ ಸಹ ಪ್ರಾದೇಶಿಕ ಅಂತರ, ವ್ಯತ್ಯಾಸ, ಹೊಂದಾಣಿಕೆಯಿಲ್ಲದ ಅಥವಾ ಸಮಾನವಲ್ಲದ ಸ್ಥಿತಿಯಿಂದ ಅಂದರೆ ಪ್ರಾದೇಶಿಕ ಅಸಮತೋಲನದಿಂದ ಭಾರತದ ಇತರ ರಾಜ್ಯಗಳಂತೆ ಬಳಲುತ್ತಿದೆ.



ಸಾಮಾನ್ಯವಾಗಿ ರಾಜ್ಯವೊಂದರ ಎಲ್ಲ ಪ್ರದೇಶಗಳು ಸಮಾನ ಅಭಿವೃದ್ಧಿಯನ್ನು ಹೊಂದಿರುವುದಿಲ್ಲ. ನೈಸರ್ಗಿಕ ಅಥವಾ ನಿರ್ಲಕ್ಷಿತ ಕಾರಣಗಳಿಂದಾಗಿ ಆಯಾ ರಾಜ್ಯದ ಕೆಲ ಪ್ರದೇಶಗಳು ಉಳಿದ ಪ್ರದೇಶಗಳಿಗಿಂತ ಹಿಂದುಳಿದಿರುತ್ತವೆ. ಆದರೆ, ನಿರ್ದಿಷ್ಟ ರಾಜ್ಯವೊಂದರ ಕೆಲ ಪ್ರದೇಶಗಳು ಮಾತ್ರ ಅಭಿವೃದ್ಧಿ ಸಾಧಿಸುವಲ್ಲಿ ಯಶಸ್ವಿಯಾಗಿರುತ್ತವೆ. ಈ ಬೆಳವಣಿಗೆಯು ರಿಜನಲ್ ಡಿಸ್‌ಪ್ಯಾರಿಟಿ ಅಂದರೆ ಪ್ರಾದೇಶಿಕ ಅಸಮತೋಲನಕ್ಕೆ ಕಾರಣವಾಗುತ್ತದೆ. ಈ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಸಂಬಂಧಿಸಿದಂತೆ ಕರ್ನಾಟಕವು ಡಾ. ಡಿ. ಎಂ. ನಂಜುಂಡಪ್ಪ ಸಮಿತಿಯನ್ನು ರಚಿಸಿ ಆ ಸಮಿತಿಯು ನೀಡಿದ ಶಿಫಾರಸುಗಳನ್ನು ಜಾರಿಗೊಳಿಸಲು ಮುಂದಾಯಿತು. ಈ ಪ್ರಯತ್ನದ ನಡುವೆಯೂ ಪ್ರಾದೇಶಿಕ ಅಸಮತೋಲನದಿಂದ ಕರ್ನಾಟಕವು ಮುಕ್ತವಾಗಿಲ್ಲ. ಕರ್ನಾಟಕದಲ್ಲಿರುವ 30 ಜಿಲ್ಲೆಗಳ ಪೈಕಿ ಬೆಂಗಳೂರು ನಗರ ಜಿಲ್ಲೆ ಅತ್ಯಂತ ಅಭಿವೃದ್ಧಿ ಹೊಂದಿದ್ದರೆ ಏಳು ಜಿಲ್ಲೆಗಳು ಅಭಿವೃದ್ಧಿ ಹೊಂದಿದ, ನಾಲ್ಕು ಜಿಲ್ಲೆಗಳು ಮುಂದುವರಿದ ಮತ್ತು ಒಂಬತ್ತು ಜಿಲ್ಲೆಗಳು ಹಿಂದುಳಿದ ಸ್ಥಿತಿಯನ್ನು ಇಂದಿಗೂ ಎದುರಿಸುತ್ತಿವೆ. ಫಲವಾಗಿ ಕರ್ನಾಟಕವು ಪ್ರಾದೇಶಿಕ ಅಸಮತೋಲನದಿಂದ ಬಳಲುವಂತಾಗಿದೆ. ಕೆಳಗೆ ಪ್ರಸ್ತಾಪಿಸಲಾಗಿರುವ ವಿವಿಧ ಅಂಶಗಳಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳ ವ್ಯತ್ಯಾಸಗಳನ್ನು ಆಧರಿಸಿ ನಾವು ಕರ್ನಾಟಕದ ಪ್ರಾದೇಶಿಕ ಅಸಮತೋಲನದ ಸ್ವರೂಪವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ.

**1. ಜಿಲ್ಲಾವಾರು ತಲಾದಾಯ:** ತಲಾದಾಯವು ವ್ಯಕ್ತಿಯ ಜೀವನಮಟ್ಟವನ್ನು ನಿರ್ಧರಿಸುತ್ತದೆ. ತಲಾದಾಯ ಅಧಿಕವಾಗಿರುವ ವ್ಯಕ್ತಿಗಳಿರುವ ಜಿಲ್ಲೆಗಳ ಆದಾಯವೂ ಅಧಿಕಗೊಂಡು ಅಭಿವೃದ್ಧಿ ಕಂಡು ಬರುತ್ತದೆ. ಆದರೆ, ತಲಾದಾಯ ತನ್ಮೂಲಕ ಜಿಲ್ಲಾದಾಯಗಳು ಕರ್ನಾಟಕದಲ್ಲಿ ಸಮಾನವಾಗಿಲ್ಲ. ಬಳ್ಳಾರಿ, ಬೆಂಗಳೂರು ನಗರ, ದಾವಣಗೆರೆ, ಕೊಡಗು ಮುಂತಾದ ಕೆಲ ಜಿಲ್ಲೆಗಳ ಆದಾಯವು ಅಲ್ಲಿನ ತಲಾದಾಯದಿಂದಾಗಿ ಉನ್ನತವಾಗಿತ್ತು ಅವು ಅಭಿವೃದ್ಧಿ ಹೊಂದಿವೆ. ಅಂತೆಯೇ ಹಾವೇರಿ, ಗದಗ, ಕೋಲಾರ, ಬೀದರ್, ಚಾಮರಾಜ ನಗರದಂತಹ ಜಿಲ್ಲೆಗಳ ಜನರ ತಲಾದಾಯ ಕಡಿಮೆಯಾಗಿದ್ದು ಆ ಜಿಲ್ಲೆಗಳು ಅಭಿವೃದ್ಧಿ ಹೊಂದಲಾಗುತ್ತಿಲ್ಲ. ಫಲವಾಗಿ ಕರ್ನಾಟಕದ ಹಲವು ಜಿಲ್ಲೆಗಳ ನಡುವೆ ಆದಾಯದ ಅಸಮಾನ ಹಂಚಿಕೆ ಅಸ್ತಿತ್ವದಲ್ಲಿದ್ದು ಪ್ರಾದೇಶಿಕ ಅಸಮತೋಲನಕ್ಕೆ ದಾರಿಯಾಗಿದೆ. ಉದಾ: 2022/23 ನೇ ಸಾಲಿನ ಆರ್ಥಿಕ ಸಮೀಕ್ಷೆಯ ಪ್ರಕಾರ ಬೆಂಗಳೂರು ನಗರವು ಆದಾಯ ಗಳಿಕೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದರೆ ಗುಲ್ಬರ್ಗವು ಕೊನೆಯ ಸ್ಥಾನದಲ್ಲಿದೆ.

**2. ಜಿಲ್ಲಾವಾರು ಗಾತ್ರ ಮತ್ತು ಜನಸಂಖ್ಯೆ:** ಕರ್ನಾಟಕದ ವಿವಿಧ ಜಿಲ್ಲೆಗಳ ಗಾತ್ರ ಏಕರೂಪವಾಗಿಲ್ಲ. ಕೆಲ ಜಿಲ್ಲೆಗಳು ವಿಶಾಲ ಗಾತ್ರವನ್ನು ಅಂದರೆ ಭೂಪ್ರದೇಶವನ್ನು ಹೊಂದಿದ್ದರೆ ಕೆಲವು ಜಿಲ್ಲೆಗಳು ಚಿಕ್ಕ ಗಾತ್ರದಿಂದ ಕೂಡಿವೆ. ಉದಾ: ಗುಲ್ಬರ್ಗ ಜಿಲ್ಲೆಯು ಅತಿ ದೊಡ್ಡ ಭೂಪ್ರದೇಶವುಳ್ಳ ಜಿಲ್ಲೆಯಾಗಿದ್ದು ಬೆಂಗಳೂರು ನಗರ ಚಿಕ್ಕ ಗಾತ್ರ ಪಡೆದಿರುವುದು. ಆಡಳಿತಾತ್ಮಕ ಅನುಕೂಲಕ್ಕಾಗಿ ಅಧಿಕ ವಿರೋಧ ಎದುರಾಗದ ಜಿಲ್ಲೆಗಳನ್ನು ವಿಭಜಿಸಿ

[illegible] ... 96.21 ಲಕ್ಷ ... [illegible]

[illegible]

[illegible] ... 2011 ... [illegible]

[illegible]

[illegible]

6. ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆ: ಕರ್ನಾಟಕದ ವಿವಿಧ ಪ್ರದೇಶಗಳು ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯ ವಿಚಾರದಲ್ಲಿ ಅಸಮಾನತೆಯಿಂದ ಕೂಡಿರುವುದು ಕಂಡುಬರುತ್ತದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ವಿಚಾರದಲ್ಲಿ ರಾಜ್ಯದ ಎಲ್ಲ ಪ್ರದೇಶಗಳು ಸಮಾನವಾದ ಪಡೆಯಲು ವಿಫಲಗೊಂಡಿವೆ. ಕೆಲ ಪ್ರದೇಶಗಳಲ್ಲಿ ಅಧಿಕ ರಸ್ತೆ ಮತ್ತು ರೈಲು ಜಾಲ ಹರಡಿಕೊಂಡಿದ್ದರೆ ಮತ್ತೆ ಕೆಲ ಪ್ರದೇಶಗಳಲ್ಲಿ ಬೆರಳೆಣಿಕೆಯಷ್ಟು ರಸ್ತೆಗಳನ್ನು ಕಾಣಬಹುದಾಗಿದೆ. ಗಡಿ ಜಿಲ್ಲೆಗಳು, ಹಿಂದುಳಿದ ಪ್ರದೇಶಗಳು, ಕರಾವಳಿ ಪ್ರದೇಶಗಳಲ್ಲಿ ರಾಜ್ಯದ ಇತರ ಪ್ರದೇಶಕ್ಕಿಂತ ಕಡಿಮೆ ಸಾರಿಗೆ ಮತ್ತು ಸಂಪರ್ಕ ಜಾಲ ಕಂಡು ಬರುತ್ತದೆ. ಈ ವ್ಯತ್ಯಾಸವೂ ಸಹ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನಕ್ಕೆ ಹಾದಿ ಮಾಡಿಕೊಟ್ಟಿದೆ.

7. ನೀರಾವರಿ ಸೌಲಭ್ಯ: ಕರ್ನಾಟಕದ ಕೆಲ ಪ್ರದೇಶಗಳು ಉತ್ತಮ ನೀರಾವರಿ ಸೌಲಭ್ಯವನ್ನು ಪಡೆದರೆ ಹಲವು ಪ್ರದೇಶಗಳು ನೀರಾವರಿಯಿಂದ ವಂಚಿತಗೊಂಡಿವೆ. ಕಾವೇರಿ, ಕೃಷ್ಣಾ, ತುಂಗಭದ್ರಾ ನದಿ ಪಾತ್ರದಲ್ಲಿರುವ ಪ್ರದೇಶಗಳಲ್ಲಿ ನೀರಾವರಿಗೆ ಅಧಿಕ ಸೌಲಭ್ಯವನ್ನು ನದಿ ಪಾತ್ರದಿಂದ ದೂರವಿರುವ ಕೆಲ ಪ್ರದೇಶಗಳಿಗೆ ಕುಡಿಯುವ ನೀರಿಗೂ ಕಷ್ಟ ಎದುರಾಗಿದೆ. ಈ ನೀರಾವರಿ ವ್ಯತ್ಯಾಸವೂ ಸಹ ಪ್ರಾದೇಶಿಕ ಅಸಮತೋಲನಕ್ಕೆ ಕಾರಣದಲ್ಲಿ ಅಸ್ತ್ರ ಒದಗಿಸಿದೆ.

ಈ ಮೇಲೆ ಪ್ರಸ್ತಾಪಿಸಲಾಗಿರುವ ವಿವಿಧ ಕ್ಷೇತ್ರಗಳಲ್ಲಿನ ಅಂತರದಿಂದ ಕರ್ನಾಟಕದ ಪ್ರಾದೇಶಿಕ ಅಸಮತೋಲನದ ಸ್ವರೂಪವನ್ನು ನಾವು ಮನವರಿಕೆ ಮಾಡಿಕೊಳ್ಳಬಹುದಾಗಿದೆ. [illegible] ಅಧಿಕಾರ, ಸೇವೆಗಳ ಲಭ್ಯತೆ ಹಾಗೂ ಕೈಗಾರಿಕಾ ಅವಕಾಶಗಳ ವಿಚಾರದಲ್ಲಿಯೂ ಅಸಮತೋಲನ ಕಂಡುಬರುತ್ತದೆ. ಮುಖ್ಯಮಂತ್ರಿ, ಮಂತ್ರಿ, ಕೇಂದ್ರ ಮಂತ್ರಿಮಂಡಲ [illegible] ಹುದ್ದೆಗಳ ವಿಚಾರದಲ್ಲಿಯೂ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ [illegible] ಗಮನಾರ್ಹ ಸಂಗತಿಯಾಗಿದೆ. ನಂಜುಂಡಪ್ಪ ವರದಿಯು [illegible] ಪ್ರಾದೇಶಿಕ ಅಸಮತೋಲನ ಜೀವಂತವಾಗಿರುವುದು ಮೇಲಿನ ವಿವರಣೆಯಿಂದ [illegible].

## ಮಾದರಿ ಪ್ರಶ್ನೆಗಳು [Model Questions]:

A) ಎರಡು ಅಂಕದ ಪ್ರಶ್ನೆಗಳು:

1. ಪ್ರಾದೇಶಿಕವಾದ ಎಂದರೇನು?
2. ಕರ್ನಾಟಕದಲ್ಲಿ ಪ್ರಾದೇಶಿಕವಾದದ ಮೂರು ಕಾರಣಗಳನ್ನು ಬರೆಯಿರಿ.
3. ಆರ್ಥಿಕ ಅಸಮಾನತೆಯು ಪ್ರಾದೇಶಿಕವಾದವನ್ನು ಬಲಗೊಳಿಸುತ್ತದೆ. ಹೇಗೆ?
4. ಪ್ರಾದೇಶಿಕವಾದದ ಎರಡು ನಕಾರಾತ್ಮಕ ಪರಿಣಾಮಗಳನ್ನು ಬರೆಯಿರಿ.
5. ಪ್ರಾದೇಶಿಕವಾದದ ಮೂರು ಸಕಾರಾತ್ಮಕ ಪರಿಣಾಮಗಳನ್ನು ತಿಳಿಸಿ.

6. ನಂಜುಂಡಪ್ಪ ಸಮಿತಿ ರಚನೆಗೊಳ್ಳಲು ಕಾರಣವೇನು?
7. ನಂಜುಂಡಪ್ಪ ಸಮಿತಿ ಅಭ್ಯಸಿಸಿದ ಇತರ ವರದಿಗಳನ್ನು ಬರೆಯಿರಿ.
8. ನಂಜುಂಡಪ್ಪ ವರದಿಯ ಎರಡು ಶಿಫಾರಸುಗಳನ್ನು ತಿಳಿಸಿರಿ.
9. ನಂಜುಂಡಪ್ಪ ವರದಿಯ ಅನುಷ್ಠಾನಕ್ಕೆ ಕೈಗೊಳ್ಳಲಾದ ಎರಡು ಕ್ರಮಗಳನ್ನು ಬರೆಯಿರಿ.
10. ಪ್ರಾದೇಶಿಕ ಅಸಮತೋಲನದ ಅರ್ಥವನ್ನು ಬರೆಯಿರಿ..

[B.] ಐದು ಅಂಕದ ಪ್ರಶ್ನೆಗಳು:

1. ಪ್ರಾದೇಶಿಕವಾದ ಕುರಿತು ಟಿಪ್ಪಣಿ ಬರೆಯಿರಿ.
2. ಕರ್ನಾಟಕದಲ್ಲಿ ಪ್ರಾದೇಶಿಕವಾದದ ಕಾರಣಗಳನ್ನು ಪರಿಶೀಲಿಸಿರಿ.
3. ನಂಜುಂಡಪ್ಪ ಸಮಿತಿಯ ಕಾರ್ಯಾಚರಣೆಯನ್ನು ಚರ್ಚಿಸಿರಿ.
4. ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮತೋಲನದ ಸ್ವರೂಪವನ್ನು ವಿವರಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು

1. ಪ್ರಾದೇಶಿಕವಾದದ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿರಿ.
2. ನಂಜುಂಡಪ್ಪ ಸಮಿತಿಯ ಶಿಫಾರಸುಗಳನ್ನು ಚರ್ಚಿಸಿರಿ.



ಅಧ್ಯಾಯ 9:

# ಕರ್ನಾಟಕದಲ್ಲಿ ವಿವಿಧ ಕ್ಷೇತ್ರಗಳು ಮತ್ತು ರಾಜಕೀಯ

# [Verious Fields and Politics in Karnataka].

## ಪ್ರಸ್ತಾವನೆ [Introduction]:

ಕರ್ನಾಟಕವು ದಕ್ಷಿಣ ಭಾರತದ ವಿಶಾಲ ರಾಜ್ಯಗಳಲ್ಲಿ ಒಂದು. ಕನ್ನಡ ಭಾಷೆಯನ್ನು ಪ್ರಧಾನವಾಗಿ ಹೊಂದಿರುವ ಕರ್ನಾಟಕವು ಭಾಷಾ ವೈವಿಧ್ಯತೆಗೆ ನಿದರ್ಶನವೆನಿಸಿದೆ. ಜಲ ಮತ್ತು ಭೂ ಗಡಿಯನ್ನು ಹೊಂದಿರುವ ಕರ್ನಾಟಕವು ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿರುವ ರಾಜ್ಯವೆನಿಸಿದೆ. ತನ್ನ ವೈಶಾಲ್ಯತೆ ಮತ್ತು ಜನಸಂಖ್ಯಾ ಗಾತ್ರದಿಂದ ಭಾರತ ಒಕ್ಕೂಟದ ಪ್ರಮುಖ ರಾಜ್ಯವೆನಿಸಿದೆ. ಹೀಗಾಗಿ ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ರಾಜಕೀಯವು ಹಾಸು ಹೊಕ್ಕಾಗಿದ್ದು ಪ್ರಸ್ತುತ ಅಧ್ಯಾಯದಲ್ಲಿ ಆ ಕುರಿತಂತೆ ಬೆಳಕು ಚೆಲ್ಲಲಾಗಿದೆ.

## [I.] ಕರ್ನಾಟಕದಲ್ಲಿ ಭಾಷೆ ಮತ್ತು ರಾಜಕೀಯ [Language and Politics in Karnataka]:

ಭಾರತದಲ್ಲಿ ಭಾಷೆ ವ್ಯಕ್ತಿಗಳ ಜೀವನದ ಇತರ ಆಯಾಮವನ್ನು ಪ್ರಭಾವಿಸಿರುವಂತೆ ರಾಜಕೀಯ ಜೀವನವನ್ನೂ ಪ್ರಭಾವಿಸುತ್ತಾ ಬಂದಿದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿಯೇ ಭಾಷಾ ವಿಚಾರಗಳು ಭಾರತದಲ್ಲಿ ಮುನ್ನೆಲೆಗೆ ಬಂದಿದುದಕ್ಕೆ ಐತಿಹಾಸಿಕ ನಿದರ್ಶನಗಳಿವೆ. ಸ್ವಾತಂತ್ರ್ಯೋತ್ತರ ಭಾರತದಲ್ಲಂತೂ ಭಾಷೆ ಕೆಲವು ರಾಜ್ಯಗಳ ರಾಜಕೀಯದಲ್ಲಿ ಅಗಾಧ ಪ್ರಭಾವವನ್ನು ಹೊಂದಿತ್ತು. ಈ ವಿಚಾರದಲ್ಲಿ ಕರ್ನಾಟಕ ಹೊರತಾಗಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರೀಯ ಹೋರಾಟದೊಡನೆ ಭಾಷಾಧಾರಿತ ಹೋರಾಟಗಳೂ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಜರುಗಿದ್ದವು. ಫಲವಾಗಿ ಸ್ವಾತಂತ್ರ್ಯೋತ್ತರ ಕರ್ನಾಟಕದ ರಾಜಕೀಯವು ಭಾಷೆಯೊಡನೆ ನಿಕಟ ಸಂಬಂಧವನ್ನು ಹೊಂದುವಂತಾಗಿದೆ. ಇದರೊಡನೆ ಕರ್ನಾಟಕದಲ್ಲಿ ಕನ್ನಡ ಭಾಷೆಯೊಡನೆ ಇತರ ಭಾಷಿಕರು ನೆಲೆಸಿರುವುದು ಭಾಷೆ ರಾಜಕೀಯದೊಡನೆ ಹೆಣೆದುಕೊಳ್ಳುವಂತೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕೆಳಗೆ ಸಮಕಾಲೀನ ಕರ್ನಾಟಕದಲ್ಲಿನ ಭಾಷೆ ಮತ್ತು ರಾಜಕೀಯ ಕುರಿತಾದ ಹಲವು ಬೆಳವಣಿಗೆಗಳ ಮೇಲೆ ಬೆಳಕು ಚೆಲ್ಲಲಾಗಿದೆ.

1. **ಕನ್ನಡ ಭಾಷೆಯ ಅಸ್ಮಿತೆ:** ಕರ್ನಾಟಕದ ಪ್ರಧಾನ ಭಾಷೆ ಕನ್ನಡ. ಹೀಗಾಗಿ ಕರ್ನಾಟಕ ಸರ್ಕಾರವು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಘೋಷಿಸಿದೆ. ಜೊತೆಗೆ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಒದಗಿಸಲು ಕೇಂದ್ರವನ್ನು ಒತ್ತಾಯಿಸಿ ಯಶಸ್ವಿಯಾಗಿದೆ. ಮುಂದುವರಿದು, ಕರ್ನಾಟಕ ಸರ್ಕಾರವು ಕನ್ನಡ ಮಾಧ್ಯಮದಲ್ಲಿ ಬೋಧಿಸುವ ಕನ್ನಡ ಶಾಲೆಗಳ ಸ್ಥಾಪನೆಗೆ ಆದ್ಯತೆ ನೀಡುತ್ತಾ ಬಂದಿದೆ. ಇದರೊಡನೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದವರಿಗೆ ಉದ್ಯೋಗ ಮತ್ತು ಉನ್ನತ ಶಿಕ್ಷಣದಲ್ಲಿ ಅವಕಾಶವನ್ನು ಕರ್ನಾಟಕ ಸರ್ಕಾರ ಒದಗಿಸಿದೆ. ಹೀಗೆ ಕನ್ನಡ ಭಾಷಾ ಅಸ್ಮಿತೆಯು ರಾಜಕೀಯದೊಡನೆ ನಿಕಟ ಸಂಬಂಧವನ್ನು ಕರ್ನಾಟಕದಲ್ಲಿ ಪಡೆದುಕೊಂಡಿದೆ.

2. **ಭಾಷಾ ವೈವಿಧ್ಯತೆ:** ಕರ್ನಾಟಕದಲ್ಲಿ ಕನ್ನಡ ಪ್ರಧಾನ ಭಾಷೆಯಾಗಿದ್ದರೂ ತುಳು, ಕೊಂಕಣಿ, ಕೊಡವ ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಈ ವಿವಿಧ ಭಾಷಿಕರು ತಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿದಾಗ ಭಾಷೆ ರಾಜಕೀಯದ ಮೇಲೆ ಪ್ರಭಾವ ಬೀರುತ್ತದೆ. ಆಯಾ ಭಾಷಿಕರು ತಮ್ಮದೇ ಪ್ರತಿನಿಧಿಗಳನ್ನು ಹೊಂದಲು, ತಮ್ಮದೇ ವೇದಿಕೆಗಳನ್ನು ಈಡೇರಿಸಿಕೊಳ್ಳಲು, ತಮ್ಮ ಭಾಷೆಗೆ ಆದ್ಯತೆ ಪಡೆಯಲು ಮುಂದಾದಾಗ ರಾಜಕೀಯವಾಗಿ ಸವಾಲುಗಳನ್ನು ಕರ್ನಾಟಕ ಎದುರಿಸಬೇಕಾಗುತ್ತದೆ.

3. **ಹಿಂದಿ ವಿರೋಧಿ ಹೋರಾಟ:** ಭಾರತ ಸ್ವತಂತ್ರಗೊಂಡ ಆರಂಭದ ದಶಕಗಳಲ್ಲಿ ಕೇಂದ್ರ ಸರ್ಕಾರದ ಹಿಂದಿ ಭಾಷಾ ನೀತಿಯ ವಿರುದ್ಧ ದಕ್ಷಿಣ ಭಾರತದ ರಾಜ್ಯಗಳು ಹೋರಾಟ ನಡೆಸಿದವು. ಈ ಆಂದೋಲನದಲ್ಲಿ ಕರ್ನಾಟಕವೂ ಭಾಗವಹಿಸಿ ಕೇಂದ್ರ ಸರ್ಕಾರದ ಹಿಂದಿ ಹೇರಿಕೆಯನ್ನು ಖಂಡಿಸಿತು. ಪರಿಣಾಮ ತ್ರಿಭಾಷಾ ಸೂತ್ರ ಅನುಸರಿಸಲು ಅವಕಾಶ ದೊರಕಿತು.

4. **ಭಾಷಾ ರಾಜಕೀಯ:** ಕರ್ನಾಟಕವು ಅನ್ಯ ಭಾಷೆಗೆ ಆದ್ಯತೆಯುಳ್ಳ ಮಹಾರಾಷ್ಟ್ರ ಆಂಧ್ರ ಪ್ರದೇಶ, ತಮಿಳುನಾಡು, ಕೇರಳದಂತಹ ರಾಜ್ಯಗಳೊಡನೆ ಗಡಿ ಹಂಚಿಕೊಂಡಿದೆ. ಈ ವಿವಿಧ ರಾಜ್ಯಗಳ ಗಡಿಗಳುದ್ದಕ್ಕೂ ಆಯಾ ರಾಜ್ಯದ ಭಾಷಿಕರ ಪ್ರಭಾವವು ಕರ್ನಾಟಕದೊಳಗೆ ಕಂಡು ಬರುತ್ತದೆ. ಫಲವಾಗಿ ಭಾಷಾ ಸಂಘರ್ಷಗಳನ್ನು ಸರ್ಕಾರ ಎದುರಿಸಬೇಕಾಗಿದೆ. ಉದಾ: ಮಹಾರಾಷ್ಟ್ರದ ಮರಾಠಿಗರ ಪ್ರಭಾವವನ್ನು ಬೆಳಗಾವಿಯಲ್ಲಿ, ಆಂಧ್ರ ಪ್ರದೇಶದ ತೆಲುಗು ಭಾಷಿಕರ ಪ್ರಭಾವವನ್ನು ಬಳ್ಳಾರಿಯಲ್ಲಿ, ತಮಿಳುನಾಡಿನ ತಮಿಳು ಭಾಷಿಕರ ಪ್ರಭಾವವನ್ನು ಬೆಂಗಳೂರಿನಲ್ಲಿ ಎದುರಿಸಬೇಕಾಗಿದೆ. ರಾಜಕೀಯ ಪಕ್ಷಗಳು ತಮ್ಮ ಮತ ಬ್ಯಾಂಕ್ ಗಟ್ಟಿಗೊಳಿಸಿಕೊಳ್ಳಲು ರಾಜಕೀಯ ವಿವಾದಗಳನ್ನು ಗಡಿ ಪ್ರದೇಶದಲ್ಲಿ ಆಗಾಗ ಸೃಷ್ಟಿಸುವುದು ಕರ್ನಾಟಕದಲ್ಲಿ ಸಹಜ ಸಂಗತಿ ಎನಿಸಿಕೊಂಡಿದೆ.

5. **ಭಾಷಾ ಅಲ್ಪಸಂಖ್ಯಾತರ ಸಮಸ್ಯೆ:** ಕರ್ನಾಟಕದಲ್ಲಿ ಕನ್ನಡ ಬಹುಸಂಖ್ಯಾತರ ಭಾಷೆಯಾಗಿದ್ದು ತುಳು, ಕೊಂಕಣಿ, ಕೊಡವ ಭಾಷಿಕರು ಅಲ್ಪಸಂಖ್ಯಾತರೆನಿಸಿರುವರು. ಇದರೊಡನೆ ಗಡಿ ಪ್ರದೇಶದಲ್ಲಿನ ಅನ್ಯ ಭಾಷಿಕರೂ ಕರ್ನಾಟಕದಲ್ಲಿ ಭಾಷಾ



ಅಲ್ಪಸಂಖ್ಯಾತರೆನಿಸಿಕೊಂಡಿರುವರು. ಮುಂದುವರಿದು, ಅನ್ಯ ರಾಜ್ಯಗಳ ಗಡಿಯಲ್ಲಿರುವ ಕನ್ನಡ ಭಾಷೆಯ ಅಲ್ಪಸಂಖ್ಯಾತ ಜನರಿದ್ದಾರೆ. ಈ ಎಲ್ಲ ಬಗೆಯ ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಗೆ ಕರ್ನಾಟಕ ಸರ್ಕಾರವು ಗಮನ ಹರಿಸಬೇಕಾಗುತ್ತದೆ. ಆಯಾ ಭಾಷಿಕರ ಸಂಸ್ಕೃತಿ, ಶಿಕ್ಷಣ ಹಾಗೂ ಸಾಹಿತ್ಯಿಕ ಅಂಶಗಳು ಸಹಜವಾಗಿ ಕರ್ನಾಟಕದ ರಾಜಕೀಯವನ್ನು ಪ್ರಭಾವಿಸುತ್ತವೆ.

ಈ ಮೇಲೆ ಚರ್ಚಿಸಲಾದ ಹಲವು ಅಂಶಗಳ ಬೆಳಕಿನಲ್ಲಿ ಕರ್ನಾಟಕದಲ್ಲಿನ ಭಾಷೆ ಮತ್ತು ರಾಜಕೀಯದ ವಾಸ್ತವ ಚಿತ್ರಣವನ್ನು ನಾವು ಹೊಂದಬಹುದಾಗಿದೆ. ಮಾತೃ ಭಾಷಾ ಬೋಧನೆ, ಶಿಕ್ಷಣ ನೀತಿಯ ನಿರೂಪಣೆ, ಔದ್ಯೋಗಿಕ ಅವಕಾಶಗಳು, ಸಾಂಸ್ಕೃತಿಕ ಹಿತರಕ್ಷಣೆಯಂತಹ ಕ್ಷೇತ್ರಗಳಲ್ಲಿ ಭಾಷೆ ಮತ್ತು ರಾಜಕೀಯ ಪರಸ್ಪರ ಅಂತರ್‌ಸಂಬಂಧ ಹೊಂದಿ ಕಾರ್ಯಾಚರಿಸುವುದನ್ನು ನಾವು ಸೂಚ್ಯವಾಗಿ ಗುರುತಿಸಬಹುದಾಗಿದೆ. ಮುಂದುವರಿದು, ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ರಾಜಕೀಯದ ಯಶಸ್ಸಿಗೆ ಭಾಷೆಯನ್ನು ದಾಳವಾಗಿ ಬಳಸಿಕೊಳ್ಳುವಲ್ಲಿ ವ್ಯಾಪಕವಾಗಿ ಭಾಷೆ ಮತ್ತು ರಾಜಕೀಯದ ಬೆಸುಗೆಯನ್ನು ನಾವು ಗುರುತಿಸಬಹುದಾಗಿದೆ.

## [II.] ಕರ್ನಾಟಕದ ಜಲ ವಿವಾದಗಳು [Water Disputes of Karnataka]:

ಭಾರತದಲ್ಲಿ ಅನೇಕ ನದಿಗಳು ಒಂದಕ್ಕಿಂತ ಹೆಚ್ಚು ರಾಜ್ಯಗಳ ಮೂಲಕ ಹರಿಯುತ್ತವೆ. ಇದರಿಂದಾಗಿ ನದಿ ಹರಿಯುವ ರಾಜ್ಯಗಳ ನಡುವೆ ನೀರಿನ ಬಳಕೆಯನ್ನು ಕುರಿತಂತೆ ವಿವಾದಗಳು ತಲೆದೋರಿವೆ. ಈ ಬೆಳವಣಿಗೆಗೆ ಕರ್ನಾಟಕವೂ ಹೊರತಾಗಿಲ್ಲ. ಭಾರತ ಸಂವಿಧಾನ ರಚನಾಕಾರರು ಜಲ ವಿವಾದಗಳ ಸಮರ್ಪಕ ಇತ್ಯರ್ಥಕ್ಕೆ ಅಗತ್ಯವಾದ ಮಾರ್ಗೋಪಾಯಗಳನ್ನು ಬಹು ಹಿಂದೆಯೇ ಚರ್ಚಿಸಿ ಸಂವಿಧಾನದಲ್ಲಿ ಹಲವು ಅವಕಾಶಗಳನ್ನು ಕಲ್ಪಿಸಿದ್ದರು. ಆದರೆ, ಭಾರತದ ನಾನಾ ರಾಜ್ಯಗಳ ನಡುವೆ ನದಿ ನೀರಿನ ವಿವಾದಗಳು ಇಂದಿಗೂ ಜೀವಂತವಾಗಿದ್ದು ಕರ್ನಾಟಕವೂ ಅದರಿಂದ ಹೊರಗುಳಿದಿಲ್ಲ. ಪ್ರಸ್ತುತ ಕರ್ನಾಟಕವು ಎದುರಿಸುತ್ತಿರುವ ಪ್ರಧಾನ ಜಲ ವಿವಾದಗಳನ್ನು ಕುರಿತಂತೆ ಸಂಕ್ಷಿಪ್ತ ಮಾಹಿತಿಯನ್ನು ಕೆಳಗೆ ನೀಡಲಾಗಿದೆ.

1. **ಕಾವೇರಿ ನದಿಯ ಜಲ ವಿವಾದ:** ಕಾವೇರಿ ನದಿಯು ಕರ್ನಾಟಕದ ಜೀವ ನದಿ ಎಂದೇ ಪರಿಚಿತವಾಗಿದೆ. ತಮಿಳಿನಲ್ಲಿ 'ಪೊನ್ನಿ' ಎಂದು ಕರೆಯಲ್ಪಡುವ ಕಾವೇರಿಯು ದಕ್ಷಿಣ ಭಾರತದ ಪವಿತ್ರ ನದಿ ಎನಿಸಿದೆ. ಕರ್ನಾಟಕದಲ್ಲಿ ಹುಟ್ಟುವ ಕಾವೇರಿ ನದಿಯು ಕೇರಳದಿಂದ ಬರುವ ಪ್ರಮುಖ ಉಪನದಿಗಳೊಂದಿಗೆ ತಮಿಳುನಾಡು ಮತ್ತು ಪಾಂಡಿಚೇರಿ ಮೂಲಕ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಫಲವಾಗಿ ಕಾವೇರಿ ನದಿಯ ನೀರಿನ ಹಂಚಿಕೆಯ ವಿವಾದವು 3 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶವನ್ನು ಆವರಿಸಿದೆ.

130 ವರ್ಷಗಳಷ್ಟು ಹಳೆಯದಾಗಿರುವ ಕಾವೇರಿ ನದಿ ವಿವಾದವು 1892 ಮತ್ತು 1924 ರಲ್ಲಿ ಆಗಿನ ಮದ್ರಾಸ್ ಪ್ರೆಸಿಡೆನ್ಸಿ ಮತ್ತು ಮೈಸೂರು ಸಂಸ್ಥಾನಗಳ ನಡುವೆ ಎರಡು ಒಪ್ಪಂದಗಳ ಕಾರಣವಾಗಿತ್ತು. ಈ ಒಪ್ಪಂದದಂತೆ ನದಿಯ ಮೇಲ್ಭಾಗದ ರಾಜ್ಯವು ಯಾವುದೇ ಅಣೆಕಟ್ಟುಗಳ ನಿರ್ಮಾಣದ ವೇಳೆಯಲ್ಲಿ ನದಿಯ ಕೆಳ ಭಾಗದ ರಾಜ್ಯದ ಒಪ್ಪಿಗೆಯನ್ನು ಪಡೆಯಬೇಕು ಎಂಬ ತತ್ವವನ್ನು ಪಾಲಿಸಲು ಸಮ್ಮತಿಸಿದಾಗ ವಿವಾದ ಕಾಣಿಸಿಯಾಗಿತ್ತು. ಆದರೆ, ತಮಿಳುನಾಡಿನ ಒಪ್ಪಿಗೆಯಿಲ್ಲದೆ ಕರ್ನಾಟಕವು ನೀರನ್ನು ಬಳಸಲು ಪ್ರಾರಂಭಿಸಿದಾಗ 1974 ರಲ್ಲಿ ಕಾವೇರಿ ಜಲ ವಿವಾದ ಮರಳಿ ತಲೆಯೆತ್ತಿತು. ಹಾಗಾಗಿ ದಶಕಗಳ ಬಳಿಕ ಜಲ ವಿವಾದ ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ತೀವ್ರಗೊಂಡಾಗ 1990 ರಲ್ಲಿ ಕೇಂದ್ರವು ಕಾವೇರಿ ಜಲ ವಿವಾದಗಳ ನ್ಯಾಯಮಂಡಳಿ (CWDT) ಸ್ಥಾಪಿಸಿತು.

ಕಾವೇರಿ ನದಿ ವಿವಾದಗಳ ನ್ಯಾಯ ಮಂಡಳಿಯು ತಾನು ರಚನೆಗೊಂಡ 17 ವರ್ಷಗಳ ಬಳಿಕ ಅಂದರೆ 2007 ರಲ್ಲಿ ತನ್ನ ಅಂತಿಮ ತೀರ್ಪನ್ನು ಪ್ರಕಟಿಸಿತು. ಸಂಕಷ್ಟ ಕಾಲ ಮತ್ತು ಸಾಮಾನ್ಯ ಕಾಲದಲ್ಲಿ ವಿವಾದಿತ ನಾಲ್ಕು ರಾಜ್ಯಗಳಿಗೆ ಎಷ್ಟು ಅನುಪಾತದ ನೀರು ಹಂಚಿಕೆಯಾಗಬೇಕು ಎನ್ನುವುದನ್ನು ನ್ಯಾಯ ಮಂಡಳಿಯು ತನ್ನ ತೀರ್ಪಿನಲ್ಲಿ ತಿಳಿಸಿತ್ತು. ಕಾವೇರಿ ಜಲಾನಯನ ಪ್ರದೇಶದ ನಾಲ್ಕು ರಾಜ್ಯಗಳಲ್ಲಿ ಸಾಮಾನ್ಯ ವರ್ಷವೊಂದರಲ್ಲಿ 740 TMC ಯಷ್ಟು ನೀರಿನ ಲಭ್ಯತೆಯನ್ನು ಪರಿಗಣಿಸಿ ನಾಲ್ಕು ರಾಜ್ಯಗಳ ನಡುವೆ ನೀರಿನ ಹಂಚಿಕೆ ಮಾಡಿತ್ತು. ಅದರನ್ವಯ ತಮಿಳುನಾಡು 404.25 ಟಿಎಂಸಿ, ಕರ್ನಾಟಕ 284.75 ಟಿಎಂಸಿ, ಕೇರಳ 30 ಟಿಎಂಸಿ ಮತ್ತು ಪುದುಚೇರಿ 7 ಟಿಎಂಸಿ ನೀರನ್ನು ಸಾಮಾನ್ಯ ವರ್ಷದಲ್ಲಿ ಅಂದರೆ ಸಹಜ ಮಳೆ ಪ್ರಮಾಣವಿರುವ ವರ್ಷದಲ್ಲಿ ಹಂಚಿಕೆಯಾಗಬೇಕಾಯಿತು. 2018 ರಲ್ಲಿ ಕಾವೇರಿಯನ್ನು ರಾಷ್ಟ್ರೀಯ ಆಸ್ತಿ ಎಂದು ಸರ್ವೋಚ್ಚ ನ್ಯಾಯಾಲಯವು ಘೋಷಿಸಿತ್ತು. ನ್ಯಾಯ ಮಂಡಳಿಯು ನಿರ್ಧರಿಸಿದ ನೀರಿನ ಹಂಚಿಕೆಯನ್ನು ಎತ್ತಿ ಹಿಡಿದಿದೆ. ಜೊತೆಗೆ ಕಾವೇರಿ ನಿರ್ವಹಣಾ ಯೋಜನೆಗೆ [illegible]. ಅದರನ್ವಯ ನೀರಿನ ಹಂಚಿಕೆ ಜರುಗುತ್ತಿದ್ದು ಕರ್ನಾಟಕದ [illegible]. ಫಲವಾಗಿ ಕಾವೇರಿ ನ್ಯಾಯ ಮಂಡಳಿಯ [illegible] ಕಾರಣಕ್ಕೆ ಮಳೆ ಪ್ರಮಾಣ ಕಡಿಮೆಯಾದಾಗಲೆಲ್ಲ ಕರ್ನಾಟಕದಲ್ಲಿ ಹೋರಾಟಗಳು ಸಾಮಾನ್ಯ ವಿದ್ಯಮಾನವಾಗಿವೆ. ಉದಾ: 2023 ರಲ್ಲಿ ಸಾಮಾನ್ಯ ಪ್ರಮಾಣದ ಮಳೆ ಬಾರದ್ದರಿಂದ ಸಂಕಷ್ಟ ಸೂತ್ರವನ್ನು [illegible] ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ವಿರೋಧಿಸಿ ಸೆಪ್ಟೆಂಬರ್ 29 ರಂದು ಕರ್ನಾಟಕ ಬಂದ್ ಆಚರಿಸಲಾಯಿತು.

2. **ಕೃಷ್ಣಾ ನದಿಯ ಜಲ ವಿವಾದ:** ಕೃಷ್ಣಾ ನದಿಯು ಮಹಾರಾಷ್ಟ್ರದ ಮಹಾಬಲೇಶ್ವರದಲ್ಲಿ ಹುಟ್ಟಿ ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶದ ಮೂಲಕ ಹರಿದು ಬಂಗಾಳ ಕೊಲ್ಲಿಗೆ ಸೇರುವ ನದಿಯಾಗಿದೆ. ಹೀಗಾಗಿ ಕೃಷ್ಣಾ ನದಿಯ



ನೀರಿನ ವಿಚಾರದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶಗಳ ನಡುವೆ ವಿವಾದ ಉಂಟಾಗಿದೆ. ಆಸಕ್ತಿದಾಯಕ ಅಂಶವೇನೆಂದರೆ, ಕೃಷ್ಣಾ ನದಿಯ ನೀರಿನ ಹಂಚಿಕೆಯ ವಿವಾದವು ಹಿಂದಿನ ಹೈದರಾಬಾದ್ ಮತ್ತು ಮೈಸೂರು ರಾಜ್ಯಗಳಿಂದ ಪ್ರಾರಂಭವಾಗಿ ಹಲವು ದಶಕಗಳಿಂದ ಬೆಳೆದು ಬಂದಿದೆ. ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳ ನಡುವೆ ಕೃಷ್ಣಾ ಜಲ ಹಂಚಿಕೆಯ ವಿವಾದ ತಲೆದೋರಿದಾಗ ಕೇಂದ್ರ ಸರ್ಕಾರವು 1956 ರ ಅಂತರರಾಜ್ಯ ಜಲ ವಿವಾದ ಕಾಯಿದೆಯಡಿ 1969 ರಲ್ಲಿ ಕೃಷ್ಣಾ ಜಲ ವಿವಾದ ನ್ಯಾಯ ಮಂಡಳಿಯನ್ನು (KWDT)ರಚಿಸಿತು. ಈ ನ್ಯಾಯ ಮಂಡಳಿಯು ತನ್ನ ವರದಿಯನ್ನು 1973 ರಲ್ಲಿ ಸಲ್ಲಿಸಿತಾದರೂ ವರದಿಯನ್ನು ಕೇಂದ್ರವು 1976 ರಲ್ಲಿ ಪ್ರಕಟಿಸಿತು. ಈ ಮಂಡಳಿಯು ಕೃಷ್ಣಾ ನದಿ ನೀರಿನ ಒಟ್ಟು ಲಭ್ಯತೆಯನ್ನು 2060 ಟಿ. ಎಂ. ಸಿ ಎಂದು ಪರಿಭಾವಿಸಿ ಮೂರು ರಾಜ್ಯಗಳಿಗೆ ಹಂಚಿತು. ಅದರನ್ವಯ ಮಹಾರಾಷ್ಟ್ರವು 560, ಕರ್ನಾಟಕವು 700 ಮತ್ತು ಆಂಧ್ರ ಪ್ರದೇಶವು 800 ಟಿ. ಎಂ. ಸಿ ಗಳಷ್ಟು ನೀರನ್ನು ಪಡೆಯುವಂತಾಯಿತು.

ಮುಂದೆ ಕೃಷ್ಣಾ ನದಿಯ ನೂತನ ಕುಂದು ಕೊರತೆಗಳನ್ನು ಇತ್ಯರ್ಥಗೊಳಿಸಲು 2004 ರಲ್ಲಿ ಎರಡನೇ ಕೃಷ್ಣಾ ನದಿ ನೀರಿನ ನ್ಯಾಯ ಮಂಡಳಿಯನ್ನು ರಚಿಸಲಾಯಿತು. ಈ ಮಂಡಳಿಯು 2010 ರಲ್ಲಿ ತನ್ನ ವರದಿಯನ್ನು ಪ್ರಕಟಿಸಿದಾಗ ಆಂಧ್ರ ಪ್ರದೇಶವು ನ್ಯಾಯ ಮಂಡಳಿಯ ನಿಲುವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿತು. ಅಂತೆಯೇ ಎರಡನೇ ನ್ಯಾಯ ಮಂಡಳಿಯು ತನ್ನ ಪೂರಕ ವರದಿಯನ್ನು 2013 ರಲ್ಲಿ ನೀಡಿದಾಗಲೂ ಆಂಧ್ರ ಪ್ರದೇಶವು ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ತೆಲಂಗಾಣ 2014 ರಲ್ಲಿ ಪ್ರತ್ಯೇಕ ರಾಜ್ಯವಾಗಿದ್ದು ಕೃಷ್ಣಾ ಜಲ ಹಂಚಿಕೆಯಲ್ಲಿ ತೆಲಂಗಾಣವನ್ನೂ ಪ್ರತ್ಯೇಕ ಪಕ್ಷವೆಂದು ಪರಿಗಣಿಸಬೇಕೆಂದು ಒತ್ತಾಯಿಸಿದೆ. ಹೀಗಾಗಿ ಕೃಷ್ಣಾ ಜಲ ಹಂಚಿಕೆಯು ಶಾಶ್ವತ ಪರಿಹಾರವನ್ನು ಇಂದಿಗೂ ಪಡೆಯಲಾಗಿಲ್ಲ.

3. **ಮಹದಾಯಿ ನದಿಯ ಜಲ ವಿವಾದ:** ಮಹದಾಯಿ ಜಲ ವಿವಾದವು ಭಾರತ ಒಕ್ಕೂಟದ ಕರ್ನಾಟಕ ಮತ್ತು ಗೋವಾ ರಾಜ್ಯಗಳ ನಡುವೆ ದೀರ್ಘಕಾಲದ ನೀರು ಹಂಚಿಕೆಯ ವಿವಾದವಾಗಿದೆ. ಮಾಂಡೋವಿ ನದಿ ಎಂದೂ ಕರೆಯಲ್ಪಡುವ ಮಹದಾಯಿ ನದಿಯು ಕರ್ನಾಟಕದಲ್ಲಿ ಹುಟ್ಟಿ ಗೋವಾದ ಮೂಲಕ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತದೆ. ಕರ್ನಾಟಕ ರಾಜ್ಯವು ತನ್ನ ಉತ್ತರ ಭಾಗದಲ್ಲಿರುವ ಬರಪೀಡಿತ ಪ್ರದೇಶಗಳ ಕುಡಿಯುವ ನೀರಿನ ಅಗತ್ಯತೆಗಳನ್ನು ಪೂರೈಸಲು ಮಹದಾಯಿ ನದಿಯಿಂದ ನೀರನ್ನು ತಿರುಗಿಸಲು ನಿರ್ಧರಿಸಿ ಅಣೆಕಟ್ಟುಗಳು ಮತ್ತು ಕಾಲುವೆಗಳನ್ನು ನಿರ್ಮಿಸಲು ಮುಂದಾಯಿತು. ಕರ್ನಾಟಕದ ಈ ಯೋಜನೆಗಳಿಗೆ ಗೋವಾ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಿದೆ. ಕರ್ನಾಟಕದ ಯೋಜನೆಗಳಿಂದ ತನ್ನ ಪರಿಸರ ಮತ್ತು ನೀರಿನ ಪೂರೈಕೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವುದೆಂಬುದು ಗೋವಾದ ವಾದವಾಗಿದೆ. 1980

ರ ದಶಕದಿಂದಲೂ ಮಹದಾಯಿ ಜಲ ವಿವಾದ ಅಸ್ತಿತ್ವದಲ್ಲಿದ್ದು ಉಭಯ ರಾಜ್ಯಗಳ ನಡುವೆ ಹಲವು ಸುತ್ತಿನ ಮಾತುಕತೆಗಳು ವಿವಾದ ಬಗೆಹರಿಸಲು ಜರುಗಿ ವಿಫಲವಾಗಿವೆ.

•ಮಹದಾಯಿ ಸಮಸ್ಯೆಯನ್ನು ಪರಿಹರಿಸಲು 2010 ರಲ್ಲಿ ಕೇಂದ್ರ ಸರ್ಕಾರವು ಮಹದಾಯಿ ಜಲ ವಿವಾದ ನ್ಯಾಯ ಮಂಡಳಿಯನ್ನು ಸ್ಥಾಪಿಸಿತು. 2018 ರಲ್ಲಿ ನ್ಯಾಯಾಧಿಕರಣವು ಕೆಲವು ಷರತ್ತುಗಳಿಗೆ ಒಳಪಟ್ಟು ಮಹದಾಯಿ ನದಿಯಿಂದ 13.42 ಟಿಎಂಸಿ ನೀರನ್ನು ತಿರುಗಿಸಲು ಕರ್ನಾಟಕಕ್ಕೆ ಅವಕಾಶ ಮಾಡಿಕೊಟ್ಟಿತು. ಆದರೆ, ಗೋವಾ ಸರ್ಕಾರವು ನ್ಯಾಯಾಧಿಕರಣದ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಈ ವಿಷಯದ ಬಗ್ಗೆ ಇನ್ನೂ ಅಂತಿಮ ತೀರ್ಪು ಹೊರಬೀಳಬೇಕಾಗಿದೆ. ಗಮನಾರ್ಹ ಅಂಶವೇನೆಂದರೆ, ಮಹದಾಯಿ ಜಲ ವಿವಾದವು ರೈತರು, ಪರಿಸರವಾದಿಗಳು ಮತ್ತು ರಾಜಕಾರಣಿಗಳು ಸೇರಿದಂತೆ ವಿವಿಧ ಮಧ್ಯಸ್ಥಗಾರರನ್ನು ಒಳಗೊಂಡಿರುವ ಸಂಕೀರ್ಣ ವಿವಾದವಾಗಿದೆ.

## [III.] ಕರ್ನಾಟಕದ ಗಡಿ ವಿವಾದಗಳು [Border Disputes of Karnataka]:

ಭಾರತವು ಸ್ವತಂತ್ರಗೊಂಡಾಗ 12 ಬ್ರಿಟಿಷ್ ಪ್ರಾಂತ್ಯಗಳು ಮತ್ತು 560 ಕ್ಕೂ ಅಧಿಕ ದೇಶೀಯ ಸಂಸ್ಥಾನಗಳಲ್ಲಿ ವಿಭಜನೆಯಾಗಿತ್ತು. ಅಂದಿನ ಗೃಹ ಮಂತ್ರಿ ಸರ್ದಾರ ಪಟೇಲರು ವಿಲೀನ ಒಪ್ಪಂದದ ನೆರವಿನಿಂದ ಭಾರತ ಒಕ್ಕೂಟವನ್ನು ಏಕೀಕರಿಸಿದರು. ಆಗ ಸಂವಿಧಾನ ರಚನಾಕಾರರು ಎ. ಬಿ. ಸಿ. ಡಿ. ವರ್ಗದ ರಾಜ್ಯಗಳನ್ನು ಅನುಮೋದಿಸಿ ಸಂವಿಧಾನದಲ್ಲಿ ನಮೂದಿಸಿದರು. ಆದರೆ, ಭಾರತದ ಹಲವೆಡೆ ಭಾಷಾಧಾರಿತ ರಾಜ್ಯಗಳ ರಚನೆಗೆ ಹೋರಾಟಗಳು ಜರುಗಿದವು. ಆ ಪೈಕಿ ತೆಲಗು ಭಾಷಿಕರಿಗಾಗಿ ಆಂಧ್ರ ಪ್ರದೇಶವೆಂಬ ರಾಜ್ಯ ರಚನೆಗೆ ಒತ್ತಾಯಿಸಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದ ಪೊಟ್ಟಿ ಶ್ರೀರಾಮುಲು ಡಿಸೆಂಬರ್ 16, 1952 ರಂದು ಮರಣ ಹೊಂದಿದರು. ಆಗ ಕೇಂದ್ರ ಸರ್ಕಾರವು ಅನಿವಾರ್ಯವಾಗಿ ಆಂಧ್ರ ಪ್ರದೇಶವೆಂಬ ರಾಜ್ಯವನ್ನು ರಚಿಸಿತು. ಈ ಬೆಳವಣಿಗೆಯ ಬೆನ್ನಲ್ಲೆ ದೇಶದ ವಿವಿಧ ಭಾಗಗಳಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಗೆ ಬೇಡಿಕೆ ಹೆಚ್ಚಾಗತೊಡಗಿದವು. . ಮಣಿದ ಕೇಂದ್ರ ಸರ್ಕಾರವು ರಾಜ್ಯಗಳ ಗಡಿಗಳ ಪುನರ್ ವಿಂಗಡಣೆಗಾಗಿ ಡಿಸೆಂಬರ್ 29, 1953 ರಂದು ಫಜಲ್ ಅಲಿ , ಕೆ. ಎಂ. ಫಣಿಕ್ಕರ ಹಾಗೂ ಹೆಚ್. ಎನ್. ಕುಂಜ್ರು ಸದಸ್ಯರಾಗಿದ್ದ ರಾಜ್ಯಗಳ ಪುನರ್ ವಿಂಗಡಣಾ ಆಯೋಗವನ್ನು (The States Reorganisation Commission ) ರಚಿಸಿತು . ಫಜಲ್ ಅಲಿ ಆಯೋಗವು ಭಾಷಾಧಾರದ ಮೇಲೆ ರಾಜ್ಯಗಳನ್ನು ರಚಿಸಲು ಶಿಫಾರಸು ಮಾಡಿತು. ಕೇಂದ್ರ ಸರ್ಕಾರವು ಆಯೋಗದ ಶಿಫಾರಸಿನಂತೆ ರಾಜ್ಯಗಳ ಪುನರ್ ವಿಂಗಡಣಾ ಕಾಯ್ದೆ 1956 ರ ಮೂಲಕ ವಿವಿಧ ಭಾಷಾಧಾರಿತ ರಾಜ್ಯಗಳನ್ನು ಜಾರಿಗೊಳಿಸಿತು. ಫಲವಾಗಿ ನವೆಂಬರ್ 1, 1956 ರಂದು ಏಕೀಕೃತ ವಿಶಾಲ ಮೈಸೂರು ರಾಜ್ಯದ ಉಗಮವಾಯಿತು .



ಫಜಲ್ ಅಲಿ ಆಯೋಗದ ಶಿಫಾರಸ್ಸುಗಳು ಸಾರ್ವತ್ರಿಕವಾಗಿ ಒಪ್ಪಿಗೆಯಾಗದ್ದರಿಂದ ಕೆಲವು ರಾಜ್ಯಗಳ ನಡುವೆ ಗಡಿ ವಿವಾದಗಳು ಹುಟ್ಟಿಕೊಂಡವು . ಕರ್ನಾಟಕವೂ ಸಹ ಗಡಿ ವಿವಾದಗಳಿಂದ ಹೊರಗುಳಿದಿರಲಿಲ್ಲ. 1956 ರ ಬಳಿಕ ಅಂದರೆ ಪ್ರಸ್ತುತ ಕರ್ನಾಟಕ ರಾಜ್ಯವು ಉತ್ತರದಲ್ಲಿ ಮಹಾರಾಷ್ಟ್ರ , ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು , ಪೂರ್ವಕ್ಕೆ ತೆಲಂಗಾಣ ಮತ್ತು ಆಂಧ್ರಪ್ರದೇಶ , ಪಶ್ಚಿಮದಲ್ಲಿ ಗೋವಾ ಮತ್ತು ಅರಬ್ಬಿ ಸಮುದ್ರದೊಂದಿಗೆ ತನ್ನ ಗಡಿಯನ್ನು ಹಂಚಿಕೊಳ್ಳುವಂತಾಯಿತು. ಇದರಿಂದಾಗಿ ಕರ್ನಾಟಕವು ತನ್ನ ನೆರೆಯ ರಾಜ್ಯಗಳೊಡನೆ ಹಲವು ಗಡಿ ವಿವಾದಗಳನ್ನು ಅನುಭವಿಸುವಂತಾಗಿದೆ. ಆ ಪೈಕಿ ಪ್ರಮುಖವಾದ ಗಡಿ ವಿವಾದಗಳನ್ನು ಸಂಕ್ಷಿಪ್ತವಾಗಿ ಕೆಳಗೆ ವಿವರಿಸಲಾಗಿದೆ.

1. ಕರ್ನಾಟಕ ಮತ್ತು ಮಹಾರಾಷ್ಟ್ರಗಳ ನಡುವಿನ ಗಡಿ ವಿವಾದ: ಬೆಳಗಾವಿಯನ್ನು ಕೆಲ ಮರಾಠಿಗರು ಮಹಾರಾಷ್ಟ್ರ ರಾಜ್ಯಕ್ಕೆ ಸೇರ್ಪಡೆಗೊಳಿಸಲು ಬಯಸಿದರು. ಆದರೆ ರಾಜ್ಯಗಳ ಪುನರ್ವಿಂಗಡಣಾ ಆಯೋಗವು 1881 ರ ಜನಗಣತಿ ಆಧರಿಸಿ ಬಹುಸಂಖ್ಯಾತ ಕನ್ನಡಿಗರಿರುವ ಬೆಳಗಾವಿಯನ್ನು ಮೈಸೂರು ರಾಜ್ಯಕ್ಕೆ ಸೇರ್ಪಡೆಗೊಳಿಸಿತು. ಆದರೆ, ಕನ್ನಡ ಮಾತನಾಡುವ ಬಹುಭಾಗಗಳು ಮಹಾರಾಷ್ಟ್ರಕ್ಕೆ ಸೇರಿಕೊಂಡವು. ಉದಾ– ಅಕ್ಕಲಕೋಟ , ಸೊಲ್ಲಾಪುರ , ಶಿರೋಳ & ಜತ್ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ನೂರಕ್ಕೆ ನೂರು ಕನ್ನಡಿಗರಿದ್ದರೂ ಮಹಾರಾಷ್ಟ್ರಕ್ಕೆ ಸೇರಿದುದು. ಈ ನಿಲುವಿಗೆ ರಾಜ್ಯಗಳ ಪುನರ್ವಿಂಗಡಣಾ ಆಯೋಗವು ಅನುಸರಿಸಿದ ತಾಲ್ಲೂಕುವಾರು ಹಂಚಿಕೆಯ ನಿಯಮವು ಪ್ರಧಾನ ಕಾರಣವಾಗಿತ್ತು. ಫಲವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ನಡುವೆ ಗಡಿ ವಿವಾದ ಭುಗಿಲೆದ್ದಿತು. ಈ ಗಡಿ ವಿವಾದವನ್ನು ಇತ್ಯರ್ಥಪಡಿಸಲು ಕೇಂದ್ರ ಗೃಹ ಸಚಿವರಾದ ಗೋವಿಂದ ವಲ್ಲಬ ಪಂತ್ ನಿರ್ದೇಶನದಂತೆ ಮೈಸೂರು ಮುಖ್ಯಮಂತ್ರಿ – ಬಿ.ಡಿ ಜತ್ತಿ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿ ವೈ . ಬಿ . ಚವ್ಹಾಣ್ ತಲಾ ಇಬ್ಬರನ್ನು ನಾಮ ನಿರ್ದೇಶನಗೊಳಿಸಿ ನಾಲ್ಕು ಸದಸ್ಯರ ಸಮಿತಿಯೊಂದನ್ನು ನವೆಂಬರ್ 30, 1960 ರಂದು ರಚಿಸಿದರು. . ದಾಂಡೆಯಲ್ಲಿ ನಡೆದ ಸಭೆಯಲ್ಲಿ ಮಹಾರಾಷ್ಟ್ರದ ಪ್ರತಿನಿಧಿಗಳು ಗ್ರಾಮೀಣ ಪ್ರದೇಶವನ್ನು ಒಂದು ಘಟಕವಾಗಿ ಪರಿಗಣಿಸಿ ಭಾಷಾವಾರು ಪ್ರದೇಶಗಳ ಹಂಚಿಕೆಯನ್ನು ಪ್ರತಿಪಾದಿಸುತ್ತಾರೆ. ಆದರೆ ಕರ್ನಾಟಕದಿಂದ ಪ್ರತಿನಿಧಿಸಿದ ಸದಸ್ಯರು ಇದನ್ನು ತೀವ್ರವಾಗಿ ವಿರೋಧಿಸಿ ರಾಜ್ಯಗಳ ಪುನರ್ವಿಂಗಡಣಾ ಕಾಯ್ದೆ 1956 ರಂತೆ ಜಿಲ್ಲೆಯನ್ನು ಒಂದು ಘಟಕವಾಗಿ ಪರಿಗಣಿಸಲು ಒತ್ತಾಯಿಸುತ್ತಾರೆ. ಮಹಾರಾಷ್ಟ್ರದಿಂದ ನಾಮನಿರ್ದೇಶಿತರಾದ ಸದಸ್ಯರು ವಿವಿಧ ಗ್ರಾಮಗಳು ಹಾಗೂ ಪ್ರಾಂತ್ಯಗಳಿಗಿಂತ ಬೆಳಗಾವಿ ನಗರದ ಸೇರ್ಪಡೆಗೆ ಆದ್ಯತೆ ನೀಡುತ್ತಾರೆ. ಹೀಗಾಗಿ ಪಾಟಸ್ಕರ ಸಮಿತಿಯು ( ನಾಲ್ಕು ಸದಸ್ಯರ ಸಮಿತಿ ) ವಿವಾದ ಬಗೆ ಹರಿಸುವಲ್ಲಿ ವಿಫಲಗೊಂಡಿತು.

ಮುಂದೆ ಮಹಾರಾಷ್ಟ್ರದ ನಾಯಕರಾದ ಸೇನಾಪತಿ ಬಾಪಟ್ ಗಡಿ ವಿವಾದ ಬಗೆಹರಿಸಲು ಸಮಿತಿಯನ್ನು ನೇಮಿಸಬೇಕೆಂದು ಒತ್ತಾಯಿಸಿ ಉಪವಾಸ ಸತ್ಯಾಗ್ರಹ ಕೈಗೊಂಡರು. ಪ್ರತಿಫಲವಾಗಿ ಏಕ ಸದಸ್ಯ ಮಹಾಜನ್ ಆಯೋಗ ನೇಮಕವಾಗುತ್ತದೆ. ಮಹಾರಾಷ್ಟ್ರ ಸರ್ಕಾರದ ಒತ್ತಡದಿಂದ ಅಂದಿನ ಕೇಂದ್ರ ಗೃಹ ಸಚಿವ ವೈ.ಬಿ ಚೌಹಾಣರು 1965 ರಲ್ಲಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಯಾದ ಜಸ್ಟೀಸ ಮಹರಚಂದ ಮಹಾಜನರ ಅಧ್ಯಕ್ಷತೆಯಲ್ಲಿ ಏಕವ್ಯಕ್ತಿ ಆಯೋಗವನ್ನು ನೇಮಿಸಿದರು. ಮೈಸೂರು ಮತ್ತು ಮಹಾರಾಷ್ಟ್ರಗಳ ಮುಖ್ಯಮಂತ್ರಿಗಳಾದ ಎಸ್.ನಿಜಲಿಂಗಪ್ಪ ಹಾಗೂ ವಿ.ಪಿ ನಾಯಕರು ಈ ಆಯೋಗದ ತೀರ್ಪಿಗೆ ಬದ್ಧವಿರುವುದಾಗಿ ತಿಳಿಸಿದರು . ಆಯೋಗವು ಅಕ್ಟೋಬರ್ 25 , 1966 ರಂದು ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿ ವಾದಗ್ರಸ್ಥ ಪ್ರದೇಶಗಳನ್ನೆಲ್ಲ ಸಂಚರಿಸಿ ಮಾಹಿತಿ ಸಂಗ್ರಹಿಸಿತು . ಅಂತಿಮವಾಗಿ ಮಹಾಜನ್ ಆಯೋಗವು ತನ್ನ ವರದಿಯನ್ನು ನವೆಂಬರ್ 4 , 1969 ರಂದು ಪ್ರಕಟಿಸಿತು. ಮಹಾರಾಷ್ಟ್ರ ತನಗೆ ಸೇರಬೇಕೆಂದು ಕೇಳಿದ್ದ 814 ಗ್ರಾಮಗಳ ಪೈಕಿ 264 ಗ್ರಾಮಗಳನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲು ಶಿಫಾರಸ್ಸು ಮಾಡಿತಲ್ಲದೇ ಕರ್ನಾಟಕವು ಮಹಾರಾಷ್ಟ್ರದಿಂದ ಕೇಳಿದ್ದ 516 ಗ್ರಾಮಗಳ ಪೈಕಿ 247 ಗ್ರಾಮಗಳನ್ನು ವರ್ಗಾಯಿಸಲು ಸಮ್ಮತಿಸಿತು. ಈ ವರದಿಯನ್ನು ಕರ್ನಾಟಕ ಒಪ್ಪಿಕೊಂಡರೆ ಮಹಾರಾಷ್ಟ್ರ ತಾನು ಬಯಸಿದ್ದ ಬೆಳಗಾವಿ ಮತ್ತು ಕಾರವಾರಗಳು ತನಗೆ ದೊರೆಯಲಿಲ್ಲವೆಂಬ ಕಾರಣಕ್ಕೆ ತಿರಸ್ಕರಿಸಿತು . ಎರಡೂ ರಾಜ್ಯಗಳ ರಾಜಕೀಯ ಪಕ್ಷಗಳು ಮತ್ತು ಭಾಷಾ ಸಂಘಟನೆಗಳ ಸ್ವಾರ್ಥ ಸಾಧನೆಯ ಸಾಧನವಾಗಿ ಇಂದಿಗೂ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ನಡುವಿನ ಗಡಿ ವಿವಾದ ಜೀವಂತವಾಗಿರುವುದು ಗಮನಾರ್ಹ ಸಂಗತಿ.

2. ಕರ್ನಾಟಕ ಮತ್ತು ಕೇರಳಗಳ ನಡುವಿನ ಗಡಿ ವಿವಾದ: ನವೆಂಬರ್ 1 , 1956 ರಂದು ಕನ್ನಡ ಭಾಷಿಕರ ಏಕೀಕೃತ ಮೈಸೂರು ಅಸ್ತಿತ್ವಕ್ಕೆ ಬಂದರೂ ಕನ್ನಡಿಗರು ಹೆಚ್ಚಾಗಿರುವ ಕಾಸರಗೋಡು ಪ್ರದೇಶ ಹೊರಗುಳಿಯಿತು. ಈ ಬೆಳವಣಿಗೆಯು ಕರ್ನಾಟಕ ಹಾಗೂ ಕೇರಳಗಳ ನಡುವೆ ಗಡಿ ಸಮಸ್ಯೆಗೆ ಕಾರಣವಾಗಿದೆ. ಕಾಸರಗೋಡು, ಮಂಜೇಶ್ವರ , ನೀಲೇಶ್ವರ , ಹೊಸದುರ್ಗ , ಕುಂಬ್ಳೆ ಮೊದಲಾದ ಪ್ರದೇಶಗಳು ಕನ್ನಡ ಭಾಷಿಕರಿಂದ ಕೂಡಿದ್ದವು. ಈ ಪ್ರದೇಶಗಳಲ್ಲಿ 2 ಲಕ್ಷ ಕನ್ನಡಿಗರಿದ್ದರೆ 1.48 ಲಕ್ಷ ಮಲೆಯಾಳಿಗಳಿದ್ದರು . ಅಲ್ಲಿ ಮಾತನಾಡುವ ತುಳು ಕನ್ನಡದೊಂದಿಗೆ ಸಂಬಂಧ ಹೊಂದಿತ್ತು . ಸಾಂಸ್ಕೃತಿಕವಾಗಿ , ಐತಿಹಾಸಿಕವಾಗಿ & ಭೌಗೋಳಿಕವಾಗಿ ಕಾಸರಗೋಡು ಪರಿಸರವು ಮೈಸೂರಿಗೆ ಹತ್ತಿರವಾಗಿತ್ತು. ಕಾಸರಗೋಡಿನ 36 ಪಂಚಾಯತಗಳಲ್ಲಿ 35 ಪಂಚಾಯತಿಗಳು ಮೈಸೂರಿಗೆ ಸೇರಲು ಅಪೇಕ್ಷಿಸಿದ್ದವು . ಅಲ್ಲಿನ ವಕೀಲರ ಭಾಷೆ ಹಾಗೂ ಉಪ ನೊಂದಾವಣಾಧಿಕಾರಿಗಳ ದಾಖಲೆಗಳು ಕನ್ನಡದಲ್ಲಿದ್ದವು . ಆದರೆ, ಚಂದ್ರಗಿರಿ ನದಿಯನ್ನು ಕರ್ನಾಟಕ ಹಾಗೂ ಕೇರಳಗಳ ನಡುವೆ ಗಡಿಯಾಗಬೇಕೆಂದು ರಾಜ್ಯಗಳ ಪುನರವಿಂಗಡಣಾ ಆಯೋಗದ ಸದಸ್ಯರಾದ ಕೆ. ಎಂ. ಫಣಿಕರ್ ಒತ್ತಾಯಿಸಿ



ಜನಾಭಿಪ್ರಾಯದ ನೆಪವೊಡ್ಡಿ ಕಾಸರಗೋಡನ್ನು ಕೇರಳಕ್ಕೆ ಸೇರಿಸಲಾಯಿತು . ಫಲವಾಗಿ ಏಕೀಕೃತ ಕನ್ನಡಿಗರ ವಿಶಾಲ ಮೈಸೂರು ರಚನೆಗೊಂಡ 1-11-1956 ರಂದು ಕಾಸರಗೋಡು ಕನ್ನಡಿಗರು ಕರಾಳ ದಿನವನ್ನಾಗಿ ಆಚರಿಸಿದರು. ಕೇರಳದವರಾದ ಕೆ.ಎಂ. ಫಣಿಕರ್ ಕಾರಣದಿಂದಲೇ ಕಾಸರಗೋಡು ಪರಿಸರವು ಕರ್ನಾಟಕದಿಂದ ಹೊರಗುಳಿಯಿತೆಂದು ವಾದಿಸಿ ಅವರ ಪ್ರತಿಕೃತಿ ದಹಿಸಲಾಯಿತು.

ಕಯ್ಯಾರ ಕಿಯಣ್ಣ ರೈ ಹಾಗೂ ಗೋವಿಂದ ಪೈ ಕಾಸರಗೋಡು ಪರಿಸರವನ್ನು ಕರ್ನಾಟಕದೊಡನೆ ವಿಲೀನಗೊಳಿಸಲು ಬೆಂಬಲಿಸಿದರು. ಕನ್ನಡ ಭಾಷಿಕರಿರುವ ಚಂದ್ರಗಿರಿ ನದಿಯ ಉತ್ತರ ಭಾಗವನ್ನು ಕರ್ನಾಟಕಕ್ಕೆ ವರ್ಗಾಯಿಸುವಂತೆ ಮನವಿ ಮಾಡಿದರು . ಆದರೆ, ಕೇರಳವು ಕಾಸರಗೋಡು ತನ್ನ ಕೈತಪ್ಪದಂತೆ ಅದನ್ನು ಜಿಲ್ಲೆಯಾಗಿ ಪರಿವರ್ತಿಸಿ ಸರ್ವಾಂಗೀಣ ಅಭಿವೃದ್ಧಿ ಕೈಗೊಂಡಿದೆ . ಕರ್ನಾಟಕ ಏಕೀಕರಣ ಸಮಿತಿಯು ಕಾಸರಗೋಡು ಉಳಿವಿಗಾಗಿ ಹೋರಾಟ ನಡೆಸುತ್ತಾ ಬಂದಿರುವುದು ಕ್ರನಾಟಕ ಮತ್ತು ಕೇರಳಗಳ ನಡುವಿನ ಗಡಿ ವಿವಾದವನ್ನು ಉಲ್ಬಣಗೊಳಿಸಿದೆ.

3. ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳ ನಡುವಿನ ಗಡಿ ವಿವಾದ: 1953 ರಲ್ಲಿ ಆಂಧ್ರ ರಚನೆಯಾದ ಮೇಲೆ ವಾಂಚೂ ಸಮಿತಿಯ ವರದಿಯಂತೆ ಬಳ್ಳಾರಿಯನ್ನು ಮೈಸೂರಿಗೆ ಸೇರಿಸಲಾಯಿತು . ಆದರೆ, ಆಲೂರು , ರಾಯದುರ್ಗ ಮತ್ತು ಆದೋನಿ ತಾಲ್ಲೂಕುಗಳ ಕನ್ನಡ ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸಲಾಯಿತು . ಹೀಗಾಗಿ ಆದೋನಿ ತಾಲ್ಲೂಕಿನ ಭುವನೇಶ್ವರಿ ಸಂಘ ಹಾಗೂ ವಿಜಯನಗರ ಸಂಘಗಳು ಹೋರಾಟಕ್ಕೆ ಇಳಿದವು . ಗಮನಾರ್ಹ ಅಂಶವೇನೆಂದರೆ, ರಾಯದುರ್ಗ ತಾಲ್ಲೂಕಿನ ಹೀರೆಹಾಳು ಹೋಬಳಿಯಲ್ಲಿ ಸಂಪೂರ್ಣವಾಗಿ ಕನ್ನಡ ಭಾಷಿಕರಿದ್ದರೂ ತಾಲ್ಲೂಕು ಘಟಕವೇ ರಾಜ್ಯಗಳ ಪುನರವಿಂಗಡಣಾ ಆಯೋಗದ ಮಾನದಂಡವಾದ್ದರಿಂದ ಅದನ್ನು ಆಂಧ್ರಕ್ಕೆ ಸೇರಿಸಲಾಯಿತು . ಹಂಚೇರು , ಮಡಕಶಿರಾಗಳನ್ನು ಸಹ ಆಂಧ್ರಕ್ಕೆ ಸೇರಿಸಲಾಯಿತು . ಆಂಧ್ರ ಗಡಿ ಭಾಗದ ಕನ್ನಡಿಗರ ಸಂಖ್ಯೆ ಕಡಿಮೆಯಾಗಿರುವುದರಿಂದ ಈ ಗಡಿ ವಿವಾದ ಸಾಕಷ್ಟು ಸದ್ದು ಮಾಡಲಿಲ್ಲ.

4. ಕರ್ನಾಟಕ ಮತ್ತು ತಮಿಳುನಾಡು ನಡುವಿನ ಗಡಿ ವಿವಾದ: ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಹೊಸುರು ತಾಲ್ಲೂಕನ್ನು ತಮಿಳುನಾಡಿಗೆ ಸೇರಿಸಲಾಗಿದೆ . ಆದರೆ, ಆ ತಾಲ್ಲೂಕಿನ ಗಡಿ ಗ್ರಾಮಗಳು ಬಹು ಸಂಖ್ಯಾತ ಕನ್ನಡಿಗರಿಂದ ಕೂಡಿವೆ. ಉದಾ- ಕರ್ನಾಟಕದ ಆನೆಕಲ್‌ಗೆ ಹೊಂದಿಕೊಂಡಿರುವ ಗುಮ್ಮಳಾಪುರ. ಇಲ್ಲಿನ ಕನ್ನಡ ಶಾಲೆಗಳನ್ನು ರದ್ದುಮಾಡಿ ತಮಿಳು ಶಾಲೆಗಳನ್ನು ಆರಂಭಿಸಲಾಗಿದೆ . ಹೀಗಾಗಿ ಅಲ್ಲಿನವರು ತಮಿಳೀಕರಣಗೊಳ್ಳುತ್ತಿದ್ದುದು ಕನ್ನಡಿಗರನ್ನು ಅಸಮಧಾನಗೊಳಿಸುತ್ತಿದೆ.

ಪ್ರಸ್ತುತ ಕರ್ನಾಟಕಕ್ಕೆ ರಾಜಕೀಯ ಗಡಿಗಳಿವೆಯೇ ಹೊರತು ಭಾಷಿಕ ಅಥವಾ ಸಾಂಸ್ಕೃತಿಕ ಗಡಿಗಳಿಲ್ಲ . ಕರ್ನಾಟಕದ ಗಡಿಗಳಲ್ಲಿ ಮತ್ತು ಕರ್ನಾಟಕದ ಒಳಗೆ ಅನ್ಯ

ಭಾಷಿಕರ ಪ್ರಭಾವ ಅಧಿಕಗೊಳ್ಳುತ್ತಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಗಡಿಗಳು ಮನಸ್ತಾಪಗಳನ್ನು ಹುಟ್ಟು ಹಾಕುವುದಿಲ್ಲ, ಬದಲಾಗಿ ಮನಸ್ತಾಪಗಳು ಗಡಿಗಳನ್ನು ಹುಟ್ಟು ಹಾಕುತ್ತವೆ ಎಂಬೋಕ್ತಿಯಂತೆ ಒಂದು ದೇಶದ ಪರಿಕಲ್ಪನೆಯ ಬಗ್ಗೆ ವಿವಿಧ ರಾಜ್ಯಗಳ ಜನರಲ್ಲಿ ಜಾಗೃತಿ ಮೂಡಿಸಬೇಕಾದ ಅವಶ್ಯಕತೆಯಿದೆ. ಕೇಂದ್ರ ಸರ್ಕಾರವು ಒಂದು ದೇಶ, ಒಂದು ತೆರಿಗೆ ಅಡಿಯಲ್ಲಿ ಈಗಾಗಲೇ ಜಿಎಸ್‌ಟಿ ಜಾರಿಗೊಳಿಸಿದ್ದು ಇದು ತೆರಿಗೆ ಮಾತ್ರ ಸೀಮಿತವಾಗದೇ ಭಾವನೆಗಳಿಗೂ ಅನ್ವಯಿಸಿ ಅಂತರ್‌ರಾಜ್ಯ ವಿವಾದಗಳಿಗೆ ತೆರೆ ಬೀಳಲಿ ಎಂದು ಆಶಿಸೋಣ.

## [IV.] ಕರ್ನಾಟಕದಲ್ಲಿ ರೈತರ ಸಮಸ್ಯೆಗಳು [Peasant Issues in Karnataka]:

ಭಾರತವು ಕೃಷಿ ಪ್ರಧಾನ ದೇಶ. ಶೇ 70 ರಷ್ಟು ಜನರು ಭಾರತದಲ್ಲಿ ಇಂದಿಗೂ ಕೃಷಿಯನ್ನೇ ತಮ್ಮ ಜೀವನಾಧಾರ ಉದ್ಯೋಗವೆಂದು ಪರಿಗಣಿಸಿದ್ದಾರೆ. ಕೃಷಿಯಲ್ಲಿ ತೊಡಗಿದ ಜನರು ಅಂದರೆ ರೈತರು ಪ್ರಾಚೀನ ಕಾಲದಿಂದಲೂ ನಾನಾ ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿದ್ದು ಬ್ರಿಟಿಷರ ಆಳ್ವಿಕೆ ಕಾಲದಲ್ಲಿ ಕೃಷಿಯನ್ನು ಅವಲಂಬಿಸಿದವರ ಸಮಸ್ಯೆಗಳು ಉಲ್ಬಣಗೊಂಡವು. ಮುಂದೆ ಸ್ವತಂತ್ರ ಭಾರತದಲ್ಲೂ ರೈತರ ಸಮಸ್ಯೆಗಳು ಬೇರೆ ಸ್ವರೂಪದೊಡನೆ ಜೀವಂತವಾಗಿಯೇ ಮುಂದುವರೆದಿವೆ. ಕೃಷಿಕರು ಆಯಾ ಕಾಲಘಟ್ಟದಲ್ಲಿ ಸಮಸ್ಯೆಗಳ ಸ್ವರೂಪಕ್ಕನುಸಾರ ತಮ್ಮ ಹಿತಾಸಕ್ತಿ ರಕ್ಷಣೆಗಾಗಿ ಹೋರಾಟ ಮಾಡುತ್ತಾ ಬಂದಿರುವರು. ಕ್ಯಾಥಲಿನ್ ಗಾಫ್ ಎಂಬ ಚಿಂತಕಿ 77 ರೈತ ಚಳುವಳಿಗಳನ್ನು ಭಾರತದ ಇತಿಹಾಸದಲ್ಲಿ ಗುರುತಿಸಿದ್ದು ಕರ್ನಾಟಕದ ರೈತರೂ ಸಹ ಇದರಲ್ಲಿ ಪಾಲು ಹೊಂದಿದ್ದಾರೆ. ಅನ್ನದಾತ, ನೇಗಿಲ ಯೋಗಿ, ದೇಶದ ಬೆನ್ನೆಲುಬು ಎಂಬುದಾಗಿ ಪರಿಗಣಿಸಲ್ಪಡುವ ರೈತ ಇಂದಿಗೂ ಸಹ ಸಂಕಷ್ಟದಲ್ಲಿದ್ದಾನೆ.

ರೈತರ ಸಮಸ್ಯೆಗಳನ್ನು ಅಧ್ಯಯನ ಮಾಡುವ ಮೊದಲು ರೈತ ಪದದ ಸ್ಪಷ್ಟ ಪರಿಕಲ್ಪನೆ ಹೊಂದುವುದು ಅವಶ್ಯಕ. ಇದರಿಂದ ರೈತರ ಸಮಸ್ಯೆಗಳ ಪರಿಪೂರ್ಣ ಮನವರಿಕೆ ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಕೃಷಿ ಕಾರ್ಯದಲ್ಲಿ ತೊಡಗಿರುವವರನ್ನು ರೈತ ಎನ್ನಲಾಗುತ್ತದೆ. ವಿಶಾಲಾರ್ಥದಲ್ಲಿ ಕೃಷಿ ಭೂಮಿಗೆ ಸಂಬಂಧಿಸಿದ ನಾನಾ ವರ್ಗದ ಜನರು ರೈತರಾಗಿರುತ್ತಾರೆ. ಗೈರು ಹಾಜರಿ ಕೃಷಿ ಭೂ ಮಾಲಿಕರು, ಕೃಷಿ ಮೇಲ್ವಿಚಾರಕರು, ಉಳುಮೆದಾರ ಕೃಷಿ ಭೂ ಮಾಲಿಕರು, ಕೃಷಿ ಬೆಳೆಯ ಪಾಲುದಾರರು, ಕೃಷಿ ಭೂಮಿಯ ಗೇಣಿದಾರರು ಹಾಗೂ ಬೂರಹಿತ ಕೃಷಿ ಕಾರ್ಮಿಕರು ರೈತ ಪದದ ವ್ಯಾಪ್ತಿಗೊಳಪಡುತ್ತಾರೆ. ಭಾರತೀಯ ಸಮಾಜದ ಸಂಕೀರ್ಣ ರೈತ ವರ್ಗವನ್ನು ಸಮಾಜಶಾಸ್ತ್ರಜ್ಞರು ಭೂ ಮಾಲಿಕತ್ವ ಮಾಲಿಕತ್ವದಲ್ಲಿನ ಭೂಮಿಯ ಗಾತ್ರ, ಸಂಪನ್ಮೂಲಗಳ ಬಳಕೆ ಮುಂತಾದ ಅಂಶಗಳನ್ನಾಧರಿಸಿ ವರ್ಗೀಕರಿಸಲು ಪ್ರಯತ್ನಿಸಿದ್ದಾರೆ. ಭೂ ಮಾಲಿಕತ್ವವಿಲ್ಲದ ಕೃಷಿ ಮೇಲ್ವಿಚಾರಕರು, ಗೇಣಿದಾರರು ಹಾಗೂ ಕೃಷಿ ಕಾರ್ಮಿಕರು ರೈತ ಸಮುದಾಯದ ಭಾಗವೆಂಬುದು ಗಮನಾರ್ಹ. ಆದ್ದರಿಂದಲೇ ಇರ್ಫಾನ್ ಹಬಿಬ್ ಕೃಷಿ ಕಾರ್ಮಿಕರ ಚಳುವಳಿಯ ಇತಿಹಾಸವು ರೈತ ಚಳುವಳಿ ಇತಿಹಾಸದ ಭಾಗ ಎಂದಿರುವರು. ಪ್ರಸ್ತುತ ನಾವು



ಕರ್ನಾಟಕಕ್ಕೆ ಸೀಮಿತವಾಗಿ ರೈತ ಸಮುದಾಯವು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲೋಣ.

1. **ಸಮಸ್ಯೆಗಳ ಉದಾಸೀನ:** ಕರ್ನಾಟಕದಲ್ಲಿ ರಾಜ ಮಹರಾಜರ ಕಾಲದಿಂದಲೂ ರೈತರ ಸಮಸ್ಯೆಗಳನ್ನು ಕಡೆಗಣಿಸಿರುವ ಕಾರಣಕ್ಕೆ ಸಮಸ್ಯೆಗಳು ಇಂದಿಗೂ ಜೀವಂತವಾಗಿವೆ. ಬ್ರಿಟಿಷರ ಕಾಲದಲ್ಲೂ ರೈತರ ಸಮಸ್ಯೆಗಳನ್ನು ಕಡೆಗಣಿಸಲಾಯಿತು. ಅಧಿಕ ಕಂದಾಯ ಹೇರಿಕೆ, ವಿಶೇಷ ಗೇಣಿ ವಸೂಲಿ, ಭೂ ಮಾಲಿಕರ ಕಿರುಕುಳ, ರೈತರ ಒಕ್ಕಲೆಬ್ಬಿಸುವಿಕೆ ಮುಂತಾದ ರೈತ ಸಮುದಾಯದ ಸಮಸ್ಯೆಗಳನ್ನು ಬ್ರಿಟಿಷ್ ಸರ್ಕಾರ ನಿರ್ಲಕ್ಷಿಸಿತು. ರೈತರ ಸಂಕಟಗಳಿಗೆ ಕಿವಿಗೊಡದೇ ಮಧ್ಯವರ್ತಿಗಳ ರಕ್ಷಣೆಗೆ ಪೂರಕವಾಗಿ ಬ್ರಿಟಿಷ್ ಆಳ್ವಿಕೆ ನಡೆದುಕೊಂಡಿತು. ಅಲ್ಲದೇ ಸ್ವತಂತ್ರ್ಯೋತ್ತರ ಸರ್ಕಾರಗಳೂ ಕೂಡ ರೈತರ ಹಿತಾಸಕ್ತಿಗೆ ಬದ್ಧತೆಯನ್ನು ತೋರದೇ ಅವರನ್ನು ಕಡೆಗಣಿಸುತ್ತಿವೆ. ಪ್ರಸ್ತುತ ರೈತರ ಮೂಲಭೂತ ಬೇಡಿಕೆಗಳಾದ ಉತ್ತಮ ಬೀಜ, ರಸಗೊಬ್ಬರ, ಸೂಕ್ತ ಮಾರುಕಟ್ಟೆ, ಉಚಿತ ವಿದ್ಯುತ್, ಬೆಂಬಲ ಬೆಲೆ ಘೋಷಣೆ ಮುಂತಾದ ಸಮಸ್ಯೆಗಳನ್ನು ಇಂದಿಗೂ ಆಳುವವರು ನಿರ್ಲಕ್ಷಿಸುತ್ತಿರುವುದು ರೈತರ ಸಂಕಷ್ಟಕ್ಕೆ ಕಾರಣವಾಗಿದೆ.

2. **ಅನ್ಯಾಯದ ಮನೋಭಾವ:** ಬ್ರಿಟಿಷರ ಕಾಲದಿಂದಲೂ ರೈತ ಸಮುದಾಯದಲ್ಲಿ ತಾವು ನ್ಯಾಯದಿಂದ ವಂಚಿತರಾದವರೆಂಬ ಭಾವನೆ ಆಳವಾಗಿತ್ತು. ಐರೋಪ್ಯ ಹಾಗೂ ಸ್ಥಳೀಯ ಭೂಮಾಲಿಕರು ತಮಗೆ ನಾನಾ ವಿಧದಲ್ಲಿ ಅನ್ಯಾಯ ಎಸಗುತ್ತಿರುವುದು ಅವರ ವಂಚಿತ ಭಾವನೆಯನ್ನು ಹೆಚ್ಚಿಸಿತು. ಅನ್ಯಾಯಯುತ ವರ್ತನೆಗಳನ್ನು ಸಹಿಸದಾದಾಗ ಚಳುವಳಿ ಮಾರ್ಗವನ್ನು ಬ್ರಿಟಿಷ್ ಆಳ್ವಿಕೆಯಲ್ಲೇ ರೈತ ಸಮುದಾಯ ಅನುಸರಿಸಿತು. ರೈತ ಸಮುದಾಯ ಇಂದಿಗೂ ಸಹ ಅನ್ಯಾಯದ ಭಾವನೆಯಿಂದ ಹೊರ ಬಂದಿಲ್ಲ. ಸಮಾಜದಲ್ಲಿನ ಇತರ ವೃತ್ತಿನಿರತರಷ್ಟು ಆದಾಯವಾಗಲಿ, ಗೌರವವಾಗಲಿ ಅಥವ ಸೌಲಭ್ಯಗಳಾಗಲಿ ತಮಗೆ ದೊರಕುತ್ತಿಲ್ಲವೆಂಬ ಅಸಮಧಾನ ರೈತರದಾಗಿದೆ. ನೈಸರ್ಗಿಕ ವಿಕೋಪಗಳು, ಬೆಲೆ ಕುಸಿತ, ಸಾಲದ ಸಂಕಷ್ಟದ ವೇಳೆ ಸಕಾಲಕ್ಕೆ ಸರ್ಕಾರಗಳು ಸ್ಪಂದಿಸುತ್ತಿಲ್ಲವೆಂಬ ಹತಾಶೆ ರೈತರದಾಗಿದೆ. ಇದರೊಡನೆ ಕೈಗಾರಿಕೋದ್ಯಮಿಗಳು ತಮ್ಮ ಉತ್ಪನ್ನಗಳಿಗೆ ಬೆಲೆ ನಿಗಧಿಪಡಿಸುವಂತೆ ಕೃಷಿ ಉತ್ಪನ್ನಗಳಿಗೆ ಬೆಲೆ ನಿಗಧಿಪಡಿಸುವ ಸ್ವಾತಂತ್ರ್ಯವನ್ನು ತಾವು ಪಡೆದಿಲ್ಲವೆಂಬ ನೋವು ರೈತ ಸಮುದಾಯದಲ್ಲಿದೆ. ಇಂತಹ ವಂಚಿತ ಭಾವನೆಗಳು ರೈತರ ಸಮಸ್ಯೆಗಳನ್ನು ಅಧಿಕಗೊಳಿಸಿವೆ.

3. **ಅವೈಜ್ಞಾನಿಕ ಭೂ ಸ್ವಾಧಿನ:** ಬ್ರಿಟಿಷರು ಲಾಭದ ಕಾರಣವೊಂದಕ್ಕೆ ಕಂದಾಯ ವಸೂಲಿ ಹಕ್ಕನ್ನು ಪಡೆದ ಪ್ರದೇಶದಲ್ಲಿ ಭೂ ಒಡೆತನವನ್ನು ಕೆಲವರ ಸ್ವಾಧೀನಕ್ಕೆ ನೀಡಿದ್ದರು. ನಂತರ ರೈಲ್ವೆ, ರಸ್ತೆ, ಕಾರ್ಖಾನೆಗಳ ಅಭಿವೃದ್ಧಿಯ ಕಾರಣಕ್ಕೆ ರೈತರ ಭೂಮಿಯನ್ನು ವಶಪಡಿಸಿಕೊಂಡರು. ಈ ರೀತಿ ಬ್ರಿಟಿಷರ ಕಾಲದಲ್ಲಿ ರೈತ ಚಳುವಳಿಗೆ ಭೂ ಸ್ವಾಧೀನವು ಕಾರಣವಾಗಿತ್ತು. ಸ್ವತಂತ್ರ್ಯೋತ್ತರ ಸರ್ಕಾರಗಳ ಕಾಲದಲ್ಲೂ ಭೂ ಸ್ವಾಧಿನವು ರೈತರನ್ನು ಆಕ್ರೋಶಗೊಳಿಸಿ ಚಳುವಳಿ ಹೂಡಲು ಪ್ರೇರೇಪಿಸಿದೆ. ಅಧಿಕ ಜನಸಂಖ್ಯೆಗೆ ಪೂರಕವಾಗಿ

ರೈಲ್ವೆ, ರಸ್ತೆ ಹಾಗೂ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ರೈತರ ಫಲವತ್ತಾದ ಭೂಮಿಯ ಸ್ವಾಧಿನಕ್ಕೆ ಸರ್ಕಾರಗಳು ಮುಂದಾಗಿವೆ. ಜೊತೆಗೆ ಅಣೆಕಟ್ಟು ಹಾಗೂ ಕಾಲುವೆಗಳ ರಚನೆಗೆ ಭೂ ಸ್ವಾಧಿನ ಕೆಲವು ರೈತರನ್ನು ಅಸಮಧಾನಗೊಳಿಸಿದೆ. ಮುಂದುವರಿದು, ಸ್ವಾಧೀನದ ವೇಳೆ ಸರ್ಕಾರ ನೀಡುವ ಪರಿಹಾರ ಮೊತ್ತವು ರೈತರ ಕೆಂಗಣ್ಣಿಗೆ ಗುರಿಯಾಗಿದೆ. ಸರ್ಕಾರಗಳು ಅಗತ್ಯಕ್ಕಿಂತ ಹೆಚ್ಚಿನ ಫಲವತ್ತಾದ ಭೂಮಿಯನ್ನು ವಸತಿ, ಕೈಗಾರಿಕೆ, ವಿಮಾನ ನಿಲ್ದಾಣಗಳ ಕಾರಣಕ್ಕೆ ಸ್ವಾಧೀನಪಡಿಸಿಕೊಳ್ಳಲು ಮುಂದಾಗುವುದರಿಂದ ಚಳುವಳಿ ಕಂಡು ಬರುತ್ತವೆ.

4. ನೈಸರ್ಗಿಕ ವಿಕೋಪಗಳು: ಕರ್ನಾಟಕದ ಬಹುಪಾಲು ಕೃಷಿ ನಿಸರ್ಗವನ್ನು ಆಧರಿಸಿದೆ. ಅಂದರೆ ನೈರುತ್ಯ ಮಾನ್ಸೂನ್ ಮಾರುತಗಳು ತರುವ ಮಳೆಯನ್ನು ಕೃಷಿ ಚಟುವಟಿಕೆಗಳು ಅವಲಂಬಿಸಿವೆ. ಹೀಗಾಗಿ ಪ್ರಾಚೀನ ಕಾಲದಿಂದಲೂ ರೈತರ ಸಮಸ್ಯೆಗಳಿಗೆ ಅತಿವೃಷ್ಟಿ, ಬರಗಾಲ, ಪ್ರವಾಹ ಮುಂತಾದ ನೈಸರ್ಗಿಕ ವಿಕೋಪಗಳು ಪರೋಕ್ಷ ಕಾರಣವಾಗಿವೆ. ಇಂದಿಗೂ ರೈತ ಸಮುದಾಯ ಅವಲಂಬಿಸಿರುವ ಕೃಷಿ ಮಾನ್ಸೂನ ಮಳೆಯೊಡನೆ ಆಡುವ ಜೂಜಾಟವಾಗಿದ್ದು ಪರಿಸ್ಥಿತಿ ಭಿನ್ನವಾಗಿಲ್ಲ. ರೈತರು ನೈಸರ್ಗಿಕ ವಿಕೋಪಗಳ ವೇಳೆ ಸರ್ಕಾರಗಳು ತಮ್ಮ ನೆರವಿಗೆ ಧಾವಿಸಬೇಕೆಂದು ಬಯಸುತ್ತಾರೆ. ಈ ವೇಳೆ ಬೆಳೆ ಪರಿಹಾರ, ಕಂದಾಯ ರದ್ದತಿ, ವಿಮೆ ಬಿಡುಗಡೆ ಮುಂತಾದ ಬೇಡಿಕೆಗಳಿಗೆ ರೈತರು ಸರ್ಕಾರವನ್ನು ಒತ್ತಾಯಿಸುವರು. ಸಕಾಲಕ್ಕೆ ಸೂಕ್ತ ಪರಿಹಾರ ನೀಡದಿದ್ದಾಗ ರೈತರು ಸರ್ಕಾರಗಳ ವಿರುದ್ಧ ಚಳುವಳಿ ಮಾರ್ಗ ಹಿಡಿಯುತ್ತಾರೆ.

5. ಸಾಲದ ಹೊರೆ: ರೈತ ತನ್ನ ಭೂಮಿಗೆ ಬೀಜ ಹಾಗೂ ಗೊಬ್ಬರ ಹಾಕಲು ಸಾಲಕ್ಕೆ ಮುಂದಾಗುತ್ತಾನೆ. ಉತ್ತಮ ಫಸಲಿನ ನಿರೀಕ್ಷೆಯೊಡನೆ ಕುಟುಂಬದ ಇತರ ಕಾರಣಗಳಿಗೆ ವಿವಿಧ ಮೂಲಗಳಿಂದ ಸಾಲವನ್ನು ಪಡೆದಿರುತ್ತಾನೆ. ನೈಸರ್ಗಿಕ ವಿಕೋಪಗಳಿಂದ ಬೆಳೆ ಬಾರದೇ ಅಥವ ಬೆಳೆ ಬಂದರೂ ಬೆಲೆ ಬಾರದೇ ಸಾಲ ಅಧಿಕವಾಗುತ್ತದೆ. ಇಂತಹ ನಿರಂತರ ಸನ್ನಿವೇಶ ಎದುರಾದಾಗ ರೈತ ಆತ್ಮಹತ್ಯೆಗೂ ಮುಂದಾಗುತ್ತಾನೆ. ಈ ಬೆಳವಣಿಗೆ ರೈತರು ಸಂಘಟಿತರಾಗಿ ಹೋರಾಡಲು ಸ್ಫೂರ್ತಿ ನೀಡುತ್ತದೆ. ಉದಾ: ವಿಟ್ಠಲ್ ಅರಬಾವಿ ಎಂಬ ರೈತನ ಆತ್ಮಹತ್ಯೆ ಬೆಳಗಾವಿಯಲ್ಲಿ ಕಬ್ಬು ಬೆಳೆಗಾರರ ಹೋರಾಟವನ್ನು ತೀವ್ರಗೊಳಿಸಿತು. ಭಾರತದಲ್ಲಿ ರೈತರು ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲೇ ಸಾಯಬೇಕಾದ ಸ್ಥಿತಿಯಲ್ಲಿದ್ದಾರೆ. ಸಾಲದ ಹೊರೆ ತಾಳಲಾರದ ರೈತರು ಅಧಿಕ ಸಾಲ ನೀಡಿಕೆ, ಸಾಲ ಮನ್ನಾ ಮುಂತಾದ ಬೇಡಿಕೆಗಳನ್ನು ಮುಂದಿಟ್ಟು ಸರ್ಕಾರದ ವಿರುದ್ಧ ಚಳುವಳಿ ಹೂಡುವುದು ಸಾಮಾನ್ಯ ಸಂಗತಿಯಾಗಿದೆ.

6. ರೈತ ವಿರೋಧಿ ನಿರ್ಧಾರಗಳು: ಸ್ವತಂತ್ರ ಭಾರತದಲ್ಲಿ ರೈತ ಚಳುವಳಿಗೆ ಸರ್ಕಾರಗಳ ರೈತ ವಿರೋಧಿ ನಿರ್ಧಾರಗಳು ಕಾರಣವಾಗಿವೆ. ಮುಕ್ತ ವ್ಯಾಪಾರ ಒಪ್ಪಂದಗಳಿಂದ ಬಹು ರಾಷ್ಟ್ರೀಯ ಕಂಪನಿಗಳ ಒತ್ತಡಕ್ಕೊಳಗಾಗಿ ಸಬ್ಸಿಡಿ ಕೈಬಿಡಲು ಸರ್ಕಾರ ಮುಂದಾಗುತ್ತದೆ. ಜೊತೆಗೆ ಆಮದು ಶುಲ್ಕದ ಕಡಿತ ಹಾಗೂ ರಫ್ತು ನಿಷೇಧ ನಿರ್ಧಾರದಿಂದ ರೈತರ ಬೆಳೆಗಳ ಬೆಲೆ ನೆಲ ಕಚ್ಚುತ್ತದೆ. ಹೀಗಾಗಿ ರೈತ ಸಮುದಾಯಕ್ಕೆ



ಮಾರಕವಾದ ನಿರ್ಧಾರಗಳಿಂದ ದೂರವಿರಲು ಸರ್ಕಾರಗಳ ಮೇಲೆ ಒತ್ತಡ ತರಲೆಂದು ಚಳುವಳಿಗಳು ಜರುಗುತ್ತವೆ. ಉದಾ: ಪ್ರಾದೇಶಿಕ ಸಮಗ್ರ ಆರ್ಥಿಕ ಭಾಗವಹಿಸುವಿಕೆ ಒಪ್ಪಂದದ ನಿರ್ಧಾರದಿಂದ ಹಿಂದೆ ಸರಿಯುವಂತೆ 2019 ರಲ್ಲಿ ರೈತ ಹೋರಾಟ ಜರುಗಿತು. ಜೊತೆಗೆ ಗಣಿಗಾರಿಕೆ, ಕೈಗಾರಿಕೆ, ನಗರೀಕರಣಕ್ಕೆ ಸಂಬಂಧಿಸಿದ ನಿರ್ಧಾರಗಳು ರೈತರ ಭೂಮಿಗೆ ಮಾರಕವಾಗುತ್ತವೆ. ಆರ್ಥಿಕ ಹೊರೆಯ ಕಾರಣ ರೈತರ ಬೆಂಬಲ ಬೆಲೆ ಘೋಷಿಸಲು ಮುಂದಾಗದಿರುವ ಸರ್ಕಾರದ ನಿರ್ಧಾರ ಕೂಡ ರೈತ ಸಮಸ್ಯೆಗಳಿಗೆ ಕಾರಣವಾಗುತ್ತದೆ.

7. ನದಿ ನೀರು ಹಂಚಿಕೆ ವಿವಾದಗಳು: ಸ್ವತಂತ್ರ್ಯೋತ್ತರ ಭಾರತ ಭಾಷಾಧಾರಿತ ರಾಜ್ಯಗಳಾಗಿ ಪುನರ್ರಚನೆಗೊಂಡಿದೆ. ವಿವಿಧ ನದಿಗಳು ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಹರಿಯುತ್ತವೆ. ಇದರಿಂದಾಗಿ ನದಿ ಪಾತ್ರದ ರಾಜ್ಯ ಸರ್ಕಾರಗಳು ತಮ್ಮ ಪಾಲಿನ ನೀರಿನ ಸೂಕ್ತ ಹಂಚಿಕೆಗೆ ಒತ್ತಾಯಿಸಿದಾಗ ವಿವಾದಗಳು ತಲೆದೋರುತ್ತವೆ. ಉದಾ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಕಾವೇರಿ ನದಿ ನೀರಿನ ವಿವಾದ, ಮಹರಾಷ್ಟ್ರ, ಗೋವಾ ಮತ್ತು ಕರ್ನಾಟಕದ ನಡುವಿನ ಮಹದಾಯಿ ವಿವಾದ ಇತ್ಯಾದಿ. ಈ ವಿವಾದಗಳು ನ್ಯಾಯಾಲಯದ ಮೆಟ್ಟಿಲೇರಿ ತೀರ್ಪಿನನುಸಾರ ಸರ್ಕಾರಗಳು ನೀರು ಹರಿಸಲು ಮುಂದಾದಾಗ ರೈತರು ತಮ್ಮ ಹಿತಾಸಕ್ತಿಗೆ ಮಾರಕವೆಂದು ಉಗ್ರ ಹೋರಾಟ ನಡೆಸುವರು. ಜೊತೆಗೆ ನ್ಯಾಯಾಲಯಗಳ ತೀರ್ಪು ಅನುಸರಿಸಲು ಸರ್ಕಾರ ಮುಂದಾಗುವುದಾದರೆ ನೀರಿನ ಕೊರತೆಯಿಂದ ಬೆಳೆ ನಷ್ಟ ತುಂಬಿ ಕೊಡುವಂತೆ ಚಳುವಳಿ ಹೂಡುವರು. ಕೆಲವೊಮ್ಮೆ ಜಲ ವಿವಾದ ಬಗೆಹರಿಸಲು ಮುಂದಾಗದ ಸರ್ಕಾರಗಳ ವಿರುದ್ಧ ಚಳುವಳಿ ಜರುಗುತ್ತವೆ. ಉದಾ: ಮಹದಾಯಿ ವಿವಾದ ಬಗೆ ಹರಿಸಲು ಮುಂದಾಗದ ಸರ್ಕಾರಗಳ ವಿರುದ್ಧ ಉತ್ತರ ಕರ್ನಾಟಕದಲ್ಲಿ ಜರುಗಿದ ರೈತ ಚಳುವಳಿ. ಹೀಗೆ ನದಿ ಪಾತ್ರದ ಜನರು ಜಲ ವಿವಾದಗಳಿಂದ ತಮ್ಮ ಹಿತಾಸಕ್ತಿಗೆ ಧಕ್ಕೆಯಾದಾಗ ಚಳುವಳಿ ಹೂಡುವುದು ಸಾಮಾನ್ಯ ಸಂಗತಿಯಾಗಿದೆ.

ಈ ಮೇಲೆ ಚರ್ಚಿಸಲಾಗಿರುವ ವಿವಿಧ ಸಮಸ್ಯೆಗಳು ಕರ್ನಾಟಕದ ರೈತರು ಎದುರಿಸುತ್ತಿರುವ ಪ್ರಧಾನ ಸವಾಲುಗಳಾಗಿವೆ. ಸರ್ಕಾರಗಳು ರೈತರ ವಿವಿಧ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕೈಗೊಳ್ಳುತ್ತಾ ಬಂದಿದ್ದರೂ ಆ ಸಮುದಾಯದ ಸಮಸ್ಯೆಗಳು ಪೂರ್ಣ ಪ್ರಮಾಣದಲ್ಲಿ ಪರಿಹಾರವಾಗಿಲ್ಲ. ಆಧ್ಯತೆಯ ಮೇರೆಗೆ ನಾನಾ ರೈತ ಸಮಸ್ಯೆಗಳ ಶಾಶ್ವತ ಪರಿಹಾರಕ್ಕೆ ಸರ್ಕಾರಗಳು ಮುಂದಾದರೆ ರೈತ ಸಮುದಾಯವೂ ಸಹ ಇತರ ಸೇವಾ ವರ್ಗದಂತೆ ನೆಮ್ಮದಿಯ ಜೀವನವನ್ನು ನಡೆಸಬಹುದಾಗಿದೆ.

## [V.] ಕರ್ನಾಟಕದಲ್ಲಿ ಲಿಂಗ ರಾಜಕೀಯ [Gender Politics in Karnataka]:

ಜೀವಶಾಸ್ತ್ರ ಮತ್ತು ಮನಸ್ಶಾಸ್ತ್ರಗಳ ಆಧಾರದಲ್ಲಿ ಪುರುಷ ಮತ್ತು ಮಹಿಳೆ ಭಿನ್ನವಾಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ . ಪುರುಷ ಮತ್ತು ಮಹಿಳೆಯ ನಡುವಿನ ಈ ವ್ಯತ್ಯಾಸವು ಸಮಾಜದಲ್ಲಿ ಮಹಿಳೆಯನ್ನು ಕುರಿತಂತೆ ವಿವಿಧ ಪಡಿಯಚ್ಚು ಅಂದರೆ

ಸ್ಟೀರಿಯೊ ಟೈಪ್‌ಗಳನ್ನು ಜಗತ್ತಿನಾದ್ಯಂತ ಹುಟ್ಟು ಹಾಕಿದೆ. ಮಹಿಳೆ ದುರ್ಬಲಳು, ಆಡಳಿತಕ್ಕೆ ಮಹಿಳೆ ಅನರ್ಹಳು, ಪುರುಷರಿಗೆ ಮಹಿಳೆ ಸಮಾನಳಲ್ಲ ಇತ್ಯಾದಿ ಸ್ಟೀರಿಯೊ ಟೈಪ್‌ಗಳು ಸಹಜವಾಗಿ ಮೂಡಿ ಬಂದಿವೆ. ಇದರಿಂದಾಗಿ ಮಹಿಳೆಯರು ನಾನಾ ರೂಪದಲ್ಲಿ ಲಿಂಗ ಪಕ್ಷಪಾತಕ್ಕೆ ಗುರಿಯಾಗುವಂತಾಗಿದೆ. ಈ ಲಿಂಗ ಪಕ್ಷಪಾತವು ಕೇವಲ ಭಾರತಕ್ಕೆ ಮಾತ್ರವಲ್ಲದೇ ಜಗತ್ತಿನಾದ್ಯಂತ ಕಂಡು ಬರುವ ವಿದ್ಯಮಾನವೆನಿಸಿದೆ.

ಪ್ರಪಂಚದ ರಾಜಕೀಯ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಭಾರತದಲ್ಲಿ ಮಹಿಳೆಯರು ಬಹಳ ಕಡಿಮೆ ಪ್ರಾತಿನಿಧ್ಯವನ್ನು ಹೊಂದಿದ್ದಾರೆ. ಭಾರತದ ಪಿತೃಪ್ರಧಾನ ಸಮಾಜದಲ್ಲಿ ಮಹಿಳೆಯರು ನಿರ್ವಹಿಸುವ ಪಾತ್ರವು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯನ್ನು ಸಂಕೀರ್ಣಗೊಳಿಸಿದೆ. ಕುಟುಂಬಕ್ಕೆ ಸೀಮಿತವಾದ ಮಹಿಳೆಯರ ಪಾತ್ರವು ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಮಿತಿಗೊಳಪಡಿಸಿದೆ. 2009 ರಲ್ಲಿ ಮೊದಲ ಬಾರಿಗೆ ಭಾರತದ ಕೇಂದ್ರ ಸರ್ಕಾರದಲ್ಲಿ ಮಹಿಳೆಯರ ಸಂಖ್ಯೆ 10% ಪ್ರಾತಿನಿಧ್ಯದ ತಡೆಗೋಡೆಯನ್ನು ದಾಟಿದುದು ಅವರ ಮೇಲಿನ ಮಿತಿಯನ್ನು ಸ್ಪಷ್ಟಪಡಿಸುತ್ತದೆ. ಪ್ರಪಂಚದ ಇತರ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದ ರಾಜಕೀಯದಲ್ಲಿನ ಲಿಂಗ ಅಂತರವು ವಿಶ್ವದಲ್ಲೇ ಅತ್ಯಂತ ದುಸ್ಥಿತಿಯಲ್ಲಿರುವುದು ತಿಳಿದು ಬರುತ್ತದೆ. ಈ ವಿದ್ಯಮಾನಕ್ಕೆ ಭಾರತ ಒಕ್ಕೂಟದ ರಾಜ್ಯಗಳೇನೂ ಭಿನ್ನವಾಗಿಲ್ಲ.

ಭಾರತ ಒಕ್ಕೂಟದ ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವು ಪ್ರತಿ 1000 ಪುರುಷರಿಗೆ 973 ಮಹಿಳೆಯರ ಸರಾಸರಿ ಲಿಂಗ ಅನುಪಾತ ಹೊಂದಿದೆ. ಆದರೆ, ರಾಜ್ಯದ ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆ ಗಮನಿಸಿದರೆ ಅಗಾಧ ಲಿಂಗ ವ್ಯತ್ಯಾಸ ಕಂಡು ಬರುತ್ತದೆ. ಮತದಾನ, ಅಭ್ಯರ್ಥಿಗಳ ಆಯ್ಕೆ ಮತ್ತು ಅಧಿಕಾರ ಚಲಾವಣೆ ಸೇರಿದಂತೆ ಬಹುತೇಕ ಎಲ್ಲಾ ರಾಜಕೀಯ ವ್ಯವಹಾರಗಳಲ್ಲಿ ಲಿಂಗ ಅಂತರ ಸಹಜವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವಿವಿಧ ರಾಜಕೀಯ ಪ್ರಕ್ರಿಯೆಗಳ ಬೆಳಕಿನಲ್ಲಿ ಕರ್ನಾಟಕದಲ್ಲಿನ ಲಿಂಗ ಮತ್ತು ರಾಜಕೀಯ ಕುರಿತಾದ ಬೆಳವಣಿಗೆಗಳನ್ನು ಕೆಳಗೆ ವಿವರಿಸಲಾಗಿದೆ.

1. **ಮತದಾನ:** ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನವು 1923 ರಲ್ಲಿ ಕರ್ನಾಟಕದ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿತ್ತು. ಸ್ವಾತಂತ್ರ್ಯೋತ್ತರ ಭಾರತ ಸಂವಿಧಾನವು ಸಾರ್ವತ್ರಿಕ ಮತದಾನ ಪದ್ಧತಿಯನ್ನು ಅಳವಡಿಸಿಕೊಂಡ ಪರಿಣಾಮ ಮತದಾನದ ಹಕ್ಕನ್ನು ಕರ್ನಾಟಕದ ಮಹಿಳೆಯರು ಪುರುಷನಿಗೆ ಸಮಾನವಾಗಿ ಪಡೆದುಕೊಂಡರು. ಆದರೆ, ಚುನಾವಣೆಗಳಲ್ಲಿ ಮತದಾನದ ಮೂಲಕ ಮಹಿಳೆಯರ ಭಾಗವಹಿಸುವಿಕೆಯು ಮೊದಲ ಸಾರ್ವತ್ರಿಕ ಚುನಾವಣೆಯಿಂದಲೂ ಪುರುಷರಿಗಿಂತ ಕೆಳ ಮಟ್ಟದಲ್ಲಿದೆ. ಉದಾ: 1962 ಮತ್ತು 1967 ರ ವಿಧಾನಸಭಾ ಚುನಾವಣೆಗಳಲ್ಲಿ ಮತದಾರರಾಗಿ ನೋಂದಾಯಿಸಲ್ಪಟ್ಟ ಮಹಿಳೆಯರಲ್ಲಿ ಕೇವಲ 52% ಮಹಿಳೆಯರು ತಮ್ಮ ಮತದಾನದ ಹಕ್ಕು ಚಲಾಯಿಸಿದ್ದುದು. 1972 ರ ಬಳಿಕ ಕರ್ನಾಟಕದಲ್ಲಿ ಮಹಿಳಾ ಮತದಾನವು ಸರಾಸರಿ ಶೇಕಡಾ 63 ರಷ್ಟಿದ್ದು ಪುರುಷರಿಗಿಂತ ಕಡಿಮೆಯಾಗಿದೆ. 2018 ರ



ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳೆಯರ ಶೇಕಡಾವಾರು ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳೆಯರ ಶೇಕಡಾವಾರು ಮತದಾನ 71 ಕ್ಕೆ ಏರಿಕೆಯಾದರೂ ಪುರುಷರಿಗಿಂತ ಕಡಿಮೆಯಾಗಿತ್ತು. ಇತ್ತೀಚಿನ 2023 ರ ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳಾ ಮತದಾರರು ಶೇಕಡಾವಾರು 72 ರಷ್ಟು ಮತ ಚಲಾಯಿಸಿದ್ದು ಒಟ್ಟು 224 ವಿಧಾನಸಭಾ ಮತಕ್ಷೇತ್ರಗಳ ಪೈಕಿ 43 ಮತಕ್ಷೇತ್ರಗಳಲ್ಲಿ ಪುರುಷರಿಗಿಂತ ಮಹಿಳೆಯರ ಮತದಾನದ ಪ್ರಮಾಣವೇ ಅಧಿಕವಾಗಿರುವುದು ಗಮನಾರ್ಹ.

2. **ಪ್ರಾತಿನಿಧ್ಯ:** ಮೈಸೂರು ಸಂಸ್ಥಾನದ ಕಾಲದಲ್ಲಿಯೇ ಕರ್ನಾಟಕದ ಮಹಿಳೆಯರು ಪ್ರಾತಿನಿಧ್ಯದ ಅವಕಾಶ ಪಡೆದಿದ್ದರು. 1939 ರಲ್ಲಿ ತನ್ನ ವರದಿ ನೀಡಿದ್ದ ದಿವಾನ್ ಶ್ರೀನಿವಾಸ ಅಯ್ಯಂಗಾರ್ ಸಮಿತಿಯು ಪ್ರಜಾ ಪ್ರತಿನಿಧಿ ಸಭೆಯಲ್ಲಿ 11 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕೆಂದು ಸೂಚಿಸಿತ್ತು. ಸ್ವಾತಂತ್ರ್ಯೋತ್ತರದಲ್ಲಿ ಮಹಿಳೆಯರು ಸಂವಿಧಾನಾತ್ಮಕವಾಗಿ ರಾಜಕೀಯ ಪ್ರಾತಿನಿಧ್ಯ ಕುರಿತಂತೆ ಪುರುಷರಿಗೆ ಸಮಾನವಕಾಶ ಪಡೆದುಕೊಂಡರೂ ಅಲ್ಪ ಪ್ರಮಾಣದ ಪ್ರಾತಿನಿಧ್ಯವನ್ನು ಹೊಂದುತ್ತಾ ಬಂದಿರುವರು. ಚುನಾವಣಾ ಆಯೋಗ ನೀಡಿದ ಅಂಕಿಅಂಶಗಳ ಪ್ರಕಾರ, 1952 ರಿಂದ 2023 ರವರೆಗಿನ ಕರ್ನಾಟಕದ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿ ಚುನಾಯಿತರಾದ ಮಹಿಳಾ ಅಭ್ಯರ್ಥಿಗಳ ಸಂಖ್ಯೆಯು ಕಡಿಮೆಯಾಗಿದೆ. 1952 ರಲ್ಲಿ ಕೇವಲ ನಾಲ್ಕು ಮಹಿಳೆಯರು ಮಾತ್ರ ಕರ್ನಾಟಕದ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಅವರಲ್ಲಿ ಮೂವರು ಚುನಾಯಿತರಾಗಿದ್ದರು. ನಂತರದ ಕೆಲವು ದಶಕಗಳಲ್ಲಿ ಸಣ್ಣ ಏರಿಳಿತಗಳೊಂದಿಗೆ ಮಹಿಳಾ ಸ್ಪರ್ಧಿಗಳ ಸಂಖ್ಯೆ ಹೆಚ್ಚಿತಾದರೂ ಅವರಲ್ಲಿ ಚುನಾಯಿತರ ಸಂಖ್ಯೆ ಗಣನೀಯವಾಗಿ ಹೆಚ್ಚಳಗೊಳ್ಳದಾಯಿತು. 1967 ರಿಂದ 2023 ರವರೆಗೆ ಒಟ್ಟು 1,297 ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಿದ್ದರಾದರೂ ಕೇವಲ 110 ಮಹಿಳೆಯರು (8.48%) ಚುನಾಯಿತರಾಗಿದ್ದರು. 1989, 2018 ಮತ್ತು 2023 ರಲ್ಲಿ 10 ಜನ ಮಹಿಳೆಯರು ಚುನಾಯಿತರಾಗಿದ್ದನ್ನು ಹೊರತುಪಡಿಸಿದರೇ, 1967 ರಿಂದ 2018 ಮಹಿಳಾ ಪ್ರಾತಿನಿಧ್ಯ ಸಂಖ್ಯೆ ಒಂದಂಕಿಯನ್ನು ದಾಟಿರಲಿಲ್ಲ.

ಗಮನಾರ್ಹ ಅಂಶವೇನೆಂದರೆ, ಕರ್ನಾಟಕ ಸರ್ಕಾರವು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯಕ್ಕೆ ಪೂರಕವಾದ ಕಾನೂನನ್ನು 1983 ರಲ್ಲಿಯೇ ಜಾರಿಗೊಳಿಸಿತ್ತು. ನಂತರ ಸಂವಿಧಾನದ 73 ಮತ್ತು 74 ನೇ ತಿದ್ದುಪಡಿ ಜಾರಿಗೊಂಡಾಗ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಪ್ರಾತಿನಿಧ್ಯ ಕಲ್ಪಿಸಲಾಯಿತು. ಪ್ರಸ್ತುತ ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾದ
ಅಂದರೆ ಶೇಕಡಾ 50 ರಷ್ಟು ರಾಜಕೀಯ ಪ್ರಾತಿನಿಧ್ಯವನ್ನು ಪಡೆದಿರುವರು.

3. **ಅಧಿಕಾರ ಚಲಾವಣೆ:** ಕರ್ನಾಟಕದಲ್ಲಿ ಮಹಿಳಾ ಮತದಾರರ ಮತ್ತು ಪ್ರತಿನಿಧಿಗಳ ಸಂಖ್ಯೆಗೆ ಹೋಲಿಸಿದರೆ ನಿರ್ಧಾರ ಕೈಗೊಳ್ಳುವ ಅಂದರೆ ಅಧಿಕಾರ ಚಲಾಯಿಸುವ ರಾಜಕೀಯ ಹುದ್ದೆಗಳು ಅವರಿಗೆ ದೊರಕುತ್ತಿಲ್ಲ. ಸ್ವಾತಂತ್ರ್ಯ ದೊರಕಿ ಏಳು ದಶಕಗಳಾದರೂ ಕರ್ನಾಟಕವು ಒಬ್ಬ ಮಹಿಳಾ ಮುಖ್ಯಮಂತ್ರಿಯನ್ನು ಕಾಣಲಾಗಿಲ್ಲ. ಅಂತೆಯೇ ರಾಜ್ಯದ

ಪ್ರಥಮ ಪ್ರಜೆ ಎಂದು ಪರಿಗಣಿಸಲ್ಪಡುವ ರಾಜ್ಯಪಾಲ ಹುದ್ದೆಯಲ್ಲಿ ಈವರೆಗೆ ಅಲ್ಪ ಕಾಲಾವಧಿಗೆ ವಿ. ಎಸ್. ರಮಾದೇವಿ ಎಂಬ ಒಬ್ಬಳೇ ಮಹಿಳೆ ನೇಮಕಗೊಂಡಿರುವಳು. ಕರ್ನಾಟಕದ ಮಂತ್ರಿ ಮಂಡಳವು 34 ಮಂತ್ರಿಗಳನ್ನು ಹೊಂದಲು ಅವಕಾಶವಿದ್ದು ಕೇವಲ ಒಂದು ಅಥವಾ ಎರಡು ಸ್ಥಾನವನ್ನು ಮಾತ್ರವೇ ಮಹಿಳೆಯರಿಗೆ ನೀಡಲಾಗುತ್ತಾ ಬರಲಾಗಿದೆ. ಆಸಕ್ತಿದಾಯಕ ಅಂಶವೇನೆಂದರೆ, ಸ್ಥಳೀಯ ಸಂಸ್ಥೆಗಳಲ್ಲಿ ಮಹಾಪೌರ, ಅಧ್ಯಕ್ಷ ಉಪಾಧ್ಯಕ್ಷ ಮುಂತಾದ ಅಧಿಕಾರಯುಕ್ತ ಸ್ಥಾನಗಳನ್ನು ಮೀಸಲಾತಿಯ ಕಾರಣಕ್ಕೆ ಮಹಿಳೆಯರಿಗೆ ಒದಗಿಸಲಾಗುತ್ತಿದೆ. ಗಮನಾರ್ಹ ಅಂಶವೇನೆಂದರೆ, ಮಹಿಳಾ ಅಧ್ಯಕ್ಷ ಅಥವಾ ಮೇಯರ್ ಅಧಿಕಾರಕ್ಕೆ ಬಂದರೂ ಅವರ ಕುಟುಂಬದ ಹಸ್ತಕ್ಷೇಪ ರಾಜಕೀಯವಾಗಿ ಕಂಡುಬರುತ್ತದೆ.

4. ಸಬಲೀಕರಣ: ಮಹಿಳಾ ಸಬಲೀಕರಣವು ಕರ್ನಾಟಕದ ರಾಜಕೀಯ ಚರ್ಚೆಗಳಲ್ಲಿ ಸ್ಥಾನ ಪಡೆಯುತ್ತಾ ಬಂದಿದೆ. ಸಾರ್ವತ್ರಿಕ ಚುನಾವಣೆಯ ವೇಳೆ ಕರ್ನಾಟಕದ ವಿವಿಧ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಮಹಿಳಾ ಸಬಲೀಕರಣಕ್ಕೆ ಪ್ರಾಮುಖ್ಯತೆ ನೀಡುತ್ತವೆ. ಉದಾ: 2023 ರಲ್ಲಿ ಕಾಂಗ್ರೆಸ್ ಪಕ್ಷದ 5 ಗ್ಯಾರಂಟಿ ಯೋಜನೆಗಳಲ್ಲಿ ಗೃಹ ಲಕ್ಷ್ಮಿ ಮತ್ತು ಶಕ್ತಿ ಯೋಜನೆಗಳು ಪ್ರಧಾನವಾಗಿ ಮಹಿಳೆಯರನ್ನು ಒಳಗೊಂಡಿದುದು. ಇದರೊಡನೆ ಮಹಿಳಾ ಆರೋಗ್ಯ, ಶಿಕ್ಷಣ, ಸುರಕ್ಷೆ ಮುಂತಾದವು ಕರ್ನಾಟಕದ ರಾಜಕೀಯವನ್ನು ಪ್ರಭಾವಿಸಿವೆ.

5. ಚಳುವಳಿಗಳು: ಮಹಿಳಾ ಚಳುವಳಿಗಳು ಕರ್ನಾಟಕದ ರಾಜಕೀಯವನ್ನು ಪ್ರಭಾವಿಸುತ್ತಾ ಬಂದಿವೆ. ಮಹಿಳಾ ಹಕ್ಕುಗಳ ರಕ್ಷಣೆಗಾಗಿ ಜರುಗುವ ಚಳುವಳಿಗಳಿಗೆ ಸರ್ಕಾರಗಳು ಮಣಿದು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾದ ಒತ್ತಡವನ್ನು ಎದುರಿಸಬೇಕಾದ ಹಲವು ನಿದರ್ಶನಗಳು ನಮ್ಮ ಮುಂದಿವೆ. ಉದಾ: ಸೌಜನ್ಯಾ ಪ್ರಕರಣ.

ಒಟ್ಟಾರೆ ಮಹಿಳೆಯರಲ್ಲಿನ ಹಿಂಜರಿಕೆ ಮತ್ತು ಆತ್ಮವಿಶ್ವಾಸದ ಕೊರತೆಯು ರಾಜಕೀಯದಲ್ಲಿನ ಅವರ ಕಡಿಮೆ ಪ್ರಾತಿನಿಧ್ಯಕ್ಕೆ ಕಾರಣವೆಂದರೆ ತಪ್ಪಾಗಲಾರದು. ಮಹಿಳೆಯರು ಇತರ ಜವಾಬ್ದಾರಿಗಳನ್ನು ಹೊಂದಿರುವುದರಿಂದ ರಾಜಕೀಯವನ್ನು ವೃತ್ತಿಯಾಗಿ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ಭಾವಿಸಬಹುದಾಗಿದೆ. ಪುರುಷರಂತೆ ಮಹಿಳೆಯರು ರಾಜಕೀಯಕ್ಕೆ ಹೆಚ್ಚು ಸಮಯ ಮೀಸಲಿಡಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವೂ ಸಮಾಜದಲ್ಲಿದೆ. ಈ ನಡುವೆ ಇತ್ತೀಚೆಗೆ ಕೇಂದ್ರ ಸರ್ಕಾರವು ಮಹಿಳಾ ಮೀಸಲಾತಿ ಮಸೂದೆ (Nari Shakti Vandan Adhiniyam) ಜಾರಿಗೊಳಿಸಲು ಮುಂದಾಗಿದ್ದುದು ಸ್ವಾಗತಾರ್ಹ ಕ್ರಮವಾಗಿದೆ.

## [VI.] ಕೇಂದ್ರದೊಡನೆ ಕರ್ನಾಟಕದ ಸಂಬಂಧ [Karnataka's Relations with Center]:

ಪೀಠಿಕೆ: ಭಾರತವು ಪ್ರಬಲ ಕೇಂದ್ರ ಸರ್ಕಾರ ಮತ್ತು ವಿವಿಧ ರಾಜ್ಯ ಸರ್ಕಾರಗಳಿಂದ ಕೂಡಿರುವ ಒಂದು ಒಕ್ಕೂಟ ವ್ಯವಸ್ಥೆಯಾಗಿದೆ. ಹೀಗಾಗಿ ನಮ್ಮ ಸಂವಿಧಾನ ರಚನಾಕಾರರು



ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ಹಂಚಿಕೆಯ ಪಟ್ಟಿಗಳನ್ನು ಸಂವಿಧಾನದಲ್ಲಿಯೇ ಅಳವಡಿಸಿ ಭವಿಷ್ಯದಲ್ಲಿ ಇವೆರಡೂ ಸರ್ಕಾರಗಳ ನಡುವಿನ ಘರ್ಷಣೆಯನ್ನು ತಡೆಯಲು ಪ್ರಯತ್ನಿಸಿರುವರು. ಸಂವಿಧಾನದ 11 ಮತ್ತು 12 ನೇ ಭಾಗದಲ್ಲಿ ಭಾರತ ಒಕ್ಕೂಟದಲ್ಲಿನ ಕೇಂದ್ರ ಮತ್ತು ರಾಜ್ಯಗಳ ನಡುವಿನ ಶಾಸನೀಯ, ಆಡಳಿತಾತ್ಮಕ ಹಾಗೂ ಆರ್ಥಿಕ ಸಂಬಂಧಗಳನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಹಸ್ತಕ್ಷೇಪ ಮಾಡದೇ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕೆಂಬುದು ನಮ್ಮ ಸಂವಿಧಾನ ರಚನಾಕಾರರ ಸದಾಶಯವಾಗಿತ್ತು.

ನಮ್ಮ ಕರ್ನಾಟಕವೂ ಸಹ ಭಾರತ ಒಕ್ಕೂಟದ ರಾಜ್ಯಗಳಲ್ಲಿ ಒಂದಾಗಿದೆ. ಭಾರತ ಒಕ್ಕೂಟದ ಭಾಗವಾಗಿರುವ ಕರ್ನಾಟಕ ಮತ್ತು ಕೇಂದ್ರ ಸರ್ಕಾರಗಳ ನಡುವೆ ಶಾಂತಿಯುತ ಮತ್ತು ಕೆಲವೊಮ್ಮೆ ಸಂಘರ್ಷಮಯ ಸಂಬಂಧಗಳನ್ನು ಐತಿಹಾಸಿಕವಾಗಿ ಗುರುತಿಸಬಹುದಾಗಿದೆ. ಈ ಕೆಳಗೆ ಕೇಂದ್ರ ಮತ್ತು ಕರ್ನಾಟಕದ ಸಂಬಂಧವನ್ನು ಸಂವಿಧಾನಿಕ ಅವಕಾಶಗಳ ನೆಲೆಗಟ್ಟಿನಲ್ಲಿ ವಿವರಿಸಲಾಗಿದೆ.

### [A.] ಶಾಸನೀಯ ಸಂಬಂಧಗಳು [Legislative Relations]:

ಭಾರತ ಸಂವಿಧಾನದ 11 ನೇ ಭಾಗದ ಮೊದಲನೇ ಅಧ್ಯಾಯದಲ್ಲಿ 245 ರಿಂದ 255 ರವರೆಗಿನ ವಿಧಿಗಳಲ್ಲಿ ಕೇಂದ್ರ ಮತ್ತು ಕರ್ನಾಟಕದ ನಡುವಿನ ಶಾಸನೀಯ ಸಂಬಂಧವನ್ನು ನಿರ್ಧರಿಸುವ ನಿಯಮಾವಳಿಗಳಿವೆ. ಭಾರತದ ಒಕ್ಕೂಟದಲ್ಲಿ ರಾಜ್ಯಗಳಿಗಿಂತ ಶಾಸನೀಯವಾಗಿ ಕೇಂದ್ರವೇ ಮೇಲುಗೈ ಪಡೆಯುವಂತಾಗಿದ್ದು ಆ ಕುರಿತಾದ ಸಂಕ್ಷಿಪ್ತ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

1. ಕೇಂದ್ರ ಸಂಸತ್ತು ಇಡೀ ಭಾರತಕ್ಕೆ ಅಥವಾ ಭಾರತದ ನಿರ್ದಿಷ್ಟ ಭಾಗಕ್ಕೆ ಅನ್ವಯವಾಗುವ ಮತ್ತು ಭಾರತದ ಗಡಿಯಾಚೆಗೂ ಭಾರತೀಯರು ಅಥವಾ ಅವರ ಸೊತ್ತಿಗೆ ಸಂಬಂಧಿಸಿದಂತೆ ಕಾನೂನು ರಚಿಸಬಹುದಾಗಿದೆ. ಆದರೆ, ಕರ್ನಾಟಕ ರಾಜ್ಯ ಶಾಸಕಾಂಗವು ತನ್ನ ಭೌಗೋಳಿಕ ಪ್ರದೇಶ ಅಥವಾ ಅದರ ನಿರ್ದಿಷ್ಟ ಭಾಗಕ್ಕೆ ಅನ್ವಯವಾಗುವ ಶಾಸನಗಳನ್ನು ರಚಿಸಲು ಮಾತ್ರ ಅಧಿಕಾರ ಪಡೆದಿದೆ [245 ನೇ ವಿಧಿ].

2. ಭಾರತ ಸಂವಿಧಾನದ ಏಳನೇ ಅನುಸೂಚಿಯು ಕೇಂದ್ರ ಸಂಸತ್ತು ಹಾಗೂ ಕರ್ನಾಟಕದ ರಾಜ್ಯ ಶಾಸಕಾಂಗ ಶಾಸನ ರಚಿಸಬಹುದಾದ ವಿಷಯಗಳನ್ನು ವಿವರಿಸುವ ಅಧಿಕಾರ ಹಂಚಿಕೆಯ ಮೂರು ಪಟ್ಟಿಗಳನ್ನು ಒಳಗೊಂಡಿದೆ. ಕೇಂದ್ರ ಸಂಸತ್ತು ಅಧಿಕಾರ ಹಂಚಿಕೆಯ ಮೂರು ಪಟ್ಟಿಗಳಾದ ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಮವರ್ತಿ ಪಟ್ಟಿಯಲ್ಲಿನ ವಿಷಯಗಳ ಮೇಲೆ ಶಾಸನ ರಚಿಸಲು ಅಧಿಕಾರ ಪಡೆದರೆ ಕರ್ನಾಟಕದ ರಾಜ್ಯ ಶಾಸಕಾಂಗವು ರಾಜ್ಯ ಅಥವಾ ಸಮವರ್ತಿ ಪಟ್ಟಿಯ ವಿಷಯಗಳಲ್ಲಿ ಮಾತ್ರ ಶಾಸನ ರಚಿಸಲು ಅವಕಾಶ ಪಡೆದಿರುತ್ತದೆ. [246 ನೇ ವಿಧಿ].

3. ಅಧಿಕಾರ ಹಂಚಿಕೆಯ ಕೇಂದ್ರ, ರಾಜ್ಯ ಮತ್ತು ಸಮವರ್ತಿ ಪಟ್ಟಿಗಳಿಗೆ ಸೇರಿರದ ವಿಷಯಗಳನ್ನು ಉಳಿಕೆ ಅಧಿಕಾರ ಅಥವಾ ಶೇಷಾಧಿಕಾರ ಎನ್ನಲಾಗುತ್ತದೆ. ಈ ಉಳಿಕೆ ಅಥವಾ ಶೇಷಾಧಿಕಾರಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಕೇಂದ್ರ ಸಂಸತ್ತಿಗೆ ಮಾತ್ರ ಕಾನೂನು ರಚಿಸುವ ಅಧಿಕಾರವಿದ್ದು ಶೇಷಾಧಿಕಾರದ ವಿಷಯಗಳಲ್ಲಿ ಯಾವುದೇ ಅಧಿಕಾರವನ್ನು ಇತರ ರಾಜ್ಯಗಳಂತೆ ಕರ್ನಾಟಕಕ್ಕೆ ನೀಡಲಾಗಿಲ್ಲ. ಈ ಕುರಿತಾದ ವಿವರಣೆಯನ್ನು ಭಾರತ ಸಂವಿಧಾನದ 248 ನೇ ವಿಧಿಯು ವಿವರಿಸುತ್ತದೆ.

4. ಜಾಗತಿಕ ನಿರ್ಣಯ, ವಿದೇಶಗಳ ಜೊತೆಗಿನ ಒಪ್ಪಂದ, ಅಂತರರಾಷ್ಟ್ರೀಯ ಸಂಘಟನೆಗಳ ತೀರ್ಮಾನಗಳನ್ನು ಭಾರತದಲ್ಲಿ ಅನುಷ್ಠಾನಗೊಳಿಸಲಿಕ್ಕಾಗಿ ಕೇಂದ್ರ ಸಂಸತ್ತು ಇಡೀ ಭಾರತ ಅಥವಾ ಅದರ ನಿರ್ದಿಷ್ಟ ಭಾಗಕ್ಕೆ ಅಗತ್ಯ ಶಾಸನವನ್ನು ಜಾರಿಗೊಳಿಸುವ ಅಧಿಕಾರವನ್ನು ಪಡೆದಿದ್ದು ಅಂತಹ ಕಾನೂನುಗಳನ್ನು ಕರ್ನಾಟಕವೂ ಪಾಲಿಸಬೇಕಾಗುತ್ತದೆ. [253 ನೇ ವಿಧಿ].

5. ಸಮವರ್ತಿ ಪಟ್ಟಿಯ ಒಂದೇ ವಿಷಯ ಕುರಿತು ಕೇಂದ್ರ ಸಂಸತ್ತು ಮತ್ತು ಕರ್ನಾಟಕದ ರಾಜ್ಯ ಶಾಸಕಾಂಗಗಳು ಏಕ ಕಾಲದಲ್ಲಿ ರಚಿಸಿದ ಕಾನೂನುಗಳು ಪರಸ್ಪರ ವಿರುದ್ಧವಾಗಿದ್ದರೆ ಕರ್ನಾಟಕದ ರಾಜ್ಯ ಶಾಸಕಾಂಗದ ಕಾನೂನು ರದ್ದುಗೊಂಡು ಸಂಸತ್ತಿನ ಕಾಯಿದೆಯೇ ಜಾರಿಗೊಳ್ಳುವುದು. [254 ನೇ ವಿಧಿ].

6. ರಾಜ್ಯ ಶಾಸಕಾಂಗವು ರಾಜ್ಯ ಪಟ್ಟಿ ಅಥವಾ ಸಮವರ್ತಿ ಪಟ್ಟಿಯ ವಿಷಯಗಳ ಮೇಲೆ ರಚಿಸಿದ ಮಹತ್ವದ ಕಾಯಿದೆಗಳನ್ನು ಕರ್ನಾಟಕದ ರಾಜ್ಯಪಾಲರು ಅಂಕಿತ ನೀಡದೇ ರಾಷ್ಟ್ರಪತಿಯವರ ಅಂಕಿತಕ್ಕೆ ಕಾಯ್ದಿರಿಸಬಹುದಾಗಿದೆ. ಮುಂದುವರಿದು ಅಂತರರಾಜ್ಯ ವ್ಯಾಪಾರಕ್ಕೆ ಸಂಬಂಧಿಸಿದ ಮಸೂದೆಯನ್ನು ಕರ್ನಾಟಕವು ತನ್ನ ರಾಜ್ಯ ಶಾಸಕಾಂಗದಲ್ಲಿ ಮಂಡಿಸುವ ಮೊದಲೇ ರಾಷ್ಟ್ರಪತಿಯವರ ಅಂಕಿತವನ್ನು ಪಡೆದುಕೊಳ್ಳಬೇಕಾಗುತ್ತದೆ. [255 ನೇ ವಿಧಿ].

ಈ ಮೇಲೆ ಸಂಕ್ಷೇಪ್ತವಾಗಿ ಪಟ್ಟಿ ಮಾಡಲಾದ ಕೇಂದ್ರ ಮತ್ತು ರಾಜ್ಯಗಳ ಶಾಸನೀಯ ಸಂಬಂಧಗಳನ್ನು ಅವಲೋಕಿಸಿದರೆ ರಾಜ್ಯಗಳಿಗಿಂತ ಕೇಂದ್ರವು ಪ್ರಬಲವಾಗಿರುವುದು ಸ್ಪಷ್ಟವಾಗುತ್ತದೆ. ಇದರೊಡನೆ ರಾಜ್ಯ ಶಾಸಕಾಂಗದ ಮೇಲ್ಮನೆಯ ರಚನೆ ಹಾಗೂ ರದ್ದತಿ, ಕೇಂದ್ರಾಡಳಿತ ಪ್ರದೇಶಕ್ಕೆ ಅಗತ್ಯವಾದ ಶಾಸನ ರಚನೆ, ರಾಜ್ಯಗಳ ಗಡಿ ಬದಲಾವಣೆಯಂತಹ ಅಧಿಕಾರದೊಡನೆ ಶಾಸನೀಯ ವಿಚಾರದಲ್ಲಿ ಭಾರತ ಒಕ್ಕೂಟದ ಕೇಂದ್ರ ಸರ್ಕಾರವು ಕರ್ನಾಟಕ ಸೇರಿದಂತೆ ಇತರ ರಾಜ್ಯ ಸರ್ಕಾರಗಳಿಗಿಂತ ಹೆಚ್ಚಿನ ಅವಕಾಶಗಳನ್ನು ಪಡೆದಿರುವುದು ಅರಿವಿಗೆ ಬರುತ್ತದೆ.

**[B.] ಆಡಳಿತಾತ್ಮಕ ಸಂಬಂಧಗಳು [Administrative Relations]:**

ಭಾರತ ಸಂವಿಧಾನದ 11 ನೇ ಭಾಗದ ಎರಡನೇ ಅಧ್ಯಾಯದಲ್ಲಿನ 256 ರಿಂದ 263 ರವರೆಗಿನ ವಿಧಿಗಳು ಕೇಂದ್ರ ಮತ್ತು ರಾಜ್ಯಗಳ ನಡುವಿನ ಆಡಳಿತಾತ್ಮಕ



ಸಂಬಂಧಗಳನ್ನು ವಿವರಿಸುತ್ತವೆ. ಮುಂದುವರಿದು ಸಂವಿಧಾನದ ಇತರ ಭಾಗದ ಹಲವು ನಿಬಂಧನೆಗಳು ಕೇಂದ್ರ ಮತ್ತು ರಾಜ್ಯಗಳ ನಡುವಿನ ಆಡಳಿತಾತ್ಮಕ ಸಂಬಂಧವನ್ನು ವಿವರಿಸಿದ್ದು ಅವುಗಳ ಬೆಳಕಿನಲ್ಲಿ ಕೇಂದ್ರ ಮತ್ತು ಕರ್ನಾಟಕದ ಸಂಬಂಧಗಳನ್ನು ಗುರುತಿಸಬಹುದಾಗಿದೆ.

1. **ರಾಜ್ಯಪಾಲರ ನೇಮಕ:** ರಾಜ್ಯಗಳಿಗೆ ಕೇಂದ್ರ ಕಾರ್ಯಾಂಗದ ಮುಖ್ಯಸ್ಥನಾದ ರಾಷ್ಟ್ರಪತಿ ರಾಜ್ಯಪಾಲರನ್ನು ನೇಮಿಸುವ ಹಾಗೂ ಅಧಿಕಾರದಿಂದ ಪದಚ್ಯುತಗೊಳಿಸುವ ಅವಕಾಶವನ್ನು ಪಡೆದಿರುವರು. ಈ ವೇಳೆ ಆಯಾ ರಾಜ್ಯದ ಮುಖ್ಯ ಮಂತ್ರಿಯನ್ನು ರಾಷ್ಟ್ರಪತಿಯವರು ಸಂಪರ್ಕಿಸುವ ಸಂಪ್ರದಾಯವಿದ್ದರೂ ಮುಖ್ಯ ಮಂತ್ರಿಯ ಸಲಹೆ ರಾಷ್ಟ್ರಪತಿಯವರಿಗೆ ಬಂಧನಕಾರಿಯಾಗಿರುವುದಿಲ್ಲ. ಕೇಂದ್ರ ಮಂತ್ರಿ ಮಂಡಳದ ಆಶಯದಂತೆ ರಾಜ್ಯಪಾಲರು ನಾಮಕರಣಗೊಂಡು ಕೇಂದ್ರದ ಪ್ರತಿನಿಧಿಯಂತೆ ಕರ್ನಾಟಕ ರಾಜ್ಯದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಾರೆ.

2. **ಕೇಂದ್ರದಿಂದ ನಿರ್ದೇಶನ:** ಕೇಂದ್ರ ಸರ್ಕಾರವು ರಾಜ್ಯಗಳ ಕಾರ್ಯಾಂಗಗಳಿಗೆ ಸಂಪರ್ಕ, ಮಾತೃ ಭಾಷಾ ಶಿಕ್ಷಣ, ರೈಲ್ವೆ ನಿರ್ವಹಣೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಕುರಿತಂತೆ ನಿರ್ದೇಶನ ನೀಡಬಹುದಾದ ಅಧಿಕಾರವನ್ನು ಪಡೆದಿರುತ್ತದೆ [257 ನೇ ವಿಧಿ]. ಕೇಂದ್ರದ ಈ ನಿರ್ದೇಶನಗಳನ್ನು ಕರ್ನಾಟಕ ಸರ್ಕಾರವು ಪಾಲಿಸಬೇಕಾಗುತ್ತದೆ.

3. **ಅಂತರರಾಜ್ಯ ಸಹಕಾರಕ್ಕೆ ಕ್ರಮ:** ಕೇಂದ್ರ ಸಂಸತ್ತು ಕಾನೂನು ರಚಿಸುವ ಮೂಲಕ ಜಲ ವಿವಾದಗಳ ಇತ್ಯರ್ಥಕ್ಕಾಗಿ ನ್ಯಾಯ ಮಂಡಳಿಗಳನ್ನು ಸ್ಥಾಪಿಸಬಹುದಾಗಿದೆ [262 ನೇ ವಿಧಿ]. ಮುಂದುವರಿದು, ಕೇಂದ್ರ ಸರ್ಕಾರವು ಜಲ ವಿವಾದ ಹೊಂದಿರುವ ರಾಜ್ಯಗಳ ನಡುವೆ ಮಾತುಕತೆಯ ಮೂಲಕ ಹೊಂದಾಣಿಕೆಗೆ ಶ್ರಮಿಸುತ್ತದೆ. ಉದಾ: ಕವೇರಿ, ಕೃಷ್ಣಾ ಮತ್ತು ಮಹದಾಯಿ ನದಿಯ ಜಲ ವಿವಾದ ನ್ಯಾಯ ಮಂಡಳಿಗಳ ರಚನೆ ಮೂಲಕ ಕೇಂದ್ರವು ಕರ್ನಾಟಕದ ಜಲ ವಿವಾದಗಳ ಇತ್ಯರ್ಥಕ್ಕೆ ಕಾರಣವಾದುದು.

4. **ಅಂತರರಾಜ್ಯ ಮಂಡಳಿಯ ರಚನೆ:** ರಾಷ್ಟ್ರಪತಿಯವರು ಭಾರತ ಒಕ್ಕೂಟದ ಕೇಂದ್ರ ಮತ್ತು ಕರ್ನಾಟಕವನ್ನೂ ಒಳಗೊಂಡಂತೆ ವಿವಿಧ ರಾಜ್ಯಗಳ ನಡುವಿನ ಸಾಮಾನ್ಯ ವಿಷಯಗಳನ್ನು ಚರ್ಚಿಸಲು ಅಗತ್ಯವೆನಿಸಿದರೆ ಅಂತರರಾಜ್ಯ ಮಂಡಳಿಯನ್ನು ರಚಿಸಬಹುದಾಗಿದೆ [263 ನೇ ವಿಧಿ].

5. **ಅಖಿಲ ಭಾರತೀಯ ಸೇವೆಗಳು:** ಕೇಂದ್ರ ಲೋಕಸೇವಾ ಆಯೋಗದಿಂದ ನೇಮಕಗೊಳ್ಳುವ ಭಾರತೀಯ ಆಡಳಿತ ಸೇವೆ, ಭಾರತೀಯ ಆರಕ್ಷಕ ಸೇವೆ ಹಾಗೂ ಭಾರತೀಯ ಅರಣ್ಯ ಸೇವೆಯ ಅಖಿಲ ಭಾರತೀಯ ಸೇವಾ ವರ್ಗದ ನೌಕರರು ಕೇಂದ್ರದಿಂದ ತರಬೇತಿಗೊಂಡು ಕರ್ನಾಟಕ ಸೇರಿದಂತೆ ಇತರ ರಾಜ್ಯಗಳಿಗೆ ನಿಯೋಜಿಸಲ್ಪಡುತ್ತಾರೆ. ವಿವಿಧ ರಾಜ್ಯ ಸರ್ಕಾರದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಕಾರ್ಯ ನಿರ್ವಹಿಸುತ್ತಿದ್ದರೂ ಅವರ ನಿಯಂತ್ರಣವನ್ನು ಕೇಂದ್ರ ಗೃಹ ಇಲಾಖೆ

ಪಡೆದಿರುತ್ತವೆ. ಗಮನಾರ್ಹ ಅಂಶವೇನೆಂದರೆ, ನೂತನ ಅಖಿಲ ಭಾರತೀಯ ಸೇವೆಗಳ ರಚನೆ ಮತ್ತು ರದ್ದತಿಯು ಸಂವಿಧಾನದ 312 ನೇ ವಿಧಿಯಂತೆ ಕೇಂದ್ರ ಶಾಸಕಾಂಗದ ಮೇಲ್ಮನೆಯಾದ ರಾಜ್ಯಸಭೆಗೆ ಸೇರಿರುತ್ತದೆ.

6. ಲೋಕ ಸೇವಾ ಆಯೋಗಗಳು: ಕೇಂದ್ರ ಲೋಕ ಸೇವಾ ಆಯೋಗವು ರಾಷ್ಟ್ರಪತಿಯವರ ಸಮ್ಮತಿಯೊಡನೆ ನಿರ್ದಿಷ್ಟ ರಾಜ್ಯದ ರಾಜ್ಯಪಾಲರ ಬೇಡಿಕೆಯಂತೆ ಆ ರಾಜ್ಯಕ್ಕೆ ನೌಕರರನ್ನು ನೇಮಿಸುವ ಅಧಿಕಾರವನ್ನು ಪಡೆದಿದೆ. ಜೊತೆಗೆ ಕರ್ನಾಟಕ ಸೇರಿದಂತೆ ಇತರ ರಾಜ್ಯಗಳ ಲೋಕ ಸೇವಾ ಆಯೋಗಗಳ ಅಧ್ಯಕ್ಷ ಹಾಗೂ ಸದಸ್ಯರು ಆಯಾ ರಾಜ್ಯಗಳ ರಾಜ್ಯಪಾಲರಿಂದ ನೇಮಕಗೊಂಡರೂ ರಾಷ್ಟ್ರಪತಿಯವರಿಂದ ಪದಚ್ಯುತಗೊಳ್ಳುತ್ತಾರೆ. ಮುಂದುವರಿದು, ಕರ್ನಾಟಕ ಸೇರಿದಂತೆ ಎರಡು ಅಥವಾ ಹೆಚ್ಚು ರಾಜ್ಯಗಳು ಬಯಸಿದರೆ ಕೇಂದ್ರ ಸಂಸತ್ತು ಕಾನೂನೊಂದನ್ನು ಅಂಗೀಕರಿಸಿ ಜಂಟಿ ಲೋಕ ಸೇವಾ ಆಯೋಗವನ್ನು ರಚಿಸಬಹುದಾಗಿದೆ. ಅಲ್ಲದೇ ಅದರ ಅಧ್ಯಕ್ಷ ಮತ್ತು ಸದಸ್ಯರನ್ನು ರಾಷ್ಟ್ರಪತಿಯವರೇ ನೇಮಿಸುತ್ತಾರೆ.

ಈ ಮೇಲೆ ಚರ್ಚಿಸಲಾದ ಹಲವು ವಿಷಯಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧವನ್ನು ಗುರುತಿಸಬಹುದಾಗಿದೆ. ಮುಂದುವರಿದು, ತುರ್ತು ಪರಿಸ್ಥಿತಿಯ ಘೋಷಣೆಯ ಸಮಯದಲ್ಲಿ ಕೇಂದ್ರ ಹಾಗೂ ರಾಜ್ಯಗಳ ಸಂಬಂಧಗಳಲ್ಲಿ ವ್ಯಾಪಕ ಬದಲಾವಣೆಗಳುಂಟಾಗಿ ಕೇಂದ್ರ ಸರ್ಕಾರವು ಕರ್ನಾಟಕ ಸೇರಿದಂತೆ ಇತರ ರಾಜ್ಯಗಳಿಗಿಂತ ಭಾರತದಲ್ಲಿ ಪ್ರಬಲವೆನಿಸುತ್ತದೆ. ಇದರೊಡನೆ ಏಕೀಕೃತ ನ್ಯಾಯಾಂಗವೂ ಸಹ ಇವೆರಡರ ಸಂಬಂಧದ ಮೇಲೆ ಪ್ರಭಾವ ಬೀರುವ ಮತ್ತೊಂದು ಅಂಶವೆನಿಸಿಕೊಳ್ಳುತ್ತದೆ.

### [C.] ಆರ್ಥಿಕ ಸಂಬಂಧಗಳು [Financial Relations]:

ಭಾರತ ಸಂವಿಧಾನದ 12 ನೇ ಭಾಗದಡಿ 268 ರಿಂದ 293 ರವರೆಗಿನ ವಿಧಿಗಳು ಕೇಂದ್ರ ಮತ್ತು ರಾಜ್ಯಗಳ ನಡುವಿನ ಆರ್ಥಿಕ ಸಂಬಂಧಗಳನ್ನು ವಿವರಿಸುತ್ತವೆ. ಜೊತೆಗೆ ಭಾರತದೊಳಗಿನ ವಾಣಿಜ್ಯವನ್ನು ಕುರಿತಾದ 13 ನೇ ಭಾಗ ಮತ್ತು ವಿವಿಧ ತುರ್ತು ಪರಿಸ್ಥಿತಿ ಕುರಿತಾದ 18 ನೇ ಭಾಗದಲ್ಲಿಯೂ ಇವೆರಡು ಸರ್ಕಾರಗಳ ಕೆಲವು ಆರ್ಥಿಕ ಸಂಬಂಧಗಳನ್ನು ಗುರುತಿಸಬಹುದಾಗಿದೆ. ಈ ವಿವಿಧ ಅವಕಾಶಗಳ ಬೆಳಕಿನಲ್ಲಿ ಕೇಂದ್ರದೊಡನೆ ಕರ್ನಾಟಕದ ಸಂಬಂಧವನ್ನು ಅರ್ಥೈಸಿಕೊಳ್ಳಲು ನಾವು ಪ್ರಯತ್ನಿಸೋಣ.

1. ಕೇಂದ್ರವು ತೆರಿಗೆ ವಿಧಿಸಿದ್ದು ಕರ್ನಾಟಕ ಸೇರಿದಂತೆ ಇತರ ರಾಜ್ಯಗಳು ಆ ತೆರಿಗೆಯನ್ನು ಸಂಗ್ರಹಿಸಿ ಉಪಯೋಗಿಸಲು ಅವಕಾಶ ಪಡೆದಿರುತ್ತವೆ (268 ನೇ ವಿಧಿ).
2. ಕೇಂದ್ರವು ತೆರಿಗೆಯನ್ನು ವಿಧಿಸಿ, ತಾನೇ ಸಂಗ್ರಹಿಸಿ, ಕರ್ನಾಟಕ ರಾಜ್ಯ ಸರ್ಕಾರದ ಉಪಯೋಗಕ್ಕೆ ವರ್ಗಾಯಿಸುತ್ತದೆ (269 ನೇ ವಿಧಿ).



3. ಕೇಂದ್ರವು ತೆರಿಗೆಯನ್ನು ವಿಧಿಸಿ, ಸಂಗ್ರಹಿಸಿ, ತನ್ನ ಮತ್ತು ಕರ್ನಾಟಕದ ನಡುವೆ ಹಂಚಿಕೆ ಮಾಡುತ್ತದೆ. ಇಲ್ಲಿ ಸರ್‌ಚಾರ್ಜ್ ಅಥವಾ ಸೆಸ್ಸ್ ಹೆಸರಿನ ಹೆಚ್ಚುವರಿ ತೆರಿಗೆ ಕಂಡು ಬರುತ್ತದೆ. ನಿರ್ದಿಷ್ಟ ಉದ್ದೇಶಕ್ಕಾಗಿ ವಿಧಿಸಲಾಗುವ ಹೆಚ್ಚುವರಿ ತೆರಿಗೆ ಸೆಸ್ಸ್ ಮತ್ತು ನಿರ್ದಿಷ್ಟ ಉದ್ದೇಶವಿಲ್ಲದ ಹೆಚ್ಚುವರಿ ತೆರಿಗೆ ಸರ್‌ಚಾರ್ಜ್ ಎನಿಸಿಕೊಳ್ಳುತ್ತದೆ (270 ನೇ ವಿಧಿ).
4. ಕರ್ನಾಟಕ ರಾಜ್ಯವೇ 18 ವಿಷಯಗಳ ಮೇಲೆ ತೆರಿಗೆಯನ್ನು ವಿಧಿಸಿ, ಸಂಗ್ರಹಿಸಿ, ತಾನೇ ಉಪಯೋಗಿಸಬಹುದಾಗಿದೆ (271 ನೇ ವಿಧಿ).
5. ತೆರಿಗೆಗಳ ಹಂಚಿಕೆಯೊಡನೆ ಅನುದಾನಗಳ ನೀಡಿಕೆ ಮೂಲಕವೂ ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಗಳ ನಡುವೆ ಆರ್ಥಿಕ ಸಂಪನ್ಮೂಲಗಳ ಹಂಚಿಕೆಗೆ ಅವಕಾಶವಿದೆ. ಈ ನಿಟ್ಟಿನಲ್ಲಿ 275 ನೇ ವಿಧಿಯಡಿ ಕೇಂದ್ರವು ರಾಜ್ಯಗಳಿಗೆ ನಿರ್ದಿಷ್ಟ ಉದ್ದೇಶಕ್ಕಾಗಿ ಶಾಸನಾತ್ಮಕ ಅನುದಾನ ಒದಗಿಸಲು ಮತ್ತು 282 ನೇ ವಿಧಿಯಡಿ ನಿರ್ದಿಷ್ಟವಲ್ಲದ ಉದ್ದೇಶಕ್ಕಾಗಿ ವಿವೇಚನಾತ್ಮಕ ಅನುದಾನ ನೀಡುವುದನ್ನು ಗುರುತಿಸಬಹುದಾಗಿದೆ.
6. ಕೇಂದ್ರ ಮತ್ತು ರಾಜ್ಯಗಳ ನಡುವೆ ವರಮಾನವನ್ನು ಹಂಚಿಕೆ ಮಾಡಲು ಸಂವಿಧಾನದ 280 ನೇ ವಿಧಿಯಡಿ ಹಣಕಾಸು ಆಯೋಗಕ್ಕೆ ಅವಕಾಶ ಕಲ್ಪಿಸಲಾಗಿದೆ. ಪ್ರತಿ ಐದು ವರ್ಷಗಳಿಗೊಮ್ಮೆ ರಾಷ್ಟ್ರಪತಿಯವರು ಹಣಕಾಸು ಆಯೋಗದ ರಚನೆಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಗಿದೆ.
7. ಕರ್ನಾಟಕ ರಾಜ್ಯ ಸರ್ಕಾರವು ಎತ್ತುವ ಸಾಲಗಳಿಗೆ ಕೇಂದ್ರವು ಜಾಮೀನುದಾರನ ಪಾತ್ರವನ್ನು ನಿರ್ವಹಿಸುತ್ತದೆ. ಮುಂದುವರಿದು, ಕೇಂದ್ರದ ಸಮ್ಮತಿಯಿಲ್ಲದೇ ಕರ್ನಾಟಕ ಸೇರಿದಂತೆ ಯಾವುದೇ ರಾಜ್ಯವು ಸಾಲವನ್ನು ಎತ್ತುವಂತಿಲ್ಲ.
8. ಕೇಂದ್ರದ ತೆರಿಗೆಯಿಂದ ಕರ್ನಾಟಕ ರಾಜ್ಯದ ಆಸ್ತಿಗೆ ಮತ್ತು ಕರ್ನಾಟಕ ರಾಜ್ಯದ ತೆರಿಗೆಯಿಂದ ಕೇಂದ್ರದ ಆಸ್ತಿಗಳಿಗೆ ವಿನಾಯಿತಿ ಒದಗಿಸಲಾಗುತ್ತದೆ.

ಈ ಮೇಲೆ ನಮೂದಿಸಲಾದ ಅಂಶಗಳಿಂದ ಸರಳವಾಗಿ ಕೇಂದ್ರ ಮತ್ತು ಕರ್ನಾಟಕಗಳ ನಡುವಿನ ಹಣಕಾಸಿನ ಸಂಬಂಧಗಳನ್ನು ಅರ್ಥೈಸಿಕೊಳ್ಳಬಹುದಾಗಿದೆ. ಇದರೊಡನೆ ವಾಣಿಜ್ಯ ಮತ್ತು ತುರ್ತು ಪರಿಸ್ಥಿತಿ ಕುರಿತಂತೆಯೂ ಇವೆರಡರ ನಡುವೆ ಹಣಕಾಸಿನ ಸಂಬಂಧಗಳಿರುವುದು ಗಮನಾರ್ಹ.

## ಮಾದರಿ ಪ್ರಶ್ನೆಗಳು [Model Questions]:

### [A.] ಎರಡು ಅಂಕದ ಪ್ರಶ್ನೆಗಳು:

1. ಕರ್ನಾಟಕದಲ್ಲಿರುವ ಕನ್ನಡೇತರ ಭಾಷೆಗಳನ್ನು ಹೆಸರಿಸಿರಿ.
2. ಕರ್ನಾಟಕದಲ್ಲಿ ಯಾರನ್ನು ಭಾಷಾ ಅಲ್ಪಸಂಖ್ಯಾತರೆಂದು ಪರಿಗಣಿಸಬಹುದಾಗಿದೆ?

3. ಕಾವೇರಿ ಜಲ ವಿವಾದವು ಯಾವ ರಾಜ್ಯಗಳನ್ನು ಒಳಗೊಂಡಿದೆ?
4. 1974 ರಲ್ಲಿ ಕಾವೇರಿ ಜಲ ವಿವಾದ ಮರು ಜನ್ಮ ಪಡೆಯಲು ಕಾರಣವೇನು?
5. ಕೃಷ್ಣಾ ಜಲ ವಿವಾದವು ಯಾವ ಯಾವ ರಾಜ್ಯಗಳಿಗೆ ಸಂಬಂಧಿಸಿದೆ?
6. ಕೃಷ್ಣಾ ಜಲ ವಿವಾದ ನ್ಯಾಯ ಮಂಡಳಿಯನ್ನು ಎರಡು ಬಾರಿ ಯಾವಾಗ ರಚಿಸಲಾಗಿತ್ತು?
7. ಕರ್ನಾಟಕವು ಭಾರತದ ಯಾವ ಯಾವ ರಾಜ್ಯಗಳೊಡನೆ ಗಡಿ ವಿವಾದವನ್ನು ಹೊಂದಿದೆ?
8. ರೈತರು ಎಂದರೆ ಯಾರು?
9. ಕರ್ನಾಟಕದ ರೈತರ ಮೂರು ಸಮಸ್ಯೆಗಳನ್ನು ಬರೆಯಿರಿ.
10. ಕರ್ನಾಟಕದಲ್ಲಿ ಮಹಿಳಾ ಮತದಾನ ಕುರಿತು ನಿಮಗೇನು ತಿಳಿದಿದೆ?
11. ಕರ್ನಾಟಕದಲ್ಲಿ ಮಹಿಳಾ ಪ್ರಾತಿನಿಧ್ಯ ಕುರಿತು ನಿಮಗೇನು ತಿಳಿದಿದೆ?
12. ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಜಾರಿಗೊಳಿಸಿರುವ ನಾಲ್ಕು ಯೋಜನೆಗಳನ್ನು ಬರೆಯಿರಿ.
13. ಕೇಂದ್ರ ಸರ್ಕಾರಕ್ಕಿಂತ ಕರ್ನಾಟಕವು ದುರ್ಬಲವಾಗಿದೆ. ಹೇಗೆ?
14. ಕೇಂದ್ರ ಮತ್ತು ಕರ್ನಾಟಕದ ನಡುವಿನ ಹಣಕಾಸು ಸಂಬಂಧವನ್ನು ಬರೆಯಿರಿ.
15. ಅಖಿಲ ಭಾರತೀಯ ಸೇವೆ ಕುರಿತಂತೆ ಕೇಂದ್ರದೊಡನೆ ಕರ್ನಾಟಕದ ಸಂಬಂಧವನ್ನು ತಿಳಿಸಿರಿ.

[B.] ಐದು ಅಂಕದ ಪ್ರಶ್ನೆಗಳು:

1. ಕರ್ನಾಟಕದಲ್ಲಿನ ಭಾಷೆ ಮತ್ತು ರಾಜಕೀಯ ಸಂಬಂಧವನ್ನು ಚರ್ಚಿಸಿರಿ.
2. ಕರ್ನಾಟಕದ ಪ್ರಮುಖ ಜಲ ವಿವಾದಗಳನ್ನು ಪರಿಶೀಲಿಸಿರಿ.
3. ಕಾವೇರಿ ಜಲ ವಿವಾದ ಕುರಿತು ಟಿಪ್ಪಣಿ ಬರೆಯಿರಿ.
4. ಕರ್ನಾಟಕದಲ್ಲಿ ರೈತರ ಪ್ರಧಾನ ಸಮಸ್ಯೆಗಳನ್ನು ವಿವರಿಸಿರಿ.
5. ಕರ್ನಾಟಕದಲ್ಲಿನ ಲಿಂಗ ರಾಜಕೀಯವನ್ನು ಚರ್ಚಿಸಿರಿ.
6. ಕೇಂದ್ರದೊಡನೆ ಕರ್ನಾಟಕದ ಹಣಕಾಸು ಸಂಬಂಧವನ್ನು ವಿವರಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಕರ್ನಾಟಕದ ಜಲ ಮತ್ತು ಗಡಿ ವಿವಾದಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.
2. ಕರ್ನಾಟಕದಲ್ಲಿನ ರೈತರ ಸಮಸ್ಯೆಗಳನ್ನು ವಿವರಿಸಿರಿ.
3. ಕೇಂದ್ರದೊಡನೆ ಕರ್ನಾಟಕದ ಸಂಬಂಧವನ್ನು ಪರಿಶೀಲಿಸಿರಿ.



ಅಧ್ಯಾಯ 10:

# ಕರ್ನಾಟಕದಲ್ಲಿ ಸಂಮಿಶ್ರ ಸರ್ಕಾರ

# [Coalition Government in Karnataka].

## ಪ್ರಸ್ತಾವನೆ [Introduction]:

ನಾವು ಈಗಾಗಲೇ ತಿಳಿದಂತೆ ಸಮಕಾಲಿನ ಜಗತ್ತು ಪ್ರಜಾಪ್ರಭುತ್ವ ಯುಗವೆಂದು ಪರಿಗಣಿಸಲ್ಪಟ್ಟಿದೆ. ಇದಕ್ಕೆ ಪ್ರಪಂಚದ ಬಹುತೇಕ ದೇಶಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವದಲ್ಲಿರುವುದು ಪ್ರಧಾನ ಕಾರಣ. ಅಧಿಕ ಜನಸಂಖ್ಯೆ ಹಾಗೂ ವಿಶಾಲ ಭೂ ಪ್ರದೇಶಗಳ ಕಾರಣಕ್ಕೆ ಸಮಕಾಲಿನ ಪ್ರಜಾಪ್ರಭುತ್ವ ವ್ಯವಸ್ಥೆಯು ಪ್ರಾಚೀನ ಕಾಲದ ಪ್ರತ್ಯಕ್ಷ ವಿಧಾನದ ಬದಲು ಪ್ರಾತಿನಿಧಿಕ ಸ್ವರೂಪವನ್ನು ಪಡೆದಿದೆ. ಪ್ರಾತಿನಿಧಿಕ ಪ್ರಜಾಪ್ರಭುತ್ವ ಯಶಸ್ವಿಯಾಗಲು ನಿಯತಕಾಲಿಕ ಚುನಾವಣೆ ಮತ್ತು ರಾಜಕೀಯ ಪಕ್ಷಗಳ ಕಾರ್ಯಾಚರಣೆ ಅತ್ಯಗತ್ಯ. ಇದರೊಡನೆ ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ಬಹುಮತ ತತ್ವಕ್ಕೆ ಅಧಿಕ ಮಹತ್ವ ನೀಡಲಾಗುತ್ತದೆ. ಚುನಾವಣೆಯಲ್ಲಿ ಬಹುಮತ ಪಡೆದ ರಾಜಕೀಯ ಪಕ್ಷವು ಆಡಳಿತ ಪಕ್ಷವೆನಿಸಿ ಅಧಿಕಾರವನ್ನು ಚಲಾಯಿಸಿದರೆ ಬಹುಮತ ಪಡೆಯಲು ವಿಫಲವಾದ ರಾಜಕೀಯ ಪಕ್ಷಗಳು ವಿರೋಧ ಪಕ್ಷವೆನಿಸಿ ಕೇವಲ ಆಡಳಿತ ಪಕ್ಷದ ದೋಷಗಳನ್ನು ಜನರಿಗೆ ತಲುಪಿಸುವ ಅವಕಾಶವನ್ನು ಪಡೆಯುತ್ತವೆ. ಒಂದೊಮ್ಮೆ ದೇಶದ ಚುನಾವಣೆಯಲ್ಲಿ ಒಂದೇ ಪಕ್ಷವು ಬಹುಮತ ಗಳಿಸಲು ವಿಫಲಗೊಂಡರೆ ಸಂಮಿಶ್ರ ರಾಜಕೀಯ ಮಹತ್ವ ಪಡೆದುಕೊಳ್ಳುತ್ತದೆ. ಸಮಾನ ಮನಸ್ಕ ವಿವಿಧ ರಾಜಕೀಯ ಪಕ್ಷಗಳು ಒಟ್ಟಾಗಿ ಬಹುಮತ ಸಾಬೀತಿನೊಡನೆ ಸರ್ಕಾರವನ್ನು ರಚಿಸುವ ಪ್ರಕ್ರಿಯೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಸಂಮಿಶ್ರ ರಾಜಕೀಯದ ವ್ಯಾಪ್ತಿಗೊಳಪಡುತ್ತವೆ. ಸಾಮಾನ್ಯವಾಗಿ ಬಹು ಪಕ್ಷ ಪದ್ಧತಿಯುಳ್ಳ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಸಂಮಿಶ್ರ ರಾಜಕೀಯ ಅಥವಾ ಸರ್ಕಾರ ವ್ಯವಸ್ಥೆಯು ಹೆಚ್ಚು ಕಂಡು ಬರುತ್ತದೆ.

ಗಮನಾರ್ಹ ಅಂಶವೇನೆಂದರೆ, ಸಂಮಿಶ್ರ ರಾಜಕೀಯ ಅಥವಾ ಸಂಮಿಶ್ರ ಸರ್ಕಾರ ಎಂಬ ಪರಿಕಲ್ಪನೆಗಳು ಪರಸ್ಪರ ಭಿನ್ನವಾದ ಪರಿಕಲ್ಪನೆಗಳಲ್ಲ. ಹೀಗಾಗಿ ಇವೆರಡನ್ನೂ ರಾಜ್ಯಶಾಸ್ತ್ರದಲ್ಲಿ ಪರ್ಯಾಯವಾಗಿ ಉಪಯೋಗಿಸಲಾಗುತ್ತದೆ. ಇವೆರಡರಲ್ಲಿ ಯಾವ ಪದಗಳನ್ನು ಬಳಸಿದರೂ ಸಮರೂಪದ ಅರ್ಥವನ್ನು ಕಾಣಬಹುದಾಗಿದೆ. ಸರ್ಕಾರಕ್ಕೆ ಸಂಬಂಧಿಸಿದ ದೈನಂದಿನ ವ್ಯವಹಾರಗಳನ್ನು ರಾಜಕೀಯ ಎಂಬುದಾಗಿ ರಾಜ್ಯಶಾಸ್ತ್ರಜ್ಞರು

ಪರಿಗಣಿಸುವುದರಿಂದ ಸಂಮಿಶ್ರ ರಾಜಕೀಯ ಅಥವಾ ಸಂಮಿಶ್ರ ಸರ್ಕಾರ ಪದಗಳ ಪರ್ಯಾಯ ಬಳಕೆಯು ರೂಢಿಗತವಾಗಿ ಬಂದಿದೆ. ಪ್ರಸ್ತುತ ಅಧ್ಯಾಯದಲ್ಲಿ ಸಂಮಿಶ್ರ ಸರ್ಕಾರದ ಅರ್ಥ ಹಾಗೂ ಸ್ವರೂಪವನ್ನು ಚರ್ಚಿಸುವ ಜೊತೆಗೆ ಕರ್ನಾಟಕದಲ್ಲಿನ ಸಂಮಿಶ್ರ ಸರ್ಕಾರಗಳ ಕಾರ್ಯಾಚರಣೆ ಮತ್ತು ಅದರ ವಿವಿಧ ಪರಿಣಾಮಗಳನ್ನು ಕುರಿತಂತೆ ಬೆಳಕು ಚೆಲ್ಲಲಾಗಿದೆ.

## [I.] ಸಂಮಿಶ್ರ ರಾಜಕೀಯದ ಅರ್ಥ [Meaning of Coalition Politics]:

ಸಂಮಿಶ್ರ ಎಂಬ ಕನ್ನಡ ಪದವು ಆಂಗ್ಲ ಭಾಷೆಯ ಕೊಯಲಿಷನ್ ಪದದ ತರ್ಜುಮೆಯಾಗಿದೆ. ಈ ಎರಡೂ ಪದಗಳ ಮೂಲವನ್ನು ಲ್ಯಾಟಿನ್ ಭಾಷೆಯ ಕೊಯಲಿಟಿಯೋ (coalitio') ಎಂಬ ಪದದಲ್ಲಿ ಗುರುತಿಸಲಾಗುತ್ತದೆ. ಕೊಯಲಿಟಿಯೋ ಎಂದರೆ ಒಟ್ಟಿಗೆ ಬೆಳವಣಿಗೆ ಹೊಂದುವುದು ಅಥವಾ ಕೂಡಿ ಸಾಗುವುದು ಎಂದರ್ಥ. ಆದ್ದರಿಂದ ಸಾಮಾನ್ಯಾರ್ಥದಲ್ಲಿ ಸಂಮಿಶ್ರ ಎಂದರೆ ವಿವಿಧ ಘಟಕಗಳು ಒಂದುಗೂಡಿ ಇಡಿಯಾಗಿ ಕಾರ್ಯಾಚರಿಸುವುದು ಎಂದಾಗುತ್ತದೆ. ರಾಜ್ಯಶಾಸ್ತ್ರೀಯ ಭಾಷೆಯಲ್ಲಿ ವಿಭಿನ್ನ ರಾಜಕೀಯ ಪಕ್ಷಗಳು ಅಧಿಕಾರ ಚಲಾವಣೆಗಾಗಿ ಒಂದುಗೂಡುವ ಪ್ರಕ್ರಿಯೆಯು ಸಂಮಿಶ್ರ ರಾಜಕೀಯ ಎನಿಸುತ್ತದೆ.

ಸರಳಾರ್ಥದಲ್ಲಿ ಎರಡು ಅಥವಾ ಹೆಚ್ಚಿನ ರಾಜಕೀಯ ಪಕ್ಷಗಳು ಒಟ್ಟಾಗಿ ಬಹುಮತದೊಡನೆ ಅಧಿಕಾರ ಪಡೆಯುವುದೇ ಸಂಮಿಶ್ರ ಸರ್ಕಾರ. ವಿಶಾಲಾರ್ಥದಲ್ಲಿ ಅಧಿಕಾರ ಪಡೆಯುವ ಉದ್ದೇಶಕ್ಕಾಗಿ ಹಲವು ರಾಜಕೀಯ ಪಕ್ಷಗಳು ಕೈಜೋಡಿಸಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳಂತೆ ಸರ್ಕಾರ ನಡೆಸುವುದನ್ನು ಸಂಮಿಶ್ರ ರಾಜಕೀಯ ಅಥವಾ ಸರ್ಕಾರ ಎನ್ನಬಹುದಾಗಿದೆ. ಸಾಮಾನ್ಯವಾಗಿ ಸಾರ್ವತ್ರಿಕ ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷಕ್ಕೆ ಬಹುಮತ ದೊರೆಯದಿದ್ದಾಗ ಸಂಮಿಶ್ರ ರಾಜಕೀಯ ಅಥವಾ ಸರ್ಕಾರ ಪರಿಕಲ್ಪನೆಯು ಮುನ್ನೆಲೆಗೆ ಬರುತ್ತದೆ. ಮುಂದುವರೆದು ಬಹು ಪಕ್ಷ ಪದ್ಧತಿ ಅಸ್ತಿತ್ವದಲ್ಲಿರುವ ಸಂಸದೀಯ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸಂಮಿಶ್ರ ಸರ್ಕಾರ ಪದ್ಧತಿಯು ಮಹತ್ವ ಪಡೆದುಕೊಳ್ಳುತ್ತದೆ. ವಿಭಿನ್ನ ಸೈದ್ಧಾಂತಿಕ ತಳಹದಿಯುಳ್ಳ ರಾಜಕೀಯ ಪಕ್ಷಗಳು ಮತ್ತು ಅವುಗಳ ನಾಯಕರು ಮಂತ್ರಿ ಮಂಡಳದ ರಚನೆಗಾಗಿ ಪರಸ್ಪರ ಸಹಕರಿಸುವುದನ್ನು ಸಂಮಿಶ್ರ ರಾಜಕೀಯ ಅಥವಾ ಸರ್ಕಾರ ಪರಿಕಲ್ಪನೆಯು ಪ್ರತಿನಿಧಿಸುತ್ತದೆ. ಶಾಸನ ಸಭೆಯಲ್ಲಿ ಹಲವು ಅಲ್ಪಸಂಖ್ಯಾತ ಪಕ್ಷಗಳು ತಮ್ಮ ನಡುವಿನ ಅಂತರವನ್ನು ಬದಿಗಿಟ್ಟು ಬಹುಮತ ಪಡೆಯುವ ಕಾರಣಕ್ಕೆ ಒಂದುಗೂಡುವ ರಾಜಕೀಯ ವ್ಯವಸ್ಥೆ ಸಂಮಿಶ್ರ ರಾಜಕೀಯ ಎನಿಸಿಕೊಳ್ಳುತ್ತದೆ.

ಎಫ್. ಎ. ಆಗ ಅಭಿಪ್ರಾಯದಲ್ಲಿ 'ಬೇರೆ ಬೇರೆ ರಾಜಕೀಯ ಪಕ್ಷಗಳು ಅಥವಾ ಪಕ್ಷಗಳ ಪ್ರತಿನಿಧಿಗಳು ಹೊಂದಾಣಿಕೆಯೊಂದಿಗೆ ಸರ್ಕಾರ ಅಥವಾ ಮಂತ್ರಿ ಮಂಡಳದ ರಚನೆಗೆ ಸಹಕರಿಸಲು ಮುಂದಾಗುವುದೇ ಸಂಮಿಶ್ರ ರಾಜಕೀಯ'. ಕೆಲವೊಮ್ಮೆ ಎರಡು ಪಕ್ಷಗಳ, ಬೇರೊಮ್ಮೆ ಹಲವು ಪಕ್ಷಗಳ ಅಥವಾ ಮೊಗದೊಮ್ಮೆ ಅನೇಕ ಪಕ್ಷಗಳ



ಒಕ್ಕೂಟದಿಂದ ಸಂಮಿಶ್ರ ಸರ್ಕಾರ ರಚನೆಗೊಳ್ಳುತ್ತದೆ. ಒಟ್ಟಾರೆ ಸಂಮಿಶ್ರ ರಾಜಕೀಯ ಅಥವಾ ಸರ್ಕಾರ ಪರಿಕಲ್ಪನೆಯು ಬಹು ಪಕ್ಷ ಪದ್ಧತಿಯನ್ನುಳ್ಳ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಧಾನ ವಿದ್ಯಮಾನವೆಂದರೆ ತಪ್ಪಾಗಲಾರದು.

## [II.] ಸಂಮಿಶ್ರ ಸರ್ಕಾರದ ಸ್ವರೂಪ [Nature of Coalition Government]:

ಸಂಮಿಶ್ರ ಸರ್ಕಾರದ ಪರಿಕಲ್ಪನೆ ಸ್ಪಷ್ಟಗೊಳ್ಳಲು ಅದರ ಸ್ವರೂಪವನ್ನು ಮನವರಿಕೆ ಮಾಡಿಕೊಳ್ಳಬೇಕಾದದ್ದು ಅತ್ಯಗತ್ಯ. ಈ ಕೆಳಗಿನ ಅಂಶಗಳ ನೆರಳಿನಲ್ಲಿ ಸಂಮಿಶ್ರ ಸರ್ಕಾರದ ಸ್ವರೂಪವನ್ನು ಗುರುತಿಸಬಹುದಾಗಿದೆ.

1. **ಬಹು ಪಕ್ಷ ಪದ್ಧತಿಯಲ್ಲಿ ಹೆಚ್ಚು ಆಸ್ಪದ:** ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಎರಡು ಅಥವಾ ಹೆಚ್ಚು ರಾಜಕೀಯ ಪಕ್ಷಗಳು ಪ್ರಭಾವ ಹೊಂದಿದ್ದರೆ ಅದನ್ನು ಬಹು ಪಕ್ಷ ಪದ್ಧತಿ ಎನ್ನಲಾಗುತ್ತದೆ. ಸಂಮಿಶ್ರ ಸರ್ಕಾರವು ರಚನೆಗೊಳ್ಳಲು ಎರಡು ಅಥವಾ ಹೆಚ್ಚು ರಾಜಕೀಯ ಪಕ್ಷಗಳು ಸಹಕರಿಸುವುದು ಅಗತ್ಯ. ಹೀಗಾಗಿ ಬಹು ರಾಜಕೀಯ ಪಕ್ಷಗಳಿಗೆ ಅವಕಾಶವಿರುವ ಬಹು ಪಕ್ಷ ಪದ್ಧತಿಯನ್ನುಳ್ಳ ಭಾರತ ಮತ್ತು ಫ್ರಾನ್ಸ್ ದೇಶಗಳಲ್ಲಿ ಸಂಮಿಶ್ರ ಸರ್ಕಾರ ಪರಿಕಲ್ಪನೆಯು ಸಾಮಾನ್ಯ ಸಂಗತಿ ಎನಿಸಿಕೊಂಡಿದೆ.

2. **ವಿವಿಧ ಮಾದರಿಯಲ್ಲಿ ರಚನೆ:** ಸಂಮಿಶ್ರ ಸರ್ಕಾರವು ಆಯಾ ಸನ್ನಿವೇಶಾನುಸಾರ ವಿವಿಧ ರೂಪದಲ್ಲಿ ರಚನೆಗೊಳ್ಳುತ್ತವೆ. ಕೆಲವೊಮ್ಮೆ ಕೇವಲ ಎರಡು ರಾಜಕೀಯ ಪಕ್ಷಗಳ ಹೊಂದಾಣಿಕೆಯಿಂದ ಸಂಮಿಶ್ರ ಸರ್ಕಾರವು ರಚಿಸಲ್ಪಡುತ್ತವೆ. ಬಹುತೇಕ ಎರಡಕ್ಕಿಂತ ಹೆಚ್ಚಿನ ಪಕ್ಷಗಳ ಕೈ ಜೋಡಿಸುವಿಕೆಯಿಂದ ಸಂಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬರುತ್ತದೆ. ಅಂತೆಯೇ ಕೆಲವು ಸಂಮಿಶ್ರ ಸರ್ಕಾರಗಳು ಸಮಾನ ಮನಸ್ಕ ರಾಜಕೀಯ ಪಕ್ಷಗಳ ಒಕ್ಕೂಟದಿಂದ ರಚನೆಗೊಳ್ಳುತ್ತವೆ. ಉದಾ: 2004 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಸಂಯುಕ್ತ ಪ್ರಗತಿಪರ ಒಕ್ಕೂಟದ ಹಾಗೂ 2014 ರಲ್ಲಿ ಅಧಿಕಾರಕ್ಕೆ ಬಂದಿದ್ದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಭಾರತದಲ್ಲಿನ ಕೇಂದ್ರ ಮಟ್ಟದ ಸಂಮಿಶ್ರ ಸರ್ಕಾರಗಳು.

3. **ತಾತ್ಕಾಲಿಕ ಅವಧಿ:** ಸಂಮಿಶ್ರ ರಾಜಕೀಯವು ನಿರಂತರ ಸ್ವರೂಪ ಪಡೆದಿರುವ ಪರಿಕಲ್ಪನೆಯಲ್ಲ. ಸಾರ್ವತ್ರಿಕ ಚುನಾವಣೆಯಲ್ಲಿ ಯಾವುದೇ ಪಕ್ಷ ಬಹುಮತ ಪಡೆಯಲು ವಿಫಲವಾದಾಗ ಮಾತ್ರ ಮುನ್ನೆಲೆಗೆ ಬರುವ ವ್ಯವಸ್ಥೆಯಾಗಿದೆ. ಮರು ಚುನಾವಣೆ ತಪ್ಪಿಸಲು, ಅನುತ್ಪಾದಕ ವೆಚ್ಚವನ್ನು ತಡೆಯಲು ಅಥವಾ ರಾಷ್ಟ್ರೀಯ ಸಂಕಷ್ಟದಲ್ಲಿ ಅನಿವಾರ್ಯವಾಗಿ ಸಂಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬರುತ್ತವೆ. ಈವರೆಗೆ ರಚನೆಗೊಂಡ ಬಹುತೇಕ ಸಂಮಿಶ್ರ ಸರ್ಕಾರಗಳು ತಮ್ಮ ಅವಧಿಯನ್ನು ಬಹುತೇಕ ಪೂರ್ಣಗೊಳಿಸಲು ನಾನಾ ಕಾರಣಗಳಿಂದ ಸಾಧ್ಯವಾಗಿಲ್ಲ. ಉದಾ: 2018 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಕರ್ನಾಟಕದಲ್ಲಿನ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾ ದಳ ಪಕ್ಷಗಳ ಸಂಮಿಶ್ರ ಸರ್ಕಾರವು 2019 ರಲ್ಲಿ ಪತನಗೊಂಡಿದುದು.

4. **ಚುನಾವಣಾ ಪೂರ್ವ ಅಥವಾ ಚುನಾವಣೋತ್ತರ ಮೈತ್ರಿಯ ಫಲ:** ಶಾಸನಾಂಗದಲ್ಲಿ ಯಾವ ಪಕ್ಷವೂ ಬಹುಮತ ಪಡೆಯದ ಸ್ಥಿತಿ ನಿರಂತರವಾಗಿ ಉಂಟಾದರೆ ಚುನಾವಣಾ ಪೂರ್ವದಲ್ಲಿಯೇ ರಾಜಕೀಯ ಪಕ್ಷಗಳು ಮೈತ್ರಿ ಮಾಡಿಕೊಂಡು ಸ್ಪರ್ಧಿಸಲು ಮುಂದಾಗುತ್ತವೆ. ಚುನಾವಣಾ ಫಲಿತಾಂಶದ ಬಳಿಕ ರಾಜಕೀಯ ಪಕ್ಷಗಳು ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿದರೆ ಅದನ್ನು ಚುನಾವಣೋತ್ತರ ಮೈತ್ರಿಯ ಸಂಮಿಶ್ರ ಸರ್ಕಾರ ಎನ್ನಲಾಗುತ್ತದೆ. ಉದಾ: 2004 ರಲ್ಲಿ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾ ದಳ ಪಕ್ಷಗಳು ಕರ್ನಾಟಕದಲ್ಲಿ ಮೈತ್ರಿ ಮಾಡಿಕೊಂಡು ಅಸ್ತಿತ್ವಕ್ಕೆ ಬಂದಿದ್ದ ಧರ್ಮಸಿಂಗ ನೇತೃತ್ವದ ಸಂಮಿಶ್ರ ಸರ್ಕಾರ. ಅಂತೆಯೇ ಚುನಾವಣಾ ಪೂರ್ವದಲ್ಲಿಯೇ ಸ್ಥಾನ ಹಂಚಿಕೊಂಡು ಚುನಾವಣೆಯಲ್ಲಿ ಬಹುಮತದೊಡನೆ ಅಧಿಕಾರಕ್ಕೆ ಬರುವ ಸಂಮಿಶ್ರ ಸರ್ಕಾರವನ್ನು ಚುನಾವಣಾ ಪೂರ್ವ ಮೈತ್ರಿಯ ಸಂಮಿಶ್ರ ಸರ್ಕಾರ ಎನ್ನಲಾಗುತ್ತದೆ. ಉದಾ: 1999 ರಲ್ಲಿ ಭಾರತೀಯ ಜನತಾ ಪಕ್ಷವು ತನ್ನ ಮಿತ್ರ ಪಕ್ಷಗಳೊಂದಿಗೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವನ್ನು ರಚಿಸಿಕೊಂಡು ಚುನಾವಣೆಯಲ್ಲಿ ಬಹುಮತದೊಡನೆ ಅಧಿಕಾರಕ್ಕೇರಿದುದು.

5. **ಹೆಚ್ಚು ಪ್ರಜಾಸತ್ತಾತ್ಮಕ:** ಒಂದೇ ರಾಜಕೀಯ ಪಕ್ಷವು ಬಹುಮತದೊಡನೆ ಸರ್ಕಾರ ರಚಿಸಿದರೆ ಅಲ್ಪ ಸಂಖ್ಯಾತ ಪಕ್ಷಗಳ ಕಡೆಗಣನೆ ಉಂಟಾಗುತ್ತದೆ. ಬಹುಮತ ಪಡೆದ ಏಕ ಪಕ್ಷವು ತನ್ನನ್ನು ಚುನಾವಣೆಯಲ್ಲಿ ಬೆಂಬಲಿಸಿದ ಪ್ರಜೆಗಳ ಆಶಯದಂತೆ ಆಡಳಿತ ನಡೆಸುತ್ತದೆ. ಆಗ ಚಿಕ್ಕ ಪುಟ್ಟ ಪಕ್ಷಗಳ ನೀತಿಗಳನ್ನು ಬೆಂಬಲಿಸಿದ ಮತದಾರರ ಹಿತಾಸಕ್ತಿಯು ನಿರ್ಲಕ್ಷಿಸಲ್ಪಡುತ್ತದೆ. ಆದರೆ ಸಂಮಿಶ್ರ ಸರ್ಕಾರವು ವಿವಿಧ ವರ್ಗಗಳ ಚಿಕ್ಕ ಪುಟ್ಟ ರಾಜಕೀಯ ಪಕ್ಷಗಳು ಸರ್ಕಾರದ ಪಾಲುದಾರ ಪಕ್ಷವಾಗಲು ಅಸ್ಪದ ಒದಗಿಸುತ್ತವೆ. ಆಗ ವಿವಿಧ ವರ್ಗಗಳ ಪ್ರತಿನಿಧಿಗಳು ಅಧಿಕಾರ ಪಡೆದು ತಮ್ಮ ವರ್ಗದವರ ಹಿತಾಸಕ್ತಿಯ ರಕ್ಷಣೆಗೆ ಶ್ರಮಿಸಲು ಮುಂದಾಗುತ್ತಾರೆ. ಸಂಮಿಶ್ರ ಸರ್ಕಾರದಲ್ಲಿ ದೇಶದ ವೈವಿಧ್ಯಮಯ ಜನರನ್ನು ಪ್ರತಿನಿಧಿಸುವ ಹಲವು ಪಕ್ಷಗಳ ಪ್ರತಿನಿಧಿಗಳು ಬಹುಸಂಖ್ಯಾತ ಪ್ರಜೆಗಳ ಆಶಯವನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತಾರೆ. ಆದ್ದರಿಂದ ಸಂಮಿಶ್ರ ಸರ್ಕಾರವು ಹೆಚ್ಚು ಪ್ರಜಾಸತ್ತಾತ್ಮಕ ಆಡಳಿತ ನೀಡಬಲ್ಲದು ಎಂಬುದಾಗಿ ನಂಬಲಾಗುತ್ತದೆ.

### [III.] ಕರ್ನಾಟಕದಲ್ಲಿ ಸಂಮಿಶ್ರ ಸರ್ಕಾರಗಳ ಕಾರ್ಯಾಚರಣೆ [Functioning of Coalition Governments in Karnataka]:

ಭಾರತ ಒಕ್ಕೂಟದ ಅನ್ಯ ರಾಜ್ಯಗಳಂತೆ ಕರ್ನಾಟಕದಲ್ಲಿಯೂ ಸ್ವತಂತ್ರ್ಯ ದೊರೆತ ನಂತರ ಬಹು ಕಾಲದವರೆಗೆ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿತ್ತು. ಗಮನಾರ್ಹ ಅಂಶವೇನೆಂದರೆ, 1977 ರಲ್ಲಿ ಕೇಂದ್ರ ಮಟ್ಟದಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡರೂ ಕರ್ನಾಟಕದಲ್ಲಿ ಅಧಿಕಾರ ಉಳಿಸಿಕೊಂಡಿತ್ತು. ಮುಂದೆ 1983 ರಲ್ಲಿ ಪಕ್ಷೇತರರು ಮತ್ತು ಭಾರತೀಯ ಜನತಾ ಪಕ್ಷದ ಬಾಹ್ಯ ಬೆಂಬಲದೊಡನೆ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ಜನತಾ ಪಕ್ಷವು ಕರ್ನಾಟಕದಲ್ಲಿ ಮೊದಲ ಕಾಂಗ್ರೆಸ್ಸೇತರ ಸಂಮಿಶ್ರ ಸರ್ಕಾರವನ್ನು ರಚಿಸಿತ್ತು.



ಬಳಿಕ ಕಾಂಗ್ರೆಸ್ಸು ಮತ್ತು ಜನತಾ ಪರಿವಾರದ ನಡುವೆ ಅಧಿಕಾರದ ಕೈ ಬದಲಾಗುತ್ತಾ ಬಂತು. ಇದರರ್ಥ 1983 ರಿಂದ 2004 ರವರೆಗೆ ಕಾಂಗ್ರೆಸ್ ಒಂದು ಅವಧಿಗೆ ಮತ್ತು ಜನತಾ ಪರಿವಾರವೆಂದು ಚಿರಪರಿಚಿತವಾದ ಜನತಾ ಪಕ್ಷ ಅಥವಾ ಜನತಾ ದಳ ಇನ್ನೊಂದು ಅವಧಿಗೆ ಬಹುಮತದೊಡನೆ ಆಡಳಿತ ನಡೆಸುತ್ತಿದ್ದವು. ಆದ್ದರಿಂದ ಸಂಮಿಶ್ರ ಸರ್ಕಾರವು ಕರ್ನಾಟಕಕ್ಕೆ ತೀರಾ ಇತ್ತೀಚಿನ ಬೆಳವಣಿಗೆ ಎಂದರೆ ತಪ್ಪಾಗಲಾರದು. 2004 ರಿಂದ 2018 ರ ನಡುವೆ ಕರ್ನಾಟಕವು ಮೂರು ಸಮ್ಮಿಶ್ರ ಸರ್ಕಾರಗಳಿಗೆ ಒಳಗಾಗಿದ್ದು ಅವುಗಳ ಸಂಕ್ಷಿಪ್ತ ವಿವರಣೆಯನ್ನು ಕೆಳಗೆ ನೀಡಲಾಗಿದೆ.

2004 ರಲ್ಲಿ ಕರ್ನಾಟಕದ ವಿಧಾನಸಭೆಗೆ ಜರುಗಿದ ಚುನಾವಣೆಯಲ್ಲಿ ಯಾವ ರಾಜಕೀಯ ಪಕ್ಷವೂ ಬಹುಮತ ಗಳಿಸಲಿಲ್ಲ. ಆಗ ಭಾರತೀಯ ಜನತಾ ಪಕ್ಷವು 79, ಕಾಂಗ್ರೆಸ್ 65 ಮತ್ತು ಜೆ. ಡಿ. ಎಸ್ 58 ಸ್ಥಾನಗಳನ್ನು ಪಡೆದಿದ್ದರಿಂದ ಕರ್ನಾಟಕದಲ್ಲಿ ಎರಡನೇ ಸಮ್ಮಿಶ್ರ ಸರ್ಕಾರದ ಅನಿವಾರ್ಯತೆ ಎದುರಾಯಿತು. ಈ ವೇಳೆಯಲ್ಲಿ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾ ದಳ ಪಕ್ಷಗಳು ಕೋಮುವಾದಿ ಭಾರತೀಯ ಜನತಾ ಪಕ್ಷವನ್ನು ಅಧಿಕಾರದಿಂದ ದೂರವಿಡಬೇಕೆಂದು ಧರ್ಮಸಿಂಗ್ ನೇತೃತ್ವದಲ್ಲಿ ಸಂಮಿಶ್ರ ಸರ್ಕಾರವನ್ನು ರಚಿಸಿದವು. ಆದರೆ, ಜೆ. ಡಿ. ಎಸ್ ಪಕ್ಷವು 2006 ರಲ್ಲಿ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿತು. ಈ ಬೆಳವಣಿಗೆಗೆ ಕುಮಾರಸ್ವಾಮಿ ನೇತೃತ್ವದ ಜೆ. ಡಿ. ಎಸ್ ಪಕ್ಷದ ಬಂಡಾಯವು ಕಾರಣವಾಗಿತ್ತು. ಧರ್ಮಸಿಂಗ್ ರಾಜೀನಾಮೆ ನೀಡುವ ಮೂಲಕ ಅಲ್ಪಾವಧಿಯಲ್ಲಿಯೇ ಕರ್ನಾಟಕದ ಎರಡನೇ ಸಮ್ಮಿಶ್ರ ಸರ್ಕಾರ ಪತನಗೊಂಡಿತು.

2006 ರಲ್ಲಿ ಜೆ. ಡಿ. ಎಸ್ ಪಕ್ಷವು ಭಾರತೀಯ ಜನತಾ ಪಕ್ಷದೊಡನೆ ತಲಾ 20 ತಿಂಗಳ ಆಡಳಿತದ ಒಪ್ಪಂದದೊಡನೆ ಹೊಸ ಸಂಮಿಶ್ರ ಸರ್ಕಾರವನ್ನು ರಚಿಸಿತು. ಈ ಸಮ್ಮಿಶ್ರ ಸರ್ಕಾರವು ಕರ್ನಾಟಕದ ಮೂರನೇ ಸಮ್ಮಿಶ್ರ ಸರ್ಕಾರವೆನಿಸಿತು. ಆರಂಭದಲ್ಲಿ ಮುಖ್ಯ ಮಂತ್ರಿಯಾಗಿದ್ದ ಜಾತ್ಯಾತೀತ ಜನತಾ ದಳದ ಎಚ್. ಡಿ. ಕುಮಾರಸ್ವಾಮಿ ಉಳಿದ 20 ತಿಂಗಳ ಆಡಳಿತವನ್ನು ರಾಜಕೀಯ ಕಾರಣಗಳಿಗೆ 2007 ಅಕ್ಟೋಬರ್‌ನಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಅಧಿಕಾರವನ್ನು ಬಿಟ್ಟುಕೊಡಲಿಲ್ಲ. ಆಗ ಸರ್ಕಾರ ಪತನವಾದರೂ ಕೆಲ ದಿನಗಳ ಬಳಿಕ ಮತ್ತೆ ಮೈತ್ರಿ ಕುದುರಿದ ಪರಿಣಾಮ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಆದರೆ, ಅವರು ಸದನದಲ್ಲಿ ಬಹುಮತ ಸಾಬೀತುಪಡಿಸುವ ವೇಳೆಗೆ ಮತ್ತೆ ಜೆಡಿಎಸ್ ತಗಾದೆ ತೆಗೆದಿದ್ದರಿಂದ 6 ದಿನದಲ್ಲೇ ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಜೆ. ಡಿ. ಎಸ್ ನಿಂದಾದ ವಚನ ಭ್ರಷ್ಟತೆಯನ್ನು ಮುಂದಿಟ್ಟುಕೊಂಡು ಚುನಾವಣಾ ಅಖಾಡಕ್ಕೆ ಇಳಿದ ಯಡಿಯೂರಪ್ಪ ಪಕ್ಷವನ್ನು ರಾಜ್ಯಾದ್ಯಂತ ಪುನರ್ ಸಂಘಟಿಸುವಲ್ಲಿ ಯಶಸ್ವಿಯಾದರು. ಆ ಸಂದರ್ಭದಲ್ಲಿ ಕುಮಾರಸ್ವಾಮಿ ಅವರಿಗೆ 'ವಚನಭ್ರಷ್ಟ' ಹಣೆಪಟ್ಟಿ ಅಂಟಿಕೊಂಡಿತು.

ಮುಂದೆ 2018 ರ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿಯೂ ಯಾವುದೇ ರಾಜಕೀಯ ಪಕ್ಷ ಕರ್ನಾಟಕದಲ್ಲಿ ಬಹುಮತ ಗಳಿಸಲು ಸಫಲಗೊಳ್ಳಲಿಲ್ಲ. 104 ಸ್ಥಾನಗಳನ್ನು ಪಡೆದಿದ್ದ ಭಾರತೀಯ ಜನತಾ ಪಕ್ಷದ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರಾದರೂ ಬಹುಮತ ಹೊಂದಲಾಗದೇ ರಾಜೀನಾಮೆ ನೀಡಿದರು. ಈ ವೇಳೆಯಲ್ಲಿ ಕೋಮುವಾದಿ ಭಾರತೀಯ ಜನತಾ ಪಕ್ಷವನ್ನು ಅಧಿಕಾರದಿಂದ ದೂರವಿಡಲು 78 ಸ್ಥಾನ ಪಡೆದ ಕಾಂಗ್ರೆಸ್ ಮತ್ತು 38 ಸ್ಥಾನ ಗಳಿಸಿದ್ದ ಜೆ. ಡಿ. ಎಸ್ ಕೈ ಜೋಡಿಸಿ ಮತ್ತೊಮ್ಮೆ ಅಂದರೆ ಕರ್ನಾಟಕದಲ್ಲಿನ ನಾಲ್ಕನೇ ಸಂಮಿಶ್ರ ಸರ್ಕಾರವನ್ನು ಸ್ಥಾಪಿಸಿದವು. ಎಚ್. ಡಿ. ಕುಮಾರಸ್ವಾಮಿ ಈ ಸರ್ಕಾರದಲ್ಲಿ ಮುಖ್ಯ ಮಂತ್ರಿಯಾಗಿದ್ದರು. 14 ತಿಂಗಳೊಳಗೆ ಅಂದರೆ 2019 ರಲ್ಲಿ ಪಾಲುದಾರ ಪಕ್ಷಗಳಾದ ಕಾಂಗ್ರೆಸ್ಸಿನಿಂದ 12 ಮತ್ತು ಜೆ. ಡಿ. ಎಸ್‌ನ 3 ಸದಸ್ಯರು ರಾಜೀನಾಮೆ ನೀಡಿದಾಗ ಸಂಮಿಶ್ರ ಸರ್ಕಾರ ಪತನಗೊಂಡಿತು. ಆಗ ಭಾರತೀಯ ಜನತಾ ಪಕ್ಷವು ಆಡಳಿತ ಪಕ್ಷವಾಗಿ ಕರ್ನಾಟಕದಲ್ಲಿ ಏಕ ಪಕ್ಷದ ಅಧಿಕಾರ ಚಲಾಯಿಸಿತು.

ಒಟ್ಟಾರೆಯಾಗಿ, 2004-2007 ರವರೆಗೆ ಎರಡು ಬಾರಿ 2018-2019 ರವರೆಗೆ ಒಮ್ಮೆ ಒಟ್ಟು ಮೂರು ಬಾರಿ ರಾಜ್ಯದಲ್ಲಿ ಮೈತ್ರಿ ಸರ್ಕಾರ ರಚನೆಯಾದರೂ ಹೆಚ್ಚು ಕಾಲ ಆಡಳಿತ ನಡೆಸಲು ಸಾಧ್ಯವಾಗಿಲ್ಲದಿರುವುದು ಗಮನಾರ್ಹ. ಮೂರು ಬಾರಿಯೂ ಮುಖ್ಯಮಂತ್ರಿಗಳು ರಾಜೀನಾಮೆ ನೀಡಿದ ಪ್ರಸಂಗವೇ ನಡೆದಿದೆ. ಆದ್ದರಿಂದ ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರವು ಫಲಪ್ರದವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ.

## [IV.] ಸಮ್ಮಿಶ್ರ ಸರ್ಕಾರದ ಪರಿಣಾಮಗಳು [Effects of Coalition Government]:

ಕೇಂದ್ರ ಅಥವಾ ರಾಜ್ಯ ಮಟ್ಟದಲ್ಲಿ ಸಮ್ಮಿಶ್ರ ಸರ್ಕಾರವು ರಚನೆಗೊಂಡರೆ ಅದರ ಪರಿಣಾಮಗಳಲ್ಲಿ ಆಮೂಲಾಗ್ರ ವ್ಯತ್ಯಾಸವಿರುವುದಿಲ್ಲ. ಹೀಗಾಗಿ ಸಮ್ಮಿಶ್ರ ಸರ್ಕಾರವು ರಚನೆಗೊಂಡರೆ ಉಂಟಾಗುವ ಪರಿಣಾಮಗಳು ಸಾಮಾನ್ಯವಾಗಿ ಏಕರೂಪವಾಗಿರುತ್ತವೆ ಎಂದು ಚಿಂತಕರು ಅಭಿಪ್ರಾಯಪಡುತ್ತಾರೆ. ಸಮ್ಮಿಶ್ರ ಸರ್ಕಾರವು ಉಳಿದೆಲ್ಲ ವಿಷಯಕ್ಕಿಂತ ನೀತಿ ನಿರೂಪಣೆ, ಆಡಳಿತ ಹಾಗೂ ಪಕ್ಷ ರಾಜಕೀಯದ ಮೇಲೆ ತನ್ನದೇಯಾದ ಗಾಢ ಪರಿಣಾಮಗಳನ್ನು ಬೀರುತ್ತದೆ. ಈ ಕುರಿತಂತೆ ಕೆಳಗೆ ಸಂಕ್ಷಿಪ್ತವಾಗಿ ಬೆಳಕು ಚೆಲ್ಲಲಾಗಿದೆ.

### [A.] ನೀತಿ ನಿರೂಪಣೆಯ ಮೇಲಿನ ಪರಿಣಾಮಗಳು [Effects on Policy Making]:

ಸಾಮಾನ್ಯವಾಗಿ ಸರ್ಕಾರವೊಂದು ಅಧಿಕಾರಕ್ಕೆ ಬಂದೊಡನೆ ತನ್ನದೇಯಾದ ನೀತಿ ನಿರೂಪಣೆಗೆ ಮುಂದಾಗುತ್ತದೆ. ರಾಜ್ಯದ ಕೃಷಿ, ಕೈಗಾರಿಕೆ, ಕಾರ್ಮಿಕ, ಶಿಕ್ಷಣ, ಜವಳಿ ಮುಂತಾದ ಕ್ಷೇತ್ರಗಳ ನೀತಿಯನ್ನು ರೂಪಿಸಲು ಸರ್ಕಾರ ಸಹಜವಾಗಿ ಪ್ರಯತ್ನಿಸುತ್ತದೆ.



ಉದಾ: 2023 ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಬದಲು ರಾಜ್ಯ ಶಿಕ್ಷಣ ನೀತಿಯನ್ನು ಘೋಷಿಸಿದುದು. ಈ ವಿಚಾರದಲ್ಲಿ ಸಮ್ಮಿಶ್ರ ಸರ್ಕಾರವು ಹೊರತಾಗಿರುವುದಿಲ್ಲ. ಆದರೆ, ಸಮ್ಮಿಶ್ರ ಸರ್ಕಾರವು ಎರಡು ಅಥವಾ ಹೆಚ್ಚು ರಾಜಕೀಯ ಪಕ್ಷಗಳಿಂದ ರಚನೆಗೊಂಡಿರುವುದರಿಂದ ನೀತಿ ನಿರೂಪಣೆಯ ವೇಳೆ ಕೆಳಗಿನ ಪರಿಣಾಮಗಳನ್ನು ಉಂಟು ಮಾಡುತ್ತದೆ.

**1. ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳ ಚೌಕಟ್ಟಿನಡಿ ನೀತಿಗಳ ನಿರ್ಧಾರ:** ಸಂಮಿಶ್ರ ಸರ್ಕಾರವು ವಿಭಿನ್ನ ರಾಜಕೀಯ ಪಕ್ಷಗಳ ಸಹಕಾರದಿಂದ ರಚನೆಗೊಂಡಿರುತ್ತದೆ. ಪ್ರತಿಯೊಂದು ರಾಜಕೀಯ ಪಕ್ಷ ತನ್ನದೇಯಾದ ಧ್ಯೇಯೋದ್ದೇಶ ಹೊಂದಿರುತ್ತದೆ. ಪರಿಣಾಮ ಸಂಮಿಶ್ರ ಸರ್ಕಾರದಲ್ಲಿನ ಪಾಲುದಾರ ಪಕ್ಷಗಳ ನೀತಿ, ಕಾರ್ಯಕ್ರಮ, ನಿಲುವುಗಳು ಸಹಜವಾಗಿ ಭಿನ್ನವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಸಂಮಿಶ್ರ ಸರ್ಕಾರದಲ್ಲಿ ಗೊಂದಲಗಳನ್ನು ನಿಯಂತ್ರಿಸಲು ಪಾಲುದಾರ ಪಕ್ಷಗಳು ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ಪರಸ್ಪರ ಚರ್ಚಿಸಿ ಅಂತಿಮಗೊಳಿಸುತ್ತವೆ. ಜೊತೆಗೆ ಸಂಮಿಶ್ರ ಸರ್ಕಾರವು ನಿರ್ಧರಿತ ಸಾಮಾನ್ಯ ಕಾರ್ಯಕ್ರಮಗಳನ್ನು ಉಲ್ಲಂಘಿಸದಂತೆ ನೋಡಿಕೊಳ್ಳಲು ಪಾಲುದಾರ ಪಕ್ಷದ ನಾಯಕರನ್ನುಳ್ಳ ಸಮನ್ವಯ ಸಮೀತಿ ರಚಿಸಲ್ಪಟ್ಟಿರುತ್ತದೆ.. ಹೀಗೆ ಸಮ್ಮಿಶ್ರ ಸರ್ಕಾರದ ನೀತಿ ನಿರೂಪಣೆಯಲ್ಲಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಮಹತ್ವದ ಪರಿಣಾಮವೆನಿಸುತ್ತದೆ.

**2. ನೀತಿ ನಿರೂಪಣೆಯಲ್ಲಿ ಅಧಿಕ ಹೊಂದಾಣಿಕೆ:** ಸಂಮಿಶ್ರ ಸರ್ಕಾರದಲ್ಲಿ ವಿಭಿನ್ನ ದೃಷ್ಟಿಕೋನದ ರಾಜಕೀಯ ಪಕ್ಷಗಳು ಪಾಲುದಾರ ಪಕ್ಷಗಳಾಗಿರುತ್ತವೆ. ಹೀಗಾಗಿ ಮಹತ್ವದ ನೀತಿ ನಿರೂಪಣೆಯಲ್ಲಿ ಏಕಪಕ್ಷೀಯ ತೀರ್ಮಾನ ಕೈಗೊಳ್ಳಲು ನಿರ್ದಿಷ್ಟ ರಾಜಕೀಯ ಪಕ್ಷ ಅಥವಾ ಅದರ ನಾಯಕನಿಗೆ ಸಾಧ್ಯವಾಗುವುದಿಲ್ಲ. ಪ್ರತಿಯೊಂದು ಪಾಲುದಾರ ಪಕ್ಷದ ಅಭಿಪ್ರಾಯ, ನಿಲುವು ಅಥವಾ ಸಲಹೆಗಳನ್ನು ಪಡೆದುಕೊಂಡೇ ಅಂತಿಮ ನಿರ್ಧಾರ ಪ್ರಕಟಿಸಬೇಕಾಗುತ್ತದೆ. ಪಾಲುದಾರ ಪಕ್ಷಗಳಿಂದ ವಿರೋಧ ವ್ಯಕ್ತವಾದರೆ ಅಗತ್ಯವಾದಲ್ಲಿ ಕೆಲ ತೀರ್ಮಾನಗಳನ್ನು ಕೈಬಿಡಬೇಕಾಗುತ್ತದೆ. ಮುಂದುವರೆದು ಬಹುಮತಕ್ಕೆ ವಿರುದ್ಧವಾದ ತನ್ನ ಅಭಿಪ್ರಾಯವನ್ನು ಸಂಮಿಶ್ರ ಸರ್ಕಾರದ ಪಾಲುದಾರ ರಾಜಕೀಯ ಪಕ್ಷವು ಬದಲಿಸಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನೀತಿ ನಿರೂಪಣಾ ಸಂದರ್ಭದಲ್ಲಿ ಅಧಿಕ ಹೊಂದಾಣಿಕೆ ಸಂಮಿಶ್ರ ಸರ್ಕಾರದಲ್ಲಿ ಸಾಮಾನ್ಯ ಸಂಗತಿ ಎನಿಸಿಕೊಂಡಿರುತ್ತದೆ.

**3. ಸೈದ್ಧಾಂತಿಕ ತಳಹದಿಯ ಕೊರತೆ:** ಸಂಮಿಶ್ರ ಸರ್ಕಾರವು ನಿರ್ದಿಷ್ಟ ಸೈದ್ಧಾಂತಿಕ ತಳಹದಿ ಹೊಂದಿರುವುದಿಲ್ಲ. ಬದಲಾಗಿ ಪ್ರತಿ ಹಂತದಲ್ಲಿ ಭಿನ್ನಾಭಿಪ್ರಾಯ ಕಂಡು ಬರುತ್ತದೆ. ಸರ್ಕಾರದ ನೀತಿ, ಕಾರ್ಯಕ್ರಮ, ನಿಲುವುಗಳಲ್ಲಿ ನಿರ್ದಿಷ್ಟ ಸಿದ್ಧಾಂತದ ಪ್ರಭಾವವನ್ನು ಸಂಮಿಶ್ರ ಸರ್ಕಾರದಲ್ಲಿ ಕಾಣಲಾಗುವುದಿಲ್ಲ. ಇದಕ್ಕೆ ನಾನಾ ಹಿನ್ನೆಲೆಯ ಪಕ್ಷಗಳು ಸಹಕರಿಸಲು ಮುಂದಾಗಿರುವುದು ಒಂದೆಡೆಯಾದರೆ ಮತ್ತೊಂದೆಡೆ ಅವುಗಳ ನಡುವಿನ ವಿಭಿನ್ನತೆ ಕಾರಣವೆನಿಸಿವೆ. ಮುಂದುವರೆದು ವ್ಯಕ್ತಿ ಪ್ರತಿಷ್ಠೆಯ ಕಾರಣಕ್ಕೆ ಸೈದ್ಧಾಂತಿಕ

ಮಹತ್ವವು ಸಂಮಿಶ್ರ ಸರ್ಕಾರದಲ್ಲಿ ನಿರ್ಲಕ್ಷಿಸಲ್ಪಡುತ್ತದೆ. ಈ ಹಿನ್ನೆಲೆಯಲ್ಲಿ ಸಮ್ಮಿಶ್ರ ಸರ್ಕಾರದ ನೀತಿ ನಿರೂಪಣೆಯು ಸೈದ್ಧಾಂತಿಕ ತಳಹದಿಯ ಕೊರತೆಯನ್ನು ಅನುಭವಿಸಬೇಕಾಗುತ್ತದೆ.

## [B.] ಆಡಳಿತದ ಮೇಲಿನ ಪರಿಣಾಮಗಳು [Effects on Administration]:

ಒಂದೇ ರಾಜಕೀಯ ಪಕ್ಷವು ಪೂರ್ಣ ಬಹುಮತದೊಡನೆ ಆಡಳಿತ ನಡೆಸುವುದಕ್ಕೂ ಮತ್ತು ಹಲವು ರಾಜಕೀಯ ಪಕ್ಷಗಳು ಸಹಕರಿಸಿ ಸಮ್ಮಿಶ್ರ ಆಡಳಿತ ನಡೆಸುವುದಕ್ಕೂ ಸಾಕಷ್ಟು ವ್ಯತ್ಯಾಸಗಳಿರುತ್ತವೆ. ಏಕಪಕ್ಷದ ಆಡಳಿತದಲ್ಲಿ ಕಂಡು ಬಾರದ ಕೆಲ ಪರಿಣಾಮಗಳನ್ನು ಸಮ್ಮಿಶ್ರ ಸರ್ಕಾರದ ಆಡಳಿತದಲ್ಲಿ ನಾವು ಗುರುತಿಸಬಹುದಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

1. **ಆಡಳಿತದಲ್ಲಿ ವೈವಿಧ್ಯತೆಗೆ ಆಸ್ಪದ:** ಸಾರ್ವತ್ರಿಕ ಚುನಾವಣೆಯಲ್ಲಿ ಒಂದೇ ರಾಜಕೀಯ ಪಕ್ಷವು ಬಹುಮತ ಪಡೆಯಲು ವಿಫಲವಾದಾಗ ಸಂಮಿಶ್ರ ಸರ್ಕಾರವು ರಚನೆಗೊಳ್ಳುತ್ತದೆ. ಸಾಮಾನ್ಯವಾಗಿ ಎರಡು ಅಥವಾ ಹೆಚ್ಚಿನ ರಾಜಕೀಯ ಪಕ್ಷಗಳು ಬಹುಮತ ಸಾಬೀತುಪಡಿಸಲು ಸಹಕರಿಸಿದಾಗ ಸಂಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬರುತ್ತದೆ. ಈ ವೇಳೆಯಲ್ಲಿ ಸಮ್ಮಿಶ್ರ ಸರ್ಕಾರದ ಪಾಲುದಾರ ಪಕ್ಷದ ಅನುಭವಿ, ನಿಪುಣ, ಜನಪ್ರಿಯ ನಾಯಕರು ಮಂತ್ರಿ ಮಂಡಳದಲ್ಲಿ ಸ್ಥಾನ ಪಡೆಯುತ್ತಾರೆ. ಇದರಿಂದ ಆಡಳಿತದಲ್ಲಿ ಸಂಚಲನ ಮೂಡುವುದಲ್ಲದೇ ಪರಿಣಾಮಕಾರತ್ವ ಉಂಟಾಗುತ್ತದೆ. ವಿವಿಧ ಪಕ್ಷಗಳ ನಾಯಕರು ತಮಗೆ ದೊರೆತ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಲು ನಾನಾ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾರಿಗೊಳಿಸಲು ಶ್ರಮಿಸುತ್ತಾರೆ. ಆಗ ಆಡಳಿತದಲ್ಲಿ ವೈವಿಧ್ಯತೆ ಸಹಜವಾಗಿ ಕಂಡು ಬರುತ್ತದೆ.

2. **ಬೃಹತ್ ಗಾತ್ರದ ಮಂತ್ರಿ ಮಂಡಳದ ಸಾಧ್ಯತೆ:** ಸಂಮಿಶ್ರ ಸರ್ಕಾರದ ಮಂತ್ರಿ ಮಂಡಳವು ಸಾಮಾನ್ಯವಾಗಿ ಗಜ ಗಾತ್ರವನ್ನು ಹೊಂದಿರುತ್ತದೆ. ಹಲವು ರಾಜಕೀಯ ಪಕ್ಷಗಳ ವಿವಿಧ ನಾಯಕರಿಗೆ ಅಗತ್ಯ ಸ್ಥಾನಮಾನ ಕಲ್ಪಿಸಬೇಕಾಗಿರುವುದು ಇದಕ್ಕೆ ಪ್ರಮುಖ ಕಾರಣ. ಪಾಲುದಾರ ಪಕ್ಷಗಳ ಪ್ರಭಾವಿಗಳಿಗೆ ಸೂಕ್ತ ಅಧಿಕಾರ ಒದಗಿಸಿದರೆ ಮಾತ್ರ ಸಂಮಿಶ್ರ ಸರ್ಕಾರವು ನಿರಾತಂಕವಾಗಿ ಕಾರ್ಯಾಚರಿಸಲು ಸಾಧ್ಯವಾದ ಹಿನ್ನೆಲೆಯಲ್ಲಿ ಮಂತ್ರಿ ಮಂಡಳದ ಗಾತ್ರವು ಸಂಮಿಶ್ರ ಸರ್ಕಾರದಲ್ಲಿ ಬೃಹದಾಕಾರ ಪಡೆದಿರುತ್ತದೆ.

3. **ರಾಜಕೀಯ ಅಸ್ಥಿರತೆಯ ಆತಂಕ:** ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿರುವೆಡೆ ರಾಜಕೀಯ ಅಸ್ಥಿರತೆಯು ನಿರಂತರವಾಗಿ ಆಡಳಿತವನ್ನು ಕಾಡುತ್ತದೆ. ಅವಕಾಶವಾದಿ ರಾಜಕೀಯ ಪಕ್ಷಗಳು ಕ್ಷುಲ್ಲಕ ಕಾರಣಗಳಿಗೆ ತಮ್ಮ ಬೆಂಬಲವನ್ನು ಹಿಂತೆಗೆದುಕೊಳ್ಳುವ ಬೆದರಿಕೆ ಹಾಕಲು ಮುಂದಾಗುತ್ತವೆ. ಜೊತೆಗೆ ರಾಜಕೀಯ ಲಾಭವಿದ್ದಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಂಡು ಅನ್ಯ ಪಕ್ಷಗಳೊಡನೆ ಒಪ್ಪಂದ



ಮಾಡಿಕೊಂಡು ಹೊಸ ಸರ್ಕಾರ ರಚಿಸುವ ಆತಂಕ ನಿರಂತರವಾಗಿರುತ್ತದೆ. ಆದ್ದರಿಂದ ರಾಜಕೀಯ ಅಸ್ಥಿರತೆಯು ಸಂಮಿಶ್ರ ಸರ್ಕಾರವಿದ್ದಲ್ಲಿ ಆಡಳಿತದ ನಿರಂತರತೆಗೆ ಆತಂಕವಾಗಿ ಪರಿಣಮಿಸಿರುತ್ತದೆ.

4. **ಅಧಿಕಾರ ಚಲಾವಣೆಗೆ ಸೀಮಿತ:** ಪ್ರತಿಯೊಂದು ಸಂಮಿಶ್ರ ಸರ್ಕಾರದ ರಚನೆಗೆ ಆದರ್ಶ ಕಾರಣಗಳನ್ನು ಪಾಲುದಾರ ಪಕ್ಷಗಳು ನೀಡುತ್ತವೆ. ರಾಜಕೀಯ ನಿರಂತರತೆ, ಚುನಾವಣಾ ವೆಚ್ಚದ ನಿಯಂತ್ರಣ, ಆಡಳಿತದಲ್ಲಿ ಹೊಸತನ ಇತ್ಯಾದಿ ಕಾರಣಗಳನ್ನು ಸಂಮಿಶ್ರ ಸರ್ಕಾರದ ರಚನೆಗೆ ಅದರ ಪಾಲುದಾರ ಪಕ್ಷಗಳು ನೀಡುತ್ತವೆ. ವಾಸ್ತವದಲ್ಲಿ ಅಧಿಕಾರ ಗಳಿಕೆ ಮತ್ತು ಚಲಾವಣೆಯು ಸಂಮಿಶ್ರ ಸರ್ಕಾರದ ರಚನೆಗೆ ಪ್ರಧಾನವಾದ ಕಾರಣವಾಗಿರುತ್ತದೆ. ದೊರೆತ ಅವಕಾಶವನ್ನು ಬಳಸಿಕೊಂಡು ರಾಜಕೀಯವಾಗಿ ಬಲವರ್ಧನೆಗೊಳ್ಳುವುದು ಸಂಮಿಶ್ರ ಸರ್ಕಾರದ ಪ್ರತಿ ಪಾಲುದಾರ ಪಕ್ಷದ ಉದ್ದೇಶವಾಗಿರುತ್ತದೆ.

## [C.] ಪಕ್ಷ ರಾಜಕೀಯದ ಮೇಲಿನ ಪರಿಣಾಮಗಳು [Effects on Party Politics]:

ಜನಸಾಮಾನ್ಯರಿಗೆ ಸಂಬಂಧಿಸಿರದೇ ರಾಜಕೀಯ ಪಕ್ಷಗಳಿಗೆ ಸಂಬಂಧಿಸಿರುವ ರಾಜಕೀಯ ಚಟುವಟಿಕೆಗಳು ಪಕ್ಷ ರಾಜಕೀಯ ಎನಿಸಿಕೊಳ್ಳುತ್ತವೆ. ಇಲ್ಲಿ ಪಕ್ಷ ಸಂಘಟನೆ, ಚುನಾವಣಾ ಸ್ಪರ್ಧೆ, ಪಕ್ಷದ ಗುರಿಗಳು, ಪಕ್ಷಗಳ ಒಡಕು ಮತ್ತು ವಿಲೀನದಂತಹ ಅಂಶಗಳು ಕಂಡು ಬರುತ್ತವೆ. ಸಮ್ಮಿಶ್ರ ಸರ್ಕಾರವು ಪಕ್ಷ ರಾಜಕೀಯದ ಮೇಲೆ ವ್ಯಾಪಕ ಪರಿಣಾಮಗಳನ್ನು ಉಂಟು ಮಾಡುತ್ತಿದ್ದು ಅವುಗಳಲ್ಲಿ ಪ್ರಧಾನವಾದವುಗಳನ್ನು ಕೆಳಗೆ ನೀಡಲಾಗಿದೆ.

1. **ಅಲ್ಪಸಂಖ್ಯಾತ ಪಕ್ಷಗಳಿಗೆ ಸದವಕಾಶ:** ಸಂಮಿಶ್ರ ಸರ್ಕಾರದ ಯಶಸ್ಸು ಅದನ್ನು ಮುನ್ನಡೆಸುವ ನಾಯಕನನ್ನು ಅವಲಂಬಿಸಿರುತ್ತದೆ. ಹೀಗಾಗಿ ಸಂಮಿಶ್ರ ಸರ್ಕಾರದ ಪಾಲುದಾರ ರಾಜಕೀಯ ಪಕ್ಷಗಳು ಸರ್ವಮಾನ್ಯ ನಾಯಕನನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಸಾಮಾನ್ಯವಾಗಿ ಅಧಿಕ ಚುನಾಯಿತ ಪ್ರತಿನಿಧಿಗಳನ್ನುಳ್ಳ ಪಕ್ಷದ ನಾಯಕನೇ ಸಂಮಿಶ್ರ ಸರ್ಕಾರದ ಮುಂದಾಳತ್ವ ವಹಿಸಿಕೊಳ್ಳುತ್ತಾನೆ. ಕೆಲವೊಮ್ಮೆ ಸರ್ಕಾರದಲ್ಲಿನ ಎಲ್ಲ ಪಾಲುದಾರ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತ ನಡೆಸಬಲ್ಲ ವ್ಯಕ್ತಿ ಕಡಿಮೆ ಚುನಾಯಿತ ಪ್ರತಿನಿಧಿಗಳುಳ್ಳ ಪಕ್ಷದವನಾದರೂ ನೇತೃತ್ವ ನೀಡಬಹುದಾಗಿದೆ. ಉದಾ: 1996 ರಲ್ಲಿ ಕಡಿಮೆ ಸ್ಥಾನ ಹೊಂದಿದ್ದ ಜನತಾ ದಳದ ಎಚ್. ಡಿ. ದೇವೇಗೌಡರು ಸಂಯುಕ್ತ ರಂಗ ಸಂಮಿಶ್ರ ಸರ್ಕಾರದ ಪ್ರಧಾನಿಯಾಗಿ ಸರ್ವಾನುಮತದಿಂದ ನೇಮಕಗೊಂಡುದುದು.

2. **ಗುಂಪುಗಾರಿಕೆಗೆ ಆಸ್ಪದ:** ರಾಜಕೀಯ ಪಕ್ಷವೊಂದು ನಿರ್ದಿಷ್ಟ ತತ್ವ ಸಿದ್ಧಾಂತವನ್ನು ಆಧರಿಸಿರುತ್ತದೆ. ಈ ಸಿದ್ಧಾಂತದಲ್ಲಿ ನಂಬಿಕೆಯುಳ್ಳ ನಾಯಕರು ಆಯಾ ಪಕ್ಷವನ್ನು ಸಂಘಟಿಸಿರುತ್ತಾರೆ. ಕೆಲವೊಮ್ಮೆ ಪಕ್ಷವೊಂದು ತನ್ನ ಸಿದ್ಧಾಂತಕ್ಕೆ ವ್ಯತಿರಿಕ್ತವಾದ ಸಿದ್ಧಾಂತ ಪಾಲಿಸುವ ಪಕ್ಷದೊಡನೆ ಸಹಕರಿಸಿ ಸಮ್ಮಿಶ್ರ ಸರ್ಕಾರವನ್ನು ರಚಿಸಲು

ಮುಂದಾದರೆ ಕೆಲ ನಾಯಕರು ಅಸಮಧಾನಗೊಳ್ಳುತ್ತಾರೆ. ಅಸಮಧಾನವು ಭಿನ್ನಾಭಿಪ್ರಾಯವಾಗಿ ಬಲಗೊಂಡು ಪಕ್ಷದಿಂದಲೇ ಕೆಲವರು ಹೊರ ಹೋಗಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸಮ್ಮಿಶ್ರ ಸರ್ಕಾರದಿಂದ ಪಕ್ಷದಲ್ಲಿ ಗುಂಪುಗಾರಿಕೆ ತಲೆದೋರುವ ಸಾಧ್ಯತೆ ಅಧಿಕವಾಗಿರುತ್ತದೆ.

**3. ಹೊಣೆಗಾರಿಕೆಯ ಅಸ್ಪಷ್ಟತೆಗೆ ಹಾದಿ:** ಸಮ್ಮಿಶ್ರ ಸರ್ಕಾರದಲ್ಲಿ ಹಲವು ರಾಜಕೀಯ ಪಕ್ಷಗಳು ಸಹಕರಿಸಿ ಅಧಿಕಾರ ಚಲಾಯಿಸುತ್ತಾರೆ. ಈ ಸಮಯದಲ್ಲಿ ಉತ್ತಮ ಸಾಧನೆಗೆ ಎಲ್ಲ ಪಕ್ಷಗಳು ತಾವೇ ಕಾರಣವೆಂದು ಪ್ರತಿಪಾದಿಸಿದರೆ ವೈಫಲ್ಯಗಳಿಗೆ ಪರಸ್ಪರರತ್ತ ಬೊಟ್ಟು ತೋರಿಸುತ್ತವೆ. ಈ ಬೆಳವಣಿಗೆಯಿಂದ ಮತದಾರರಿಗೆ ತೋರಬೇಕಾದ ಹೊಣೆಗಾರಿಕೆಯ ವಿಷಯದಲ್ಲಿ ರಾಜಕೀಯ ಪಕ್ಷಗಳಿಗೆ ಸಂಬಂಧಿಸಿದಂತೆ ಅಸ್ಪಷ್ಟತೆ ಕಂಡು ಬರುತ್ತದೆ.

**4. ಮೌಲ್ಯಾಧಾರಿತ ರಾಜಕೀಯದ ಇಳಿಮುಖ:** ಸಮ್ಮಿಶ್ರ ಸರ್ಕಾರಗಳು ರಾಜಕಾರಣಿಗಳ ಅವಕಾಶವಾದಿ ನಿಲುವುಗಳಿಗೆ ಕಾರಣವಾಗುತ್ತವೆ. ಅಧಿಕಾರದ ಲಾಲಸೆಯಿಂದ ಬೆಂಬಲ ಹಿಂತೆಗೆತ, ಬೇರೊಂದು ಪಕ್ಷಗಳೊಡನೆ ಸಹಕರಿಸುವಿಕೆ, ಪಕ್ಷಾಂತರಕ್ಕೆ ಮುಂದಾಗುವಿಕೆ, ಪಕ್ಷಗಳ ವಿಲೀನದಂತಹ ಮೌಲ್ಯರಹಿತ ವಿದ್ಯಮಾನಗಳು ರಾಜಕಾರಣದಲ್ಲಿ ಸಹಜವೆನಿಸುತ್ತವೆ. ಇದರಿಂದ ಮೌಲ್ಯಾಧಾರಿತ ರಾಜಕಾರಣದ ಕೊರತೆಯನ್ನು ಮತದಾರರು ಕಂಡುಕೊಳ್ಳುತ್ತಾರೆ.

ಈ ಮೇಲೆ ಚರ್ಚಿಸಿದಂತೆ ಸಮ್ಮಿಶ್ರ ಸರ್ಕಾರದಿಂದ ವ್ಯಾಪಕ ಪರಿಣಾಮಗಳು ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಉಂಟಾಗುತ್ತವೆ. ಈ ಪೈಕಿ ಕೆಲ ಪರಿಣಾಮಗಳು ಸಕಾರಾತ್ಮಕ ಮತ್ತು ಇತರ ಕೆಲ ಪರಿಣಾಮಗಳು ನಕಾರಾತ್ಮಕ ಸ್ವರೂಪದಿಂದ ಕೂಡಿರುವುದು ಗಮನಾರ್ಹ. ಮೇಲೆ ಸಾಮಾನ್ಯವಾಗಿ ಸಮ್ಮಿಶ್ರ ಸರ್ಕಾರವೊಂದರ ನೀತಿ ನಿರೂಪಣೆ, ಆಡಳಿತ ಹಾಗೂ ಪಕ್ಷ ರಾಜಕೀಯ ಕುರಿತಾದ ಸಕಾರಾತ್ಮಕ ಮತ್ತು ನಕಾರಾತ್ಮಕ ಪರಿಣಾಮಗಳನ್ನು ಪ್ರಸ್ತಾಪಿಸಲಾಗಿದ್ದು ಇವೆಲ್ಲ ಆಯಾ ಸನ್ನಿವೇಶವನ್ನು ಆಧರಿಸಿರುತ್ತವೆ ಎಂಬುದನ್ನು ನಾವು ಮರೆಯುವಂತಿಲ್ಲ.

## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ಸಮ್ಮಿಶ್ರ ಸರ್ಕಾರ ಎಂದರೇನು?
2. ಸಮ್ಮಿಶ್ರ ಸರಾಜಕೀಯವನ್ನು ವ್ಯಾಖ್ಯಾನಿಸಿರಿ.
3. ಸಮ್ಮಿಶ್ರ ಸರ್ಕಾರದ ಮೂರು ಲಕ್ಷಣಗಳನ್ನು ಬರೆಯಿರಿ.
4. ಚುನಾವಣಾ ಪೂರ್ವ ಮತ್ತು ಚುನಾವಣೋತ್ತರ ಮೈತ್ರಿ ಎಂದರೇನು?
5. ಕರ್ನಾಟಕದಲ್ಲಿ ಇದುವರೆಗೆ ರಚನೆಗೊಂಡ ಸಮ್ಮಿಶ್ರ ಸರ್ಕಾರಗಳ ಅವಧಿಯನ್ನು ತಿಳಿಸಿರಿ.



6. ಕರ್ನಾಟಕದಲ್ಲಿ ಎರಡನೇ ಸಮ್ಮಿಶ್ರ ಸರ್ಕಾರವು ಯಾವಾಗ ಮತ್ತು ಏಕೆ ರಚನೆಗೊಂಡಿತು?
7. ಕರ್ನಾಟಕದಲ್ಲಿ ನಾಲ್ಕನೇ ಸಮ್ಮಿಶ್ರ ಸರ್ಕಾರ ಯಾವಾಗ ರಚನೆಗೊಂಡಿತು? ಅದರ ಪತನಕ್ಕೆ ಕಾರಣವೇನು?
8. ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಎಂದರೇನು?
9. ಸಮ್ಮಿಶ್ರ ಸರ್ಕಾರ ರಚನೆಗೊಂಡರೆ ಆಡಳಿತದಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಹೇಗೆ?
10. ಬೃಹತ್ ಗಾತ್ರದ ಮಂತ್ರಿ ಮಂಡಳವು ಸಮ್ಮಿಶ್ರ ಸರ್ಕಾರದಲ್ಲಿ ಕಂಡು ಬರಲು ಕಾರಣವೇನು?

[B.] ಐದು ಅಂಕದ ಪ್ರಶ್ನೆಗಳು:

1. ಸಮ್ಮಿಶ್ರ ರಾಜಕೀಯದ ಸ್ವರೂಪವನ್ನು ಪರಿಶೀಲಿಸಿರಿ.
2. ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರ ಕುರಿತು ಟಿಪ್ಪಣಿ ಬರೆಯಿರಿ.
3. ಸಮ್ಮಿಶ್ರ ಸರ್ಕಾರದ ಪರಿಣಾಮಗಳನ್ನು ವಿವರಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರಗಳ ಕಾರ್ಯಾಚರಣೆಯನ್ನು ವಿವರಿಸಿರಿ.
2. ಸಮ್ಮಿಶ್ರ ರಾಜಕೀಯ ಎಂದರೇನು? ಅದರ ಪರಿಣಾಮಗಳನ್ನು ಚರ್ಚಿಸಿರಿ.

ಅಧ್ಯಾಯ 11:

# ಕರ್ನಾಟಕದಲ್ಲಿ ರಾಜಕೀಯ ಧ್ರುವೀಕರಣ

## [Political Polarisation in Karnataka].

### ಪ್ರಸ್ತಾವನೆ [Introduction]:

ಸಂಘ ಜೀವಿಯಾಗಿರುವ ಮಾನವ ರಾಜಕೀಯ ಜೀವಿಯೂ ಎಂಬುದನ್ನು ಅರಿಸ್ಟಾಟಲ್ ಅತ್ಯಂತ ಹಿಂದೆಯೇ ತಿಳಿಸಿರುವ. ರಾಜಕೀಯವು ಮಾನವ ಬದುಕಿನ ಅವಿಭಾಜ್ಯ ಅಂಗವಾಗಿದ್ದು ಆತನ ಬೆಳವಣಿಗೆಯೊಡನೆ ತನ್ನ ಬೆಳವಣಿಗೆಯನ್ನು ರಾಜಕೀಯವು ಕಾಣುತ್ತಲೇ ಬಂದಿದೆ. ಪ್ರಸ್ತುತ ರಾಜಕೀಯವು ಅಧಿಕಾರಕ್ಕಾಗಿ ಜರುಗುವ ಹೋರಾಟವೆನಿಸಿದ್ದು ವೈವಿಧ್ಯಮಯ ಆಯಾಮವನ್ನು ತಾಳಿ ನೂತನ ವಿದ್ಯಮಾನಗಳಿಗೆ ಕಾರಣವಾಗಿದೆ. ಈ ಪೈಕಿ ಧ್ರುವೀಕರಣದ ರಾಜಕೀಯ ವಿದ್ಯಮಾನವೂ ಒಂದಾಗಿದೆ. ಸಾಮಾನ್ಯವಾಗಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಅಸ್ತಿತ್ವದಲ್ಲಿರುವ ದೇಶಗಳಲ್ಲಿ ಧ್ರುವೀಕರಣದ ರಾಜಕೀಯವು ಸಕ್ರಿಯವಾಗಿದ್ದು ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಅಧಿಕ ಮಹತ್ವವನ್ನು ಅದು ಪಡೆದುಕೊಂಡಿರುವುದಿಲ್ಲ. ಪ್ರಸ್ತುತ ಅಧ್ಯಾಯದಲ್ಲಿ ರಾಜಕೀಯ ಧ್ರುವೀಕರಣದ ಅರ್ಥ, ಕರ್ನಾಟಕದ ರಾಜಕೀಯದಲ್ಲಿ ಧ್ರುವೀಕರಣದ ವಿಕಾಸ ಮತ್ತು ಅದರ ಪರಿಣಾಮಗಳನ್ನು ಕುರಿತು ಬೆಳಕು ಚೆಲ್ಲಲಾಗಿದೆ.

### [I.] ರಾಜಕೀಯ ಧ್ರುವೀಕರಣದ ಅರ್ಥ [Meaning of Political Polarisation]:

ಸರಳಾರ್ಥದಲ್ಲಿ ರಾಜಕೀಯವಾಗಿ ಪರಸ್ಪರ ವಿರುದ್ಧವಾದ ಬಣಗಳ ರಚನೆಯನ್ನು ರಾಜಕೀಯ ಧ್ರುವೀಕರಣ ಪ್ರತಿನಿಧಿಸುತ್ತದೆ. ವಿಶಾಲಾರ್ಥದಲ್ಲಿ ರಾಜಕೀಯ ಪಕ್ಷಗಳ ನೆರವಿನಿಂದ ದೇಶವೊಂದರ ಜನರು ರಾಜಕೀಯವಾಗಿ ಪರಸ್ಪರ ವಿಮುಖವಾದ ತತ್ವ, ಸಿದ್ಧಾಂತ, ನಂಬಿಕೆ ಅಥವಾ ವಿಚಾರಗಳಿಗೆ ಬದ್ಧರಾಗುವುದನ್ನು ರಾಜಕೀಯ ಧ್ರುವೀಕರಣ ಎನ್ನಬಹುದಾಗಿದೆ. ರಾಜಕೀಯ ಧ್ರುವೀಕರಣವು ಎರಡು ಅಥವಾ ಹೆಚ್ಚಿನ ಗುಂಪುಗಳ ನಡುವೆ ಸಹಕಾರದ ಬದಲು ಸ್ಪರ್ಧೆಯನ್ನು ಬೆಳೆಸುವ ಪರಿಕಲ್ಪನೆಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಂಡು ಬರುವ ಸಹಜ ವಿದ್ಯಮಾನವಾಗಿರುವ ರಾಜಕೀಯ ಧ್ರುವೀಕರಣವು ದ್ವಿಪಕ್ಷ ಪದ್ಧತಿಯುಳ್ಳ ದೇಶಗಳಲ್ಲಿ ಪ್ರಧಾನವಾಗಿರುತ್ತದೆ.



ಸಾಂಪ್ರದಾಯಿಕತೆಯ ವಿರುದ್ಧ ಆಧುನಿಕತೆ, ಜಾಗತಿಕರಣದ ವಿರುದ್ಧ ರಾಷ್ಟ್ರೀಯತೆ, ಜಾತ್ಯತೀತತೆಯ ವಿರುದ್ಧ ಧಾರ್ಮಿಕತೆ, ನಗರಗಳ ವಿರುದ್ಧ ಗ್ರಾಮಗಳ ವಿಚಾರಗಳು ಧ್ರುವೀಕರಣಗೊಂಡಾಗ ರಾಜಕೀಯ ಧ್ರುವೀಕರಣ ಸೃಷ್ಟಿಸಲ್ಪಡುತ್ತದೆ. ಸಾಮಾನ್ಯವಾಗಿ ಗಣ್ಯರ ರಾಜಕೀಯ ಧ್ರುವೀಕರಣ ಮತ್ತು ಸಾಮಾನ್ಯರ ಧ್ರುವೀಕರಣ ಎಂಬ ಎರಡು ಆಯಾಮಗಳನ್ನು ರಾಜಕೀಯ ಧ್ರುವೀಕರಣವು ಒಳಗೊಂಡಿರುತ್ತದೆ. ಕೇವಲ ರಾಜಕೀಯ ಪಕ್ಷಗಳ ಮುಖಂಡರು, ಚುನಾಯಿತ ಪ್ರತಿನಿಧಿಗಳು, ಸಂಘಟನಾ ಚತುರರು ಪರಸ್ಪರ ವಿರುದ್ಧವಾದ ಬಣಗಳನ್ನು ರಚಿಸಿಕೊಂಡರೆ ಅದನ್ನು ಗಣ್ಯರ ರಾಜಕೀಯ ಧ್ರುವೀಕರಣ ಎನ್ನಲಾಗುತ್ತದೆ. ಉದಾ: ಇತ್ತೀಚೆಗೆ ಮುಂಬೈನಲ್ಲಿ ಸಭೆ ಸೇರಿದ ವಿವಿಧ ರಾಜಕೀಯ ಪಕ್ಷಗಳ ನಾಯಕರು ಇಂಡಿಯಾ ಒಕ್ಕೂಟದಡಿ ಧ್ರುವೀಕರಣಗೊಂಡಿದುದು. ಈ ಬಗೆಯ ಧ್ರುವೀಕರಣವು ಸಾಮಾನ್ಯವಾಗಿ ಚುನಾವಣೆಯ ಕಾಲದಲ್ಲಿ ಕಂಡು ಬರುತ್ತದೆ. ಅಂತೆಯೇ ಜನಸಾಮಾನ್ಯರು ಪರಸ್ಪರ ವಿಮುಖವಾದ ಬಣಗಳಿಗೆ ಕಾರಣವಾದರೆ ಅದನ್ನು ಸಾಮಾನ್ಯ ಅಥವಾ ಸಮೂಹ ಧ್ರುವೀಕರಣ ಎನ್ನಲಾಗುತ್ತದೆ. ಈ ಬಗೆಯ ಧ್ರುವೀಕರಣವು ದೇಶದ ಸರ್ಕಾರಗಳು ಜಾರಿಗೊಳಿಸುವ ನೀತಿ, ನಿರ್ಧಾರ ಅಥವಾ ಕಾನೂನುಗಳನ್ನು ಆಧರಿಸಿ ಸೃಷ್ಟಿಸಲ್ಪಡುತ್ತದೆ. ಉದಾ: ಗೋ ಹತ್ಯಾ ನಿಷೇಧ, ಏಕರೂಪ ನಾಗರಿಕ ಸಂಹಿತೆ, ಜಾಗತಿಕರಣದ ಅಳವಡಿಕೆ ಕುರಿತಂತೆ ಭಾರತೀಯ ಜನಸಾಮಾನ್ಯರಲ್ಲಾದ ಧ್ರುವೀಕರಣ. ನಿಯತಕಾಲಿಕವಾಗಿ ಜರುಗುವ ಚುನಾವಣೆಗಳ ವೇಳೆಯಲ್ಲಿ ಮಾತ್ರವಲ್ಲದೇ ಇತರ ಸಂದರ್ಭಗಳಲ್ಲಿಯೂ ಸಾಮಾನ್ಯರ ರಾಜಕೀಯ ಧ್ರುವೀಕರಣವು ವ್ಯಕ್ತಗೊಳ್ಳುತ್ತದೆ.

ಭಾರತದ ರಾಜಕೀಯವು ಇತರ ದೇಶಗಳ ರಾಜಕೀಯಕ್ಕಿಂತ ಸಾಕಷ್ಟು ಭಿನ್ನ ಮತ್ತು ಸಂಕೀರ್ಣವಾದದ್ದು. ಇದಕ್ಕೆ ಕಾರಣ, ಭಾರತದಲ್ಲಿ ರಾಜಕೀಯವು ವೇಧ ಹಾಗೂ ಮಹಾಕಾವ್ಯಗಳ ಕಾಲದಷ್ಟು ಹಿಂದೆಯೇ ಜನ್ಮತಾಳಿದೆ. ಜೊತೆಗೆ ಸಾಮಾಜಿಕ ಶ್ರೇಣೀಕರಣ ಮತ್ತು ಸಾಂಸ್ಕೃತಿಕ ವೈವಿಧ್ಯತೆಯಿಂದ ಭಾರತದ ರಾಜಕೀಯವು ರೂಪುಗೊಂಡಿದೆ. ಅಲ್ಲದೇ ಜನಾಂಗ, ಜಾತಿ, ಧರ್ಮ, ಸಾಮುದಾಯಿಕ ಭಾವನೆಯುಳ್ಳ ಜನರ ಗುಂಪುಗಳ ಪ್ರಭಾವ ಭಾರತದ ರಾಜಕೀಯದ ಮೇಲಿದೆ. ರಾಷ್ಟ್ರೀಯ ಹೋರಾಟದ ಸಮಯದಲ್ಲಿನ ಭಿನ್ನ ಸೈದ್ಧಾಂತಿಕ ತಳಹದಿಯನ್ನು ಭಾರತದ ರಾಜಕೀಯವು ಹೊಂದಿದೆ. ಸ್ವತಂತ್ರ್ಯ ನಂತರ ವಿಶ್ವದ ವಿಶಾಲ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಭಾರತ ಗುರುತಿಸಿಕೊಂಡಿದೆ. ಸಾರ್ವತ್ರಿಕ ವಯಸ್ಕ ಮತದಾನ, ಬಹು ಪಕ್ಷಗಳ ಅಸ್ತಿತ್ವ, ನಿಯತಕಾಲಿಕ ಚುನಾವಣೆಗಳು ಭಾರತದ ರಾಜಕೀಯವನ್ನು ಸಂಕೀರ್ಣತೆಯತ್ತ ತಂದು ನಿಲ್ಲಿಸಿವೆ. ಈ ಎಲ್ಲ ಬೆಳವಣಿಗೆಗಳು ರಾಜಕೀಯ ಧ್ರುವೀಕರಣ ವಿದ್ಯಮಾನಕ್ಕೆ ಕಾರಣವಾಗಿವೆ. ಜೊತೆಗೆ ಭಾರತದಲ್ಲಿ ಅನೇಕ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಸಮಸ್ಯೆಗಳು ಜೀವಂತವಾಗಿದ್ದು ರಾಜಕೀಯ ಧ್ರುವೀಕರಣವನ್ನು ಪ್ರಭಾವಿಸಿವೆ. ಭಾಷೆ, ಧರ್ಮ, ಜಾತಿ, ಲಿಂಗ, ಪ್ರದೇಶಾಧಾರಿತ ಜನ ಸಮುದಾಯಗಳು ತಮ್ಮ ಹಕ್ಕು ಅಥವಾ ಹಿತಾಸಕ್ತಿಗೋಸ್ಕರ ರಾಜಕೀಯ ನಿಯಂತ್ರಣಕ್ಕೆ ಪ್ರಯತ್ನಿಸುತ್ತಿರುದು ರಾಜಕೀಯ ಧ್ರುವೀಕರಣಕ್ಕೆ ಭಾರತದಲ್ಲಿ ಇಂಬು ನೀಡಿವೆ.

[II.] ಕರ್ನಾಟಕದ ರಾಜಕೀಯದಲ್ಲಿ ಧ್ರುವೀಕರಣದ ವಿಕಾಸ [Growth of Polarisation in Karnataka Politics]:

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನವೆಂದು, 1950 ರಿಂದ 1956 ರ ನಡುವೆ ಮೈಸೂರು ರಾಜ್ಯವೆಂದು, 1956 ರಿಂದ 1973 ರ ನಡುವೆ ನವ ಮೈಸೂರು ಎಂದು ಕರೆಯಲ್ಪಡುತ್ತಿದ್ದ ನಮ್ಮ ಪ್ರಸ್ತುತ ಕರ್ನಾಟಕವು 20 ನೇ ಶತಮಾನದ ಪೂರ್ವಾರ್ಧದಲ್ಲಿ ಆದರ್ಶ ರಾಜಕೀಯಕ್ಕೆ ಹೆಸರುವಾಸಿಯಾಗಿತ್ತು. ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಭಾರತ ಒಕ್ಕೂಟದ ಇತರ ರಾಜ್ಯಗಳ ರಾಜಕಾರಣದಂತೆ ನೂತನ ವಿದ್ಯಮಾನಗಳನ್ನು ಮೈಗೂಡಿಸಿಕೊಂಡಿತು. ಆ ಪೈಕಿ ಧ್ರುವೀಕರಣದ ರಾಜಕೀಯವು ಪ್ರಧಾನವಾದದ್ದು. ಒಂದರ್ಥದಲ್ಲಿ ರಾಜಕೀಯ ಧ್ರುವೀಕರಣ ಕರ್ನಾಟಕಕ್ಕೆ ನೂತನ ವಿದ್ಯಮಾನವೇನಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿ ಆಧಾರದ ಧ್ರುವೀಕರಣಕ್ಕೆ ಕರ್ನಾಟಕ ಸಾಕ್ಷಿಯಾಗಿತ್ತು. ಸ್ವಾತಂತ್ರ್ಯೋತ್ತರ ಧ್ರುವೀಕರಣದ ರಾಜಕೀಯವನ್ನು ರಾಜಕೀಯ ಪಕ್ಷಗಳು ಅವಲಂಬಿಸಿದ ಕಾರಣದಿಂದಾಗಿ ರಾಜಕೀಯ ಧ್ರುವೀಕರಣದ ಹಲವು ನಿದರ್ಶನಗಳು ಕರ್ನಾಟಕದ ರಾಜ್ಯ ರಾಜಕಾರಣದ ಇತಿಹಾಸದಲ್ಲಿ ಸ್ಥಾನ ಪಡೆಯುವಂತಾಗಿದೆ. ಸುಲಭ ಅರ್ಥೈಸಿಕೊಳ್ಳುವಿಕೆಯ ಕಾರಣಕ್ಕೆ ಕರ್ನಾಟಕದ ರಾಜಕೀಯ ಧ್ರುವೀಕರಣದ ವಿಕಾಸವನ್ನು ಪ್ರಧಾನ ಕ್ಷೇತ್ರಗಳ ಬೆಳಕಿನಲ್ಲಿ ಕೆಳಗೆ ವಿವರಿಸಲು ಪ್ರಯತ್ನಿಸಲಾಗಿದೆ.

1. **ಜಾತಿಗಳ ಧ್ರುವೀಕರಣ:** ಸ್ವಾತಂತ್ರ್ಯ ಪೂರ್ವದಲ್ಲಿಯೇ ಹಿಂದುಳಿದ ಜಾತಿಗಳ ಧ್ರುವೀಕರಣದ ರಾಜಕೀಯವು ಮೈಸೂರು ಸಂಸ್ಥಾನದ ಆಡಳಿತದಲ್ಲಿ ಕಂಡು ಬಂದಿತು. ಮದ್ರಾಸ್ ಬ್ರಾಹ್ಮಣರ ವಿರುದ್ಧ ಮೈಸೂರು ಬ್ರಾಹ್ಮಣರು ಧ್ರುವೀಕರಣಗೊಂಡು ದಿವಾನ ಹುದ್ದೆಯನ್ನು ತಮ್ಮದಾಗಿಸಿಕೊಂಡರು. ಮುಂದೆ ಮಿಲ್ಲರ್ ಸಮಿತಿಯ ವರದಿಯಂತೆ ಹಿಂದುಳಿದ ಬ್ರಾಹ್ಮಣೇತರರು ಧ್ರುವೀಕರಣಗೊಂಡು ರಾಜಕೀಯ ಅವಕಾಶಗಳನ್ನು ಹೊಂದಲು ಪ್ರಯತ್ನಿಸಿದರು. ಬಳಿಕ 1970 ರ ದಶಕದಲ್ಲಿ ದೇವರಾಜ ಅರಸು ನೇತೃತ್ವದಲ್ಲಿ ಒಕ್ಕಲಿಗೇತರ ಹಾಗೂ ಲಿಂಗಾಯತೇತರ ಜಾತಿಗಳ ಜನರು ಧ್ರುವೀಕರಣಗೊಂಡು ರಾಜಕೀಯ ಅವಕಾಶಗಳನ್ನು ಪಡೆಯಲು ಮುಂದಾದರು. ಪ್ರಸ್ತುತ ಕರ್ನಾಟಕದ ರಾಜಕೀಯವು ಜಾತಿಯಾಧಾರಿತ ಧ್ರುವೀಕರಣದಿಂದ ನಿರ್ಧರಿಸುವಂತಾಗಿದೆ. 2023 ರ ಸಾರ್ವತ್ರಿಕ ಚುನಾವಣೆಯಲ್ಲಿ ಲಿಂಗಾಯತರು ಮತ್ತು ಒಕ್ಕಲಿಗರು ಕಾಂಗ್ರೆಸ್ ಪರ ಧ್ರುವೀಕರಣಗೊಂಡ ಪರಿಣಾಮ ಕರ್ನಾಟಕದಲ್ಲಿ ಸ್ಪಷ್ಟ ಬಹುಮತದಿಂದ ಕಾಂಗ್ರೆಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯುವಂತಾಗಿದೆ.

2. **ಭಾಷಾ ಧ್ರುವೀಕರಣ:** 1956 ರ ರಾಜ್ಯಗಳ ಪುನರ್‌ಸಂಘಟನೆಯಿಂದ ನವ ಮೈಸೂರು ರಚನೆಗೊಂಡಿತು. ಕನ್ನಡಿಗರ ಏಕೀಕೃತ ಕರ್ನಾಟಕದ ಕನಸು ಕೈಗೂಡಿದರೂ ಗಡಿನಾಡ ಕನ್ನಡಿಗರ ಸಮಸ್ಯೆ ಜೀವಂತವಾಗಿ ಉಳಿದುಕೊಂಡಿತು. ಇದರೊಡನೆ ಕರ್ನಾಟಕದ ಗಡಿ ಭಾಗದಲ್ಲಿ ಭಾಷಾಧಾರಿತ ಸಮಸ್ಯೆಗಳು ಮುಂದುವರಿದವು. ಫಲವಾಗಿ



ಮರಾಠಿಗರನ್ನು ಅಥವಾ ಕನ್ನಡಿಗರನ್ನು ಓಲೈಸುವ ಕಾರಣಕ್ಕೆ ಧ್ರುವೀಕರಣದ ರಾಜಕೀಯವು ...ಪ್ಪ ತಾಳಿತು. ರಾಜಕೀಯವಾಗಿ ಲಾಭ ಪಡೆಯಲು ಇಂದಿಗೂ ಭಾಷಾ ಧ್ರುವೀಕರಣ ಚುನಾವಣೆಯ ವೇಳೆ ಗಡಿ ಭಾಗದಲ್ಲಿ ಜರುಗುತ್ತಲಿದೆ. ಇದರೊಡನೆ ತುಳು ನಾಡಿನ ಜನರು ಮತ್ತು ಕೊಡವರು ತಮ್ಮ ಭಾಷೆಯನ್ನಾಧರಿಸಿ ಧ್ರುವೀಕರಣಗೊಳ್ಳುವ ಮೂಲಕ ರಾಜಕೀಯವನ್ನು ಪ್ರಭಾವಿಸುತ್ತಿದ್ದಾರೆ. ಚುನಾವಣಾ ಪ್ರಚಾರದಲ್ಲಿ ರಾಜಕಾರಣಿಗಳು ಸ್ಥಳೀಯ ಭಾಷೆಯಲ್ಲಿ ಮಾತನಾಡುವ ಮೂಲಕ ಆ ಭಾಷಿಕರ ಧ್ರುವೀಕರಣಕ್ಕೆ ಪ್ರಯತ್ನಿಸುತ್ತಾರೆ. ಹೀಗೆ ಕರ್ನಾಟಕದಲ್ಲಿ ಭಾಷಾ ಧ್ರುವೀಕರಣದ ರಾಜಕೀಯ ಪ್ರಸ್ತುತ ಬಲಗೊಳ್ಳುತ್ತಿದೆ.

3. **ಪ್ರಾದೇಶಿಕ ಧ್ರುವೀಕರಣ:** ವಿಶಾಲ ಮೈಸೂರು ರಚನೆಗೊಂಡಾಗಿನಿಂದ ಪ್ರಾದೇಶಿಕ ಅಸಮತೋಲನದ ಕೂರು ಕರ್ನಾಟಕದಲ್ಲಿ ಕೇಳುತ್ತಲೇ ಬಂದಿದೆ. ಕಾಲಾನುಕ್ರಮದಲ್ಲಿ ಈ ಪ್ರಾದೇಶಿಕ ಅಸಮತೋಲನವು ಕರ್ನಾಟಕದಲ್ಲಿ ಪ್ರಾದೇಶಿಕ ಧ್ರುವೀಕರಣದ ರಾಜಕೀಯದ ರೂಪವನ್ನು ತಾಳಿತು. ಹಿಂದುಳಿದ ಉತ್ತರ ಕರ್ನಾಟಕ ಹಾಗೂ ಅಭಿವೃದ್ಧಿ ಹೊಂದಿದ ದಕ್ಷಿಣ ಕರ್ನಾಟಕದ ಪ್ರಾದೇಶಿಕ ಧ್ರುವೀಕರಣಕ್ಕೆ ಅಸಮತೋಲನ ಕಾರಣವಾಗಿದೆ. ಜೊತೆಗೆ ಹೈದರಾಬಾದ್ ಕರ್ನಾಟಕದಲ್ಲಿ ಪ್ರಾದೇಶಿಕ ಹಿಂಬೀಳಿಕೆಯು ಧ್ರುವೀಕರಣ ರಾಜಕೀಯಕ್ಕೆ ಕಾರಣವಾಗಿದೆ. ಈ ಮಧ್ಯೆ ನೂತನ ಜಿಲ್ಲೆ ಮತ್ತು ತಾಲ್ಲೂಕುಗಳ ರಚನೆಯ ಮೂಲಕ ರಾಜಕೀಯ ಧ್ರುವೀಕರಣಕ್ಕೆ ರಾಜಕೀಯ ಪಕ್ಷಗಳು ತಾವು ಅಧಿಕಾರದಲ್ಲಿರುವಾಗ ಮುಂದಾಗುವ ಮೂಲಕ ಭವಿಷ್ಯದ ಪ್ರಾದೇಶಿಕ ಧ್ರುವೀಕರಣದ ಬೆಳವಣಿಗೆಗೆ ಕಾರಣವಾಗಿವೆ.

4. **ಸೈದ್ಧಾಂತಿಕ ಧ್ರುವೀಕರಣ:** ಕರ್ನಾಟಕದ ಜನತೆ ರಾಜಕೀಯವಾಗಿ ಕೋಮುವಾದ ಮತ್ತು ಜಾತ್ಯತೀತ ಸಿದ್ಧಾಂತಗಳಡಿ ಧ್ರುವೀಕರಣಗೊಂಡಿರುತ್ತಾರೆ. ರಾಜಕೀಯ ಪಕ್ಷಗಳು ಅಧಿಕಾರದ ಲಾಲಸೆಗಾಗಿ ಪರಸ್ಪರ ವಿರುದ್ಧವಾದ ಸಿದ್ಧಾಂತವನ್ನು ಪಾಲಿಸುವ ಪಕ್ಷಗಳೊಡನೆ ಮೈತ್ರಿಗೆ ಮುಂದಾದಾಗ ಸೈದ್ಧಾಂತಿಕ ಧ್ರುವೀಕರಣ ಜರುಗುತ್ತದೆ. ಉದಾ: ಜಾತ್ಯತೀತ ಸಿದ್ಧಾಂತದ ಜಾತ್ಯತೀತ ಜನತಾ ದಳವು ಕೋಮುವಾದಿ ಹಣೆಪಟ್ಟಿಯ ಭಾರತೀಯ ಜನತಾ ಪಕ್ಷದೊಡನೆ ಮೈತ್ರಿ ಮಾಡಿಕೊಳ್ಳಲು ನಿರ್ಧರಿಸಿದಾಗ ಮುಸ್ಲಿಂ ನಾಯಕರು ಕಾಂಗ್ರೆಸ್ ಪಕ್ಷದತ್ತ ಧ್ರುವೀಕರಣಗೊಳ್ಳುತ್ತಿರುವುದು.

5. **ಅಧಿಕಾರದ ಧ್ರುವೀಕರಣ:** ಕರ್ನಾಟಕದಲ್ಲಿ ಸ್ವಾತಂತ್ರ್ಯಾ ಬಳಿಕ ಅಧಿಕಾರಕ್ಕಾಗಿ ರಾಜಕೀಯ ಧ್ರುವೀಕರಣ ಸಾಮಾನ್ಯ ಸಂಗತಿಯಾಯಿತು. ಕಾಂಗ್ರೆಸ್ ಪಕ್ಷದ ಪ್ರಾಬಲ್ಯ ಇಳಿಮುಖವಾದಾಗ ಜನತಾ ಪಕ್ಷವನ್ನು ರಚಿಸಿ ಅಧಿಕಾರಕ್ಕೇರಲು ರಾಜಕೀಯ ಧ್ರುವೀಕರಣ 1980 ರ ಕಾಲದಲ್ಲಿ ಘಟಿಸಿತು. ಮುಂದೆ ಜನತಾ ಪಕ್ಷವು ಅಧಿಕಾರ ರಾಜಕೀಯದ ಪರಿಣಾಮ 1990 ರ ದಶಕದಲ್ಲಿ ಹಲವು ಗುಂಪುಗಳಲ್ಲಿ ಧ್ರುವೀಕರಣಗೊಂಡಿತು. ಕಳೆದೆರಡು ದಶಕಗಳಲ್ಲಿ ಚುನಾವಣೆ ಸಮೀಪಿಸುತ್ತಿದ್ದಂತೆ ರಾಜಕೀಯ ಧ್ರುವೀಕರಣ ಸಾಮಾನ್ಯ ಸಂಗತಿ ಎನಿಸಿದೆ. ಗಮನಾರ್ಹ ಅಂಶವೇನೆಂದರೆ, ಚುನಾವಣೆಯ

ಹೊರತಾಗಿಯೂ ಅಧಿಕಾರ ರಾಜಕೀಯದಿಂದ ಬೇಕಾದಾಗಲೆಲ್ಲ ರಾಜಕೀಯ ಧ್ರುವೀಕರಣವು ಕರ್ನಾಟಕದಲ್ಲಿ ಜರುಗುತ್ತಲಿದೆ. ಉದಾ: 2019 ರಲ್ಲಿ ಕಾಂಗ್ರೆಸ್ ಮತ್ತು ಜೆ. ಡಿ. ಎಸ್ ಸಮ್ಮಿಶ್ರ ಸರ್ಕಾರವನ್ನು ಉರುಳಿಸಲು 13 ಶಾಸಕರು ರಾಜೀನಾಮೆಯ ಮೂಲಕ ಭಾರತೀಯ ಜನತಾ ಪಕ್ಷವನ್ನು ಸೇರುವ ಮೂಲಕ ಕರ್ನಾಟಕದಲ್ಲಿ ರಾಜಕೀಯ ಧ್ರುವೀಕರಣಕ್ಕೆ ಕಾರಣವಾದುದು.

ಈ ಮೇಲೆ ಚರ್ಚಿಸಲಾದ ಹಲವು ಕ್ಷೇತ್ರಗಳಲ್ಲಿ ಕರ್ನಾಟಕದ ರಾಜಕೀಯ ವ್ಯವಸ್ಥೆಯನ್ನು ಕಾಲಾಂತರದಲ್ಲಿ ರಾಜಕೀಯ ಧ್ರುವೀಕರಣ ಪ್ರಭಾವಿಸುತ್ತಾ ಬಂದಿದೆ. ಈ ರಾಜಕೀಯ ಧ್ರುವೀಕರಣವು ರಾಜಕೀಯವು ಸ್ಥಿರವಾಗಿರದೇ ಚಲನಶೀಲ ಪರಿಕಲ್ಪನೆ ಎಂಬಂಶವನ್ನು ಸ್ಪಷ್ಟಪಡಿಸುತ್ತದೆ. ಜೊತೆಗೆ ರಾಜಕೀಯವು ಮೌಲ್ಯ, ಸಿದ್ಧಾಂತ, ನೈತಿಕತೆಯಿಂದ ವಿಮುಖಗೊಂಡಿರುವುದನ್ನು ಮೇಲ್‌ನೋಟಕ್ಕೆ ಧ್ರುವೀಕರಣದ ರಾಜಕೀಯವು ಸ್ಪಷ್ಟಪಡಿಸುತ್ತದೆ. ಆದರೆ, ಧ್ರುವೀಕರಣದ ರಾಜಕೀಯವು ತನ್ನದೇಯಾದ ಸಕಾರಾತ್ಮಕ ಅಂಶಗಳನ್ನು ಸಹ ಮೈಗೂಡಿಸಿಕೊಂಡಿದುದು ಗಮನಾರ್ಹ.

## [III.] ರಾಜಕೀಯ ಧ್ರುವೀಕರಣದ ಪರಿಣಾಮಗಳು [Impacts of Political Polarisation]:

ರಾಜಕೀಯ ಧ್ರುವೀಕರಣವು ಇತರ ಪ್ರದೇಶಗಳಲ್ಲಿ ಉಂಟು ಮಾಡುವ ಪರಿಣಾಮಗಳನ್ನೇ ಕರ್ನಾಟಕದಲ್ಲಿಯೂ ಉಂಟು ಮಾಡಿದೆ. ಧ್ರುವೀಕರಣದ ರಾಜಕೀಯವು ರಾಜ್ಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ರಂಗಗಳಲ್ಲಿ ತನ್ನದೇಯಾದ ಪ್ರಭಾವವನ್ನು ಬೀರಿದೆ. ಧ್ರುವೀಕರಣವು ಹಲವು ನಕಾರಾತ್ಮಕ ಪರಿಣಾಮಗಳ ನಡುವೆ ಕೆಲ ಸಕಾರಾತ್ಮಕ ಪರಿಣಾಮಗಳಿಗೂ ಕಾರಣವಾಗಿದೆ. ಈ ಕೆಳಗೆ ಅವುಗಳ ಸಂಕ್ಷಿಪ್ತ ವಿವರಗಳನ್ನು ನೀಡಲಾಗಿದೆ.

1. **ಆಡಳಿತಾತ್ಮಕ ಬಿಕ್ಕಟ್ಟುಗಳು:** ಧ್ರುವೀಕರಣವು ನಿರ್ದಿಷ್ಟ ವಿಷಯವನ್ನು ಕುರಿತಂತೆ ರಾಜ್ಯದ ಜನರು ಭಿನ್ನ ನಿಲುವಿಗೆ ಅಂಟಿಕೊಳ್ಳುವಂತೆ ಮಾಡುತ್ತದೆ. ಇದರಿಂದ ಆಡಳಿತ ನಡೆಸುವ ಸರ್ಕಾರಗಳು ತಮ್ಮ ನೀತಿ ನಿರ್ಧಾರಗಳನ್ನು ಅನುಷ್ಠಾನಗೊಳಿಸಲು ಮುಂದಾದಾಗ ಸಹಜವಾಗಿ ವಿರೋಧ ವ್ಯಕ್ತವಾಗುತ್ತದೆ. ಆಗ ಸರ್ಕಾರವು ನಿರ್ದಿಷ್ಟ ನೀತಿ ಅಥವಾ ನಿರ್ಧಾರಗಳನ್ನು ಜಾರಿಗೊಳಿಸಬೇಕೇ ಅಥವಾ ಬೇಡವೇ ಎಂಬ ತೊಳಲಾಟಕ್ಕೆ ಗುರಿಯಾಗಿ ಆಡಳಿತಾತ್ಮಕ ಬಿಕ್ಕಟ್ಟು ಕಂಡು ಬರುತ್ತದೆ. ಉದಾ: ಗೋ ಹತ್ಯಾ ನಿಷೇಧ ಕಾಯಿದೆಯ ರಚನೆ, ಪಠ್ಯ ಪುಸ್ತಕಗಳ ಪರಿಷ್ಕರಣೆ ಸಮಯದಲ್ಲಿ ಸಾರ್ವಜನಿಕಾಭಿಪ್ರಾಯ ಕರ್ನಾಟಕದಲ್ಲಿ ಧ್ರುವೀಕರಣಗೊಂಡಿದುದು. ಇಂತಹ ಸಮಯದಲ್ಲಿ ಆಡಳಿತಾರೂಢ ಪಕ್ಷವು ಏಕಾಭಿಪ್ರಾಯ ಮೂಡಿಸಲು ಹೆಣಗಾಡಬೇಕಾಗುತ್ತದೆ. ಇದರಿಂದ ಆಡಳಿತಾತ್ಮಕ ನಿರ್ಧಾರಗಳು ವಿಳಂಬಗೊಳ್ಳುವ ಮೂಲಕ ಆಡಳಿತದಲ್ಲಿ ಬಿಕ್ಕಟ್ಟು ತಲೆದೋರುವ ಸಾಧ್ಯತೆ ಅಧಿಕವಾಗುತ್ತದೆ.



2. **ಸಾಮಾಜಿಕ ಅಶಾಂತಿ:** ಧ್ರುವೀಕರಣದ ರಾಜಕೀಯದಿಂದ ರಾಜ್ಯದ ಜನರು ಭಾಷೆ, ಧರ್ಮ, ಜಾತಿ, ಪ್ರದೇಶಗಳ ಆಧಾರದಲ್ಲಿ ವಿಭಜನೆಗೊಳ್ಳುತ್ತಾರೆ. ಇದರಿಂದ ಸಾಮಾಜಿಕ ಗುಂಪುಗಳು ರಚನೆಗೊಂಡು ಅವುಗಳ ನಡುವೆ ಸಹಕಾರದ ಬದಲು ಸಂಘರ್ಷ ಏರ್ಪಡುತ್ತದೆ. ಕ್ಷುಲ್ಲಕ ಕಾರಣಗಳಿಗೆ ಧ್ರುವೀಕೃತ ಗುಂಪುಗಳು ಪರಸ್ಪರ ಸಂಘರ್ಷಕ್ಕಿಳಿಯಲು ಕಾರಣವಾಗುತ್ತಿರುತ್ತವೆ. ಇದರಿಂದ ಸಮಾಜದಲ್ಲಿ ಆಗಾಗ ಅಶಾಂತಿ ತಲೆದೋರುವ ಸಾಧ್ಯತೆ ಹೆಚ್ಚಾಗುತ್ತದೆ. ಉದಾ: ಭಾಷಾಧಾರದ ಮೇಲೆ ಧ್ರುವೀಕೃತ ಕನ್ನಡಿಗರು ಮತ್ತು ಮರಾಠಿಗರ ನಡುವೆ ಬೆಳಗಾವಿಯಲ್ಲಿ ಆಗಾಗ ತಲೆದೋರುವ ಸಂಘರ್ಷದಿಂದ ಆ ನಗರದ ಶಾಂತಿ ಕದಡುವುದು. ಹೀಗೆ ಧ್ರುವೀಕರಣವು ಸಮಾಜದಲ್ಲಿ ಅಶಾಂತಿ ಉಂಟು ಮಾಡುವ ವರ್ಧಮಾನವಾಗಿ ಪರಿಣಮಿಸುತ್ತದೆ.

3. **ಆರ್ಥಿಕ ಹಿನ್ನೆಡೆ:** ಧ್ರುವೀಕರಣದ ರಾಜಕೀಯವು ಅಶಾಂತಿಗೆ ಕಾರಣವಾಗಿ ಆರ್ಥಿಕ ಚಟುವಟಿಕೆಗಳನ್ನು ಪ್ರಭಾವಿಸುತ್ತದೆ. ಅಶಾಂತಿ ನೆಲೆಸಿರುವ ಪ್ರದೇಶದಲ್ಲಿ ಬಂಡವಾಳ ಹೂಡಲು ಉದ್ಯಮಿಗಳು ಮುಂದಾಗದೇ ಆ ಪ್ರದೇಶದ ಆರ್ಥಿಕ ಪ್ರಗತಿ ಕುಂಟಿತಗೊಳ್ಳುತ್ತದೆ. ಜೊತೆಗೆ ರಾಜಕೀಯ ಧ್ರುವೀಕರಣದ ಫಲವಾಗಿ ಅಸ್ಥಿರ ಸರ್ಕಾರಗಳು ಕಂಡು ಬರುವುದರಿಂದ ಬಂಡವಾಳದ ಹರಿವು ಕರ್ನಾಟಕಕ್ಕೆ ಕಡಿಮೆಗೊಂಡು ಆರ್ಥಿಕ ಹಿಂಬೀಳಿಕೆಯನ್ನು ರಾಜ್ಯ ಎದುರಿಸಬೇಕಾಗುತ್ತದೆ.

4. **ಏಕತೆಯ ಕೊರತೆ:** ಧ್ರುವೀಕರಣದ ಫಲವಾಗಿ ಕರ್ನಾಟಕದ ಜನರು ಜಾತಿ, ಧರ್ಮ, ಭಾಷೆ, ಪ್ರದೇಶಗಳ ಆಧಾರವುಳ್ಳ ವಿವಿಧ ಗುಂಪುಗಳಾಗಿ ವಿಭಜನೆಗೊಳ್ಳುತ್ತಾರೆ. ಇದರಿಂದ ಜನರಲ್ಲಿ ತಾವೆಲ್ಲ ಒಂದೇ ರಾಜ್ಯದವರೆಂಬ ಐಕ್ಯತಾ ಭಾವನೆ ಮರೆಯಾಗುತ್ತದೆ. ಉದಾ: ಕಾವೇರಿ ಹೋರಾಟಕ್ಕೆ ಉತ್ತರ ಕರ್ನಾಟಕದವರು ಮತ್ತು ಮಹದಾಯಿ ಹೋರಾಟಕ್ಕೆ ದಕ್ಷಿಣ ಕರ್ನಾಟಕದವರು ಸಮರ್ಪಕವಾಗಿ ಸ್ಪಂದಿಸಿ ಒಗ್ಗಟ್ಟನ್ನು ಪ್ರದರ್ಶಿಸದಿರಲು ಪ್ರಾದೇಶಿಕ ಧ್ರುವೀಕರಣ ಕಾರಣವಾದುದು.

5. **ಸಮಗ್ರ ದೃಷ್ಟಿಕೋನದ ಅಭಾವ:** ಆಡಳಿತ ನಡೆಸುವವರು ಕರ್ನಾಟಕದ ಸಮಗ್ರ ದೃಷ್ಟಿಕೋನ ಮೈಗೂಡಿಸಿಕೊಂಡು ಅಧಿಕಾರ ಚಲಾಯಿಸಬೇಕು. ಆದರೆ, ಧ್ರುವೀಕರಣದ ಪರಿಣಾಮ ಆಡಳಿತಗಾರರು ತಮ್ಮನ್ನು ಬೆಂಬಲಿಸಿದ ಪ್ರದೇಶ, ಜಾತಿ ಅಥವಾ ಸಮುದಾಯಗಳನ್ನು ಓಲೈಸುವ ಮೂಲಕ ಸಮಗ್ರ ಕರ್ನಾಟಕದ ದೃಷ್ಟಿಕೋನವನ್ನು ಕಡೆಗಣಿಸುತ್ತಾರೆ.

6. **ಪ್ರಜಾಸತ್ತಾತ್ಮಕ ಮೌಲ್ಯಗಳ ಇಳಿಮುಖ:** ರಾಜಕೀಯ ಧ್ರುವೀಕರಣವು ಪಕ್ಷಾಂತರವನ್ನು ಬೆಂಬಲಿಸುತ್ತದೆ. ಜನ ಪ್ರತಿನಿಧಿಗಳು ತಮ್ಮ ಅಧಿಕಾರದ ಲಾಲಸೆಯಿಂದ ರಾಜಕೀಯ ಧ್ರುವೀಕರಣಕ್ಕೆ ಮುಂದಾಗುತ್ತಾರೆ. ಜೊತೆಗೆ ಅದುವರೆಗೂ ವಿರೋಧಿಸುತ್ತಾ ಬಂದಿರುವ ಪಕ್ಷದೊಡನೆ ಅಧಿಕಾರಕ್ಕಾಗಿ ಮೈತ್ರಿ ಮಾಡಿಕೊಳ್ಳಲು ರಾಜಕೀಯ ಪಕ್ಷಗಳನ್ನು ರಾಜಕೀಯ ಧ್ರುವೀಕರಣ ಪ್ರೇರೇಪಿಸುತ್ತದೆ. ಈ ಬೆಳವಣಿಗೆಗಳನ್ನು ಮೂಕ ಪ್ರೇಕ್ಷಕರಾಗಿ

ಕಾಣುವ ಮತದಾರರು ಪ್ರಜೆಗಳೇ ಪ್ರಭುಗಳು, ಮತದಾನ ಪವಿತ್ರ ಕರ್ತವ್ಯ, ಬದಲಾವಣೆಗೆ ಮತದಾನದಂತಹ ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಾರೆ.

**7. ರಾಜಕೀಯ ಅಸ್ಥಿರತೆಗೆ ಆಸ್ಪದ:** ಧ್ರುವೀಕರಣದ ರಾಜಕೀಯದಿಂದ ಸ್ಥಿರ ಸರ್ಕಾರವನ್ನೂ ಸಹ ಅಸ್ಥಿರಗೊಳಿಸುವ ಸಾಧ್ಯತೆ ಕಂಡು ಬರುತ್ತದೆ. ಇದರಿಂದ ಸರಳ ಬಹುಮತವುಳ್ಳ ಸರ್ಕಾರಗಳು ಭಯದ ನೆರಳಿನಲ್ಲಿಯೇ ಅಧಿಕಾರ ಚಲಾಯಿಸಬೇಕಾಗುತ್ತದೆ. ಆಪರೇಷನ್ ಕಮಲ ಅಥವಾ ಆಪರೇಷನ್ ಹಸ್ತ ಹೆಸರಿನಲ್ಲಿ ಜರುಗುವ ಧ್ರುವೀಕರಣದ ರಾಜಕೀಯವು ರಾಜ್ಯ ಸರ್ಕಾರ ಮತ್ತು ವಿವಿಧ ಸ್ಥಳೀಯ ಸರ್ಕಾರಗಳಲ್ಲಿ ರಾಜಕೀಯ ಅಸ್ಥಿರತೆಗೆ ಕಾರಣವಾಗುತ್ತವೆ.

ಈ ಮೇಲೆ ಸಂಕ್ಷೀಪ್ತವಾಗಿ ಚರ್ಚಿಸಿದಂತೆ ಧ್ರುವೀಕರಣದ ರಾಜಕೀಯವು ವಿವಿಧ ನಕಾರಾತ್ಮಕ ಪರಿಣಾಮಗಳನ್ನು ಕರ್ನಾಟಕದಲ್ಲಿ ಉಂಟು ಮಾಡಿದೆ. ರಚನಾತ್ಮಕ ಧ್ರುವೀಕರಣದ ಮೂಲಕ ಪ್ರಸ್ತಾಪಿತ ನಕಾರಾತ್ಮಕ ಪರಿಣಾಮಗಳಿಗೆ ಪರಿಹಾರವನ್ನು ನಾವು ಕಂಡುಕೊಳ್ಳಲು ಅವಕಾಶವಿದುದು ಗಮನಾರ್ಹ. ಆದರೆ, ಧ್ರುವೀಕರಣದ ರಾಜಕೀಯವು ಕೆಲ ಸಕಾರಾತ್ಮಕ ಪರಿಣಾಮಗಳಿಗೂ ಕಾರಣವಾಗಿದ್ದು ಅವುಗಳಲ್ಲಿ ಪ್ರಧಾನವಾದವು ಕೆಳಗಿನಂತಿವೆ.

1. ತುಳಿತಕ್ಕೊಳಗಾದ ಮತ್ತು ಸಮಾಜದ ಅಂಚಿನಲ್ಲಿರುವ ಸಮುದಾಯಗಳು ತಮ್ಮ ಹಕ್ಕುಗಳನ್ನು ಹೊಂದಲು ಸಹಕಾರಿ.
2. ನಿರ್ಲಕ್ಷಿತ ಪ್ರದೇಶಗಳು ಅನ್ಯ ಪ್ರದೇಶಗಳಿಗೆ ಸಮಾನವಾಗಿ ಅಭಿವೃದ್ಧಿ ಹೊಂದಲು ಪೂರಕ.
3. ಜನ ವಿರೋಧಿ ಸರ್ಕಾರವನ್ನು ಅಧಿಕಾರದಿಂದ ದೂರವಿಡಲು ಪ್ರಯೋಜನಕಾರಿ.
4. ಯುವ, ಪ್ರತಿಭಾವಂತ ಹಾಗೂ ಸಮರ್ಥರನ್ನು ಅಧಿಕಾರಕ್ಕೆ ತರಲು ಉಪಯುಕ್ತ.



## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ರಾಜಕೀಯ ಧ್ರುವೀಕರಣ ಎಂದರೇನು?
2. ರಾಜಕೀಯ ಧ್ರುವೀಕರಣವು ಯಾವ ರಾಜಕೀಯ ವ್ಯವಸ್ಥೆಗಳಲ್ಲಿ ಕಂಡು ಬರುತ್ತದೆ?
3. ರಾಜಕೀಯ ಧ್ರುವೀಕರಣದ ಮೂರು ಪರಸ್ಪರ ವಿರುದ್ಧವಾದ ಸ್ಥಿತಿಗಳನ್ನು ಬರೆಯಿರಿ.
4. ರಾಜಕೀಯ ಧ್ರುವೀಕರಣಕ್ಕೆ ಭಾರತದಲ್ಲಿ ಹಲವು ಅವಕಾಶಗಳಿವೆ. ಏಕೆ?
5. ರಾಜಕೀಯ ಧ್ರುವೀಕರಣದ ನಾಲ್ಕು ಕ್ಷೇತ್ರಗಳನ್ನು ತಿಳಿಸಿರಿ.
6. ರಾಜಕೀಯ ಧ್ರುವೀಕರಣದ ಮೂರು ನಕಾರಾತ್ಮಕ ಪರಿಣಾಮಗಳನ್ನು ಬರೆಯಿರಿ.
7. ರಾಜಕೀಯ ಧ್ರುವೀಕರಣದ ಮೂರು ಸಕಾರಾತ್ಮಕ ಪರಿಣಾಮಗಳನ್ನು ತಿಳಿಸಿರಿ.
8. ರಾಜಕೀಯ ಧ್ರುವೀಕರಣವು ಆಡಳಿತಾತ್ಮಕ ಬಿಕ್ಕಟ್ಟನ್ನು ಉಂಟು ಮಾಡುತ್ತದೆ. ಹೇಗೆ?

[B.] ಐದು ಅಂಕದ ಪ್ರಶ್ನೆಗಳು:

1. ರಾಜಕೀಯ ಧ್ರುವೀಕರಣ ಕುರಿತು ಟಿಪ್ಪಣಿ ಬರೆಯಿರಿ.
2. ಕರ್ನಾಟಕದಲ್ಲಿ ರಾಜಕೀಯ ಧ್ರುವೀಕರಣದ ವಿಕಾಸವನ್ನು ವಿವರಿಸಿರಿ.
3. ರಾಜಕೀಯ ಧ್ರುವೀಕರಣದ ಪರಿಣಾಮಗಳನ್ನು ಚರ್ಚಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ರಾಜಕೀಯ ಧ್ರುವೀಕರಣ ಎಂದರೇನು? ಅದರ ಪರಿಣಾಮಗಳನ್ನು ವಿವರಿಸಿರಿ.

ಅಧ್ಯಾಯ 12:

# ಕರ್ನಾಟಕದ ಸವಾಲುಗಳು

## [Challenges of Karnataka].

### ಪ್ರಸ್ತಾವನೆ [Introduction]:

ಭಾರತವು ಜಗತ್ತಿನ ವಿಶಾಲ ಮತ್ತು ವೈವಿಧ್ಯಮಯ ದೇಶ. ಹೀಗಾಗಿ ಅದು ಅಸಂಖ್ಯ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಭಾರತದ ಕೆಲ ಸವಾಲುಗಳು ಅದರ ವಿವಿಧ ರಾಜ್ಯಗಳಿಗೂ ಅನ್ವಯವಾಗುತ್ತವೆ. ಜೊತೆಗೆ ಭಾರತದ ಸವಾಲುಗಳಿಗಿಂತ ಭಿನ್ನ ಸ್ವರೂಪದ ಸವಾಲುಗಳನ್ನು ಭಾರತದ ಪ್ರತಿಯೊಂದೂ ರಾಜ್ಯಗಳು ಎದುರಿಸಬೇಕಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಭಾರತ ಒಕ್ಕೂಟದ ಒಂದು ರಾಜ್ಯವಾಗಿರುವ ಕರ್ನಾಟಕವು ಎದುರಿಸುತ್ತಿರುವ ಪ್ರಧಾನ ಸವಾಲುಗಳ ಮೇಲೆ ಬೆಳಕು ಚೆಲ್ಲಲಾಗಿದೆ.

### [I.] ಕರ್ನಾಟಕದಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆ [Demand for Separate State in Karnataka]:

ಕರ್ನಾಟಕವು 191791 ಚ. ಕಿ. ಮಿ ವಿಸ್ತೀರ್ಣತೆಯಿಂದ ಕೂಡಿರುವ ಭಾರತ ಒಕ್ಕೂಟದ ವಿಶಾಲ ರಾಜ್ಯವಾಗಿದೆ. 1956 ರ ರಾಜ್ಯಗಳ ಪುನರವಿಂಗಡಣಾ ಕಾಯಿದೆಯಡಿ ರಚನೆಗೊಂಡ ವಿಶಾಲ ಮೈಸೂರು ಅಂದರೆ ಪ್ರಸ್ತುತ ಕರ್ನಾಟಕವು ಆರಂಭದ ದಿನಗಳಿಂದಲೇ ಅಸಮಾನ ಬೆಳವಣಿಗೆಯ ಕೂಗನ್ನು ಎದುರಿಸಿತ್ತು. ದಕ್ಷಿಣ ಕರ್ನಾಟಕವು ಮೈಸೂರು ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿದ್ದು ಅಭಿವೃದ್ಧಿ ಹೊಂದಿದ್ದರೆ ಉತ್ತರ ಕರ್ನಾಟಕವು ಹೈದರಾಬಾದ್ ಮತ್ತು ಬಾಂಬೇ ಪ್ರಾಂತದಿಂದ ಪ್ರತ್ಯೇಕಗೊಂಡ ಹಿಂದುಳಿದ ಪ್ರದೇಶಗಳಾಗಿದ್ದುದು ಅಸಮಾನತೆಯ ಕೂಗಿಗೆ ಪ್ರಧಾನ ಕಾರಣವಾಗಿತ್ತು. ಈ ಅಸಮಾನ ಬೆಳವಣಿಗೆಯ ಫಲವಾಗಿ ಕಾಲಾನುಕ್ರಮದಲ್ಲಿ ಉತ್ತರ ಕರ್ನಾಟಕದ ಜನರು ಪ್ರತ್ಯೇಕತೆಯ ಮನೋಭಾವ ಬೆಳೆಸಿಕೊಂಡು ಹೋರಾಡತೊಡಗಿದರು. ಇದರೊಡನೆ ವಿಶಾಲ ಮೈಸೂರು ಅಂದರೆ ಕರ್ನಾಟಕದ ಭಾಗವಾದ ಹಲವು ಪ್ರದೇಶಗಳಲ್ಲಿ ತಮ್ಮ ಪ್ರದೇಶವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಡೆಗಣಿಸುತ್ತಿವೆ ಎಂಬ ನಿರ್ಲಕ್ಷ ಮನೋಭಾವ ಉದಯಗೊಂಡು ವಿವಿಧ ಪ್ರತ್ಯೇಕತಾ ಚಳುವಳಿಗಳು ಕಾಣಿಸಿಕೊಂಡವು. ಈ ಕೆಳಗೆ ಕರ್ನಾಟಕದಲ್ಲಿ ಈವರೆಗೆ



ಮುನ್ನೆಲೆಗೆ ಬಂದ ವಿವಿಧ ಪ್ರದೇಶಗಳ ಪ್ರತ್ಯೇಕ ರಾಜ್ಯದ ಬೇಡಿಕೆ ಕುರಿತು ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

1. **ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಬೇಡಿಕೆ:** ಕರ್ನಾಟಕದ ರಾಜಧಾನಿ ಬೆಂಗಳೂರು ದಕ್ಷಿಣ ಕರ್ನಾಟಕ ಭಾಗದಲ್ಲಿ ನೆಲೆಸಿರುವುದರಿಂದಾಗಿ ಆಡಳಿತದ ಕೇಂದ್ರ ಉತ್ತರ ಕರ್ನಾಟಕಕ್ಕೆ ದೂರವಾಗಿದೆ. ಪರಿಣಾಮ ದಕ್ಷಿಣ ಕರ್ನಾಟಕ ಭಾಗಕ್ಕೆ ದೊರೆತಷ್ಟು ಸೌಲಭ್ಯಗಳಾಗಲಿ, ಕೊಡುಗೆಗಳಾಗಲಿ, ಅನುದಾನವಾಗಲಿ ಉತ್ತರ ಕರ್ನಾಟಕ ಭಾಗಕ್ಕೆ ದೊರೆಯುತ್ತಿಲ್ಲ. ಯಾರೇ ಮುಖ್ಯಮಂತ್ರಿಗಳಾಗಿ ಅಧಿಕಾರಕ್ಕೆ ಬಂದರೂ ಮಲತಾಯಿ ಧೋರಣೆ ಅನುಸರಿಸುವುದರಿಂದ ಉತ್ತರ ಕರ್ನಾಟಕ ಅಭಿವೃದ್ಧಿಯಿಂದ ವಂಚಿತವಾಗಿದೆ. ಈ ಪೂರ್ವ ಗ್ರಹಿಕೆಯನ್ನು ಬೆಳೆಸಿಕೊಂಡ ಜನರು ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿ ಮಾಡಬೇಕೆಂಬ ಬೇಡಿಕೆಯನ್ನು ಪ್ರತಿಪಾದಿಸಿ ಹೋರಾಟಕ್ಕಿಳಿದರು. ಉತ್ತರ ಕರ್ನಾಟಕ ಹೋರಾಟ ಸಮಿತಿ ಮತ್ತು ಉತ್ತರ ಕರ್ನಾಟಕ ವಿಕಾಸ ವೇದಿಕೆ ಸೇರಿದಂತೆ ಹಲವು ಸಂಘ ಸಂಸ್ಥೆಗಳು ಈ ಹೋರಾಟಕ್ಕೆ ಬೆಂಬಲ ನೀಡಿದ್ದವು.

ಬೆಳಗಾವಿ, ವಿಜಯಪುರ, ಬಾಗಲಕೋಟೆ, ಬೀದರ್, ಬಳ್ಳಾರಿ, ಕಲಬುರಗಿ, ಯಾದಗಿರಿ, ರಾಯಚೂರು, ಗದಗ, ಧಾರವಾಡ, ಹಾವೇರಿ ಮತ್ತು ಕೊಪ್ಪಳ ಸೇರಿದಂತೆ 12 ಜಿಲ್ಲೆಗಳು ಉತ್ತರ ಕರ್ನಾಟಕದ ವ್ಯಾಪ್ತಿಗೆ ಬರುತ್ತವೆ. ಪ್ರಸ್ತಾಪಿತ ಜಿಲ್ಲೆಗಳನ್ನು ಒಳಗೊಂಡ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ರಚನೆಗೊಂಡರೆ ಉತ್ತರ ಕರ್ನಾಟಕದಲ್ಲಿ ಮೂಲ ಸೌಕರ್ಯಗಳು, ನೀರಾವರಿ ಸೌಲಭ್ಯ, ಉದ್ಯೋಗವಕಾಶ, ಸಾರಿಗೆ ಸಂಪರ್ಕದ ಸುಧಾರಣೆ, ಆರೋಗ್ಯ ವ್ಯವಸ್ಥೆಯ ಲಭ್ಯತೆ ಸುಲಭವೆಂಬುದು ಹೋರಾಟಗಾರರ ನಂಬಿಕೆಯಾಗಿದೆ. ಉತ್ತರ ಕರ್ನಾಟಕ ರಾಜ್ಯದ ರಚನೆಗೆ ಒತ್ತಡ ಆಗಾಗ ಕರ್ನಾಟಕದಲ್ಲಿ ಮುನ್ನೆಲೆಗೆ ಬಂದು ರಾಜ್ಯದ ಅಕಂಡತೆಗೆ ಹಾನಿಯನ್ನುಂಟು ಮಾಡುತ್ತಿದೆ.

2. **ಕೊಡವ ಪ್ರತ್ಯೇಕ ರಾಜ್ಯದ ಬೇಡಿಕೆ:** ಪ್ರತ್ಯೇಕ ರಾಜ್ಯವಾಗಿದ್ದ ಕೊಡಗು ಮೈಸೂರು ಸಂಸ್ಥಾನದ ಜೊತೆಗೆ 1956 ರಲ್ಲಿ ವಿಲೀನಗೊಂಡು ವಿಶಾಲ ಮೈಸೂರು ಅಂದರೆ ಕರ್ನಾಟಕ ರಚನೆಯಾಯಿತು. ನಂತರ ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಎಲ್ಲಾ ಸರ್ಕಾರಗಳು ಮತ್ತು ರಾಜಕೀಯ ಪಕ್ಷಗಳು ಕೊಡಗಿನ ವಿಷಯದಲ್ಲಿ ಮಲತಾಯಿ ಧೋರಣೆ ಅನುಸರಿಸುತ್ತಿವೆ ಎಂಬುದಾಗಿ ಕೊಡವರು ಆಕ್ರೋಶ ಬೆಳೆಸಿಕೊಂಡರು. ಅನನ್ಯ ಸಂಸ್ಕೃತಿ ಹಾಗೂ ಪ್ರತ್ಯೇಕ ಭೌಗೋಳಿಕ ಪ್ರದೇಶವನ್ನು ಹೊಂದಿರುವ ಕೊಡವರು ತಮ್ಮ ಮೂಲ ಸ್ಥಾನವಾದ ಕೂರ್ಗ್ ಅಥವಾ ಕೊಡಗನ್ನು ಪ್ರತ್ಯೇಕಗೊಳಿಸಿಕೊಂಡು ಪ್ರಗತಿ ಹೊಂದಲು ಸಂಘಟಿತ ಹೋರಾಟಕ್ಕೆ ಮುಂದಾದರು. ಕೊಡವ ನ್ಯಾಷನಲ್ ಕೌನ್ಸಿಲ್ ರಚಿಸಿಕೊಂಡು ಸಾಂಸ್ಕೃತಿಕ ಅಸ್ಮಿತೆಯಾಧರಿಸಿ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಕಳೆದೆರಡು ದಶಕಗಳಿಂದ ಕೊಡವರು ಪ್ರತಿಪಾದಿಸುತ್ತಿದ್ದಾರೆ. ಅಧ್ಯಕ್ಷರಾದ ಎನ್. ಯು. ನಾಚಪ್ಪ ನೇತೃತ್ವದಲ್ಲಿ ಕಳೆದೆರಡು ದಶಕಗಳ ಕೊಡವ ಪ್ರತ್ಯೇಕ ರಾಜ್ಯದ ಬೇಡಿಕೆ ಇಂದಿಗೂ ಮುಂದುವರಿದಿದೆ. ಗಮನಾರ್ಹ ಅಂಶವೇನೆಂದರೆ, ಕೊಡಗು ಜಿಲ್ಲೆಯ ರಾಜಕಾರಣಿಗಳೂ ಸಹ ಕೊಡವ

ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಬೆಂಬಲಿಸಿರುವುದು. ಈ ಬೆಳವಣಿಗೆಯು ಕರ್ನಾಟಕದ ಅಖಂಡತೆಗೆ ಧಕ್ಕೆಯುಂಟಾಗುವ ಆತಂಕವನ್ನು ಅಧಿಕಗೊಳಿಸಿದೆ.

3. **ಮುಂಬೈ ಕರ್ನಾಟಕ (ಕಿತ್ತೂರು ಕರ್ನಾಟಕ):** ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಬೇಡಿಕೆಯ ನೆರಳಿನಲ್ಲಿ ಮುಂಬೈ ಕರ್ನಾಟಕದ ಬೇಡಿಕೆ ಪ್ರತಿಪಾದಿಸಲ್ಪಟ್ಟಿದೆ. ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟೆ, ಗದಗ ಮತ್ತು ಹಾವೇರಿ ಜಿಲ್ಲೆಗಳನ್ನು ಒಳಗೊಂಡಿರುವ ಮುಂಬೈ ಕರ್ನಾಟಕದ ಜನರು ತಮ್ಮ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಭಾಷಾ ವ್ಯತ್ಯಾಸಗಳನ್ನು ಆಧರಿಸಿ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಪ್ರತಿಪಾದಿಸುತ್ತಿದ್ದಾರೆ. ಪ್ರತ್ಯೇಕ ರಾಜ್ಯವು ಕಿತ್ತೂರು ಕರ್ನಾಟಕದಲ್ಲಿ ಉತ್ತಮ ಆಡಳಿತ ಮತ್ತು ಪ್ರದೇಶದ ನಿರ್ದಿಷ್ಟ ಅಗತ್ಯಗಳಿಗೆ ಸಹಕಾರಿ ಎಂಬುದು ಪ್ರತಿಪಾದಕರ ನಂಬಿಕೆಯಾಗಿದೆ. ಮಹದಾಯಿ ಹೋರಾಟದ ವೇಳೆಯಲ್ಲಿ ಈ ಬೇಡಿಕೆ ತನ್ನ ಉತ್ತುಂಗ ಸ್ಥಿತಿಯನ್ನು ತಲುಪಿದ್ದು ಕರ್ನಾಟಕದ ಸಮಗ್ರತೆಗೆ ಸವಾಲಾಗಿ ಪರಿಣಮಿಸಿದೆ.

4. **ಹೈದರಾಬಾದ್ ಕರ್ನಾಟಕ (ಕಲ್ಯಾಣ ಕರ್ನಾಟಕ):** ಗುಲ್ಬರ್ಗ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯ ನಗರ ಜಿಲ್ಲೆಗಳನ್ನು ಒಳಗೊಂಡ ಪ್ರದೇಶವನ್ನು ಹೈದರಾಬಾದ್ ಕರ್ನಾಟಕ ಪ್ರದೇಶ ಎನ್ನಲಾಗುತ್ತದೆ. ಈ ಪ್ರದೇಶವು ಆರಂಭದಿಂದಲೂ ಅಂದರೆ ಹೈದರಾಬಾದ ಸಂಸ್ಥಾನದಲ್ಲಿದ್ದಾಗಿನಿಂದಲೂ ಅಭಿವೃದ್ಧಿಯನ್ನು ಹೊಂದಿರಲಿಲ್ಲ. ಹೀಗಾಗಿಯೇ ಮೈಸೂರಿನೊಡನೆ ಕನ್ನಡಿಗರ ಈ ಪ್ರದೇಶವನ್ನು ವಿಲೀನಗೊಳಿಸಬೇಕೆಂಬ ಪ್ರಯತ್ನ ಜರುಗಿದಾಗ ಮಹಾರಾಜರು ಸಂಪನ್ಮೂಲದ ಕೊರತೆಯ ಕಾರಣವೊಡ್ಡಿ ವಿಲೀನಕ್ಕೆ ಆಸಕ್ತಿ ತೋರಿರಲಿಲ್ಲ. ಕರ್ನಾಟಕದ ಇತರ ಭಾಗಗಳಿಗಿಂತ ಹಿಂದುಳಿದ ಈ ಪ್ರದೇಶದ ಅಭಿವೃದ್ಧಿಗೆ ಸ್ವಾತಂತ್ರ್ಯೋತ್ತರ ರಾಜ್ಯ ಸರ್ಕಾರಗಳೂ ನಿರ್ಲಕ್ಷ ಧೋರಣೆ ಅನುಸರಿಸಿದ್ದರು. ಈ ಪ್ರದೇಶದಲ್ಲಿ ಶಿಕ್ಷಣ, ಉದ್ಯೋಗ ಮತ್ತು ಮೂಲ ಸೌಕರ್ಯ ಹೆಚ್ಚಿಸುವ ಮೂಲಕ ಅಭಿವೃದ್ಧಿ ಸಾಧಿಸಲು ಪ್ರತ್ಯೇಕ ರಾಜ್ಯ ಅನಿವಾರ್ಯವೆಂದು ಭಾವಿಸಿದ ಜನರು ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಯ ನೆರವಿನಿಂದ ಪ್ರತ್ಯೇಕ ರಾಜ್ಯದ ಬೇಡಿಕೆ ಮುಂದಿಟ್ಟು ವೈಧ್ಯನಾಥ ಪಾಟೀಲರ ನೇತೃತ್ವದಲ್ಲಿ ತೀವ್ರವಾಗಿ ಹೋರಾಡಿದರು. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಬೆಳಕಿನಲ್ಲಿ ಪ್ರತಿಪಾದಿಸಲ್ಪಟ್ಟ ಈ ಬೇಡಿಕೆಯು ಇಂದಿಗೂ ಜೀವಂತವಾಗಿದ್ದು ಕರ್ನಾಟಕ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ.

5. **ತುಳು ನಾಡಿನ ಪ್ರತ್ಯೇಕ ರಾಜ್ಯದ ಬೇಡಿಕೆ:** ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ ಉಡುಪಿ ಪರಿಸರದಲ್ಲಿನ ತುಳು ಭಾಷಿಕರ ಸಾಂಸ್ಕೃತಿಕ ಮತ್ತು ಭಾಷಾ ಅಸ್ಮಿತೆಯ ತಳಹದಿಯಲ್ಲಿ ಈ ಬೇಡಿಕೆ ಪ್ರತಿಪಾದಿಸಲ್ಪಟ್ಟಿದೆ. ತುಳು ಭಾಷೆಗೆ ಸಂವಿಧಾನದ ಎಂಟನೇ ಅನುಸೂಚಿಯಲ್ಲಿ ಸ್ಥಾನ ಕಲ್ಪಿಸಬೇಕೆಂಬ ಹೋರಾಟದ ಭಾಗವಾಗಿ ಈ ಪ್ರತ್ಯೇಕ ರಾಜ್ಯ ರಚನೆಯ ಬೇಡಿಕೆ ರೂಪುಗೊಂಡಿದ್ದು ಕರ್ನಾಟಕದ ಸಮಗ್ರತೆಗೆ ಸವಾಲಾಗಿ ಪರಿಣಮಿಸಿದೆ.



ಈ ಮೇಲೆ ತಿಳಿಸಲಾದಂತೆ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಪ್ರತ್ಯೇಕ ರಾಜ್ಯ ರಚನೆಯ ಬೇಡಿಕೆಗಳು ಆಗಾಗ ಪ್ರತಿಪಾದಿಸಲ್ಪಡುತ್ತಿದ್ದು ಅವುಗಳಿಗೆ ರಾಜಕೀಯ ಪಕ್ಷಗಳು ಮತ್ತು ನಾಯಕರ ಬೆಂಬಲವೂ ದೊರೆತಿದೆ. ಪ್ರತ್ಯೇಕ ರಾಜ್ಯ ರಚನೆಯು ಕರ್ನಾಟಕ ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರದೇ ಸಂವಿಧಾನಾತ್ಮಕ ತಿದ್ದುಪಡಿಯ ಮೂಲಕ ಕೇಂದ್ರ ಸರ್ಕಾರವು ಶ್ರಮಿಸಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಎಷ್ಟೇ ಬೇಡಿಕೆ ಅಥವಾ ಹೋರಾಟಗಳಾದರೂ ಪ್ರತ್ಯೇಕತೆಯ ಅಗತ್ಯ ಮನವರಿಕೆಗೊಳ್ಳದ ಹೊರತು ರಾಜ್ಯಗಳ ರಚನೆಗೆ ಕೇಂದ್ರ ಸರ್ಕಾರವು ಆಸ್ತೆ ತೋರುವುದಿಲ್ಲವೆಂಬುದು ಗಮನಾರ್ಹ.

### [II.] ಕಲಂ 371 [ಜೆ.] ಮತ್ತು ವಿಶೇಷ ಸ್ಥಾನಮಾನ [Article 371 (J) and Special Status]:

ಭಾರತ ಸಂವಿಧಾನದ 21 ನೇ ಭಾಗದಲ್ಲಿನ 371 ನೇ ಕಲಂ ಭಾರತ ಒಕ್ಕೂಟದ ವಿವಿಧ ರಾಜ್ಯಗಳ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಸ್ಥಾನಮಾನ ಒದಗಿಸುತ್ತದೆ. ಈ ಅವಕಾಶದಡಿ ಅಭಿವೃದ್ಧಿಯಲ್ಲಿ ಹಿಂದುಳಿದ ಹೈದರಾಬಾದ್ ಕರ್ನಾಟಕ ಅಂದರೆ ಕಲ್ಯಾಣ ಕರ್ನಾಟಕ ಪ್ರದೇಶವನ್ನು ಪರಿಗಣಿಸಬೇಕೆಂಬ ಬೇಡಿಕೆ ಬಹು ಹಿಂದಿನಿಂದಲೂ ಪ್ರತಿಪಾದಿಸಲ್ಪಟ್ಟಿತ್ತು. ಸುಮಾರು ಮೂರು ದಶಕಗಳ ಈ ಬೇಡಿಕೆಯನ್ನು ಡಾ. ಮನಮೋಹನ ಸಿಂಗ್ ನೇತೃತ್ವದ ಸರ್ಕಾರವು ಸಂವಿಧಾನಕ್ಕೆ 2012 ರಲ್ಲಿ 98 ನೇ ತಿದ್ದುಪಡಿ ತರುವ ಮೂಲಕ ಈಡೇರಿಸಿತು. ಕಲಂ 371 (ಜೆ.) ಸಂವಿಧಾನಾತ್ಮಕವಾಗಿ ಹೈದರಾಬಾದ್ ಕರ್ನಾಟಕವೆಂದು ಪರಿಗಣಿಸಲ್ಪಡುವ ಕರ್ನಾಟಕದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ಕಲ್ಪಿಸಿತು. ಈ ವಿಶೇಷ ಸ್ಥಾನಮಾನ ಗಳಿಸಿದ್ದರಿಂದ ವಿವಿಧ ಸೌಲಭ್ಯಗಳು ಸಂವಿಧಾನದ 371 (ಜೆ.) ಕಲಂ ಅಡಿಯಲ್ಲಿ ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳಿಗೆ ದೊರೆಯುವಂತಾಯಿತು. ಆಸಕ್ತಿದಾಯಕ ಅಂಶವೇನೆಂದರೆ, ಬಳ್ಳಾರಿಯಿಂದ ವಿಭಜನೆಗೊಂಡು ಇತ್ತೀಚೆಗೆ ರಚನೆಗೊಂಡ ವಿಜಯ ನಗರ ಜಿಲ್ಲೆಯೂ ಸಹ ಈ ಸ್ಥಾನಮಾನಕ್ಕೆ ಪಾತ್ರವಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನವನ್ನು ಒದಗಿಸುತ್ತಿರುವ 371 (ಜೆ.) ಕಲಂನ ಪ್ರಧಾನ ಅಂಶಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

1. **ಅಭಿವೃದ್ಧಿ ಮಂಡಳಿಗೆ ಆಸ್ಪದ:** ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಪ್ರತ್ಯೇಕ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ರಚಿಸಲು ಅವಕಾಶವಿದ್ದು ಹೈದರಾಬಾದ್ ಕರ್ನಾಟಕ ಭಾಗದ ಸಂಸದರು, ವಿಧಾನ ಮಂಡಲದ ಸದಸ್ಯರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು, ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಈ ಮಂಡಳಿಯ ಸದಸ್ಯರಾಗಿರುತ್ತಾರೆ. ಹೈದರಾಬಾದ್ ಕರ್ನಾಟಕದ ಪ್ರದೇಶಕ್ಕೆ ಅಗತ್ಯವಿರುವ ನೀತಿ ಹಾಗೂ ನಿಯಮಗಳನ್ನು ರೂಪಿಸುವ ಕುರಿತಂತೆ ರಾಜ್ಯಪಾಲರಿಗೆ ಸಲಹೆ ನೀಡುವುದು ಈ ಅಭಿವೃದ್ಧಿ ಮಂಡಳಿಯ ಕಾರ್ಯವಾಗಿರುತ್ತದೆ.

**2. ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿಗೆ ಅವಕಾಶ:** 371 (ಜೆ.) ವಿಧಿಯಡಿ ಶಿಕ್ಷಣ ಸಂಸ್ಥೆಗಳು ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ನಿವಾಸಿಗಳಿಗೆ ವಿಶೇಷ ಮೀಸಲಾತಿಯನ್ನು ಒದಗಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ಕಲ್ಪಿಸಲಾಗಿದೆ. ಆ ಪ್ರದೇಶದ ಜನರ ಶೈಕ್ಷಣಿಕ ಮತ್ತು ಆರ್ಥಿಕ ಪರಿಸ್ಥಿತಿ ಸುಧಾರಣೆಯು ಈ ಉಪಕ್ರಮದ ಆಶಯವಾಗಿದೆ.

**3. ಸಂಪನ್ಮೂಲಗಳ ಸಮಾನ ಹಂಚಿಕೆಗೆ ಆದ್ಯತೆ:** 371 (ಜೆ.) ವಿಧಿಯಲ್ಲಿ ಸಂಪನ್ಮೂಲಗಳ ವಿತರಣೆ, ಮೂಲ ಸೌಕರ್ಯಗಳ ಅಭಿವೃದ್ಧಿ ಮತ್ತು ಸಾರ್ವಜನಿಕ ಸೇವೆಗಳಲ್ಲಿನ ಅಸಮಾನತೆಗಳನ್ನು ನಿವಾರಿಸುವ ಗುರಿಯನ್ನು ಹೊಂದಲಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ರಾಜ್ಯದ ಮುಂಗಡ ಪತ್ರದ ಸಮಾನ ಪಾಲನ್ನು ವಿನಿಯೋಗಿಸಲು ನಿರ್ದೇಶಿಸುತ್ತದೆ.

**4. ಸಾರ್ವಜನಿಕ ಸೇವೆಗಳಲ್ಲಿ ಸ್ಥಳೀಯ ಕೇಡರ್ ರಚನೆ:** ಸ್ಥಳೀಯ ಜನರಿಗೆ ಅವಕಾಶಗಳನ್ನು ಹೆಚ್ಚಿಸಲು ನಾಗರಿಕ ಸೇವೆಗಳಲ್ಲಿ ಪ್ರತ್ಯೇಕ ಸ್ಥಳೀಯ ಕೇಡರ್ ರಚಿಸಲು ಅನುಮತಿಸುತ್ತದೆ. ಈ ಮೂಲಕ ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಕ್ತಿಗಳಿಗೆ ಪ್ರದೇಶದ ಸರ್ಕಾರಿ ಉದ್ಯೋಗಗಳ ಒಂದು ಭಾಗವನ್ನು ಕಾಯ್ದಿರಿಸಲಾಗಿದೆ ಎಂದುದನ್ನು ಖಚಿತಪಡಿಸಿದೆ.

**5. ರಾಜ್ಯಪಾಲರ ಮೇಲ್ವಿಚಾರಣೆಗೆ ಅನುವು:** ಸಂವಿಧಾನದ 371 (ಜೆ.) ಕಲಂನ ಆಶಯಗಳನ್ನು ಹೈದರಾಬಾದ್ ಕರ್ನಾಟಕದಲ್ಲಿ ಸಮರ್ಪಕವಾಗಿ ಕರ್ನಾಟಕ ಸರ್ಕಾರ ಜಾರಿಗೊಳಿಸುತ್ತಿದೆಯೇ ಎಂಬುದನ್ನು ಪರಿಶೀಲಿಸಲು ರಾಜ್ಯಪಾಲರಿಗೆ ಅವಕಾಶವರುತ್ತದೆ. ಅಗತ್ಯವಿದ್ದಲ್ಲಿ ಸರ್ಕಾರಕ್ಕೆ ಸೂಕ್ತ ಸಲಹೆ ನೀಡಲೂ ಸಹ ಆಸ್ಪದ ಕಲ್ಪಿಸಲಾಗಿದೆ.

ಈ ಮೇಲೆ ಪ್ರಸ್ತಾಪಿಸಲಾದ ಪ್ರಧಾನ ನಿಬಂಧನೆಗಳಲ್ಲದೇ ಸಂವಿಧಾನದ 371 (ಜೆ.) ಕಲಂ ಹೈದರಾಬಾದ್ ಕರ್ನಾಟಕದ ಸರ್ವತೋಮುಖ ಪ್ರಗತಿಗೆ ಸಹಕಾರಿಯಾಗಬಲ್ಲ ಇತರ ಅಂಶಗಳನ್ನೂ ಮೈಗೂಡಿಸಿಕೊಂಡಿದೆ. ಸಾಮಾಜಿಕ ಆರ್ಥಿಕ ಪರಿಹಾರ, ಪ್ರಾದೇಶಿಕ ಅಸಮತೋಲನದ ನಿವಾರಣೆ, ಶೈಕ್ಷಣಿಕ ಸಬಲೀಕರಣ, ಉದ್ಯೋಗವಕಾಶಗಳ ಹೆಚ್ಚಳಕ್ಕೆ ವಿಪುಲ ಅವಕಾಶ ಒದಗಿಸಿದೆ. ಕರ್ನಾಟಕ ಸರ್ಕಾರವು ಇತ್ತೀಚೆಗೆ ಪ್ರಿಯಾಂಕ್ ಖರ್ಗೆ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿಯನ್ನು ರಚಿಸಿದ್ದು ಸಂವಿಧಾನದ 371 (ಜೆ.) ಆಶಯಗಳನ್ನು ಜಾರಿಗೊಳಿಸುವ ಪ್ರಯತ್ನವೆನ್ನಬಹುದಾಗಿದೆ.

### [III.] ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಸವಾಲುಗಳು [Challenges of Development in Kittooru and Kalyana Karnataka]:

ಕರ್ನಾಟಕದ ಗಡಿಯೊಳಗಿನ ಉತ್ತರ ಕರ್ನಾಟಕವೆಂದು ಪರಿಚಿತವಾಗಿರುವ ಪ್ರದೇಶದ ಎರಡು ಶಾಖೆಗಳೇ ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ. ಮುಂಬೈ ಕರ್ನಾಟಕವು 2021 ರಲ್ಲಿ ಮತ್ತು ಹೈದರಾಬಾದ್ ಕರ್ನಾಟಕವು 2019 ರಲ್ಲಿ ಕಲ್ಯಾಣ ಕರ್ನಾಟಕವೆಂದು ನಾಮಕರಣಗೊಂಡವು. ಉತ್ತರ ಕರ್ನಾಟಕಕ್ಕೆ ಸೇರಿರುವ ಈ ಎರಡು ಪ್ರದೇಶಗಳು ತಲಾ ಏಳು ಜಿಲ್ಲೆಗಳಿಂದ ಕೂಡಿವೆ. ಪ್ರಾದೇಶಿಕ ಅಸಮತೋಲನದ ವಿಚಾರದಲ್ಲಿ ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕಗಳು ಸಮಾನವಾಗಿದ್ದು ಹಿಂದುಳಿದ ಪ್ರದೇಶಗಳೆಂಬ ಹಣೆಪಟ್ಟಿ ಅಂಟಿಸಿಕೊಂಡಿವೆ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದಿರುವ ಈ ಎರಡೂ ಪ್ರದೇಶಗಳ ಅಭಿವೃದ್ಧಿ ಕರ್ನಾಟಕ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದ್ದು ಅದಕ್ಕೆ ಪ್ರಧಾನ ಕಾರಣಗಳು ಕೆಳಗಿನಂತಿವೆ.



**1. ಐತಿಹಾಸಿಕ ಹಿನ್ನಡೆ:** ದಕ್ಷಿಣ ಕರ್ನಾಟಕವು ಮೈಸೂರು ಸಂಸ್ಥಾನದ ಆಡಳಿತಕ್ಕೊಳಪಟ್ಟು ವಿವಿಧ ಮಹಾರಾಜರ ನೇತೃತ್ವದಲ್ಲಿ ಅಭಿವೃದ್ಧಿ ಹೊಂದಿತ್ತು. ಆದರೆ, ಬ್ರಿಟಿಷ್ ಪ್ರಾಂತ್ಯವಾದ ಬಾಂಬೇಯ ನಿಯಂತ್ರಣದಲ್ಲಿದ್ದ ಕಿತ್ತೂರು ಕರ್ನಾಟಕವು ಆಡಳಿತಾತ್ಮಕವಾಗಿ ಕಡೆಗಣಿಸಲ್ಪಟ್ಟಿತ್ತು. ಅಂತೆಯೇ ಕಲ್ಯಾನ ಕರ್ನಾಟಕವು ಹೈದರಾಬಾದ್ ನಿಜಾಮ ಹಾಗೂ ಮದ್ರಾಸ್ ನಿಯಂತ್ರಣದಲ್ಲಿದ್ದು ಆಡಳಿತಾತ್ಮಕವಾಗಿ ಕಡೆಗಣಿಸಲ್ಪಟ್ಟಿದ್ದವು. ಹೀಗಾಗಿ ಅಭಿವೃದ್ಧಿಯ ವಿಚಾರದಲ್ಲಿ ತೀರಾ ಹಿಂದುಳಿದ ಈ ಪ್ರದೇಶಗಳ ಸುಧಾರಣೆಯು ಕರ್ನಾಟಕದ ಸರ್ಕಾರಕ್ಕೆ ಪ್ರಬಲ ಸವಾಲಾಗಿ ಪರಿಣಮಿಸಿದೆ.

**2. ಮೂಲಭೂತ ಸೌಕರ್ಯಗಳ ಕೊರತೆ:** ಸುವ್ಯವಸ್ಥಿತ ರಸ್ತೆಗಳು, ಸಂಪರ್ಕ ಜಾಲಗಳು, ವಿದ್ಯುತ್ ಲಭ್ಯತೆ, ಮತ್ತು ಶುದ್ಧ ಕುಡಿಯುವ ನೀರಿನಂತಹ ಮೂಲಭೂತ ಸೌಕರ್ಯಗಳ ಕೊರತೆಯು ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದಲ್ಲಿ ಸಾಮಾನ್ಯ ಸಂಗತಿಗಳಾಗಿವೆ. ಫಲವಾಗಿ ಆರ್ಥಿಕ ಬೆಳವಣಿಗೆ ಮತ್ತು ಉತ್ತಮ ಜೀವನಮಟ್ಟವನ್ನು ಇಲ್ಲಿನ ಜನರು ಹೊಂದಲಾಗುತ್ತಿಲ್ಲ. ಇದರಿಂದ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯವನ್ನು ಜನರು ಪಡೆಯಲಾಗುತ್ತಿಲ್ಲ. ಜೊತೆಗೆ ಆದಾಯದಲ್ಲಿ ಇಳಿಮುಖವಾಗಿ ಅಭಿವೃದ್ಧಿ ಕ್ಷೀಣಿಸುತ್ತದೆ.

**3. ಕೃಷಿ ಆಧಾರಿತ ಆರ್ಥಿಕತೆ:** ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದಲ್ಲಿ ಕೃಷಿಯೇ ಪ್ರಧಾನ ಆರ್ಥಿಕ ಚಟುವಟಿಕೆಯಾಗಿದೆ. ನೀರಾವರಿ ಸೌಲಭ್ಯ ಮತ್ತು ವೈಜ್ಞಾನಿಕ ಪದ್ಧತಿಗಳ ಅನುಸರಣೆಯ ಕೊರತೆಯಿಂದ ಈ ಪ್ರದೇಶದ ಜನರು ಕೃಷಿಯಿಂದ ನಷ್ಟವನ್ನು ಅನುಭವಿಸಬೇಕಾಗಿದೆ. ಸಾಲ ಬಾಧೆಯನ್ನು ತಾಳದೇ ಸರಣಿ ರೈತ ಆತ್ಮಹತ್ಯೆಗಳು ಸಂಭವಿಸುತ್ತವೆ. ಹೀಗೆ ಸಾಂಪ್ರದಾಯಿಕ ಕೃಷಿಯನ್ನು ಆಧರಿಸಿರುವ ಆರ್ಥಿಕತೆಯ ಸುಧಾರಣೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸವಾಲಾಗಿ ಪರಿಣಮಿಸಿದೆ.

**4. ಉದ್ಯೋಗಾವಕಾಶಗಳ ಕೊರತೆ:** ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದಲ್ಲಿ ಸೀಮಿತ ಕೈಗಾರಿಕೆಗಳು ಕಂಡು ಬರುತ್ತವೆ. ಫಲವಾಗಿ ಉದ್ಯೋಗವಕಾಶಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಂಡು ಬರುತ್ತವೆ. ಬೃಹತ್ ಕೈಗಾರಿಕೆಗಳಾಗಲಿ, ವಿಶೇಷ ಆರ್ಥಿಕ

ವಲಯಗಳಾಗಲಿ, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನದ ಕಂಪನಿಗಳಾಗಲಿ ಈ ಪ್ರದೇಶದಲ್ಲಿ ವಿರಳವಾಗಿವೆ. ಈ ಹಿನ್ನೆಲೆಯಲ್ಲಿ ಅಧಿಕ ಜನಸಂಖ್ಯೆಗೆ ಸ್ಥಳೀಯವಾಗಿ ಉದ್ಯೋಗವಕಾಶ ಕಲ್ಪಿಸುವುದು ಸರ್ಕಾರಕ್ಕೆ ಸವಾಲಾಗಿದೆ.

5. **ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಅಲಭ್ಯತೆ:** ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದ ಹಲವು ಭಾಗಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಸೇವೆಗಳು ಇಂದಿಗೂ ಸಮರ್ಪಕವಾಗಿ ದೊರಕುತ್ತಿಲ್ಲ. ಗುಣಮಟ್ಟದ ಸೇವೆಗಳಿಗೆ ಗಡಿ ರಾಜ್ಯಗಳಿಗೆ ಅಥವಾ ರಾಜಧಾನಿ ಬೆಂಗಳೂರಿಗೆ ತೆರಳಬೇಕಾದ ಸನ್ನಿವೇಶ ಸೃಷ್ಟಿಸುತ್ತದೆ. ಈ ಬೆಳವಣಿಗೆಯು ಮಾನವ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಗೆ ದುಷ್ಪರಿಣಾಮ ಬೀರುತ್ತದೆ. ಹೀಗಾಗಿ ತ್ವರಿತ ಅಭಿವೃದ್ಧಿ ಈ ಭಾಗಗಳಲ್ಲಿ ಕೈಗೂಡದಂತಾಗಿದೆ.

6. **ಸಾಂಸ್ಕೃತಿಕ ಮತ್ತು ಭಾಷಾ ವೈವಿಧ್ಯತೆ:** ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿ ಸಾಂಸ್ಕೃತಿಕ ಭಿನ್ನತೆ ಕಂಡು ಬರುತ್ತದೆ. ಜೊತೆಗೆ ಭಾಷಾ ವೈವಿಧ್ಯತೆ ಅಧಿಕವಾಗಿದೆ. ಉದಾ: ಕಿತ್ತೂರು ಕರ್ನಾಟಕದಲ್ಲಿ ಮರಾಠಿಯ ಹಾಗೂ ಕಲ್ಯಾಣ ಕರ್ನಾಟಕದಲ್ಲಿ ತೆಲುಗು ಪ್ರಭಾವ. ಈ ವೈವಿಧ್ಯತೆಗಳು ಸಾಮರಸ್ಯವನ್ನು ದುರ್ಬಲಗೊಳಿಸಿ ಅಶಾಂತಿಯನ್ನು ಹರಡುವ ಮೂಲಕ ಅಭಿವೃದ್ಧಿಯನ್ನು ಕುಂಟಿತಗೊಳಿಸುತ್ತವೆ.

7. **ರಾಜಕೀಯ ಪ್ರಾತಿನಿಧ್ಯದ ಕೊರತೆ:** ಕರ್ನಾಟಕದ ಇತರ ಪ್ರದೇಶಗಳಿಗೆ ಹೋಲಿಸಿದರೆ ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕಕ್ಕೆ ರಾಜಕೀಯ ಪ್ರಾತಿನಿಧ್ಯ ವಿರಳವಾಗಿರುತ್ತದೆ. ದಕ್ಷಿಣ ಕರ್ನಾಟಕದ ಕಾವೇರಿಗೆ ನೀಡುವಷ್ಟು ಮಹತ್ವವನ್ನು ಕಿತ್ತೂರು ಕರ್ನಾಟಕದ ಮಹದಾಯಿಗೆ ಸರ್ಕಾರ ನೀಡದಿರುವುದು, ಮಂತ್ರಿಮಂಡಳದ ರಚನೆಯಲ್ಲಿ ಸೂಕ್ತ ಪ್ರಾತಿನಿಧ್ಯ ಒದಗಿಸದಿರುವುದು, ಮುಂಗಡ ಪತ್ರದಲ್ಲಿ ವಿಶೇಷ ಯೋಜನೆಗಳನ್ನು ಘೋಷಿಸದಿರುವುದು ಮುಂತಾದೆಡೆ ರಾಜಕೀಯ ಪ್ರಾತಿನಿಧ್ಯವನ್ನು ಪಡೆಯುವಲ್ಲಿ ಈ ಪ್ರದೇಶಗಳು ಹಿಂದಿದ್ದಿರುವುದು ಅನಭಿವೃದ್ಧಿಗೆ ಕಾರಣವಾಗಿ ಅಭಿವೃದ್ಧಿಯನ್ನು ಸಂಕೀರ್ಣಗೊಳಿಸಿವೆ.

ಮೇಲೆ ಪ್ರಸ್ತಾಪಿಸಲಾದ ಅಂಶಗಳು ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದಲ್ಲಿ ಅಭಿವೃದ್ಧಿಯ ಸವಾಲುಗಳಾಗಿದ್ದು ಆ ಪ್ರದೇಶಗಳ ಪ್ರಗತಿಗೆ ತೊಡಕಾಗಿ ಪರಿಣಮಿಸಿವೆ. ಆಶಾದಾಯಕ ಅಂಶವೇನೆಂದರೆ, ಪ್ರಸ್ತಾಪಿತ ಸವಾಲುಗಳ ನಡುವೆಯೂ ಕರ್ನಾಟಕ ಸರ್ಕಾರವು ಈ ಪ್ರದೇಶಗಳ ಅಭಿವೃದ್ಧಿಗೆ ಗಮನ ಹರಿಸುತ್ತಾ ಬಂದಿರುದು. ಸುವರ್ಣ ಸೌಧವನ್ನು ಬೆಳಗಾವಿಯಲ್ಲಿ ನಿರ್ಮಿಸಿ ಅಧಿವೇಶನ ನಡೆಸುತ್ತಿರುವುದು, ಕೈಗಾರಿಕಾ ವಸಾಹತುಗಳ ಸ್ಥಾಪನೆಗೆ ಮುಂದಾಗುತ್ತಿರುವುದು, ವಿಶೇಷ ಯೋಜನೆ ರೂಪಿಸಿ ಜಾರಿಗೊಳಿಸುತ್ತಿರುವುದು ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಸವಾಲುಗಳಿಗೆ ಪರಿಹಾರೋಪಾಯದಲ್ಲಿ ಕಂಡು ಬರುತ್ತಿವೆ.



## [IV.] ಕೊಡಗಿನ ಒಂದು ಅಧ್ಯಯನ [Koorg Case Study]:

ಪ್ರಸ್ತುತ ಕರ್ನಾಟಕ ರಾಜ್ಯದ 31 ಜಿಲ್ಲೆಗಳಲ್ಲಿ ಕೊಡಗು ಸಹ ಒಂದು. ಇದು ದಕ್ಷಿಣ ಕರ್ನಾಟಕದ ಸುಂದರ ಜಿಲ್ಲೆಯಾಗಿದೆ. 1956 ರ ಮೊದಲು, ಆಡಳಿತಾತ್ಮಕವಾಗಿ ಕೊಡಗು ಪ್ರತ್ಯೇಕವಾದ ಕೂರ್ಗ್ ರಾಜ್ಯವಾಗಿತ್ತು. ರಾಜ್ಯಗಳ ಪುನರಸಂಘಟನೆಯ ವೇಳೆಯಲ್ಲಿ ಮೈಸೂರು ರಾಜ್ಯದಲ್ಲಿ ವಿಲೀನಗೊಳಿಸಲಾಯಿತು. ಕೂರ್ಗ್ ತನ್ನ ಕೆಚ್ಚೆದೆಯ ವೀರ ಸೈನಿಕರು, ಹಚ್ಚ ಹಸಿರಿನ ವಿಹಂಗಮ ನೋಟ, ಕಾಫಿ ತೋಟಗಳು ಮತ್ತು ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಹೆಸರುವಾಸಿಯಾಗಿದೆ. ಕೂರ್ಗ್‌ನ ಪ್ರಮುಖ ಅಂಶಗಳನ್ನು ಪ್ರಸ್ತುತಗೊಳಿಸುವ ಒಂದು ಅಧ್ಯಯನ ವರದಿಯು ಕೆಳಗಿನಂತಿದೆ:

**ಭೌಗೋಳಿಕ ನೆಲೆ:** ಕೊಡಗು ಪಶ್ಚಿಮ ಘಟ್ಟಗಳ ಪೂರ್ವ ಇಳಿಜಾರಿನಲ್ಲಿರುವ ಕೂರ್ಗ್ ಕರ್ನಾಟಕದ ನೈಋತ್ಯ ಭಾಗದಲ್ಲಿ ನೆಲೆಗೊಂಡಿದೆ. ಕೊಡಗು ಜಿಲ್ಲೆಯು ವಾಯುವ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರಕ್ಕೆ ಹಾಸನ ಜಿಲ್ಲೆ, ಪೂರ್ವಕ್ಕೆ ಮೈಸೂರು ಜಿಲ್ಲೆ, ಪಶ್ಚಿಮದಲ್ಲಿ ಕೇರಳದ ಕಾಸರಗೋಡು ಜಿಲ್ಲೆ, ನೈಋತ್ಯಕ್ಕೆ ಕೇರಳದ ಕಣ್ಣೂರು ಜಿಲ್ಲೆ ಮತ್ತು ದಕ್ಷಿಣಕ್ಕೆ ಕೇರಳದ ವಯನಾಡು ಜಿಲ್ಲೆಗಳೊಡನೆ ತನ್ನ ಗಡಿಯನ್ನು ಹಂಚಿಕೊಂಡಿದೆ.

**ಇತಿಹಾಸ:** ಕೊಡಗಿನ ಇತಿಹಾಸವು ಎಂಟನೇ ಶತಮಾನದಷ್ಟು ಹಿಂದಕ್ಕೆ ಸರಿಯುತ್ತದೆ. ಆಗ ಕೊಡಗು ಗಂಗರ ಆಡಳಿತಕ್ಕೆ ಒಳಪಟ್ಟಿತ್ತು. ಗಂಗರ ನಂತರ ಪಾಂಡ್ಯರು, ಚೋಳರು, ಕದಂಬರು, ಚಾಲುಕ್ಯರು, ಹೊಯ್ಸಳರು, ವಿಜಯ ನಗರದ ಅರಸರು ಇದರ ಆಡಳಿತ ನಡೆಸಿದರು. ಭಾರತಕ್ಕೆ ಸ್ವಾತಂತ್ರ್ಯ ದೊರೆಯುವ ಮೊದಲು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದ ಕೊಡಗು 1950 ರಲ್ಲಿ ಸ್ವತಂತ್ರ ರಾಜ್ಯವಾಯಿತು. 1956 ರಲ್ಲಿ ರಾಜ್ಯಗಳ ಪುನರ್ ವಿಂಗಡಣೆಯ ಪರಿಣಾಮ ವಿಶಾಲ ಕರ್ನಾಟಕಕ್ಕೆ ಸೇರಿಕೊಂಡಿತು.

**ಭೌಗೋಳಿಕ ಮೇಲ್ಮೈ:** ಪಶ್ಚಿಮ ಘಟ್ಟಗಳ ಪೂರ್ವ ಭಾಗದಲ್ಲಿರುವ ತಲಕಾವೇರಿಯಲ್ಲಿ ಹುಟ್ಟುವ ಕಾವೇರಿಯು ಕೊಡಗು ಮೂಲದ ನದಿ. ಕಾವೇರಿ ನದಿಯು ತನ್ನ ಉಪನದಿಗಳೊಂದಿಗೆ ಕೊಡಗಿನ ಅಧಿಕ ಭಾಗವನ್ನು ಆವರಿಸುತ್ತದೆ. ಕೊಡಗು ಜಿಲ್ಲೆಯು ತನ್ನ ಗುಡ್ಡಗಾಡು ಪ್ರದೇಶ, ನಿತ್ಯಹರಿದ್ವರ್ಣ ಕಾಡುಗಳು ಮತ್ತು ಆಹ್ಲಾದಕರ ಹವಾಮಾನದಿಂದ ಕೂಡಿದೆ.

**ಆರ್ಥಿಕತೆ:** ಕಾಫಿ ಕೃಷಿಯು ಕೂರ್ಗ್‌ನಲ್ಲಿ ಪ್ರಧಾನವಾದ ಆರ್ಥಿಕ ಚಟುವಟಿಕೆಯಾಗಿದೆ. ಅರೇಬಿಕಾ ಮತ್ತು ರೋಬಸ್ಟಾ ಪ್ರಭೇದಗಳು ಸೇರಿದಂತೆ ಉತ್ತಮ ಗುಣಮಟ್ಟದ ಕಾಫಿ ಬೀಜಗಳಿಗೆ ಕೊಡಗು ಜಿಲ್ಲೆಯು ಪ್ರಸಿದ್ಧವಾಗಿದೆ. ಆಸಕ್ತಿದಾಯಕ ಅಂಶವೇನೆಂದರೆ, ಕೂರ್ಗ್‌ನ ಆರ್ಥಿಕತೆಯು ಕೃಷಿಯನ್ನೂ ಅವಲಂಬಿಸಿದೆ. ಮೆಣಸು ಮತ್ತು ಏಲಕ್ಕಿಯಂತಹ ಮಸಾಲೆ ಪದಾರ್ಥಗಳ ಕೃಷಿಯು ಕೊಡಗಿನಲ್ಲಿ ಜನಪ್ರಿಯವಾಗಿದೆ. ಅಲ್ಲದೇ ಪ್ರವಾಸೋದ್ಯಮವು ಕೊಡಗಿನ ಆರ್ಥಿಕತೆಯ ಜೀವಾಳವಾಗಿದೆ.

**ಪ್ರವಾಸೋದ್ಯಮ:** ಕೊಡಗು ಪ್ರವಾಸಿ ತಾಣವಾಗಿದ್ದು ಗಿರಿಧಾಮವೆನಿಸಿದೆ. ಪ್ರವಾಸಿಗರು ಇಲ್ಲಿನ ತಾಣಗಳಿಗೆ ಭೇಟಿ ನೀಡಲು ಬಯಸುತ್ತಾರೆ. ಇಲ್ಲಿನ ಅಬ್ಬೆ ಜಲಪಾತ, ಆನೆ ಶಿಬಿರ, ತಲ ಕಾವೇರಿ ಪ್ರಮುಖ ಪ್ರವಾಸಿ ತಾಣಗಳಾಗಿವೆ.

**ಸಂಸ್ಕೃತಿ ಮತ್ತು ಸಂಪ್ರದಾಯ:** ಕೊಡವ ಸಮುದಾಯವು ಸ್ಥಳೀಯ ಜನ ಸಮೂಹವಾಗಿದ್ದು ಅವರು ತಮ್ಮದೇಯಾದ ವಿಶಿಷ್ಟ ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡಿದ್ದಾರೆ. ಕೊಡವರು ತಮ್ಮದೇಯಾದ ಭಾಷೆ ಮತ್ತು ಶ್ರೀಮಂತ ಸಂಪ್ರದಾಯಗಳನ್ನು ಹೊಂದಿದ್ದಾರೆ. ಸಮರ ಕಲೆಗಳು, 'ಕೊಡವ ಹಾಕಿ ಉತ್ಸವ ಮತ್ತು 'ಕುಂಡೆ ಹಬ್ಬ' (ಪೂರ್ವಜರ ಆರಾಧನೆ) ಮುಂತಾದ ವಿಶಿಷ್ಟ ಆಚರಣೆಗಳು ಕೊಡವರಲ್ಲಿ ಕಂಡು ಬರುತ್ತವೆ. ಕೊಡಗು ಅಸ್ಮಿತೆಯ ಭಾಗವಾಗಿರುವ ಆಥಿತ್ಯಕ್ಕೆ ಮನಸೋಲದಿರುವರೇ ಇಲ್ಲವೆನ್ನಬಹುದು.

**ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆ:** ಕೊಡಗು ವೈವಿಧ್ಯಮಯ ಸಸ್ಯ ಹಾಗೂ ಜೀವ ವೈವಿಧ್ಯಕ್ಕೆ ಕಾರಣವಾಗಿದೆ. ಅಳಿವಿನಂಚಿನಲ್ಲಿರುವ ಬಂಗಾಳದ ಹುಲಿ ಮತ್ತು ಭಾರತೀಯ ಆನೆಗಳ ಪೋಷಣೆಗೆ ಕೊಡಗು ಪರಿಸರ ಪೂರಕವಾಗಿದೆ. ಜೊತೆಗೆ ಚಿರತೆ, ಕಾಡು ಹಂದಿ ಮತ್ತು ವಿವಿಧ ಜಾತಿಯ ಹಕ್ಕಿಗಳಿಗೆ ಕೊಡಗು ತವರೂರಾಗಿದೆ. ತಲ ಕಾವೇರಿ, ಬ್ರಹ್ಮಗಿರಿ ಮತ್ತು ಪುಷ್ಪಗಿರಿ ಅಭಯಾರಣ್ಯಗಳೊಡನೆ ಕೊಡಗು ವ್ಯಾಪ್ತಿಯಲ್ಲಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವಿದೆ.

**ಸವಾಲುಗಳು:** ಕೊಡಗು ಅಧ್ಯಯನದಿಂದ ನಮಗೆ ತಿಳಿದು ಬರುವ ಅಂಶವೇನೆಂದರೆ, ಶ್ರೀಮಂತ ಸಂಸ್ಕೃತಿ ಮತ್ತು ನೈಸರ್ಗಿಕ ಪರಿಸರಗಳ ನಡುವೆಯೂ ಸವಾಲುಗಳಿಂದ ಕೊಡಗು ಮುಕ್ತವಾಗಿಲ್ಲದಿರುವುದು. ಕೊಡಗಿನ ಪ್ರಧಾನ ಸವಾಲುಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

1. **ಮೂಲಭೂತ ಸೌಕರ್ಯಗಳ ಕೊರತೆ:** ರಸ್ತೆ, ರೈಲ್ವೆ ಸಂಪರ್ಕ ಮುಂತಾದ ಸೌಕರ್ಯಗಳ ಅಭಾವವನ್ನು ಕೊಡಗು ಎದುರಿಸುತ್ತಿದೆ.
2. **ಹವಾಮಾನದ ಬದಲಾವಣೆ:** ರಾಜ್ಯದ ಇತರ ಪ್ರದೇಶಗಳು ಎದುರಿಸುತ್ತಿರುವ ಹವಾಮಾನ ಬದಲಾವಣೆಯಿಂದ ಕೊಡಗು ಹೊರತಾಗಿಲ್ಲ. ಮಳೆಯ ಮಾದರಿ ಮತ್ತು ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಬದಲಾವಣೆಗೆ ಕೊಡಗು ಒಳಗಾಗಿದೆ.
3. **ನೈಸರ್ಗಿಕ ವಿಕೋಪ:** ಕೊಡಗು ನಿರಂತರವಾಗಿ ನೈಸರ್ಗಿಕ ಬಿಕ್ಕಟ್ಟನ್ನು ಎದುರಿಸಬೇಕಾಗಿದೆ. ಅತಿಯಾದ ಮಳೆ, ಭೂ ಕುಸಿತ, ಕಡಿಮೆ ಮಳೆಯಂತಹ ವಿಕೋಪಗಳಿಗೆ ಸಾಕ್ಷಿಯಾಗುತ್ತಿದೆ. ಉದಾ: 2018 ರಲ್ಲಿ ಕೊಡಗು ನೈಸರ್ಗಿಕ ವಿಕೋಪದಿಂದ ನಲುಗಿದುದು.
4. **ಪ್ರತ್ಯೇಕ ರಾಜ್ಯದ ಬಯಕೆ:** ಕೊಡಗಿಗೆ ಸಂಬಂಧಿಸಿದಂತೆ ಪ್ರತ್ಯೇಕತೆಯ ಕೂಗು ಕರ್ನಾಟಕ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಿದೆ. ಅಲ್ಲಿನ ರಾಜಕಾರಣಿಗಳು ಸೇರಿದಂತೆ ಕೊಡವ ನ್ಯಾಷನಲ್ ಕೌನ್ಸಿಲ್ ಬೇಡಿಕೆಯು ಸಮಸ್ಯೆಯನ್ನು ತಂದೊಡ್ಡುತ್ತಿದೆ.



## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ಇಂದಿನ ಕರ್ನಾಟಕಕ್ಕೆ ಬಳಸುತ್ತಿದ್ದ ಎರಡು ಹೆಸರುಗಳನ್ನು ತಿಳಿಸಿ.
2. ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಡುತ್ತಿರುವ ಕರ್ನಾಟಕದ ಮೂರು ಪ್ರದೇಶಗಳನ್ನು ಹೆಸರಿಸಿರಿ.
3. ಉತ್ತರ ಕರ್ನಾಟಕದ ಜಿಲ್ಲೆಗಳನ್ನು ಪಟ್ಟಿ ಮಾಡಿರಿ.
4. ತುಳು ನಾಡು ಏಕೆ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಡುತ್ತಿದೆ?
5. ಕಲಂ371 (ಜೆ.) ಅನ್ವಯವಾಗುವ ಜಿಲ್ಲೆಗಳನ್ನು ಬರೆಯಿರಿ.
6. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯು ಯಾರನ್ನು ಒಳಗೊಂಡಿರುತ್ತದೆ?
7. ಉತ್ತರ ಕರ್ನಾಟಕದ ಪ್ರತ್ಯೇಕತೆಗೆ ಹೋರಾಡುತ್ತಿರುವ ಎರಡು ಸಂಘಟನೆಗಳನ್ನು ಹೆಸರಿಸಿರಿ.
8. ಕಿತ್ತೂರು ಕರ್ನಾಟಕ ಒಳಗೊಂಡಿರುವ ಜಿಲ್ಲೆಗಳನ್ನು ಹೆಸರಿಸಿರಿ.
9. ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದ ಮೂರು ಸವಾಲುಗಳನ್ನು ತಿಳಿಸಿರಿ.
10. ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದ ಆರ್ಥಿಕತೆಯನ್ನು ತಿಳಿಸಿರಿ.
11. ಕೊಡಗಿನ ಭೌಗೋಳಿಕ ನೆಲೆಯನ್ನು ಬರೆಯಿರಿ.
12. ಕೊಡಗಿನ ಪ್ರವಾಸಿ ತಾಣಗಳನ್ನು ತಿಳಿಸಿರಿ.
13. ಕೊಡಗಿನಲ್ಲಿರುವ ಅಭಯಾರಣ್ಯಗಳನ್ನು ಹೆಸರಿಸಿರಿ.

[B.]

1. ಉತ್ತರ ಕರ್ನಾಟಕದ ಪ್ರತ್ಯೇಕ ರಾಜ್ಯದ ಬೇಡಿಕೆ ಕುರಿತು ಟಿಪ್ಪಣಿ ಬರೆಯಿರಿ.
2. ಕಲಂ 371 (ಜೆ.) ಹೈದರಾಬಾದ್ ಕರ್ನಾಟಕಕ್ಕೆ ಒದಗಿಸಿರುವ ಸೌಲಭ್ಯಗಳನ್ನು ವಿವರಿಸಿರಿ.
3. ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಸವಾಲುಗಳನ್ನು ಚರ್ಚಿಸಿರಿ.
4. ಕೊಡಗು ಅಧ್ಯಯನ ವರದಿಯನ್ನು ಬರೆಯಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಕರ್ನಾಟಕದಲ್ಲಿ ಪ್ರತ್ಯೇಕ ರಾಜ್ಯದ ಬೇಡಿಕೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.



ಹಲವು ಶತಮಾನಗಳ ಇತಿಹಾಸವುಳ್ಳ ಮೈಸೂರು ಸಂಸ್ಥಾನದ ಬೆಳಕಿನಲ್ಲಿ ಕರ್ನಾಟಕದ ಆಡಳಿತ ಮತ್ತು ರಾಜಕೀಯ ವಿದ್ಯಮಾನಗಳ ಮನವರಿಕೆಗಾಗಿ 'ಕರ್ನಾಟಕ ಸರ್ಕಾರ ಮತ್ತು ರಾಜಕೀಯ' ಎಂಬ ಕೃತಿ ರಚಿಸಲಾಗಿದೆ. ಈ ಪುಸ್ತಕದ ಅಧ್ಯಯನವು ಕರ್ನಾಟಕ ಸರ್ಕಾರವನ್ನು ಪರಿಪೂರ್ಣವಾಗಿ ಅರ್ಥೈಸಿಕೊಳ್ಳಲು, ನಾಗರಿಕರಾಗಿ ರಾಜಕೀಯದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು, ಸಮರ್ಥ ನಾಯಕರಾಗಿ ಗುರುತಿಸಿಕೊಳ್ಳಲು ಸಹಕಾರಿಯಾಗಲಿದೆ.